ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ–ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಬಸವರಾಜ ಎಂ.

ಮಾರ್ಗದರ್ಶಕರು

ಡಾ. ಎ. ಶ್ರೀಧರ

ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೧

ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ-ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಬಸವರಾಜ ಎಂ.

ಮಾರ್ಗದರ್ಶಕರು

ಡಾ. ಎ. ಶ್ರೀಧರ

ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೨೧

ಮಾರ್ಗದರ್ಶಕರ ದೃಢೀಕರಣ ಪತ್ರ

ಬಸವರಾಜ ಎಂ ಅವರು ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ – ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪ್ರಸ್ತುತ ಮಹಾಪ್ರಬಂಧವನ್ನು ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 10-03-೨೦೨೧
ಸ್ಥಳ : ವಿದ್ಯಾರಣ್ಯ

(ಡಾ. ಎ. ಶ್ರೀಧರ)
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಂಶೋಧಕರ ಘೋಷಣಾ ಪ್ರಮಾಣ ಪತ್ರ

ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ – ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಎ. ಶ್ರೀಧರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 10-03-2021
ಸ್ಥಳ : ವಿದ್ಯಾರಣ್ಯ

Basu.M
(ಬಸವರಾಜ ಎಂ)
ಸಂಶೋಧಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

Kannada University, Hampi
Akshara Central Library
Anti-Plagiarism Cell
Certificate of Plagiarism Chek Report

ABHIRUDHI MATTU GURUTHINA RAJAKIYA – BHOVI SAMUDAYADA GURUTHINA RAJAKIYADA ADYAYANA

DEVELOPMENT AND IDENTITY POLITICS – STUDY OF IDENTITY POLTICS OF BHOVI COMMUNITY

BY

BASAVARAJA M

Reg.No. 160111020186 dated: 24-11-2016

Research Guide

Dr.A. SHRIDHAR

Kannada University, Hampi

Urkund Analysis Result

Analyzed document : KUH-PhD-DDS-Basavaraja M.docx(D96831955)

Submitted : 3/1/2021. 7:53:00 AM

Submitted by : Shankaragouda S G

Submitter email : Shankargoudas.mailbox@gmail.com

Similarity : 8%

Analysis address : Shankargoudas.mailbox.kanuni@analysis.urkund.com

01/03/2021

Seal and authorized sign

ಕೋಷ್ಟಕಗಳ ಸಂಖ್ಯೆ	ಕೋಷ್ಟಕಗಳ ವಿವರ	ಪು.ಸಂ
ಕೋಷ್ಟಕ ೪.೧	ಭೋವಿ ಸಮುದಾಯದಲ್ಲಿ ಎಂ.ಎಲ್.ಎ./ಎಂ.ಪಿ ಗಳಾಗಿ ರಾಜ್ಯದ ರಾಜಕೀಯದಲ್ಲಿ ಗುರುತಿಸಿಕೊಂಡವರ ವಿವರಗಳು.	93-94
ಕೋಷ್ಟಕ ೫.೧	ಸಾಮಾಜಿಕ ಮತ್ತು ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದವರ ಆಸಕ್ತಿಯ ವಿವರಗಳು	102
ಕೋಷ್ಟಕ ೫.೨	ಭೋವಿ ಸಮುದಾಯದವರು ಬೆಂಬಲಿಸುವ ರಾಜಕೀಯ ಪಕ್ಷದ ವಿವರಗಳು	105
ಕೋಷ್ಟಕ ೫.೩	ಚುನಾಯಿತರಾದ ಸದಸ್ಯರ ಬಗ್ಗೆ ಭೋವಿ ಸಮುದಾಯದ ಕುಟುಂಬಗಳಿಗೆ ಇರುವ ಅರಿವು	107
ಕೋಷ್ಟಕ ೫.೪	ಸ್ಥಳಿಯ ಸಂಸ್ಥೆಗಳಲ್ಲಿ ಭೋವಿ ಸಮುದಾಯದವರು ಅಧಿಕಾರ ಪಡೆದ ವಿವರಗಳು	109
ಕೋಷ್ಟಕ ೫.೫	ಪಂಚಾಯಿತಿ ಮಟ್ಟದಲ್ಲಿ ಭೋವಿ ಸಮುದಾಯದವರು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳ ವಿವರಗಳು	111
ಕೋಷ್ಟಕ ೫.೬	ಭೋವಿ ಸಮುದಾಯದವರು ಮುಂದಿನ ಚುನಾವಣೆಗಳಲ್ಲಿ ಸ್ಪರ್ಧೆ ಮಾಡುವ ವಿವರಗಳು	112
ಕೋಷ್ಟಕ ೫.೭	ಭೋವಿ ಸಮುದಾಯದ ಸಾಂಸ್ಕೃತಿಕ ಸಂಘಟನೆಗಳಲ್ಲಿ ಭಾಗವಹಿಸುವಿಕೆಯ ವಿವರಗಳು	115
ಕೋಷ್ಟಕ ೫.೮	ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ ಸ್ಥಾನಮಾನ ಪಡೆದ ವಿವರಗಳು	116
ಕೋಷ್ಟಕ ೬೧	ಅಧ್ಯಯನಕ್ಕಾಗಿ ಭೋವಿ ಸಮುದಾಯದವರ ಕುಟುಂಬಗಳಿಂದ ಮಾಹಿತಿ ಕೊಟ್ಟವರ ವಿವರಗಳು	119
ಕೋಷ್ಟಕ ೬.೨	ಮಾಹಿತಿಯನ್ನು ಕೊಟ್ಟ ಭೋವಿ ಸಮುದಾಯದ ಕುಟುಂಬಗಳ ವಯಸ್ಸಿನ ವಿವರಗಳು	120
ಕೋಷ್ಟಕ ೬.೩	ಭೋವಿ ಸಮುದಾಯದ ಕುಟುಂಬಗಳ ವೈವಾಹಿಕ ಸ್ಥಾನಮಾನದ ವಿವರಗಳು	121
ಕೋಷ್ಟಕ ೬೪	ಭೋವಿ ಸಮುದಾಯದ ಕುಟುಂಬಗಳಲ್ಲಿ ಅನಕ್ಷರಸ್ಥ ಮತ್ತು ಶಿಕ್ಷಣ ಪಡೆದವರ ವಿವರಗಳು	123
ಕೋಷ್ಟಕ ೬೫	ಭೋವಿ ಸಮುದಾಯದ ಕುಟುಂಬಗಳಲ್ಲಿ ಶಿಕ್ಷಣ ಪಡೆದು ಉದ್ಯೋಗದಲ್ಲಿರುವವರ ವಿವರಗಳು	125
ಕೋಷ್ಟಕ ೬.೬	ಭೋವಿ ಸಮುದಾಯದವರಿಗೆ ಕಾಡುವ ಕಾಯಿಲೆಗಳ ವಿವರಗಳು	128
ಕೋಷ್ಟಕ ೬.೭	ಕಾಯಿಲೆಗಳಿಗಾಗಿ ಭೋವಿ ಸಮುದಾಯದವರು ವಾರ್ಷಿಕ ಔಷಧಿಗಾಗಿ ಖರ್ಚುಮಾಡಿದ ಹಣದ ವಿವರಗಳು	130

ಕೋಷ್ಟಕ ೬.೮	ಭೋವಿ ಸಮುದಾಯದವರ ಕುಟುಂಬಗಳು ವಾಸಿಸುವ ಮನೆಗಳ ಸ್ವರೂಪದ ವಿವರಗಳ	132
ಕೋಷ್ಟಕ ೬.೯	ಭೋವಿ ಸಮುದಾಯದವರು ದಿನನಿತ್ಯ ಬಳಕೆ ಮಾಡುವ ಶೌಚಾಲಯಗಳ ಸ್ಥಿತಿ ಹೇಗಿದೆ ಎನ್ನುವ ವಿವರಗಳು	133
ಕೋಷ್ಟಕ ೬.೧೦	ಭೋವಿ ಸಮುದಾಯದವರು ಬಳಕೆ ಮಾಡುವ ಮತ್ತು ಕುಡಿಯುವ ನೀರಿನ ಗುಣಮಟ್ಟ ಮತ್ತು ನೀರಿನ ಜಾಗಕ್ಕೆ ಇರುವ ಅಂತರದ ವಿವರಗಳು	134
ಕೋಷ್ಟಕ ೬.೧೧	ಭೋವಿ ಸಮುದಾಯದ ಕುಟುಂಬಗಳ ಸ್ವರೂಪ ಬದಲಾವಣೆಯಾಗಲು ಮತ್ತು ಬದಲಾವಣೆ ಹೊಂದದೆ ಇರಲು ಕಾರಣವಾದ ಅಂಶಗಳ ವಿವರಗಳು	136
ಕೋಷ್ಟಕ ೬.೧೨	ಭೋವಿ ಸಮುದಾಯದ ಕುಟುಂಬಗಳು ಹಿಂದುಳಿದಿರುವುದಕ್ಕೆ ಕಾರಣವಾದ ವಿವರಗಳು	137
ಕೋಷ್ಟಕ ೬೧೩	ಭೋವಿ ಸಮುದಾಯದಲ್ಲಿ ಮಹಿಳೆಯರು ತಮ್ಮ ಕುಟುಂಬಗಳ ಜವಾಬ್ದಾರಿಯನ್ನು ತೆಗೆದುಕೊಂಡು ಕುಟುಂಬದ ಮುಖ್ಯಸ್ಥರಾಗಿ ನಿರ್ವಹಿಸಿದ ವಿವರಗಳು	140
ಕೋಷ್ಟಕ ೬.೧೪	ಭೋವಿ ಸಮುದಾಯದ ಕುಟುಂಬಗಳ ಸದಸ್ಯರು ತೊಡಗಿರುವ ದುಡಿಮೆಗಳ ವಿವರಗಳು	142
ಕೋಷ್ಟಕ ೬.೧೫	ಭೋವಿ ಸಮುದಾಯದ ಕುಟುಂಬಗಳಲ್ಲಿ ಮಹಿಳೆಯರು ತೊಡಗಿರುವ ದುಡಿಮೆಗಳ ವಿವರಗಳು	146
ಕೋಷ್ಟಕ ೬೧೬	ಭೋವಿ ಸಮುದಾಯದ ಕುಟುಂಬಗಳ ಹತ್ತು ವರ್ಷಗಳ ಹಿಂದೆ ಮತ್ತು ಪ್ರಸ್ತುತ ದಿನಗಳ ಆದಾಯದ ವಿವರಗಳು	147
ಕೋಷ್ಟಕ ೬೧೭	ಭೋವಿ ಸಮುದಾಯದವರ ಕುಟುಂಬಗಳು ಭೂ ಹಿಡುವಳಿಗಳನ್ನು ಹೊಂದಿರುವ ವಿವರಗಳು	148
ಕೋಷ್ಟಕ ೬೧೮	ಭೋವಿ ಸಮುದಾಯದ ಚರಾ/ಸ್ಥಿರಾ ಆಸ್ತಿಗಳ ವಿವರಗಳು	150

ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ-ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ

ಪರಿವಿಡಿ

ಅಧ್ಯಾಯ : ಒಂದು ೧-೧೩

ಪ್ರಸ್ತಾವನೆ

೧.೧. ಪ್ರಸ್ತಾವನೆ

೧.೨. ಅಧ್ಯಯನ ವಿಷಯದ ಸಮಸ್ಯೀಕರಣ ಮತ್ತು ಸಂಶೋಧನಾ ಪ್ರಶ್ನೆಗಳು

೧.೩. ವಿಷಯ ಆಸಕ್ತಿಗೆ ಕಾರಣಗಳು

೧.೪. ಅಧ್ಯಯನ ಉದ್ದೇಶಗಳು

೧.೫. ಅಧ್ಯಯನ ವಿಧಾನ

೧.೬. ಅಧ್ಯಯನ ವ್ಯಾಪ್ತಿ: ಮಿತಿಗಳು ಮತ್ತು ಮಹತ್ವ

೧.೭. ಅಧ್ಯಯನದ ವಿನ್ಯಾಸ

ಅಧ್ಯಾಯ : ಎರಡು ೧೪-೪೫

ಅಧ್ಯಯನಗಳ ಸಮೀಕ್ಷೆ

೨.೧. ಅಭಿವೃದ್ಧಿಗೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

೨.೨. ರಾಜಕೀಯಕ್ಕೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

೨.೩. ಸಮುದಾಯಕ್ಕೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಮೂರು ೪೬-೬೯

ಅಧ್ಯಯನ ಕೈಗೊಂಡ ಜಿಲ್ಲೆ ಮತ್ತು ಕ್ಷೇತ್ರಗಳ ಪರಿಚಯ

೩.೧. ಅಧ್ಯಯನ ಕ್ಷೇತ್ರದ ಪರಿಚಯ

೩.೨. ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

೩.೩. ಚಿತ್ರದುರ್ಗ ಜಿಲ್ಲೆಯ ಧರ್ಮ ಮತ್ತು ಜಾತಿಗಳು

೩.೪. ಚಿತ್ರದುರ್ಗ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

೩.೫. ಚಿತ್ರದುರ್ಗ ಜಿಲ್ಲೆಯ ರಾಜಕೀಯದಲ್ಲಿ ಗುರುತಿಸಿಕೊಂಡವರು

೩.೬. ಮೊಳಕಾಲ್ಮೂರು ತಾಲ್ಲೂಕು ಮತ್ತು ಅಧ್ಯಯನಕ್ಕೊಳಪಡಿಸಿದ ಗ್ರಾಮಗಳ ಪರಿಚಯ

೩.೭. ಹೊಳಲ್ಕೆರೆ ತಾಲ್ಲೂಕು ಮತ್ತು ಅಧ್ಯಯನಕ್ಕೊಳಪಡಿಸಿದ ಗ್ರಾಮಗಳ ಪರಿಚಯ

ಅಧ್ಯಾಯ : ನಾಲ್ಕು ೭೦-೯೭

ಅಭಿವೃದ್ಧಿ ಮತ್ತು ರಾಜಕೀಯದಲ್ಲಿ ಭೋವಿ ಸಮುದಾಯದ ಬೆಳವಣಿಗೆ

೪.೧. ಅಭಿವೃದ್ಧಿ ಮತ್ತು ರಾಜಕೀಯದ ನಡುವಿನ ಸಂಬಂಧ

೪.೨. ಗುರುತಿನ ರಾಜಕೀಯ ಬೆಳೆದು ಬಂದ ದಾರಿ

೪.೩. ಭೋವಿ ಸಮುದಾಯದ ಸಾಮಾಜಿಕ ಹಿನ್ನೆಲೆ

೪.೪. ಭೋವಿ ಸಮುದಾಯದ ಐತಿಹಾಸಿಕ ಬೆಳವಣಿಗೆ

೪.೫. ಭೋವಿ ಸಮುದಾಯದ ಸಾಂಸ್ಕೃತಿಕ ಕೊಡುಗೆಗಳು

೪.೬. ಭೋವಿ ಸಮುದಾಯದ ಜಸ್ಮಳ ಹಿನ್ನೆಲೆ

೪.೭. ಜನಗಣತಿ ೧೮೭೧ರ ವರದಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೪.೮. ಮೈಸೂರು ಜನಗಣತಿ ೧೮೯೧ರ ವರದಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೪.೯. ಮುಂಬೈ ಕರ್ನಾಟಕ ಗೆಝೆಟೀಯರನಲ್ಲಿ ಭೋವಿ ಸಮುದಾಯದ ಉಲ್ಲೇಖ

೪.೧೦. ಸರ್ ಲೆಸ್ಲೀ ಮಿಲ್ಲರ್ ಸಮಿತಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೪.೧೧. ಓ ಚಿನ್ನಪ್ಪರೆಡ್ಡಿ ಸಮಿತಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೪.೧೨. ಭೋವಿ ಸಮುದಾಯದಲ್ಲಿ ಎಂ.ಎಲ್.ಎ./ಎಂ.ಪಿ ಗಳಾಗಿ ರಾಜಕೀಯದಲ್ಲಿ ಗುರುತಿಸಿಕೊಂಡವರು

೪.೧೩ ಭೋವಿ ಸಮುದಾಯದ ಕಟ್ಟಡ ಕಾರ್ಮಿಕರಿಗೆ ಇಲಾಖೆಯಿಂದ ಇರುವ ಸೌಲಭ್ಯಗಳು

ಅಧ್ಯಾಯ : ಐದು ೯೮-೧೧೮

ಭೋವಿ ಸಮುದಾಯದ ಗುರುತಿನ ರಾಜಕೀಯ

೫.೧ ಸಾಮಾಜಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

೫.೨ ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

೫.೩ ರಾಜಕೀಯ ಸಂಘಟನೆಗಳಲ್ಲಿ ಭೋವಿ ಸಮುದಾಯ

೫.೪ ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

ಅಧ್ಯಾಯ : ಆರು ೧೧೯-೧೫೧

ಭೋವಿ ಸಮುದಾಯದ ಅಭಿವೃದ್ಧಿ ಮಾಪನ

೬.೧ ಸಾಮಾಜಿಕ ಅಭಿವೃದ್ಧಿಯಲ್ಲಿ ಭೋವಿ ಸಮುದಾಯ

೬.೧.೧ ಶಿಕ್ಷಣ

೬.೧.೨ ಆರೋಗ್ಯ

೬.೧.೩ ವಸತಿ

೬.೧.೪ ನೈರ್ಮಲ್ಯ

೬.೧.೫ ಕುಡಿಯುವ ನೀರು

೬.೧.೬ ಜಾತಿ ಸ್ಥಾನಮಾನ

೬.೧.೭ ಲಿಂಗ ಸಮಾನತೆ

೬.೨. ಆರ್ಥಿಕ ಅಭಿವೃದ್ಧಿಯಲ್ಲಿ ಭೋವಿ ಸಮುದಾಯ

೬.೨. ೧. ಉದ್ಯೋಗ

೬.೨. ೨ ಆದಾಯ

೬.೨. ೩ ಭೂ ಹಿಡುವಳಿ

೬.೨. ೪ ಆದಾಯದ ಮೂಲ

೬.೨. ೫ ಚರಾ ಮತ್ತು ಸ್ಥಿರಾ ಆಸ್ತಿ ವಿವರಗಳು

ಅಧ್ಯಾಯ : ಏಳು ೧೫೨-೧೬೮

ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯ ಪ್ರತಿನಿಧಿತ್ವ

೭.೧ ಭೋವಿ ಸಮುದಾಯ ಅಭಿವೃದ್ಧಿ ನೀತಿಯ ವಿಶ್ಲೇಷಣೆ

೭.೧.೧ ಭೋವಿ ಸಮುದಾಯದ ಸಾಮಾಜಿಕ ಅಭಿವೃದ್ಧಿ ನೀತಿಯ ವಿಶ್ಲೇಷಣೆ

೭.೧.೨ ಭೋವಿ ಸಮುದಾಯದ ಆರ್ಥಿಕ ಅಭಿವೃದ್ಧಿ ನೀತಿಯ ವಿಶ್ಲೇಷಣೆ

೭.೨ ಭೋವಿ ಸಮುದಾಯದ ರಾಜಕೀಯ ಪ್ರತಿನಿಧಿತ್ವದ ವಿಶ್ಲೇಷಣೆ

೭.೨.೧ ಸಾಮಾಜಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ

೭.೨.೨ ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ

೭.೨.೩ ರಾಜಕೀಯ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ

೭.೨.೪ ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ

೭.೩. ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯದ ಪ್ರತಿನಿಧಿತ್ವದ ವಿಶ್ಲೇಷಣೆ

ಅಧ್ಯಾಯ : ಎಂಟು ೧೬೯-೧೯೪

ಸಮಾರೋಪ

೮.೧ ಅಧ್ಯಯನದ ಫಲಿತಗಳು

ಅನುಬಂಧಗಳು ೧೯೫-೨೦೬

❖ ಪ್ರಶ್ನಾವಳಿಗಳ ಮಾದರಿ

❖ ಸಂದರ್ಶಕರ ಪಟ್ಟಿ

❖ ಪರಾಮರ್ಶನ ಗ್ರಂಥಗಳು

ಅಧ್ಯಾಯ – ಒಂದು

ಪ್ರಸ್ತಾವನೆ

೧.೧. ಪ್ರಸ್ತಾವನೆ

೧.೨. ಅಧ್ಯಯನ ವಿಷಯದ ಸಮಸ್ಯೀಕರಣ ಮತ್ತು ಸಂಶೋಧನಾ ಪ್ರಶ್ನೆಗಳು

೧.೩. ವಿಷಯ ಆಸಕ್ತಿಗೆ ಕಾರಣಗಳು

೧.೪. ಅಧ್ಯಯನ ಉದ್ದೇಶಗಳು

೧.೫. ಅಧ್ಯಯನ ವಿಧಾನ

೧.೬. ಅಧ್ಯಯನ ವ್ಯಾಪ್ತಿ: ಮಿತಿಗಳು ಮತ್ತು ಮಹತ್ವ

೧.೭. ಅಧ್ಯಯನದ ವಿನ್ಯಾಸ

ಅಧ್ಯಾಯ – ಒಂದು

ಪ್ರಸ್ತಾವನೆ

೧.೧. ಪ್ರಸ್ತಾವನೆ

ಪ್ರಸ್ತುತ ಮಹಾಪ್ರಂಧದಲ್ಲಿ ಭೋವಿ ಸಮುದಾಯದ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯದ ವಿವಿಧ ಆಯಾಮಗಳನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಭೋವಿ ಸಮುದಾಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಆಗಿರುವ ಅಧ್ಯಯನಗಳನ್ನು ವಿಶ್ಲೇಷಿಸಿದಾಗ ಭೋವಿ ಸಮುದಾಯದ ಸಂಸ್ಕೃತಿ, ವೃತ್ತಿಗಳು, ಆಚಾರ–ವಿಚಾರ, ಸಮಾಜಕ್ಕೆ ನೀಡಿರುವ ಕೊಡುಗೆಗಳು, ಸಾಮಾಜಿಕತೆ, ಪರಂಪರೆ, ಆಹಾರಪದ್ಧತಿ, ಭೋವಿ ಸಮುದಾಯದ ಐತಿಹ್ಯ ಕಥೆಗಳು, ಭೋವಿ ಪದದ ಅರ್ಥ, ಭೋವಿ ಸಮುದಾಯದ ಒಳಪಂಗಡಗಳು, ಸಮುದಾಯದಲ್ಲಿರುವ ವಿಧಾನಸಭೆ ಸದಸ್ಯರು, ಸ್ವಾತಂತ್ರ್ಯ ಪೂರ್ವ ಅಥವಾ ಪ್ರಾಚೀನ ಕಾಲದ ಕೊಡುಗೆಗಳು, ಕೋಟೆಗಳು, ಅಣೆಕಟ್ಟುಗಳು, ಕೆರೆಕಟ್ಟೆ ಇತರೆ ಕಟ್ಟಡಗಳನ್ನು ಕಟ್ಟಿ ನೀಡಿದ ಕೊಡುಗೆಗಳು. ಭೋವಿ ಸಮುದಾಯದ ಸಾಮಾಜಿಕ ಸಮಸ್ಯೆಗಳು, ಗುರು ಶ್ರೀಸಿದ್ಧೇಶ್ವರ ಸ್ವಾಮಿಯ ಚರಿತ್ರೆ, ಧಾರ್ಮಿಕ ಪದ್ಧತಿ, ಹಾಗೂ ಭೋವಿಗಳೆಂದರೆ ಯಾರು? ಎನ್ನುವ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ಆಗಿವೆ. ಭೋವಿ ಸಮುದಾಯದ ಅಸ್ಮಿತೆಯನ್ನು ಹೇಗೆ ನೋಡುತ್ತಾರೆ ಮತ್ತು ಸಮುದಾಯದ ಅಭಿವೃದ್ಧಿ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿಲ್ಲ. ಈ ಅಧ್ಯಯನದಲ್ಲಿ 'ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧವನ್ನು ವಿಶ್ಲೇಷಿಸಲಾಗಿದೆ. ಹಾಗೂ ಭೋವಿ ಸಮುದಾಯದ ಅಭಿವೃದ್ಧಿಯನ್ನು ಮಾಪನ ಮಾಡಿ, ಭೋವಿ ಸಮುದಾಯದ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧವನ್ನು ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನವನ್ನು ವ್ಯವಸ್ಥಿತವಾಗಿ ಮಾಹಿತಿಗೆ ಪೂರಕವಾಗಿ ಎಂಟು ಅಧ್ಯಾಯಗಳನ್ನು ವಿಂಗಡಿಸಿ ರಚಿಸಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನ ವಿಷಯದ ಸಮಸ್ಯೀಕರಣ ಮತ್ತು ಪ್ರಶ್ನೆಗಳು, ಉದ್ದೇಶಗಳು, ವಿಧಾನ, ವ್ಯಾಪ್ತಿ, ಮಿತಿಗಳು ಮತ್ತು ಮಹತ್ವ, ಅಧ್ಯಯನಗಳ ವಿನ್ಯಾಸ, ಅಧ್ಯಯನ ವಿಷಯವನ್ನು ಏಕೆ ಆಯ್ಕೆ ಮಾಡಿಕೊಂಡಿದ್ದೇನೆ? ಅಧ್ಯಯನವನ್ನು ಹೇಗೆ ಮಾಡಿದ್ದೇನೆ, ಮತ್ತು ಮುಂದಿನ ವರದಿಯ ಭಾಗದಲ್ಲಿ ಏನಿದೆ ಎನ್ನುವ ವಿಷಯಗಳನ್ನು ಚರ್ಚಿಸುತ್ತಾ, ಈಗಾಗಲೇ ಆಗಿರುವ ಅಧ್ಯಯನಗಳನ್ನು ವಿಮರ್ಶೆಮಾಡಿ ಪ್ರಶ್ನೆ ಹಾಕಿಕೊಂಡು ವಿಶ್ಲೇಷಿಸಲಾಗಿದೆ. ಎರಡನೇ ಅಧ್ಯಾಯದಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳನ್ನು ಅಭಿವೃದ್ಧಿ, ರಾಜಕೀಯ, ಸಮುದಾಯಕ್ಕೆ ಸಂಬಂಧಿಸಿದ ಅಧ್ಯಯನಗಳನ್ನು ಸಮೀಕ್ಷೆ ಮಾಡಿ ಮೂರು ಭಾಗಗಳನ್ನಾಗಿ ವಿಂಗಡಿಸಿ ವಿಶ್ಲೇಷಣೆ ಮಾಡಲಾಗಿದೆ. ಮೂರನೇ ಭಾಗದಲ್ಲಿ ಅಧ್ಯಯನ ಕೈಗೊಂಡ ಕ್ಷೇತ್ರ ಪರಿಚಯ, ಭೌಗೋಳಿಕ ಹಿನ್ನೆಲೆ, ಜಿಲ್ಲೆಯಲ್ಲಿ ಬರುವ ಧರ್ಮ ಮತ್ತು ಜಾತಿ ಜನಸಂಖ್ಯೆ ಶೇಕಡವಾರು, ಸ್ವಾತಂತ್ರ್ಯ ಬಂದು ಚುನಾವಣೆಗಳು ನಡೆದು ಪ್ರಸ್ತುತವರೆಗೆ ಜಿಲ್ಲೆಯಲ್ಲಿ ಸಮುದಾಯದವರಿಗೆ ಪ್ರಾತಿನಿಧ್ಯ ದೊರಕಿದ ವಿವರಗಳು ಮತ್ತು ಅಧ್ಯಯನ ಕೈಗೊಂಡ ತಾಲ್ಲೂಕು ಮತ್ತು ಗ್ರಾಮಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಒಂದನೇ ಉದ್ದೇಶಕ್ಕೆ ಪೂರಕವಾಗಿ ಅನುಷ್ಠಾಂಗಿಕ ಮಾಹಿತಿಯನ್ನು ಬಳಸಿಕೊಂಡು ಅಭಿವೃದ್ಧಿಯ ಹಲವು ಆಯಾಮಗಳಲ್ಲಿ ಅಭಿವೃದ್ಧಿ ಮತ್ತು ರಾಜಕೀಯಕ್ಕೆ ನೇರ ಸಂಬಂಧವಿದೆ. ಒಂದು ಇಲ್ಲದಿದ್ದರು ಇನ್ನೊಂದು ಇಲ್ಲ. ಗುರುತಿನ ರಾಜಕೀಯ ಸೈದ್ಧಾಂತಿಕವಾಗಿ ೧೯೮೦ ರಿಂದಿಚೇಗೆ ಬೆಳೆದುಬಂದು ಹೆಚ್ಚಿನ ಮಹತ್ವ ಪಡೆದಿದೆ. ಗುರುತಿನ ರಾಜಕೀಯವನ್ನು ಬಳಿಸಿಕೊಂಡು ಸಾಮಾಜಿಕ, ಆರ್ಥಿಕ, ರಾಜಕೀಯ ಸಂಘಟನೆಗಳ ಪ್ರಭುತ್ವ ಭೋವಿ ಸಮುದಾಯಕ್ಕೆ ಎಷ್ಟು ಪ್ರಮಾಣದಲ್ಲಿ ಸಿಕ್ಕಿದೆ ಸ್ವಾತಂತ್ರ್ಯ ಬಂದಾಗಿನಿಂದಲೂ ಲೋಕಸಭೆಗೆ ಮೂರು ಬಾರಿ, ವಿಧಾನ ಪರಿಷತ್ತಿಗೆ ಮೂರು ಬಾರಿ ವಿಧಾನ ಸಭೆಗೆ ೩೪ ಸಾರಿ ಭೋವಿ ಸಮುದಾಯಕ್ಕೆ ಅವಕಾಶ ದೊರಕಿದ ಪ್ರತಿನಿಧಿತ್ವ ಇದೆ. ೧೯೧೮-೧೯ರ ಮಿಲ್ಲರ್ ಸಮಿತಿಯಲ್ಲಿ ಭೋವಿ ಸಮುದಾಯ, ಹಾಗೂ ೧೯೧೧ರ ಜನಗಣತಿಯಲ್ಲಿ ಸಾಕ್ಷರತೆ ಪ್ರಮಾಣ ವಿವರಗಳನ್ನು ವಿಶ್ಲೇಷಿಸುತ್ತ. ೧೯೮೮ ಚಿನ್ನಪ್ಪರೆಡ್ಡಿ ವರದಿಯಲ್ಲಿ ಭೋವಿ ಸಮುದಾಯದ ಜನಸಂಖ್ಯೆ ಅಂದಾಜು ೩,೫೯,೮೦೦ ಇದ್ದು, ಶೇಕಡ ೧.೭ ರಷ್ಟು ಗೆಜೆಟೆಡ್ ನೌಕರರು ಶೇಕಡ ೬ ರಷ್ಟು ನಾನ್ ಗೆಜೆಟೆಡ್ ನೌಕರರು ೪೯೭, ಮತ್ತು ೪ ನೇ ದರ್ಜೆ ನೌಕರರು ೪೦೦ ಜನ ಇದ್ದಾರೆ. ಒಟ್ಟು ೯೦೩ ಜನ ಭೋವಿ ಸಮುದಾಯದವರು ಸರ್ಕಾರಿ ನೌಕರಿಯಲ್ಲಿದ್ದು, ಜನಸಂಖ್ಯೆಗೆ ಅನುಗುಣವಾಗಿ ೧.೦೯ ರಷ್ಟು ನೌಕರಿಪಡೆಯಬೇಕಾಗಿತ್ತು. ಆದರೆ ಈ ವರದಿ ಪ್ರಕಾರ ೦.೬೧ ನೌಕರರು ಇರುವ ವಿಚಾರಗಳನ್ನು ಕ್ರೋಢಿಕರಿಸಲಾಗಿದೆ.

ಅಧ್ಯಾಯ ಐದರಲ್ಲಿ ಎರಡನೇ ಉದ್ದೇಶಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಆಧಾರಿತವಾಗಿ ಭೋವಿ ಸಮುದಾಯದ ಗುರುತಿನ ರಾಜಕೀಯದ ಸಂಘಟನೆಗಳಿಂದ ಸಾಮಾಜಿಕವಾಗಿ ಶಾಲಾ

ಉಸ್ತುವಾರಿ ಅಭಿವೃದ್ಧಿ ಸಮಿತಿ, ನೀರಿನ ಸಮಿತಿ, ಆರೋಗ್ಯ ಸಮಿತಿ, ವಸತಿ ಸಮಿತಿ, ನೈರ್ಮಲ್ಯ ಸಮಿತಿ, ಜಾತಿ ಸಂಘಟನೆ, ಆರ್ಥಿಕ ಸಂಘಟನೆಗಳಾದ ಹಣಕಾಸು ಸಮಿತಿ, ಜಂಟಿ ಮಾರುಕಟ್ಟೆ ಸಮಿತಿ, ಉತ್ಪಾದನಾ ಸಮಿತಿ, ರಾಜಕೀಯವಾಗಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಸಾಂಸ್ಕೃತಿಕವಾಗಿ ಭಜನಾ ಮಂಡಳಿ, ದೇವಸ್ಥಾನ ಆಡಳಿತ ಮಂಡಳಿ, ಯಕ್ಷಗಾನ ಮಂಡಳಿಯ ಸಂಘಟನೆಗಳಲ್ಲಿ ಭೋವಿ ಸಮುದಾಯದವರು ೧೦ ವರ್ಷಗಳ ಹಿಂದೆ ಮತ್ತು ಪ್ರಸ್ತುತದಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿನಿಧಿತ್ವವನ್ನು ಪಡೆದಿದ್ದಾರೆ ಎನ್ನುವುದು ದಾಖಲಿಸಲಾಗಿದೆ.

ಅಧ್ಯಾಯ ಆರರಲ್ಲಿ ಮೂರನೇ ಉದ್ದೇಶಕ್ಕೆ ಪೂರಕವಾಗಿ ಭೋವಿ ಸಮುದಾಯದ ಅಭಿವೃದ್ಧಿಯನ್ನು ಸಾಮಾಜಿಕವಾಗಿ– ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಜಾತಿ ಸ್ಥಾನಮಾನ, ಲಿಂಗ ಸಮಾನತೆ, ಆರ್ಥಿಕವಾಗಿ – ಭೋವಿ ಸಮುದಾಯದ ಉದ್ಯೋಗ, ಆದಾಯ, ಭೂ ಹಿಡುವಳಿ, ಆದಾಯದ ಮೂಲ ಚರಾ ಮತ್ತು ಸ್ಥಿರಾ ಆಸ್ಥಿ ವಿವರಗಳನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ಭೋವಿ ಸಮುದಾಯದ ಅಭಿವೃದ್ಧಿಯನ್ನು ಮಾಪನ ಮಾಡಲಾಗಿದೆ. ಅಧ್ಯಾಯ ಏಳರಲ್ಲಿ ಉದ್ದೇಶ ನಾಲ್ಕಕ್ಕೆ ಅನುಗುಣವಾಗಿ, ಅಧ್ಯಾಯ ನಾಲ್ಕು ಮತ್ತು ಐದು ಈ ಎರಡು ಅಧ್ಯಯನಗಳಿಗೆ ಪೂರಕವಾಗಿದೆ. ಆದ್ದರಿಂದ ಕ್ಷೇತ್ರಕಾರ್ಯದ ಮಾಹಿತಿಯನ್ನು ಬಳಸಿಕೊಂಡು ಭೋವಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಹಾಗೂ ಭೋವಿ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸಂಘಟನೆಗಳಲ್ಲಿ ಸದಸ್ಯ, ಉಪಾಧ್ಯಕ್ಷ, ಅಧ್ಯಕ್ಷರಾಗಿ, ಅಭಿವೃದ್ಧಿನೀತಿ ಮತ್ತು ರಾಜಕೀಯ ಪ್ರತಿನಿಧಿತ್ವವನ್ನು ವಿಶ್ಲೇಷಿಸಿ ಮುಂದಿನ ಭಾಗಗಳಲ್ಲಿ ಕ್ರೂಢೀಕರಿಸಲಾಗಿದೆ.

ಭೋವಿ ಸಮುದಾಯದವರನ್ನು ಭಾರತದ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ತಮಿಳು ನಾಡಿನಲ್ಲಿ ಬೋಯಾರ್, ಒರಿಸ್ಸಾ ರಾಜ್ಯದಲ್ಲಿ ಒಡ್ಡೇ ಅಥವಾ ಒಡ್ಡರು ಎಂದು, ಆಂಧ್ರಪ್ರದೇಶದಲ್ಲಿ ಒಡ್ಡೆಲು, ಮಹಾರಾಷ್ಟ್ರ ರಾಜ್ಯದಲ್ಲಿ ಒಡ್ಡರು, ಉತ್ತರ ಪ್ರದೇಶದಲ್ಲಿ 'ಮೆಸ್ತರಿ' ಕರ್ನಾಟಕದಲ್ಲಿ ಭೋವಿ/ವಡ್ಡರು ಎಂದು ಕರೆಯಲಾಗುತ್ತಿದೆ. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಿಸಲ್ಪಟ್ಟ ಕನ್ನಂಬಾಡಿ ಅಣೆಕಟ್ಟು (ಕೃಷ್ಣರಾಜ ಮಹಾಸಾಗರ) ವಿಶ್ವಮಾನ್ಯತೆ ಪಡೆದ ನಿರ್ಮಿತಿ ಇದರ ನಿಮ್ಮತ ಭೋವಿ ಸಮುದಾಯದವರೆಂದು ಅರಿತ ಅರಸರು ಭೋವಿ ಸಮುದಾಯವು ಅಲೆಮಾರಿಗಳಂತೆ ನಿರ್ಗತಿಕರಾಗಿ ಬದುಕುವುದನ್ನು ತಪ್ಪಿಸಲು ಇವರನ್ನು ಪರಿಶಿಷ್ಟ ಜಾತಿಗಳಲ್ಲಿ ಸೇರಿಸಿದರು. ಸಾವಿರಾರು ವರ್ಷಗಳ ಪ್ರಾಚೀನ ಪರಂಪರೆಯನ್ನು ಹೊಂದಿರುವ, ಈ ಸಮುದಾಯವು ಕಾಲಕ್ರಮೇಣ ತನ್ನ ವೃತ್ತಿಯಲ್ಲಿ ಹಲವಾರು ಬದಲಾವಣೆಗಳನ್ನು ಕಾಣುತ್ತ ಸಾಗಿದೆ. ದಕ್ಷಿಣ ಭಾರತದ ಕೆಲವು ರಾಜ್ಯಗಳಲ್ಲಿ ಮತ್ತು ಪ್ರಮುಖ ಪಟ್ಟಣಗಳಲ್ಲಿ ಹಾಗೂ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಇವರು ವಾಸವಾಗಿದ್ದಾರೆ. ಕರ್ನಾಟಕದಲ್ಲಿ ಕೋಲಾರ, ಚಿತ್ರದುರ್ಗ, ಕೊಪ್ಪಳ, ಬಳ್ಳಾರಿ, ರಾಯಚೂರು, ಸಿಂಧನೂರು, ಗುಲ್ಬರ್ಗಾ ಜಿಲ್ಲೆಗಳಲ್ಲಿ ಹಾಗೂ ಶಹಾಬಾದ್ ಪಟ್ಟಣದಲ್ಲಿ ೧೧ ರಿಂದ ೧೨ ಲಕ್ಷ ಜನಸಂಖ್ಯೆ ಇರುವುದು ಕಂಡುಬರುತ್ತದೆ.

೧.೨. ಅಧ್ಯಯನ ವಿಷಯದ ಸಮಸ್ಯೀಕರಣ ಮತ್ತು ಸಂಶೋಧನಾ ಪ್ರಶ್ನೆಗಳು

ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ-ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ ಎಂಬ ವಿಷಯದ ಮೇಲೆ ಅಧ್ಯಯನ ಮಾಡುವಾಗ, ಭೋವಿ ಸಮುದಾಯದವರನ್ನು ರಾಜಕೀಯದಲ್ಲಿ ಯಾವ ಮಾನದಂಡದ ಮೇಲೆ ಗುರುತಿಸುತ್ತಾರೆ? ಅಭಿವೃದ್ಧಿ ಮತ್ತು ರಾಜಕೀಯ ನಡುವಿನ ಸಂಬಂಧವನ್ನು ತಿಳಿಯುವುದು ಹೇಗೆ? ಭೋವಿ ಸಮುದಾಯದ ರಾಜಕೀಯವನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಮತ್ತು ಈ ಸಮುದಾಯದ ಗುರುತಿನ ರಾಜಕೀಯವನ್ನು ಮಾಪನ ಮಾಡಿ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧವನ್ನು ವಿಶ್ಲೇಷಿಸಿ ಅಧ್ಯಯನ ಮಾಡಲಾಗಿದೆ. ಭೋವಿ ಸಮುದಾಯದ ಬಗ್ಗೆ ಹಲವಾರು ಸಂಶೋಧನೆಗಳು ಆಗಿವೆ. ಅದೇ ರೀತಿಯಲ್ಲಿ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ಬಗ್ಗೆಯೂ ಹಲವಾರು ಅಧ್ಯಯನಗಳು ನಡೆದಿವೆ. ಆದರೆ ಭೋವಿ ಸಮುದಾಯದ ಅಭಿವೃದ್ಧಿ ಮತ್ತು ರಾಜಕೀಯದ ಬಗ್ಗೆ ಅಧ್ಯಯನಗಳು ನಡೆದಿರುವುದಿಲ್ಲ, ಹಾಗಾಗಿ ಈ ಅಧ್ಯಯನ ಸಮುದಾಯದ ಗುರುತಿನ ರಾಜಕೀಯವನ್ನು ಅರ್ಥೈಸಿ ಅಭಿವೃದ್ಧಿಯನ್ನು ಮಾಪನ ಮಾಡಿ, ಆಗಿರುವ ಅಧ್ಯಯನಗಳನ್ನು ವಿಶ್ಲೇಷಿಸಲಾಗಿದೆ.

ಸಮುದಾಯ ಎಂದರೇನು? ಎಂಬ ವಿಷಯಕ್ಕೆ ಸರಳವಾಗಿ ಅನೇಕ ಅಧ್ಯಯನಗಳು ವ್ಯಕ್ತಿ ಇತರರ ಜೊತೆ ಭಾಷೆ, ಸಂಸ್ಕಾರ, ಸಂಸ್ಕೃತಿ, ನಿಯಮ, ಜಾತಿ ನೆರವನ್ನು ಹಂಚಿಕೊಂಡು ಬದುಕುತ್ತಾನೋ ಅದೇ ಸಮುದಾಯ ಎಂದು ಹೇಳಿವೆ. ಈ ವಿಷಯವಾಗಿ ಅನೇಕ ಅಂತರಾಷ್ಟ್ರೀಯ ಸಂಶೋಧನೆಗಳಾಗಿದ್ದು, ಈ ಕೆಳಗೆ ಅವುಗಳನ್ನು ತಿಳಿಸಲಾಗಿದೆ. ಶ್ಲಾಫರ್ (೧೯೯೪) ತನ್ನ ಸಂಶೋಧನೆಯಲ್ಲಿ ಹೇಳುವಂತೆ ಕೆಲವು ಸಮುದಾಯಗಳು ಏಕರೂಪವಾಗಿರುತ್ತವೆ. ಕೆಲವು ಭಿನ್ನ ವರ್ಗಗಳಾಗಿರುತ್ತವೆ. ಕೆಲವು ಸಮುದಾಯಗಳು ಪ್ರಜಾಪ್ರಭುತ್ವದ ಮೂಲಕ ಆರಿಸಲ್ಪಟ್ಟವನ ಮುಂದಾಳುವಿನ ಮಾರ್ಗದರ್ಶನದಲ್ಲಿ ನಡೆಯುತ್ತವೆ. ಮತ್ತು ಪ್ರತ್ಯೇಕ ಆಡಳಿತ ನಡೆಸುವ ಅಧಿಕಾರ ಹೊಂದಿರುತ್ತಾರೆ. ಕೆಲವು ಸರಕಾರ ನೇಮಿಸಿದಂತೆ ಅಧಿಕಾರಿಗಳು ಅದನ್ನು ಕಾರ್ಯರೂಪಕ್ಕೆ ತರುತ್ತಾರೆ. **ಬೆಂಟರ್** (೧೯೬೪) ಸಮುದಾಯದ ಮೂರು ಅಂಶಗಳ ಬಗ್ಗೆ ಮಾತನಾಡುತ್ತಾರೆ. ಅವುಗಳೆಂದರೆ ಮೊದಲನೆಯದು ಸಮುದಾಯವು ಗುಂಪು ರಚನೆ. ಬೇರೆ ಬೇರೆ ವಿಚಾರಧಾರೆಯನ್ನು ಇಟ್ಟುಕೊಂಡು ಬಂದಂತಹ ಜನರು ಒಂದೆ ಗುರಿಯನ್ನು ಹೊಂದಿ ಶೈಕ್ಷಣಿಕ ಸಮಸ್ಯೆಗಳು, ಒಗ್ಗಟ್ಟಾಗಿ ನಿಭಾಯಿಸುವ ಪ್ರಯತ್ನವನ್ನು ಮಾಡುತ್ತಾರೆ. ಎರಡನೆಯದರಲ್ಲಿ ಹಲವಾರು ಸಮಾನ ಮನಸ್ಸಿನವರಿದ್ದು, ಇವರಲ್ಲಿ ಸಾಮುದಾಯಿಕ ಲಕ್ಷಣಗಳು ಕಂಡುಬರುತ್ತವೆ. ಮೂರನೆಯದರಲ್ಲಿ ಸಮುದಾಯಕ್ಕೆ ತನ್ನದೇ ಆದ ಸ್ಥಾನಿಕ ಸ್ವಾಯತ್ತತೆ ಮತ್ತು ಜವಾಬ್ದಾರಿ ಇರುತ್ತದೆ.

ಜಾತಿ ಎಂಬುದು ಭಾರತೀಯ ರಾಜಕೀಯ ಅಧ್ಯಯನಕ್ಕೆ ಪೂರಕವಾದುದು. ಜಾತಿ ಎಂಬುದು ಒಂದು ಆಸಕ್ತಿ ಗುಂಪು ಅಥವಾ ಒಂದು ವರ್ಗವಲ್ಲ, ರಾಜಕೀಯ ಶಾಸ್ತ್ರದಲ್ಲಿ ಸ್ಥಾಪಿಸಲಾದ ಒಂದು ವರ್ಗ. ಜಾತಿಯನ್ನು ಚಾರಿತ್ರಿಕವಾಗಿ ಭಾರತದಲ್ಲಿ ಅಧ್ಯಯನ ಮಾಡಿದಾಗ ಎರಡು ಅಂಶಗಳು

ತಿಳಿದುಬರುತ್ತದೆ. ೧. ಜಾತಿ ಒಂದು ಆ್ಯಂಟಿ ಕ್ಲಾಸ್ ಮತ್ತು ೨. ಜಾತಿ ಪ್ರಭುತ್ವವನ್ನು ಬಲಗೊಳಿಸುತ್ತದೆ (ಲೊಲೀಡ್ ಐ ರೋಡೂಲ್‌ಪೋ "ಎಕ್ಸ್‌ಪ್ಲೇನಿಂಗ್ ಇಂಡಿಯನ್ ಡೆಮಾಕ್ರಸಿ" ಆಕ್ಸ್‌ಫರ್ಡ್ ಯೂನಿವರ್ಸಿ ಪ್ರೆಸ್). ಎಂದು ಐಡೆಂಟಿಟಿ ಪಾಲಿಟಿಕ್ಸ್‌ನಲ್ಲಿ ತಿಳಿಸಿದ್ದಾರೆ. ಗುರುತಿನ ರಾಜಕಾರಣವು ಭಾರತದಲ್ಲಿ ಗುರುತಿನ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳು ಗುರುತಿನ ರಾಷ್ಟ್ರೀಯತೆಯ ಪ್ರಕ್ರಿಯೆಗೆ ಕಾರಣವಾಗಿದೆ. ಈ ಪ್ರಕ್ರಿಯೆಯಲ್ಲಿ ಭಾರತವು ರಾಷ್ಟ್ರೀಯತೆಯ ನೆಲೆಯಲ್ಲಿ ಗುರುತಿಸಿಕೊಂಡಿದೆ. ಇದರಲ್ಲಿ ಪ್ರಮುಖವಾಗಿ ಸಮುದಾಯಗಳ ಸಮೂಹ ಮತ್ತು ಭಾಷೆಗಳ ಆಧಾರದ ಮೇಲೆ ಗುರುತಿಸಿಕೊಂಡಿದೆ. ಭಾರತವು ರಾಜಕೀಯ ವಿಚಾರಗಳನ್ನು ವಾಸ್ತವಕ್ಕೆ ಬದಲಾಯಿಸಲು ಸಾಧ್ಯವಾಗಿಲ್ಲ. ಭಾರತವು ರಾಜಕೀಯ ವಿಚಾರಗಳ ಸಿದ್ಧಾಂತವೆನ್ನುವುದು ಒತ್ತಡಕ್ಕೆ ಮಾತ್ರ ಒಳಗೊಂಡಿದೆ. ಅಲ್ಲದೆ ರಾಜಕೀಯವು ಪ್ರಮುಖವಾದ ಪ್ರಕ್ರಿಯಾತ್ಮಕವಾದ ಗುರುತಿಗೆ ಒಳಗಾಗಿದೆ. ಮತ್ತು ಭಾರತವು ಸಮುದಾಯಗಳ ಸಮೂಹಗಳ ಜೊತೆಗೆ ಗುರುತಿಸಿಕೊಂಡಿದೆ. (ಬಾಲಾಜಿ ಸಿಂಗ್, ದ ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್ ಅಸೋಷಿಯೇಷನ್) ಇಂದು ಐಡೆಂಟಿಟಿ (ಅಂದರೆ 'ಅಸ್ಮಿತೆ'ಯ) ರಾಜಕೀಯ ಜಗತ್ತಿನಾದ್ಯಂತ ರಾಜಕೀಯದ ಮತ್ತು ರಾಜಕೀಯ ಚಟುವಟಿಕೆಗಳ ಒಂದು ಮಹತ್ವದ ಲಕ್ಷಣವಾಗಿಬಿಟ್ಟಿದೆ. ಐಡೆಂಟಿಟಿ ರಾಜಕೀಯ ಅಂದರೆ ವ್ಯಕ್ತಿಗಳನ್ನು ಜನಾಂಗ, ಕುಲ, ಲಿಂಗ, ಭಾಷೆ, ಅಥವಾ ಧರ್ಮವನ್ನು ಆಧರಿಸಿದ ಆ ವ್ಯಕ್ತಿಗಳು ತಮ್ಮನ್ನು ಯಾವ ಆಧಾರದಲ್ಲಿ ಗುರುತಿಸಿಕೊಳ್ಳುತ್ತಾರೋ ಅಂತಹ 'ಅಸ್ಮಿತೆ' ಅಥವಾ ಐಡೆಂಟಿಟಿಯ ಆಧಾರದಲ್ಲಿ ನಿರೂಪಿಸುವುದು. ಇಂದು ಜಾತಿ ಐಡೆಂಟಿಟಿಯನ್ನು ಆಧರಿಸಿದ ರಾಜಕೀಯ ಚಟುವಟಿಕೆಗಳು ಹೆಚ್ಚುತ್ತಿರುವುದು ಒಂದು ಗಂಭೀರ ಸವಾಲಾಗಿದೆ. ಮತ್ತು ಸಾಮಾಜಿಕ ದಮನವನ್ನು ಎದುರಿಸುವ ಮತ್ತು ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿರುವ ಸಮುದಾಯಗಳು ಮತ್ತು ವಲಯಗಳು ಐಡೆಂಟಿಟಿ ರಾಜಕೀಯಕ್ಕೆ ಸ್ಪಂದಿಸುತ್ತವೆ ಎಂಬುದನ್ನು ನಾವು ಅರಿಯಬೇಕು ಎನ್ನುವ ವಿಷಯಗಳನ್ನು ವಿವರಿಸಿದ್ದು ಮತ್ತು ವಾಸ್ತವಿಕ ಬದಲಾವಣೆ ಹಾಗೂ ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನು ರಾಜಕೀಯ ಬದಲಾವಣೆಗಳ ಮೂಲಕ ಈಡೇರಿಸಿದ್ದು ಒಂದು ರಾಜಕೀಯ ಸಂಸ್ಥೆಯಾದರೆ, ಅದಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಎತ್ತುವುದು ಅದನ್ನು ಜನಜನಿತಗೊಳಿಸುವುದು ಹಾಗೂ ಸಾರ್ವಜನಿಕ ಅಭಿಪ್ರಾಯವನ್ನು ಯಾವ ರೀತಿ ಕ್ರೂಢೀಕರಿಸುವುದು ಎನ್ನುವ ವಿಚಾರಗಳನ್ನು (ಪ್ರಕಾಶ್ ಕಾರಟ್, "ಐಡೆಂಟಿಟಿ ರಾಜಕೀಯ ಮತ್ತು ಇತರ ರಾಜಕೀಯಗಳು") ಬಿಡಿಸಿದ್ದಾರೆ. ಇಂದು (ಜಾತಿ) ಗುರುತಿನ ರಾಜಕೀಯ ಕವಲು ದಾರಿಯಲ್ಲಿದೆ. ಕೆಲವರ ಪ್ರಕಾರ ಜಾತಿಯೇ ಇಲ್ಲ. ಜಾತಿಯೇ ಇಲ್ಲದಿರುವಾಗ ಗುರುತಿನ ರಾಜಕೀಯ ಇರುವುದು ಹೇಗೆ ಎನ್ನುವುದು ಅವರ ಪ್ರಶ್ನೆ. ಮತ್ತೊಂದು ಗುಂಪಿನವರ ಪ್ರಕಾರ ಜಾತಿ ಇಂದು ಕೂಡ ಜೀವಂತ ಇದೆ. ಆದುದರಿಂದ ಜಾತಿ ಗುರುತಿನ ರಾಜಕೀಯಕ್ಕೂ ಅವಕಾಶ ಇದೆಯೆನ್ನುವುದು ಎರಡನೇ ಗುಂಪಿನ ವಾದ. ಈ ಎರಡು ವಾದಗಳು ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದ ನಂತರ ಹೆಚ್ಚು ಪ್ರಚಾರದಲ್ಲಿವೆ. ಏಕೆಂದರೆ ಮಾರುಕಟ್ಟೆ ಒಂದು ಕಡೆಯಲ್ಲಿ ನಮ್ಮ ಅಭಿವೃದ್ಧಿ

ಕಲ್ಪನೆಯನ್ನು ಪ್ರಭಾವಿಸಿದರೆ ಮತ್ತೊಂದೆಡೆ ಸರಕಾರದ ಸ್ವರೂಪವನ್ನು ಕೂಡ ಬದಲಿಸಿದೆ. ತೊಂಬತ್ತರ ಹಿಂದೆ ಸರಕು ಸೇವೆ ಮತ್ತು ಉತ್ಪಾದನಾ ಪರಿಕರಗಳ ವಿತರಣೆಯಲ್ಲಿ ಸರಕಾರದ ಮಧ್ಯ ಪ್ರವೇಶಕ್ಕೆ ಅವಕಾಶವಿತ್ತು. ಆವಾಗ ಗುರುತಿನ ರಾಜಕೀಯಕ್ಕೆ ಅಲ್ಪಸ್ವಲ್ಪ ಅರ್ಥವಿತ್ತೋ ಏನೋ ಆದರೆ ತೊಂಬತ್ತರ ನಂತರ ಸರಕು ಸೇವೆಗಳ ಮತ್ತು ಉತ್ಪಾದನಾ ಪರಿಕರಗಳ ವಿತರಣೆಯನ್ನು ಮಾರುಕಟ್ಟೆ ನಿಯಮ ತೀರ್ಮಾನಿಸುತ್ತಿದೆ ಎನ್ನುವ ಚಿತ್ರಣ ಇದೆ. ಈ ಎಲ್ಲ ಬೆಳವಣಿಗೆಗಳು ಗುರುತಿನ ರಾಜಕೀಯದ ಪ್ರಸ್ತುತತೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಬದಲಾಗುವ ಸಂದರ್ಭದಲ್ಲಿ ಗುರುತಿನ ರಾಜಕೀಯವನ್ನು ಯಾವ ದೃಷ್ಟಿಯಿಂದ ನೋಡಬೇಕು. ಇಂದು ಕೂಡ ಗುರುತಿನ ರಾಜಕೀಯವನ್ನು ಶೋಷಿತ ಜನರ ಆಶಯಗಳನ್ನು ಅವರದ್ದೇ ಆದ ಪರಿಭಾಷೆಯಲ್ಲಿ ತೋಡಿಕೊಳ್ಳುವ ಮತ್ತು ಪರಿಹರಿಸಿಕೊಳ್ಳುವ ಮಾಧ್ಯಮವೆಂದು ತಿಳಿಯಬೇಕೆ? ಅಥವಾ ಗುರುತಿನ ರಾಜಕೀಯವನ್ನು ಓಟು ಬ್ಯಾಂಕ್ ರಾಜಕೀಯದ ರೂಪದಲ್ಲಿ ನೋಡಬೇಕೆ? ಇವೆಲ್ಲ ಗುರುತಿನ ರಾಜಕೀಯಕ್ಕೆ ಸಂಬಂಧಿಸಿದಂತೆ ಕೇಳಿ ಬರುತ್ತಿರುವ ಪ್ರಶ್ನೆಗಳು. (ಎಂ. ಚಂದ್ರಪೂಜಾರಿ, ಅಭಿವೃದ್ಧಿ ಮತ್ತು ರಾಜಕೀಯ) ಇವತ್ತು ಅಭಿವೃದ್ಧಿ ಪದವನ್ನು ಬಳಸದ ವ್ಯಕ್ತಿ ಸಮುದಾಯ ಸಮಾಜಗಳನ್ನು ಊಹಿಸಲು ಸಾಧ್ಯವಿಲ್ಲ. ರಾಜಕೀಯ ನಾಯಕರಂತೂ ಅಭಿವೃದ್ಧಿಯನ್ನು ಬಿಟ್ಟು ಬದುಕಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಇದೆ. ಅಭಿವೃದ್ಧಿಯೇ ನಮ್ಮ ರಾಜಕೀಯವನ್ನು ನಿರ್ಣಯಿಸುವುದು ಎನ್ನುವ ಚಿತ್ರಣವನ್ನು ನೀಡಲು ಈ ಚರ್ಚೆಗಳು ಮತ್ತು ಅವುಗಳ ಹಿಂದಿರುವ ಸಿದ್ಧಾಂತಗಳು ಪ್ರಯತ್ನಿಸುತ್ತವೆ. ಮತ್ತು ಸೋಶಿಯಲಿಸ್ಟ್ ಅಭಿವೃದ್ಧಿ ವರ್ಗರಹಿತ ಸಮಾಜವನ್ನು ರೂಪಿಸುವ ಆಶಯವನ್ನು ಹೊಂದಿದೆ. ನಮ್ಮಲ್ಲಿಂದು ಕ್ಯಾಪಿಟಲಿಸ್ಟ್ ಅಭಿವೃದ್ಧಿ ಕೆಲಸ ಮಾಡುತ್ತಿದೆ. ಆದರೆ ನಮ್ಮ ಜಾತಿ ಧರ್ಮಗಳನ್ನು ಬೆರೆಸಿ ನಡೆಸುವ ರಾಜಕೀಯ ಕ್ಯಾಪಿಟಲಿಸ್ಟ್ ಅಭಿವೃದ್ಧಿ ಲಕ್ಷಣಗಳ ಮೇಲೆ ದಪ್ಪನೆ ಮುಸುಗನ್ನು ಹಾಸಿದೆ. (ಎಂ. ಚಂದ್ರಪೂಜಾರಿ,) ಸಾಮೂಹಿಕ ಬಡತನ, ಅನಕ್ಷರತೆಯನ್ನು ತೊಲಗಿಸುವುದರ ಜೊತೆಗೆ ಜಾತಿ, ಧರ್ಮ, ಲಿಂಗಾಧಾರಿತ ಹಮ್ಮುಬಿಮ್ಮುಗಳಿಂದ ಉದ್ಭವಿಸುವ ಅನೇಕ ಸಾಮಾಜಿಕ ಅಡೆತಡೆಗಳನ್ನು ತ್ವರಿತಗತಿಯಲ್ಲಿ ಮೆಟ್ಟಿ ಮೀರಿ ಮುನ್ನಡೆಯಲು ಮಾರ್ಗೋಪಾಯಗಳನ್ನು ಸೂಚಿಸದಿದ್ದರೆ, ಈ ಅಡ್ಡಿ ಅಡಚಣೆಗಳನ್ನು ನಿವಾರಿಸಲು ದಾರಿ ತೋರದಿದ್ದರೆ ಯಾವುದೇ ಬೆಲೆಯಿರುವುದಿಲ್ಲ. ಜಾಗತೀಕರಣಗೊಂಡ ಇಂದಿನ ಜಗತ್ತಿನಲ್ಲಿ ಮಾರುಕಟ್ಟೆ ಮುಖಿ ಉನ್ನತ ಬೆಳವಣಿಗೆಯ ಮೂಲಕ ಅಥವಾ ಕೇಂದ್ರೀಕೃತ ಯೋಜನೆಯೊಂದಿಗೆ ನೌಕರಶಾಹಿ ಪ್ರಭುತ್ವದ ತದ್ವಿರುದ್ಧವಾದದ್ದು. ಕುಸಿದು ಹೋದ ಸಮಾಜವಾದಿ ವ್ಯವಸ್ಥೆಯಲ್ಲಿ ಸಾಮಾನ್ಯ ಜನರನ್ನು ಈ ವಿಚಾರಧಾರೆ ಸಮ್ಮೋಹನಗೊಳಿಸುತ್ತಿದೆ. ಮತ್ತು ಮಾರುಕಟ್ಟೆಯ ಯಶಸ್ಸು ಮತ್ತು ವಿಫಲತೆ, ಅರ್ಥವ್ಯವಸ್ಥೆ ಮತ್ತು ರಾಜಕಾರಣದ ಸಂಸರ್ಗ, ಘನತೆಯೊಂದಿಗೆ ಅಭಿವೃದ್ಧಿ ಹೊಸ ಪಥವೊಂದನ್ನು ರೂಪಿಸಿಕೊಂಡು ಬಡವರಿಗೆ ಅಭಿವೃದ್ಧಿ ಎಷ್ಟು ಮಹತ್ವವಾಗುತ್ತದೆ ಎಂದು (ಅಮಿತ್‌ಭಾದುರಿ) ಪರ್ಯಾಯ ಪಥವನ್ನು ಅಭಿವೃದ್ಧಿಯ ದೃಷ್ಟಿಯನ್ನು ಸಾದರಪಡಿಸಲು ಪ್ರಯತ್ನಿಸಿದ್ದಾರೆ. ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ–ಭೋವಿ ಸಮುದಾಯದ ಗುರುತಿನ

ರಾಜಕೀಯದ ಅಧ್ಯಯನ ಎಂಬ ವಿಷಯದ ಮೇಲೆ ಸಂಶೋಧನೆಯನ್ನು ಕೈಗೊಂಡಾಗ ಅನೇಕ ರೀತಿಯ ಪ್ರಶ್ನೆಗಳು ಬರುತ್ತವೆ. ಮೊದಲನೆಯದಾಗಿ ನೋಡುವುದಾದರೆ ಭೋವಿ ಸಮುದಾಯ ಅಭಿವೃದ್ಧಿ ಹೊಂದಿದೆಯೇ? ತಮ್ಮನ್ನು ಗುರುತಿಸಿಕೊಳ್ಳಲು ತಮ್ಮ ಸಾಮಾಜಿಕ ವೃತ್ತಿಯಿಂದ ಅವರ ಸಂಸ್ಕೃತಿ, ದೇವಾಲಯಗಳ ನಿರ್ಮಾಣ, ಪರಂಪರಿಕ ಕೊಡುಗೆಗಳನ್ನು ಕೊಟ್ಟಿರುವ ಅಧ್ಯಯನಗಳನ್ನು ನೋಡಬಹುದು. ಆದರೆ ಇಂದು ಅವರು ಯಾಕೆ ವಲಸೆ ಹೋಗುತ್ತಾರೆ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿಯಲು ಕಾರಣ, ಅವರ ಶೈಕ್ಷಣಿಕ ಮಟ್ಟವು ಕುಂಠಿತಗೊಳ್ಳಲು ಕಾರಣ, ಸ್ವತಂತ್ರ ಬಂದ ನಂತರ ಸಾವಿರಾರು ಮಂದಿ ಈ ರಾಜ್ಯವನ್ನು ಆಳಿಹೋಗಿದ್ದಾರೆ. ಆದರೆ ಇಂದು ಬೆರಳೆಣಿಕೆಯಷ್ಟು ಪ್ರತಿನಿಧಿಗಳು ಇದ್ದಾರೆ ಯಾಕೆ? ಇನ್ನು ಅಭಿವೃದ್ಧಿ ಹೊಂದಿಲ್ಲ ಮತ್ತು ವಂಶಪರಂಪರೆಯಾಗಿ ಬಂದ ತಮ್ಮ (ಕಟ್ಟಡ ನಿರ್ಮಾಣ, ಬಂಡೆ ಹೊಡೆಯುವುದು) ವೃತ್ತಿ ಕಡಿಮೆಯಾಗಿದೆ ಯಾಕೆ? ಎನ್ನುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಮುದಾಯದ ಅಭಿವೃದ್ಧಿ, ಅಸ್ಮಿತೆ, ರಾಜಕೀಯ ಪ್ರತಿನಿಧಿತ್ವದ ವಿಷಯಗಳನ್ನು ಅಧ್ಯಯನದಲ್ಲಿ ಕ್ರೋಡಿಕರಿಸಿ ವಿಶ್ಲೇಷಿಸಿದಾಗ ಅಧ್ಯಯನದಲ್ಲಿ ಮುಖ್ಯವಾಗಿ ಈ ಕೆಳಗಿನ ಕೆಲವು ಪ್ರಶ್ನೆಗಳು ಬರುತ್ತವೆ.

ಅಧ್ಯಯನದ ಪ್ರಶ್ನೆಗಳು

೧. ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧ ಹೇಗಿದೆ?

೨. ಭೋವಿ ಸಮುದಾಯದ ಗುರುತಿನ ರಾಜಕೀಯವನ್ನು ಹೇಗೆ ಅರ್ಥಮಾಡಿಕೊಳ್ಳುವುದು?

೩. ಭೋವಿ ಸಮುದಾಯವು ಅಭಿವೃದ್ಧಿ ಹೊಂದಿದೆಯೇ?

೪. ಭೋವಿ ಸಮುದಾಯದ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧ ಹೇಗಿದೆ?

೧.೩. ವಿಷಯ ಆಸಕ್ತಿಗೆ ಕಾರಣಗಳು

ಭೋವಿ ಸಮುದಾಯದ ಅಭಿವೃದ್ಧಿ, ರಾಜಕೀಯ, ಹಾಗೂ ಸಮುದಾಯದ ಐಡೆಂಟಿಟಿ ಬಗ್ಗೆ ಇದುವರೆಗೆ ಯಾವುದೇ ರೀತಿಯ ಅಧ್ಯಯನಗಳು ನಡೆದಿರುವುದಿಲ್ಲ ಮತ್ತು ಸಮುದಾಯದ ವೃತ್ತಿಗಳನ್ನು ನಂಬಿಕೊಂಡು ವಲಸೆ ಹೋಗುವ ಪರಿಸ್ಥಿತಿ ಬಂದಿದೆ. ರೂಢಿ ಸಂಪ್ರದಾಯವಾಗಿ ಪೂರ್ವಜರಿಂದ ಬಂದ ವೃತ್ತಿಯನ್ನು ಮಕ್ಕಳು ಮತ್ತು ಮೊಮ್ಮಕ್ಕಳು ಇದೆ ರೀತಿ ಮುಂದುವರಿಸಿಕೊಂಡು ಬಂದಿದ್ದಾರೆ. ಶೈಕ್ಷಣಿಕವಾಗಿ ಪ್ರೌಢ ಶಿಕ್ಷಣವನ್ನು ಸಹ ಪೂರ್ಣಗೊಳಿಸುವುದಿಲ್ಲ ಯಾಕೆ?. ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟು ತಮ್ಮಂತೆ ತಮ್ಮ ಮಕ್ಕಳು ಸಹ ವೃತ್ತಿಯನ್ನು ನಂಬಿಕೊಂಡು ಬದುಕುತ್ತಿದ್ದರೆ ಕಾರಣ ತಿಳಿಯುವ ಉದ್ದೇಶದಿಂದ ಸಮುದಾಯದ ಹಿನ್ನೆಲೆ, ಬೆಳವಣಿಗೆ, ಸಾಂಸ್ಕೃತಿಕವಾಗಿ ಸಮುದಾಯದ ಐಡೆಂಟಿಟಿ ಯಾವ ರೀತಿ ನಿರ್ಧಾರವಾಗುತ್ತದೆ ಎನ್ನುವ ವಿಚಾರಗಳನ್ನು ತಿಳಿಯಬೇಕೆಂಬ ಆಸಕ್ತಿ.

೧.೪. ಅಧ್ಯಯನ ಉದ್ದೇಶಗಳು

ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ-ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನವು ಅನೇಕ ವಿಧದ ಉದ್ದೇಶಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾದ ಉದ್ದೇಶಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

೧. ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧ ವಿಶ್ಲೇಷಿಸುವುದು.

೨. ಭೋವಿ ಸಮುದಾಯದ ಗುರುತಿನ ರಾಜಕೀಯವನ್ನು ಅರ್ಥಮಾಡಿಕೊಳ್ಳುವುದು.

೩. ಭೋವಿ ಸಮುದಾಯದ ಅಭಿವೃದ್ಧಿಯನ್ನು ಮಾಪನ ಮಾಡುವುದು.

೪. ಭೋವಿ ಸಮುದಾಯದ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು.

೧.೫. ಅಧ್ಯಯನ ವಿಧಾನ

ಪ್ರಸ್ತುತ ನನ್ನ ಸಂಶೋಧನಾ ಅಧ್ಯಯನವು ಎಂಪಿರಿಕಲ್ ಮಾದರಿಯ ಅಧ್ಯಯನವಾಗಿದೆ. ಅಧ್ಯಯನಕ್ಕಾಗಿ ಕರ್ನಾಟಕ ರಾಜ್ಯದ ಒಂದು ಜಿಲ್ಲೆಯಾದ ಚಿತ್ರದುರ್ಗ ಜಿಲ್ಲೆಯನ್ನು ಕ್ಷೇತ್ರ ಕಾರ್ಯಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆ. ಈ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ಆರು ತಾಲ್ಲೂಕುಗಳಿವೆ. ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಪಡೆಯಲಾಗಿದೆ. ಕ್ಷೇತ್ರಕಾರ್ಯಕ್ಕಾಗಿ ಎರಡು ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಪ್ರತಿ ತಾಲ್ಲೂಕಿನಲ್ಲಿ ನಾಲ್ಕು ಗ್ರಾಮಗಳನ್ನು ಆಯ್ದುಕೊಳ್ಳಲಾಗಿದೆ. ಗ್ರಾಮಗಳನ್ನು ಪ್ರಶ್ನಾವಳಿ ಮೂಲಕ ಮನೆಗಳನ್ನು ಆಯ್ಕೆಮಾಡುವಲ್ಲಿ ರ್‍ಯಾಂಡಮ್ ಪದ್ಧತಿಯನ್ನು ಅನುಸರಿಸಲಾಗಿದೆ. ಸಂದರ್ಶನ, ಚರ್ಚೆಗಳ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ.

ಪ್ರಕಟಿತ ಮತ್ತು ಅಪ್ರಕಟಿತ ಮೂಲಗಳಿಂದ ಆನುಷಂಗಿಕವಾದ ಮಾಹಿತಿಯನ್ನು ಸಂಗ್ರಹ ಮಾಡಲಾಗಿದೆ. ಜನಗಣತಿ ವರದಿಗಳು, ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಆರೋಗ್ಯ ಕುಟುಂಬ ಕಲ್ಯಾಣ ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ, ಸರ್ಕಾರದ ವರದಿಗಳು, ಜಾತಿಗಣತಿ ವರದಿಗಳು, ಹಾಗೂ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಾರ್ಯಾಲಯದಿಂದ ಜಿಲ್ಲೆಯ ಹಾಗೂ ತಾಲ್ಲೂಕುಗಳ ಮಾಹಿತಿಯನ್ನು ಪಡೆಯಲಾಗಿದೆ. ಹೀಗೆ ವಿವಿಧ ಮೂಲಗಳಿಂದ ಆನುಷಂಗಿಕವಾಗಿ ಮಾಹಿತಿಯನ್ನು ಆಯ್ದುಕೊಳ್ಳಲಾಗಿದೆ. ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ – ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನವು ಚಿತ್ರದುರ್ಗ ಜಿಲ್ಲೆಗೆ ಸೀಮಿತವಾಗಿದೆ. ಕಾರಣವೇನೆಂದರೆ, ಚಿತ್ರದುರ್ಗ ಜಿಲ್ಲೆಯ ಪರಿಶಿಷ್ಟ ಜಾತಿ ಮೀಸಲು ವಿಧಾನ ಸಭೆ ಕ್ಷೇತ್ರವಾದ ಹೊಳಲ್ಕೆರೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಈ ತಾಲ್ಲೂಕನ್ನು ಹಾಗೂ ಹಿಂದುಳಿದ ತಾಲ್ಲೂಕಾದ

ಮೊಳಕಾಲ್ಮೂರನ್ನು ಆಯ್ಕೆಮಾಡಿಕೊಂಡಿದ್ದೇನೆ. ಕಾರಣವೇನೆಂದರೆ, ಕರ್ನಾಟಕ ರಾಜ್ಯದ ಸಮಗ್ರ ಮಾನವ ಅಭಿವೃದ್ಧಿ ಸೂಚ್ಯಂಕ ೨೦೧೦ರ ಪ್ರಕಾರ ಚಿತ್ರದುರ್ಗ ಜಿಲ್ಲೆಯು ಕರ್ನಾಟಕದಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಚಿತ್ರದುರ್ಗ ಜಿಲ್ಲೆಯು ಬಯಲುಸೀಮೆ ಪ್ರದೇಶವಾಗಿರುವುದರ ಜೊತೆಗೆ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಅತಿ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ಹೊಂದಿರುವುದು. ಈ ಜಿಲ್ಲೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕ್ಕಾಗಿ ಚಿತ್ರದುರ್ಗ, ಅಭಿವೃದ್ಧಿ ಹೊಂದುತ್ತಿರುವ ತಾಲ್ಲೂಕನ್ನಾಗಿ ಹಿರಿಯೂರು ಹಾಗೂ ಅಭಿವೃದ್ಧಿ ಹೊಂದದ ತಾಲ್ಲೂಕನ್ನಾಗಿ ಮೊಳಕಾಲ್ಮೂರು ತಾಲ್ಲೂಕಗಳನ್ನು ಕಾಣಬಹುದಾಗಿದೆ. ಆದ್ದರಿಂದ ಈ ಜಿಲ್ಲೆಯಲ್ಲಿ ಅಭಿವೃದ್ಧಿ ಹೊಂದಿದ, ಹಾಗೂ ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದದ ಮೂರು ಅಂಶಗಳನ್ನು ಕಾಣಬಹುದಾಗಿದೆ. ಆದ್ದರಿಂದ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿನ ಎರಡು ಗ್ರಾಮಗಳನ್ನು ನನ್ನ ಅಧ್ಯಯನಕ್ಕೆ ಬಳಸಿಕೊಂಡು ಒಟ್ಟು ೨೦೦ ಕುಟುಂಬಗಳಿಗೆ ಭೇಟಿಕೊಟ್ಟು ಅವರ ಕಸುಬು, ಆರ್ಥಿಕ ಹಿನ್ನೆಲೆ, ಸಾಮಾಜಿಕ ಮತ್ತು ರಾಜಕೀಯ ಸ್ಥಿತಿ ಗತಿಗಳ ಆಧಾರದ ಮೇಲೆ ಭೋವಿ ಸಮುದಾಯದವರನ್ನು ಯಾವ ಮಾನದಂಡದ ಮೇಲೆ ಗುರುತಿಸುತ್ತಾರೆ ಎಂಬ ಕುರಿತು ಮಾಹಿತಿಯನ್ನು ಪ್ರಶ್ನಾವಳಿ ಮೂಲಕ ಸಂದರ್ಶನ ಮಾಡಿ ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ್ದೇನೆ. ಮತ್ತು ಇಲ್ಲಿಯವರೆಗೆ ಆಗಿರುವ ಅಧ್ಯಯನಗಳಿಂದ ಮತ್ತು ಗೆಜೆಟಿಯರ್‌ಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಅಂತರ್ಜಾಲ ಲೇಖನಗಳು, ಹಾಗೂ ಜನಗಣತಿ ವರದಿಗಳು, ಮಾನವ ಅಭಿವೃದ್ಧಿ ವರದಿ, ಮತ್ತು ವಿಷಯಕ್ಕೆ ಸಂಬಂಧಿಸಿದಂತೆ ಚುನಾಯಿತ ಪ್ರತಿನಿಧಿಗಳನ್ನು, ಸಮುದಾಯದ ನಾಯಕರನ್ನು ಸಂದರ್ಶಿಸಿ ಮಾಹಿತಿ ಪಡೆದಿದ್ದೇನೆ. ಹಾಗೇಯೇ ಸಂಘ ಸಂಸ್ಥೆಗಳು ಇನ್ನು ಇತರೆ ಮೂಲಗಳಿಂದ ಲಭ್ಯವಾಗುವ ಮಾಧ್ಯಮಿಕ ಮಾಹಿತಿಯನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

ಮಾದರಿ ಆಯ್ಕೆ ವಿಧಾನ:

ಚಿತ್ರದುರ್ಗ ಜಿಲ್ಲೆಯ ಮುಂದುವರೆದ ಮತ್ತು ಹಿಂದುಳಿದ ಎರಡು ತಾಲ್ಲೂಕುಗಳನ್ನು ನಂಜುಂಡಪ್ಪ ವರದಿ, ಜಿಲ್ಲೆ ಮಾನವ ಅಭಿವೃದ್ಧಿ ವರದಿ ಮತ್ತು ಪಂಚಾಯತ್ ರಾಜ್ ಸೂಚ್ಯಂಕ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ ಮುಂದುವರೆದ ತಾಲ್ಲೂಕ್ಕಾಗಿ ಹೊಳಲ್ಕೆರೆ, ಹಿಂದುಳಿದ ತಾಲ್ಲೂಕ್ಕಾಗಿ ಮೊಳಕಾಲ್ಮೂರಿನ ತಲಾ ೧೦೦ ರಂತೆ ಒಟ್ಟು ೨೦೦ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದು, ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಆಧಾರದ ಮೇಲೆ ೮ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಬೊರೇನಹಳ್ಳಿ, ರಾಮೇನಹಳ್ಳಿ, ಕಣವಿ ಜೋಗಹಳ್ಳಿ, ಮಾರುತಿಹಳ್ಳಿ ಹಾಗೂ ಮೊಳಕಾಲ್ಮೂರು ತಾಲ್ಲೂಕಿನ ಸಿದ್ಧಯ್ಯನಕೋಟೆ,

ಜಯಂತಿನಗರ, ಚಿಕ್ಕೇರಹಳ್ಳಿ, ನಾಗಸಮುದ್ರ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಪ್ರತಿ ಗ್ರಾಮದಿಂದ ೨೫ ಕುಟುಂಬಗಳನ್ನು ರ್‍ಯಾಂಡಮ್ ಪದ್ಧತಿಯಲ್ಲಿ ತೆಗೆದುಕೊಂಡಿರುತ್ತೇನೆ. ಒಟ್ಟು ೨೦೦ ಕುಟುಂಬಗಳಿಗೆ ಪ್ರಶ್ನಾವಳಿಯ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅಂಶಗಳಿಗೆ ಸಂಬಂಧಿಸಿದಂತೆ ಶಿಕ್ಷಣ, ಆರೋಗ್ಯ, ವರಮಾನ, ಉದ್ಯೋಗ, ಕೂಲಿ, ವ್ಯವಸಾಯ, ನೈರ್ಮಲೀಕರಣಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಮತ್ತು ರಾಜಕೀಯ ಎಂಬ ಎರಡು ಭಾಗಗಳಾಗಿ ಮಾಡಿಕೊಂಡು ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ, ಸಂಗ್ರಹಿಸಿದ ಮಾಹಿತಿಯನ್ನು ಈ ಕೆಳಗಿನದ ವಿಧಾನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ಮಾಹಿತಿ ವಿಶ್ಲೇಷಣೆಯ ವಿಧಾನ:

ಗಣತೀಯ ಹಾಗೂ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಿದ ಮಾಹಿತಿ ವಿಶ್ಲೇಷಣೆ ಮಾಡಲಾಗಿದೆ. ಶೇಕಡವಾರು ಅನುಪಾತ, ಸೂಚ್ಯಂಕ ಕೋಷ್ಟಕಗಳಿಂದ ಉಪಕರಣಗಳನ್ನು ಬಳಸಿಕೊಂಡು ವೈಜ್ಞಾನಿಕವಾಗಿ ಅಧ್ಯಯನ ಕೈಗೊಳ್ಳಲಾಗಿದೆ. ಈ ಮಹಾಪ್ರಬಂಧವು ಮುಖ್ಯವಾಗಿ ಅಂಕಿ-ಅಂಶಗಳು ಮತ್ತು ಕ್ಷೇತ್ರಕಾರ್ಯ ಎರಡನ್ನು ಆಧರಿಸಿದೆ. ಅಂಕಿ-ಅಂಶಗಳ ಆಧಾರವೇ ಹೆಚ್ಚಿರುವುದರಿಂದ ಅಂಕಿ-ಅಂಶಗಳನ್ನು ಕುರಿತಾದ ಅಧ್ಯಯನಕ್ಕೆ ಯಾವ ಮಿತಿ ಇರುತ್ತದೆಯೇ ಈ ಅಧ್ಯಯನಕ್ಕೆ ಅದೇ ಮಿತಿ ಇರುತ್ತದೆ.

೧.೬. ಅಧ್ಯಯನ ವ್ಯಾಪ್ತಿ: ಮಿತಿಗಳು ಮತ್ತು ಮಹತ್ವ

ವ್ಯಾಪ್ತಿ :

ಪ್ರಸ್ತುತ ಅಧ್ಯಯನವು ಚಿತ್ರದುರ್ಗ ಜಿಲ್ಲೆಯ ಎರಡು ತಾಲ್ಲೂಕುಗಳನ್ನು ಒಳಗೊಂಡ ಅಧ್ಯಯನವಾಗಿದೆ. ಈ ತಾಲ್ಲೂಕುಗಳಲ್ಲಿನ ೮ ಗ್ರಾಮಗಳನ್ನು ಅವರ ರಾಜಕೀಯ, ಸಮಾಜೋ-ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಈ ಅಧ್ಯಯನವು ಭೋವಿ ಸಮುದಾಯದ ಅಸ್ಮಿತೆ, ಅಭಿವೃದ್ಧಿ, ರಾಜಕೀಯ ಸಂಘಟನೆಗಳ ಪ್ರತಿನಿಧಿತ್ವಕ್ಕೆ ಸಂಬಂಧಿಸಿದ ಅಸ್ಮಿತೆಯ ಚಿತ್ರಣವನ್ನು ನೀಡುತ್ತದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರದೇಶ ಹಿಂದುಳಿದ ಮತ್ತು ಮುಂದುವರೆದ ಗ್ರಾಮಗಳು ಎಂಬ ಹಿನ್ನೆಲೆಯಲ್ಲಿ ಸಂಗ್ರಹಿಸಿ ಮಾಹಿತಿಯನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಮಿತಿ :

೧. ಈ ಅಧ್ಯಯನವು ಚಿತ್ರದುರ್ಗ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ.

೨. ಭೋವಿ ಸಮುದಾಯದ ಅಭಿವೃದ್ಧಿ ಮಾಪನ ಮತ್ತು ಸಮುದಾಯದ ರಾಜಕೀಯ ಸಂಘಟನೆಗಳ ಪ್ರತಿನಿಧಿತ್ವದ ಅಸ್ಮಿತೆಯನ್ನು ಅಧ್ಯಯನ ಮಾಡುವುದಾಗಿದೆ.

೩. ಭೋವಿ ಸಮುದಾಯದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಸಂಸ್ಥೆಗಳನ್ನು ಅಧ್ಯಯನ ಮಾಡುವುದಾಗಿದೆ.

ಮಹತ್ವ :

ಈ ಪ್ರಬಂಧವು ಭೋವಿ ಸಮದಾಯದ ಗುರುತಿನ ರಾಜಕೀಯ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಅಭಿವೃದ್ಧಿ ಮಾಪನಕ್ಕೆ ಸಂಬಂಧಪಟ್ಟಿದ್ದು, ಸಾಮಾಜಿಕ ಅಭಿವೃದ್ಧಿಯಲ್ಲಿ ಭೋವಿ ಸಮುದಾಯದ ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಜಾತಿ ಸ್ಥಾನಮಾನ, ಲಿಂಗ ಸಮಾನತೆ ಹಾಗೂ ಆರ್ಥಿಕವಾಗಿ ಭೋವಿ ಸಮುದಾಯದ – ಉದ್ಯೋಗ, ಆದಾಯ, ಭೂ ಹಿಡುವಳಿ, ಆದಾಯದ ಮೂಲ, ಚರಾ ಮತ್ತು ಸ್ಥಿರಾ ಆಸ್ತಿ ವಿವರಗಳು. ಸಾಮಾಜಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವ, ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವ, ರಾಜಕೀಯ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವ, ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವ ಹಾಗೂ ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯದ ಪ್ರತಿನಿಧಿತ್ವದ ವಿಶ್ಲೇಷಣೆ. ಹೀಗೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೊಸ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಿಕೊಡುವುದರಿಂದ ಈ ಅಧ್ಯಯನವು ಮಹತ್ವದಾಗಿದೆ. ಒಟ್ಟಾರೆಯಾಗಿ ಈ ಪ್ರಬಂಧವು ತಳ ಸಮುದಾಯಗಳ ಅಭಿವೃದ್ಧಿ ಮತ್ತು ರಾಜಕೀಯ ಅಸ್ಮಿತೆಯನ್ನು ತಿಳಿದುಕೊಳ್ಳುವವರಿಗೆ ಹಾಗೂ ಸರ್ಕಾರ ರೂಪಿಸಿದ ಯೋಜನೆಗಳ ಉಪಯೋಗವನ್ನು ಈ ಸಮುದಾಯದ ಫಲಾನುಭವಿಗಳಿಗೆ ತಲುಪಿಸಲು ಸಹಕಾರಿಯಾಗಿರುವುದರಿಂದ ಈ ಅಧ್ಯಯನ ಮಹತ್ವದಾಗಿರುತ್ತದೆ.

೧.೭. ಅಧ್ಯಯನದ ವಿನ್ಯಾಸ

ಈ ಸಂಶೋಧನಾ ಪ್ರಬಂಧವು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯ ಒಂದರಲ್ಲಿ ಪ್ರಸ್ತಾವನೆ, ಅಧ್ಯಯನ ವಿಷಯದ ಸಮಸ್ಯೀಕರಣ ಮತ್ತು ಸಂಶೋಧನಾ ಪ್ರಶ್ನೆಗಳು, ವಿಷಯ ಆಸಕ್ತಿಗೆ ಕಾರಣಗಳು, ಅಧ್ಯಯನ ಉದ್ದೇಶಗಳು, ಅಧ್ಯಯನ ವಿಧಾನ, ಅಧ್ಯಯನ ವ್ಯಾಪ್ತಿ, ಮಹತ್ವ, ಇತಿಮಿತಿಗಳು ಮತ್ತು ಅಧ್ಯಯನದ ವಿನ್ಯಾಸಗಳನ್ನು ಒಳಗೊಂಡಿದೆ. ಅಧ್ಯಾಯ ಎರಡರಲ್ಲಿ ಇಲ್ಲಿಯವರೆಗೆ ಈ ಅಧ್ಯಯನಕ್ಕಾಗಿ ಅಭಿವೃದ್ಧಿಗೆ ಮತ್ತು ರಾಜಕೀಯ ಹಾಗೂ ಭೋವಿ ಸಮುದಾಯಕ್ಕೆ ಸಂಬಂಧಪಟ್ಟಂತೆ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಅಧ್ಯಾಯ ಮೂರರಲ್ಲಿ ಅಧ್ಯಯನ ಕ್ಷೇತ್ರದ ಇತಿಹಾಸ ಮತ್ತು ಭೌಗೋಳಿಕ ಹಿನ್ನೆಲೆಯ ಪರಿಚಯವನ್ನು ಮಾಡಿಕೊಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯದ ಪರಿಕಲ್ಪನೆಗಳು, ಅಭಿವೃದ್ಧಿ ಮತ್ತು ರಾಜಕೀಯದ ನಡುವಿನ ಸಂಬಂಧ, ಗುರುತಿನ ರಾಜಕೀಯ ಬೆಳೆದು ಬಂದ ದಾರಿ, ಭೋವಿ ಸಮುದಾಯದ ಸಾಮಾಜಿಕ ಹಿನ್ನಲೆ, ಭೋವಿ ಸಮುದಾಯದ ಐತಿಹಾಸಿಕ ಬೆಳವಣಿಗೆ, ಭೋವಿ ಸಮುದಾಯದ ಸಾಂಸ್ಕೃತಿಕ ಕೊಡುಗೆಗಳು, ಜನಗಣತಿ ೧೮೭೧ರ ವರದಿಯಲ್ಲಿ

ಭೋವಿ ಸಮುದಾಯವನ್ನು ಗುರುತಿಸುವಿಕೆ, ಮೈಸೂರು ಜನಗಣತಿ ೧೮೯೧ರ ವರದಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ, ಮುಂಬೈ ಕರ್ನಾಟಕ ಗೆಝೇಟೀಯರನಲ್ಲಿ ಒಡ್ಡರ ಉಲ್ಲೇಖ, ಸರ್ ಲೆಸ್ಲೀ ಮಿಲ್ಲರ್ ಸಮಿತಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ, ಓ ಚಿನ್ನಪ್ಪರೆಡ್ಡಿ ಸಮಿತಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ, ಭೋವಿ ಸಮುದಾಯದಲ್ಲಿ ಎಂ.ಎಲ್.ಎ./ಎಂ.ಪಿ ಗಳಾಗಿ ರಾಜಕೀಯದಲ್ಲಿ ಗುರುತಿಸಿಕೊಂಡವರ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದರಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಹಾಗೂ ಸಾಂಸ್ಕೃತಿಕ ಸಂಘಟನೆಗಳಲ್ಲಿ ತೊಡಗಿಸಿಕೊಂಡ ಭೋವಿ ಸಮುದಾಯದವರನ್ನು ಗುರುತಿಸಲಾಗಿದೆ. ಅಧ್ಯಾಯ ಆರರಲ್ಲಿ ಭೋವಿ ಸಮುದಾಯದವು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಜಾತಿ ಸ್ಥಾನಮಾನ, ಲಿಂಗ ಸಮಾನತೆ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಆಗಲು ಉದ್ಯೋಗ, ಆದಾಯ, ಭೂ ಹಿಡುವಳಿ, ಆದಾಯದ ಮೂಲ, ಚರಾ ಮತ್ತು ಸ್ಥಿರಾ ಆಸ್ತಿ ವಿವರಗಳನ್ನು ಮಾಪನ ಮಾಡಲಾಗಿದೆ. ಅಧ್ಯಾಯ ಏಳರಲ್ಲಿ ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯ ಪ್ರತಿನಿಧಿತ್ವ – ಭೋವಿ ಸಮುದಾಯ ಅಭಿವೃದ್ಧಿ ನೀತಿಯ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಾಯ ಎಂಟರಲ್ಲಿ ಸಮಾರೋಪ, ಅಧ್ಯಯನದ ಫಲಿತಗಳು ಮತ್ತು ತೀರ್ಮಾನಗಳನ್ನು ನೀಡಲಾಗಿದೆ.

ಕೊನೆಯ ಟಿಪ್ಪಣಿಗಳು

೧. ಅಮೃತ ಕಟಕೆ "ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ–೭, ಒಡ್ಡರು/ಭೋವಿ ಜನಾಂಗ/ಮನೆಯವರ ಸಂಸ್ಕೃತಿ, ಮಲ್ಲಿಕಾರ್ಜುನ ಸ್ವಾಮಿ ವಿ.ಎನ್, ರಿಜಿಸ್ಟರ್ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು, ೨೦೧೦.

೨. ಕಲಬುರ್ಗಿ ಎಂ.ಎಂ. (ಸಂ), ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೩. ಕಪೂರ್ ಎ.ಸಿ., ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಸೈನ್ಸ್, ಎಸ್. ಚಂದ ಅಂಡ್ ಕೋ ಲಿಮಿಟೆಡ್, ನ್ಯೂದೆಲ್ಲಿ, ೧೯೯೦

೪. ಗಂಗಾಧರಯ್ಯ, ಭೋವಿ ಸಮಾಜದ ಸಂಸ್ಕೃತಿ ಮತ್ತು ಕೊಡುಗೆಗಳು, ಶ್ರೀ ತಿಮ್ಮಪ್ಪ ವಿ., ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು, ೨೦೦೭.

೫. ಚಂದ್ರಪೂಜಾರಿ ಎಂ. ಸಂಶೋಧನಾ ಪ್ರಸ್ತಾವನೆ, ಮಂಟಪಮಾಲೆ ೧೫೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೧೧.

೬. ಚಂದ್ರಪೂಜಾರಿ ಎಂ. ಸಂಶೋಧನಾ ಪರಿಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೧೧,

೭. ಚಂದ್ರಪೂಜಾರಿ ಎಂ. ಸಂಶೋಧನೆ ಏನು? ಏಕೆ? ಹೇಗೆ? ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೧೧.

೮. ಚಂದ್ರಪೂಜಾರಿ. ಎಂ. "ಸಂಶೋಧಕರು ಮತ್ತು ಕ್ಷೇತ್ರಕಾರ್ಯ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೪.

೯. ಪ್ರಶಾಂತ ಎಚ್.ಡಿ., ಕರ್ನಾಟಕ ರಾಜ್ಯಕೋಶ–೮, ಜನಸಮುದಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೦. ಮುಜಾಫರ ಅಸ್ಸಾದಿ, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ ರೈತ, ಹೋರಾಟ ಹಾಗೂ ಸಾಮಾಜೀಕ ಚಳುವಳಿ ಪ್ರಗತಿ ಗ್ರಾಫಿಕ್ಸ ಬೆಂಗಳೂರು, ೨೦೦೯.

೧೧. ಮುಜಾಫರ ಅಸ್ಸಾದಿ, ಅಸ್ಮಿತೆ ರಾಜಕರಣ ಮತ್ತು ಮೂಲಭೂತವಾದ ಕೆಲವು ಚಿಂತನೆಗಳು ಪ್ರಗತಿ ಗ್ರಾಫಿಕ್ಸ ಬೆಂಗಳೂರು, ೨೦೧೭.

೧೨. ರಾಮ ಅಹುಜ್, ರೀಸರ್ಚ್ ಮೆಥಡಲಾಜಿ, ರಾವತ್ ಪಬ್ಲಿಕೇಷನ್ ಜೈಪುರ್, ೨೦೦೭.

೧೩. ಸಂಗಳದ ಎನ್.ಬಿ., ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ, ಶಶಿ ಪ್ರಕಾಶನ, ಗದಗ, ೨೦೧೪.

ಅಧ್ಯಾಯ – ಎರಡು

ಅಧ್ಯಯನಗಳ ಸಮೀಕ್ಷೆ

೨.೧. ಅಭಿವೃದ್ಧಿಗೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

೨.೨. ರಾಜಕೀಯಕ್ಕೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

೨.೩. ಸಮುದಾಯಕ್ಕೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ – ಎರಡು

ಅಧ್ಯಯನಗಳ ಸಮೀಕ್ಷೆ

ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ-ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ ಎಂಬ ವಿಷಯದ ಮೇಲೆ ಅಧ್ಯಯನ ಮಾಡುವಾಗ ಸಮುದಾಯದ ಗುರುತಿನ ರಾಜಕೀಯವನ್ನು ಮಾಪನ ಮಾಡಿ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧವನ್ನು ವಿಶ್ಲೇಷಿಸಿ ಅಭಿವೃದ್ಧಿ, ರಾಜಕೀಯ, ಸಮುದಾಯಕ್ಕೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ ಈ ಕೆಳಕಂಡಂತೆ ಈ ಅಧ್ಯಾಯದಲ್ಲಿ ಮಾಡಲಾಗಿದೆ.

೨.೧. ಅಭಿವೃದ್ಧಿಗೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

ಶಮೀಮಾ ಸಿದ್ದಿಕಿ (೨೦೧೯) ಅವರು **'ಭಾರತದ ಪರಿವರ್ತನೆ ಎಂಬ ಲೇಖನದಲ್ಲಿ'** ಅಭಿವೃದ್ಧಿ ಎಂದರೆ ಇದಕ್ಕೆ ಹಲವು ಆಯಾಮಗಳಿವೆ. ವ್ಯಕ್ತಿ, ವೇಳೆ, ನಿರ್ದಿಷ್ಟ ಚೌಕಟ್ಟುಗಳಿಗೆ ಅನುಗುಣವಾಗಿ ಅಭಿವೃದ್ಧಿಯ ಸ್ವರೂಪ ಬದಲಾಗುತ್ತ ಸಾಗುತ್ತದೆ. ಒಬ್ಬ ವ್ಯಕ್ತಿಗೆ ನಾವು ಹೋಲಿಕೆ ಮಾಡಿದಾಗ ಅವನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಂಬಂಧಿಸಿರುತ್ತದೆ. ದೇಶದ ಅಭಿವೃದ್ಧಿಯನ್ನು ಮಾಪನ ಮಾಡಿದಾಗ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಮಜಲುಗಳಿಗೆ ಅನುಗುಣವಾಗಿ ನೋಡುತ್ತೇವೆ. ಎಲ್ಲರನ್ನು ಒಳಗೊಂಡ ಆರ್ಥಿಕತೆಗೆ ಸೀಮಿತವಾಗದೆ ಉತ್ತಮ ಆಡಳಿತದ ಜವಾಬ್ದಾರಿಯನ್ನು ಸರ್ಕಾರಗಳು ನೀಡಿ, ಶಿಕ್ಷಣ, ಆರೋಗ್ಯ, ಮಕ್ಕಳ ಅಭಿವೃದ್ಧಿ, ಪ್ರದೇಶಾಭಿವೃದ್ಧಿ, ನ್ಯಾಯ ಪೊಲೀಸ್ ಮತ್ತು ನ್ಯಾಯಾಂಗದ ಕಡೆಯು ಗಮನಹರಿಸಬೇಕಿದೆ ಮತ್ತು ಮುಖ್ಯವಾಗಿ ಆರೋಗ್ಯದ ಸೇವೆಕಡೆ ಗಮನಹರಿಸಿ ಅರ್ಹರಿರುವ ಸಮುದಾಯಗಳಿಗೆ ತಲುಪಿಸುವ ಕೆಲಸ ಮಾಡಬೇಕು. ಯಾಕೆಂದರೆ ದೇಶದ ಅಭಿವೃದ್ಧಿ ಪ್ರಗತಿಯ ಸೂಚಕವೆಂದರೆ ತಳದಲ್ಲಿರುವ ಪರಿಶಿಷ್ಟ ಜಾತಿ, ಬುಡಕಟ್ಟು, ಹಿಂದುಳಿದ ವರ್ಗಗಳು, ಡಿನೋಟಿಫೈಡ್ ಬುಡಕಟ್ಟುಗಳು, ಅಲೆಮಾರಿ ಬುಡಕಟ್ಟು, ಸ್ವಚ್ಛತಾಕಾರ್ಯ ನಿರ್ವಹಿಸುವವರು, ಧಾರ್ಮಿಕ ಅಲ್ಪಸಂಖ್ಯಾತರು, ಮತ್ತು ಇರತರಿಗೆ ಸಂವಿಧಾನವೇ ರಕ್ಷಣೆಕೊಟ್ಟಿದೆ.

ಆದ್ದರಿಂದ ಇವರ ಶಿಕ್ಷಣ ಕೌಶಲ್ಯಾಭಿವೃದ್ಧಿ, ಉದ್ಯೋಗ, ಸ್ವ ಉದ್ಯೋಗದತ್ತ ಗಮನ ಹರಿಸಬೇಕಿದೆ.[೧] ಎಂದು ಲೇಖಕರು ವಿವರಿಸುತ್ತ ವಿಶ್ಲೇಷಣೆ ಮಾಡಿದ್ದಾರೆ.

ಚಂದ್ರಶೇಖರ್. ಟಿ. ಆರ್.(೨೦೧೫) ಅಭಿವೃದ್ಧಿ ಎಂಬ ಲೇಖನದಲ್ಲಿ ಅಭಿವೃದ್ಧಿ ಅನ್ನುವುದು ೨೦ ನೇ ಶತಮಾನದಲ್ಲಿ ಮಿಮಾಂಸೆಯಾಗಿತ್ತು. ಎರಡನೇ ಮಹಾಯುದ್ಧದ ನಂತರ ಹೆಚ್ಚು ಬೆಳಕಿಗೆ ಬಂದಿದೆ. ಮೊದಲು ಇದನ್ನು ಆರ್ಥಿಕ ಸಂಗತಿಯಾಗಿ ಗುರುತಿಸುತ್ತ ಬಂದಿದ್ದರು. ಅಭಿವೃದ್ಧಿಯನ್ನು ವರಮಾನ ಏರಿಕೆಗೆ ಅನುಗುಣವಾಗಿ ಅರ್ಥಮಾಡಿಕೊಳ್ಳುತ್ತದೆ ಆದ್ದರಿಂದ ವಾಸ್ತವಿಕವಾಗಿ ಇದನ್ನು ಆರ್ಥಿಕ ಬೆಳವಣಿಗೆ ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ ಅಭಿವೃದ್ಧಿ ಅನ್ನುವುದಕ್ಕೆ ಏಳ್ಗೆ–ಏಳಿಗೆ, ಪ್ರಗತಿ ಉತ್ತಮವಾಗುವುದು, ಶ್ರೇಯಸ್ಸು ಮುಂತಾದ ಅರ್ಥಗಳಿವೆ. ಇದರಲ್ಲಿ ಹಣಕಾಸಿನ ಆರ್ಥಿಕತೆಗೆ ಸಂಬಂಧಿಸಿದಂತೆ ಅರ್ಥ ಮಾಡಿಕೊಳ್ಳಲಾಗುತ್ತದೆ. ಇಂಗ್ಲೀಷನಲ್ಲಿ ಡೆವಲಪ್‌ಮೆಂಟ್ ಅಂದರೆ ಬೆಳೆಯುವುದು, ವೃದ್ಧಿ, ಎಳೆತನದಿಂದ ಪ್ರೌಢತನಕ್ಕೆ ಪರಿವರ್ತನೆಯಾಗುವುದು ಎನ್ನುತ್ತಾರೆ. ಅಭಿವೃದ್ಧಿ ಅನ್ನುವುದು ಇಂದು ಜಾಗತೀಕ ಸಂಗತಿಯಾಗಿ ರೂಪ ಪಡೆದು ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣದಲ್ಲಿನ ಏರಿಕೆಯನ್ನು ಅಳೆಯುವ ಸಾಧನವಾಗಿ ಬೆಳೆದು ಬಂದಿದೆ. ಅಭಿವೃದ್ಧಿ ಅನ್ನುವುದು ಕೇವಲ ವರಮಾನಕ್ಕೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ ಅಭಿವೃದ್ಧಿಯಲ್ಲಿ ಶಿಕ್ಷಣ. ಆರೋಗ್ಯ, ಪೌಷ್ಠಿಕತೆ ಮುಂತಾದವುಗಳನ್ನು ನೇರವಾಗಿ ಎದುರಿಸಿ ಮತ್ತು ನಿರ್ವಹಿಸುವುದರ ಮೂಲಕ ಬೆಳಕಿಗೆ ಬಂದಿದೆ[೨] ಎಂದು ಮಾನವ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಏನಿದೆ? ಎಂದು ಅಭಿವೃದ್ಧಿಯ ವಿವಿಧ ಆಯಾಮಗಳನ್ನು ಬಿಡಿಸಿರುವುದು ಅಭಿವೃದ್ಧಿಗೆ ಪೂರಕವಾಗಿದೆ.

ದಿನೇಶ್ ಎಂ. ಹೆಗಡೆ(೨೦೦೭) ರವರು ತಮ್ಮ ಲೇಖನ **ಅಭಿವೃದ್ಧಿ ಅಂಚಿನ ಸಮುದಾಯಗಳು: ಹಿಂದುಳಿದ ವರ್ಗಗಳ ಒಂದು ಅಧ್ಯಯನದಲ್ಲಿ** ಕರ್ನಾಟಕ ರಾಜ್ಯದಲ್ಲಿರುವ ವಿವಿಧ ಕಾಲಘಟ್ಟಗಳಲ್ಲಿ ಆಯ್ಕೆಮಾಡಿದ ಹಿಂದುಳಿದ ವರ್ಗಗಳ ಸಮಿತಿಗಳು ನೀಡಿರುವ ಅಂಕಿ–ಅಂಶಗಳನ್ನು ಬಳಸಿಕೊಂಡು ಲೇಖನದಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ವಸಾಹತುಶಾಹಿ ಮತ್ತು ಆಧುನೀಕರಣದ ಪ್ರಕ್ರಿಯೆಗಳು ಈಗಿನ ಸಮಾಜದಲ್ಲಿ ವಿವಿಧ ರೀತಿಯ ಸಾಮಾಜಿಕ ಪರಿವರ್ತನೆಗೆ ಕಾರಣವಾದವು. ಅವುಗಳಲ್ಲಿ ಬ್ರಾಹ್ಮಣರು ಗ್ರಾಮೀಣ ಪ್ರದೇದಿಂದ ನಗರಕ್ಕೆ ವಲಸೆ ಬಂದಿದ್ದರಿಂದ, ಪಾಶ್ಚತ್ಯ ಶಿಕ್ಷಣವನ್ನು ಪಡೆದು ಹಲವಾರು ಸರಕಾರಿ ಹುದ್ದೆಗಳನ್ನು ಗಿಟ್ಟಿಸಿ ತಮ್ಮ ಜೀವನದ ಮಟ್ಟವನ್ನು ಸುಧಾರಿಸಿಕೊಂಡರೆ, ಬ್ರಾಹ್ಮಣೇತರ ಜಾತಿಗಳು ಹಳ್ಳಿಗಳಲ್ಲಿ ಕೃಷಿ ಹಾಗೂ ಕೃಷಿಯೇತರ ಕೂಲಿ ಕೆಲಸಗಳನ್ನು ನೆಚ್ಚಿಕೊಂಡು ಜೀವನ ರೂಪಿಸಿಕೊಂಡು, ಶಿಕ್ಷಣದಿಂದ ದೂರಾನೇ ಉಳಿದರು. ಆಧುನಿಕ ಶಿಕ್ಷಣ ಪಡೆದ ಬ್ರಾಹ್ಮಣರು ೧೮೮೧ರ ಸಮಯದಲ್ಲಿ ಮೈಸೂರು ಸರ್ಕಾರದ ನೌಕರಶಾಹಿಯಲ್ಲಿ, ಶೇಕಡ ೬೫ ರಷ್ಟು ಗೆಜೆಟೆಡ್ ಮತ್ತು ಶೇಕಡ ೭೦ ರಷ್ಟು ನಾನ್ ಗೆಜಿಟೆಡ್

ನೌಕರಿಗಳನ್ನು ಪಡೆದು ನೌಕರ ಶಾಹಿಗಳಲ್ಲಿ ಪ್ರಭಾವ ಶಾಲಿಯಾಗಿ ಸರ್ಕಾರವು ಹಾಕಿಕೊಂಡ ಎಲ್ಲಾ ಹಂತದ ಯೋಜನೆಗಳನ್ನು ಅತ್ಯಂತ ವ್ಯವಸ್ಥಿತವಾಗಿ ಕೆಳವರ್ಗದವರನ್ನು ಅಭಿವೃದ್ಧಿ ಅಂಚಿನಲ್ಲಿಡುವ ವರ್ಗವು ಸೃಷ್ಟಿಯಾಯಿತು. ಈ ರೀತಿಯಾಗಿ ಸೃಷ್ಟಿಯಾದ ವರ್ಗಗಳ ಹಿಡಿತವು ಅದರ ವಿರುದ್ಧದ ಹೋರಾಟದ ಚಳುವಳಿಗಳಿಂದ ಸ್ವಲ್ಪಮಟ್ಟಿಗೆ ಕಡಿಮೆಯಾಗಿ ಗ್ರಾಮೀಣ ಪ್ರದೇಶದಲ್ಲಿ ಬ್ರಾಹ್ಮಣೇತರ ಪ್ರಬಲ ಜಾತಿಗಳಾದ ಲಿಂಗಾಯತರು, ಒಕ್ಕಲಿಗರು, ಶಿಕ್ಷಣ ಪಡೆದು ನೌಕರಿಯನ್ನು ಗಿಟ್ಟಿಸಿಕೊಂಡರು ಎಂದು ಲೇಖಕರು ಶೈಕ್ಷಣಿಕ ಪ್ರಗತಿ, ಆಡಳಿತದಲ್ಲಿ ಪ್ರಾತಿನಿಧ್ಯ ಮತ್ತು ರಾಜಕೀಯ ಪ್ರತಿನಿಧಿಗಳನ್ನು ವಿವರಿಸುತ್ತಾ, ಹಿಂದುಳಿದ ಸಮುದಾಯಗಳ ರಾಜಕೀಯ ಲೆಕ್ಕಾಚಾರದ ವಿಷಯವಾಗಿದೆಯೇ ಹೊರತು ಅವರ ಅಭಿವೃದ್ಧಿಯ ಕುರಿತು ಸೈದ್ಧಾಂತಿಕವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿಲ್ಲ. ಹಾಗೆಯೇ ರಾಜಕೀಯ ಪಕ್ಷಗಳು ಈ ತೆರನಾದ ಧೋರಣೆಯಿಂದಾಗಿ ಸಮುದಾಯಗಳು ಯಾವ ಸರಧಿಯ ಕಡೆಗೆ ಪ್ರಚಲಿತ ಯುಗದಲ್ಲಿವೆ.[೩] ಎಂದು ಲೇಖಕರು ಉಲ್ಲೇಖಿಸುತ್ತಾರೆ.

ಚಂದ್ರಪೂಜಾರಿ ಎಂ. (೨೦೦೨) ರವರು **ಸಹಭಾಗಿತ್ವ ಅಭಿವೃದ್ಧಿ – ಕೆಲವು ತಾತ್ವಿಕ ಪ್ರಶ್ನೆಗಳು ಎಂಬ ಲೇಖನದಲ್ಲಿ** ಈಗ ಅಭಿವೃದ್ಧಿ ಆಗುವವರು ಮತ್ತು ಅಭಿವೃದ್ಧಿ ಮಾಡುವವರು ಎಂಬ ಎರಡು ವರ್ಗಗಳಿವೆ. ಇಲ್ಲಿ ಅಭಿವೃದ್ಧಿ ಆಗುವವರು ಒಂದು ಟಾರ್ಗೆಟ್ ಗುಂಪಾಗಿ ಪರಿಗಣಿಸಲ್ಪಡುತ್ತಾರೆ. ಆರಂಭದಲ್ಲಿ ಬಂಡವಾಳ ಮತ್ತು ತಂತ್ರಜ್ಞಾನದ ಕೊರತೆ ಅಭಿವೃದ್ಧಿಯ ಮುಖ್ಯ ಮಿಸ್ಸಿಂಗ್ ಲಿಂಕ್ ಆಗಿತ್ತು. ಇದುವರೆಗೆ ಅಭಿವೃದ್ಧಿಯ ಕಲ್ಪನೆಯಲ್ಲಿ ವ್ಯಕ್ತಿ ಮತ್ತು ಆತನ ಅಭಿವೃದ್ಧಿ ಕುಟುಂಬ ಮತ್ತು ಸಮುದಾಯದ ಅಭಿವೃದ್ಧಿಗೆ ದಾರಿ ಎನ್ನುವ ನಿಲುವಿತ್ತು. ಆದರೆ ಬರುಬರುತ್ತಾ ಆ ನಿಲುವು ಮಹತ್ವ ಕಳೆದುಕೊಳ್ಳುತ್ತಾ ಬಂತು. ಸಮುದಾಯದಿಂದ ವ್ಯಕ್ತಿ ಮತ್ತು ಕುಟುಂಬದ ಕಡೆಗೆ ಅಭಿವೃದ್ಧಿ ಹರಿಯಬೇಕೆಂಬ ನಿಲುವು ಬಲಗೊಳ್ಳುತ್ತಿದೆ. ಈ ಕಾರಣದಿಂದಲೇ ವರ್ತಮಾನದಲ್ಲಿ ಅಭಿವೃದ್ಧಿಯ ಹೊಸ ಮಿಸ್ಸಿಂಗ್ ಲಿಂಕ್ ಸೋಶಿಯಲ್ ಕ್ಯಾಪಿಟಲ್ ತುಂಬಾ ಪ್ರಚಾರದಲ್ಲಿದೆ. ಐದು ದಶಕಗಳ ಆಧುನೀಕರಣದ ನಂತರವೂ ನಮ್ಮಲ್ಲಿ ಮಾರುಕಟ್ಟೆಯಲ್ಲಿ ವ್ಯವಹರಿಸಿದ ಬಹುದೊಡ್ಡ ಜನವರ್ಗ ಇದೆ.[೪] ಈ ವರ್ಗದ ಜನರು ತಮ್ಮ ಸಾಂಪ್ರದಾಯಿಕ ಜೀವನ ಕ್ರಮದಲ್ಲೆ ಬದುಕುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಅಮಿತ್‌ಭಾದುರಿ (ಮೂಲ)೨೦೦೫, ರಾಹು (ಅನುವಾದ) ೨೦೦೭ ರವರ "ಘನತೆಯೊಂದಿಗೆ ಅಭಿವೃದ್ಧಿ" ಈ ಗ್ರಂಥವನ್ನು ಅಧ್ಯಯನ ಮಾಡಿದಾಗ ಒಂದು ಪರ್ಯಾಯ ಪಥವನ್ನು ಅಭಿವೃದ್ಧಿಯ ದೃಷ್ಟಿಯನ್ನು ಸಾದರಪಡಿಸಲು ಪ್ರಯತ್ನಿಸಿದೆ. ಸಾಮೂಹಿಕ ಬಡತನ, ಅನಕ್ಷರತೆಯನ್ನು ತೊಲಗಿಸುವುದರ ಜೊತೆಗೆ ಜಾತಿ, ಧರ್ಮ, ಲಿಂಗಾಧಾರಿತ ಹಮ್ಮು ಬಿಮ್ಮುಗಳಿಂದ ಉದ್ಭವಿಸುವ ಅನೇಕ ಸಾಮಾಜಿಕ ಅಡೆತಡೆಗಳನ್ನು ತ್ವರಿತಗತಿಯಲ್ಲಿ ಮೆಟ್ಟಿ ಮೀರಿ, ಮುನ್ನಡೆಯಲು

ಮಾರ್ಗೋಪಾಯಗಳನ್ನು ಸೂಚಿಸದಿದ್ದರೆ, ಈ ಅಡ್ಡಿ ಅಡಚಣೆಗಳನ್ನು ನಿವಾರಿಸಲು ದಾರಿ ತೋರದಿದ್ದರೆ ಯಾವುದೇ ಬೆಲೆಯಿರುವುದಿಲ್ಲ. ಜಾಗತೀಕರಣಗೊಂಡ ಇಂದಿನ ಜಗತ್ತಿನಲ್ಲಿ ಮಾರುಕಟ್ಟೆ ಮುಖಿ ಉನ್ನತ ಬೆಳವಣಿಗೆಯ ಮೂಲಕ ಅಥವಾ ಕೇಂದ್ರೀಕೃತ ಯೋಜನೆಯೊಂದಿಗೆ ನೌಕರಶಾಹಿ ಪ್ರಭುತ್ವದ ತದ್ವಿರುದ್ಧವಾದದ್ದು. ಕುಸಿದು ಹೋದ ಸಮಾಜವಾದಿ ವ್ಯವಸ್ಥೆಯಲ್ಲಿ ಸಾಮಾನ್ಯ ಜನರನ್ನು ಈ ವಿಚಾರಧಾರೆ ಸಮೂಹನಗೊಳಿಸುತ್ತಿದೆ. ಮತ್ತು ಮಾರುಕಟ್ಟೆಯ ಯಶಸ್ಸು ಮತ್ತು ವಿಫಲತೆ, ಅರ್ಥವ್ಯವಸ್ಥೆ ಮತ್ತು ರಾಜಕಾರಣದ ಸಂಸರ್ಗ, ಘನತೆಯೊಂದಿಗೆ ಅಭಿವೃದ್ಧಿ ಹೊಸ ಪಥವೊಂದನ್ನು ರೂಪಿಸಿಕೊಂಡು ಬಡವರಿಗೆ ಅಭಿವೃದ್ಧಿ ಎಷ್ಟು ಮಹತ್ವವಾಗುತ್ತದೆ[೫] ಎಂದು ವಾದಿಸಿದ್ದಾರೆ.

ಚಂದ್ರಶೇಖರ್ ಟಿ.ಆರ್(೨೦೧೪) ರವರು **ಮಾನವ ಅಭಿವೃದ್ಧಿ, ಮಾನವ ಬಡತನ ಮತ್ತು ಮಾನವ ಹಕ್ಕುಗಳು** ಎನ್ನುವ ಪುಸ್ತಕದಲ್ಲಿ ಅಭಿವೃದ್ಧಿಯು ತನ್ನಷ್ಟಕ್ಕೆ ತಾನೇ ಸಮಾಜದಲ್ಲಿ ಎಲ್ಲ ವರ್ಗಗಳನ್ನೂ, ಎಲ್ಲ ಪ್ರದೇಶಗಳಲ್ಲಿ ಎಲ್ಲ ವೃತ್ತಿಗಳನ್ನೂ ಮತ್ತು ಎಲ್ಲ ಲಿಂಗಗಳನ್ನೂ ಸಮಾನವಾಗಿ ಒಳಗೊಳ್ಳುವುದಿಲ್ಲ. ಒಂದು ಪ್ರಸಕ್ತವಾದ ಪ್ರದೇಶದಲ್ಲಿ ಕೇಂದ್ರೀಕರಣಗೊಳ್ಳುವುದು ಅದರ ಮೂಲಗುಣ. ಅದು ಈಗಾಗಲೇ ಸಮಾಜದಲ್ಲಿ ಇರುವ ಸಬಲರನ್ನು, ಪ್ರಬಲರನ್ನು, ಮುಂದುವರೆದ ಪ್ರದೇಶಗಳನ್ನು, ಉದ್ದಿಮೆ ಸೇವಾವಲಯಗಳನ್ನು ಮತ್ತು ಪುರುಷರನ್ನು, ಬಹುಸಂಖ್ಯಾತರನ್ನು ಹೆಚ್ಚಾಗಿ ಒಳಗೊಳ್ಳುತ್ತಿರುತ್ತದೆ. ಅಮರ್ಥ್ಯಸೇನ ಹೇಳುವಂತೆ ಸಾಮಾಜಿಕ ಎನ್ನುವುದನ್ನು ಆರ್ಥಿಕತೆಗೆ ವಿರುದ್ಧವೆಂದು ತಿಳಿಯಬೇಕಾಗಿಲ್ಲ. ಯಾಕೆಂದರೆ ಆರ್ಥಿಕತೆಯು ಸಾಮಾಜಿಕತೆಯ ಒಂದು ಭಾಗವೇ ಆಗಿದೆ. ಇದರಿಂದಾಗಿ ಸಾಮಾಜಿಕತೆ ಎಂದಾಗ ಅದು ಆರ್ಥಿಕತೆಯನ್ನು ಒಳಗೊಂಡಿರುತ್ತದೆ. ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವಾಗ ಅದನ್ನು ವ್ಯಕ್ತಿಗಳ ಮತ್ತು ಅವರಿಗೆ ಸಂಬಂಧಿಸಿದ ಅವಕಾಶಗಳ ನೆಲೆಯಲ್ಲಿ ಚರ್ಚೆ ಮಾಡದೆ ಸಾಮಾಜಿಕ ಸಂಬಂಧಗಳ ನೆಲೆಯಲ್ಲಿ ಮತ್ತು ಪ್ರಭುತ್ವ ಮತ್ತು ಇತರೆ ಸಂಸ್ಥೆಗಳ ಜೊತೆಗೆ ಜನರು ಹೊಂದಿರುವ ಸಂಬಂಧಗಳ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಕ್ರಮವನ್ನು ಇಲ್ಲಿ ಪ್ರತಿಪಾದಿಸಲಾಗುತ್ತದೆ. ಒಂದು ರಾಷ್ಟ್ರದಲ್ಲಿನ ಸಾಮಾಜಿಕ ಸಂಸ್ಥೆಗಳಾದ ಶಿಕ್ಷಣ, ಅರೋಗ್ಯ ಸೇವೆ, ಪೌಷ್ಟಿಕತೆ, ಸಾಮಾಜಿಕ ಸಮಾನತೆ, ನಾಗರಿಕ ಸ್ವಾತ್ರಂತ್ರ್ಯ, ಮಾನವ ಹಕ್ಕು ಮುಂತಾದವುಗಳ ನೆಲೆಯಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಸಾಮಾಜಿಕ ವ್ಯವಸ್ಥೆಯು ಏಣಿಶ್ರೇಣಿಗಳಿಂದ ಕೂಡಿರುತ್ತದೆ. ಅದು ಪುರುಷ ಶಾಹಿಯಾಗಿರುತ್ತದೆ.[೬] ಈ ಏಣಿಶ್ರೇಣಿಗಳಲ್ಲಿ ಕೆಳ ಶ್ರೇಣಿಯಲ್ಲಿರುವ ಜನರಿಗೆ ಅಭಿವೃದ್ಧಿಯ ಫಲಗಳು ಸಹಜವಾಗಿ ದೊರೆಯುದಿಲ್ಲ ಅಥವಾ ದೊರೆತರು ಅದು ಅತ್ಯಂತವಾಗಿರುತ್ತದೆ ಎಂದು ವಿಶ್ಲೇಷಿಸುತ್ತಾರೆ.

ಶೇಖರ್ ಗುಪ್ತ ಪ್ರಜಾವಾಣಿ(೨೦೧೭) 'ಪ್ರಚಾರದ ಗೀಳಿಗೆ ಬಲಿಯಾದ ಅಭಿವೃದ್ಧಿ' ಈ ಒಂದು ಲೇಖನದಲ್ಲಿ ರಾಜಕೀಯ ಎನ್ನುವುದನ್ನು ನೋಡುವುದಾರೆ ಇತಿಹಾಸವನ್ನು ತಿರುವಿ ಹಾಕಿದರೆ

ಒಬ್ಬ ರಾಜ ತನ್ನ ಸಾಮ್ರಾಜ್ಯವನ್ನು ವಿಸ್ತಾರಿಸಿಕೊಳ್ಳಲು ಚಿಕ್ಕ - ಪುಟ್ಟ ರಾಜ್ಯಗಳ ಮೇಲೆ ದಾಳಿಮಾಡಿ ಆ ರಾಜ್ಯಗಳನ್ನು ವಶಪಡಿಸಿಕೊಂಡು, ಸಾಮ್ರಾಜ್ಯದಲ್ಲಿ ನೆಲಸಿ ಆಡಳಿತವನ್ನು ನಡೆಸುವ ಪದ್ಧತಿಯನ್ನು ಕಾಣಬಹುದು. ಆದರೆ ಪ್ರಸ್ತುತ ರಾಜಕೀಯವನ್ನು ಗಮನಿಸಿದರೆ ಅನೇಕ ರೀತಿಯ ಕೆಲವು ತಂತ್ರಗಳನ್ನು ಬಳಸಿ ಪ್ರಜಾಗಳನ್ನು ಪ್ರೇರೇಪಿಸಿ ತಮ್ಮ ಕಡೆಗೆ ಸೆಳೆದು ಕೊಳ್ಳುವುದನ್ನು ನೋಡಬಹುದು. ಉದಾ: ೨೦೧೪ರ ಚುನಾವಣೆಯನ್ನು ಗಮನಿಸಿದರೆ ಮೋದಿಯ ಬಿಜೆಪಿ ಸರ್ಕಾರ ಮೂರು ಮುಖ್ಯವಾದಂತಹ ಸಂಗತಿಗಳನ್ನು ಪ್ರಜೆಗಳ ಮುಂದಿಟ್ಟರು- ಒಂದನೇಯದು ಮುಂದೆ ಒಳ್ಳೆಯ ದಿನಗಳು ಇವೆ ನಿಮಗೆ, ಎರಡೇಯನದು ಸಮರ್ಥವಾಗಿ ಆಡಳಿತ ನಡಸಿ ರಾಷ್ಟ್ರೀಯ ಸುರಕ್ಷತೆಯನ್ನು ಕಾಪಾಡುತ್ತ ಭ್ರಷ್ಟಾಚಾರದ ವಿರುದ್ದ ನಮ್ಮ ಸರ್ಕಾರ ಹೋರಾಟವನ್ನು ನಡೆಸುತ್ತದೆ. ಇನ್ನು ಈ ಮೂರನೇಯ ಅಂಶ ಹೆಚ್ಚಿನ ಪ್ರಮಾಣದಲ್ಲಿ ಪ್ರಜಾಗಳನ್ನು ಸೆಳೆಯಲು ಪ್ರೇರೇಪಿಸುತ್ತದೆ. ನಮ್ಮ ದೇಶದ ತೆರಿಗೆ ವಂಚಕರು ವಿದೇಶದಲ್ಲಿಟ್ಟಿರುವ ಕೊಟ್ಯಾಂತರ ರೂಪಾಯಿ ಕಪ್ಪು ಹಣವನ್ನು ತಂದು ಪ್ರತಿಯೊಬ್ಬರ ಖಾತೆಗೆ ನೇರವಾಗಿ ೧೫ ಲಕ್ಷಗಳನ್ನು ಹಾಕುತ್ತೇವೆ ಮತ್ತು ಭ್ರಷ್ಟಾಚಾರಿಗಳನ್ನು ಬಂದಿಸಿ ಜೈಲಿಗೆ ಹಾಕುವುದಾಗಿ ಮತದಾರರಿಗೆ ಒಪ್ಪುವಂತೆ ಮಾಡಿದರು. ಆದ್ದರಿಂದ ಪ್ರಜೆಗಳು, ನಮ್ಮ ದೇಶದ ಅಭಿವೃದ್ದಿಯನ್ನು ಹೊಂದುವಂತಹ ಸಮಯ ಬಂದಿದೆ ಎಂದು ತಿಳಿದರು. ಈಗ ೪೨ ತಿಂಗಳುಗಳು ಕಳೆದು ಹೋಗಿವೆ. ಬುಲೆಟ್ ರೈಲು ಇನ್ನು ಬರಲಿಲ್ಲ, ಮುಂಬೈ ಕಾರವಾಳಿ ರಸ್ತೆ, ಇನ್ನು ಕೈಗೆತ್ತಿಕೊಳ್ಳಬಹುದು ಇವುಗಳೆಲ್ಲವನ್ನು ಗಮನಿಸಿದರೆ, ಕ್ರಿಕೆಟ್ ನಲ್ಲಿರುವಂತೆ ಮೊದಲ ಇನ್ನಿಂಗ್ಸ್‌ನಲ್ಲಿ ಸ್ವಲ್ಪ ಸುಧಾರಿಸಿ, ಇರಡನೇ ಇನ್ನಿಂಗ್ಸ್‌ನಲ್ಲಿ ಹೆಚ್ಚಿನ ಬೆವರು ಸುರಿಸುತ್ತೇವೆ.[೭] ಎನ್ನುವ ಭಾವನೆಯನ್ನು ಈ ಕೇಂದ್ರ ಸರ್ಕಾರ ತನ್ನ ಪರಿಕಲ್ಪನೆಯನ್ನು ಮೂಡಿಸಿದಂತಿದೆ ಎನ್ನುವ ವಿಷಯಗಳು ಈ ಲೇಖನದಲ್ಲಿ ನೋಡಬಹುದು.

ಚಂದ್ರಪೂಜಾರಿ ಎಂ. (೨೦೧೬) ರವರು "ದಲಿತ ಮಾನವ ಅಭಿವೃದ್ಧಿ" ಎನ್ನುವ ಕಿರು ಪುಸ್ತಕದಲ್ಲಿ ಕೆಲವರು ಅಭಿವೃದ್ಧಿಯನ್ನು ಸ್ವಾತಂತ್ರ್ಯದ ಹೆಚ್ಚಳವೆಂದು ವ್ಯಾಖ್ಯಾನಿಸಿದ್ದಾರೆ. ಮತ್ತೆ ಕೆಲವರು ಅಭಿವೃದ್ಧಿಯನ್ನು ಸಂತೋಷದ ಹೆಚ್ಚಳವೆಂದು ವ್ಯಾಖ್ಯಾನಿಸುತ್ತಾರೆ. ಇವೆಲ್ಲ ಅಭಿವೃದ್ಧಿ ಅಕಾಡೆಮಿಕ್ ವ್ಯಾಖ್ಯಾನಗಳು. ಕಾರ್ಯರೂಪದಲ್ಲಿರುವ ಅಭಿವೃದ್ಧಿಯ ವ್ಯಾಖ್ಯಾನ ಇದೇ ರೂಪದಲ್ಲಿದೆ ಎನ್ನಲಾಗುವುದಿಲ್ಲ. ಹಾಗೆಂದು ಸಂಪೂರ್ಣ ಭಿನ್ನವಾಗಿಲ್ಲ. ಅಕಾಡೆಮಿಕ್ ವ್ಯಾಖ್ಯಾನಗಳ ಮೂಲಗುಣಗಳನ್ನು ವಿವಿಧ ರೂಪಗಳಲ್ಲಿ ಪ್ರತಿನಿಧಿಸುವ ಅಭಿವೃದ್ಧಿಯ ವ್ಯಾಖ್ಯಾನವಿದೆ. ಕಾರ್ಯರೂಪದಲ್ಲಿರುವ ಅಭಿವೃದ್ಧಿ ಮೂರು ಕ್ಯಾಪಿಟಲ್‌ಗಳ ಅಭಿವೃದ್ಧಿಯನ್ನು ವಿವಿಧ ಪ್ರಮಾಣದಲ್ಲಿ ಒಳಗೊಂಡಿದೆ. ಭೌತಿಕ (ಫಿಸಿಕಲ್) ಕ್ಯಾಪಿಟಲ್, ಮಾನವ (ಹ್ಯೂಮನ್) ಕ್ಯಾಪಿಟಲ್ ಹಾಗೂ ಸಾಮಾಜಿಕ (ಸೋಶಿಯಲ್) ಕ್ಯಾಪಿಟಲ್‌ಗಳ ವೃದ್ಧಿಯನ್ನು ಅಭಿವೃದ್ಧಿಯೆಂದು ವ್ಯಾಖ್ಯಾನಿಸಲಾಗಿದೆ. ಭೂಮಿ, ಬಂಡವಾಳ, ಪ್ರಾಕೃತಿಕಗಳು ಮಾನವ ಕ್ಯಾಪಿಟಲ್‌ನ ಅಂಶಗಳು, ನಂಬಿಕೆ, ಸ್ಥಾನಮಾನ,

ಸಾಮಾಜಿಕ, ನೆಟ್‌ವರ್ಕ್ ಇವೆಲ್ಲ ಸಾಮಾಜಿಕ ಕ್ಯಾಪಿಟಲ್‌ನ ಅಂಶಗಳು ಈ ಎಲ್ಲ ಅಂಶಗಳ ದೃಷ್ಟಿಯಿಂದ ನೋಡಿದರೆ ವ್ಯಕ್ತಿ, ಕುಟುಂಬವೊಂದು ಅಭಿವೃದ್ಧಿ ಹೊಂದಬೇಕಾದರೆ ಭೂಮಿ ಅಥವಾ ಬಂಡವಾಳ ಮತ್ತು ಶಿಕ್ಷಣ, ಆರೋಗ್ಯಗಳು ಅನಿವಾರ್ಯ. ಇವುಗಳ ಜೊತೆಗೆ ಸ್ಥಾನಮಾನ, ಸ್ವಾತಂತ್ರ್ಯ ಹಾಗೂ ಸಮಾನತೆಗಳು ಕೂಡ ಬೇಕು.[೮] ಎನ್ನುವ ಮೂರು ಕ್ಯಾಪಿಟಲ್‌ಗಳನ್ನು ಹೊಂದಿರಬೇಕು ಎನ್ನುವ ಅರ್ಥದಲ್ಲಿ ಬಳಸಿದ್ದಾರೆ.

೨.೨. ರಾಜಕೀಯಕ್ಕೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

ಚಂದ್ರಪೂಜಾರಿ ಎಂ. (೨೦೧೪) ರವರು "ಅಭಿವೃದ್ಧಿ ಮತ್ತು ರಾಜಕೀಯ" ಎಂಬ ಪುಸ್ತಕದಲ್ಲಿ ಇವತ್ತು ಅಭಿವೃದ್ಧಿ ಪದವನ್ನು ಬಳಸದ ವ್ಯಕ್ತಿ ಸಮುದಾಯ ಸಮಾಜಗಳನ್ನು ಊಹಿಸಲು ಸಾಧ್ಯವಿಲ್ಲ. ರಾಜಕೀಯ ನಾಯಕರಂತೂ ಅಭಿವೃದ್ಧಿಯನ್ನು ಬಿಟ್ಟು ಬದುಕಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಇದೆ. ಅಭಿವೃದ್ಧಿಯೇ ನಮ್ಮ ರಾಜಕೀಯವನ್ನು ನಿರ್ಣಯಿಸುವುದು ಎನ್ನುವ ಚಿತ್ರಣವನ್ನು ನೀಡಲು ಈ ಚರ್ಚೆಗಳು ಮತ್ತು ಅವುಗಳ ಹಿಂದಿರುವ ಸಿದ್ಧಾಂತಗಳು ಪ್ರಯತ್ನಿಸುತ್ತವೆ. ಮತ್ತು ಸೋಶಿಯಲಿಸ್ಟ್ ಅಭಿವೃದ್ಧಿ ವರ್ಗರಹಿತ ಸಮಾಜವನ್ನು ರೂಪಿಸುವ ಆಶಯವನ್ನು ಹೊಂದಿದೆ. ನಮ್ಮಲ್ಲಿಂದು ಕ್ಯಾಪಿಟಲಿಸ್ಟ್ ಅಭಿವೃದ್ಧಿ ಕೆಲಸ ಮಾಡುತ್ತಿದೆ. ಆದರೆ ನಮ್ಮ ಜಾತಿ ಧರ್ಮಗಳನ್ನು ಬೆರೆಸಿ ನಡೆಸುವ ರಾಜಕೀಯ ಕ್ಯಾಪಿಟಲಿಸ್ಟ್ ಅಭಿವೃದ್ಧಿ ಲಕ್ಷಣಗಳ ಮೇಲೆ ದಪ್ಪನೆ ಮುಸುಗನ್ನು ಹಾಸಿದೆ. ಮತ್ತು ಇಂದು (ಜಾತಿ) ಗುರುತಿನ ರಾಜಕೀಯ ಕವಲು ದಾರಿಯಲ್ಲಿದೆ. ಕೆಲವರ ಪ್ರಕಾರ ಜಾತಿಯೇ ಇಲ್ಲ. ಜಾತಿಯೇ ಇಲ್ಲದಿರುವಾಗ ಗುರುತಿನ ರಾಜಕೀಯ ಇರುವುದು ಹೇಗೆ ಎನ್ನುವುದು ಅವರ ಪ್ರಶ್ನೆ ಮತ್ತೊಂದು ಗುಂಪಿನವರ ಪ್ರಕಾರ ಜಾತಿ ಇಂದು ಕೂಡ ಜೀವಂತ ಇದೆ. ಆದುದರಿಂದ ಜಾತಿ ಗುರುತಿನ ರಾಜಕೀಯಕ್ಕೂ ಅವಕಾಶ ಇದೆಯೆನ್ನುವುದು ಎರಡನೇ ಗುಂಪಿನ ವಾದವನ್ನು ವಿವರಿಸಿದ್ದಾರೆ.[೯]

ಶ್ರೀಧರ ಎ. (೨೦೧೪), ಅವರು 'ರಾಜಕೀಯ' ಎಂಬ ಪರಿಭಾಷೆ ಲೇಖನದಲ್ಲಿ ರಾಜಕೀಯವೆಂದರೆ ಮಾನವನ ಇರುವಿಕೆಯಿಂದ ಪ್ರಾರಂಭವಾಗಿದೆ. ಇದು ಉಗಮದ ನಂತರ ಸಂಪತ್ತು, ಅಧಿಕಾರ ಪ್ರಾತಿನಿಧ್ಯವಾದ ರೀತಿಯಲ್ಲಿ ನಡೆಯುತ್ತದೆ. ಮಾನವ ಮೂಲತಃ ರಾಜಕೀಯ ಜೀವಿ. ರಾಜಕೀಯವನ್ನು ಸಾಮಾನ್ಯವಾಗಿ ಜನರು ಅರ್ಥಶಾಸ್ತ್ರ, ಭೂಗೋಳ, ಇತಿಹಾಸ, ಜೀವಶಾಸ್ತ್ರ ಹಾಗೂ ಇತರೆ ವಿಷಯಗಳನ್ನು ಸಾಮಾನ್ಯ ಅಧ್ಯಯನವೆಂದು ಭಾವಿಸಿಕೊಂಡಿದ್ದಾರೆ. ಹಾಗೆಯೇ ಜನ ಸಮುದಾಯಗಳು ಸಾಮಾಜಿಕವಾಗಿ ರಾಜಕೀಯವೆಂದರೆ 'ಕೊಳಕು ಪ್ರಪಂಚ' ಎನ್ನುವ ಕಲ್ಪನೆಯಲ್ಲಿ ಬಳಸುತ್ತಾರೆ. ಆದರೆ ರಾಜಕೀಯ ಎನ್ನುವುದು ತತ್ವಜ್ಞಾನಿಗಳು ಅನೇಕ ಅರ್ಥದಲ್ಲಿ ಅರ್ಥೈಸಿದ್ದಾರೆ. ಉದಾಹರಣೆಯಾಗಿ ಅರಿಸ್ಟಾಟಲ್ ಅಥವಾ ಶ್ರೇಷ್ಠಜ್ಞಾನ ಸಾಮಾಜಿಕ ಜೋನ್ಸ್‌ಸನ್ ವಿಶ್ವದಲ್ಲಿ ಉಗಮ ಗೊಳ್ಳುತ್ತಿರುವ ಅಥವಾ ಬೆಳೆಯುತ್ತಿರುವ ಒಂದು ವಿವರವಾಗಿದೆ. ಹೆನ್ರಿ

ಆ್ಯಡಂಶ ವೈರಿಗಳ ಒಂದು ವ್ಯವಸ್ಥಿತವಾದ ಸಂಘಟನೆ, ರೂಸೋ ವ್ಯಕ್ತಿ ರಾಜಕೀಯದಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಾನೋ ಆವಾಗ ಮಾತ್ರ ರಾಜ್ಯ ಸರ್ವರ ಅಭ್ಯದಯ ಸಾಧಿಸಲು ಸಾಧ್ಯ ಮಿಲ್ ಜನರ ಪಾಲ್ಗೊಳ್ಳುವಿಕೆಯ ಮೂಲಕ ಜನರ ವ್ಯಕ್ತಿತ್ವ, ಮೌಲ್ಯ ಹಾಗೂ ಚಿಂತನಾಶಕ್ತಿ ಬೆಳೆಯಲು ಸಂಖ್ಯೆ ಆದ್ದರಿಂದ ರಾಜಕೀಯ ಎನ್ನುವುದು ಸಾಮಾಜಿಕ ಚಟುವಟಿಕೆಯಾಗಿದೆ. ಎನ್ನುವ ವಿಚಾರಗಳನ್ನು ವಿಶ್ಲೇಷಣೆ ಮಾಡುತ್ತ, ವಿವಿಧ ಅರ್ಥದಲ್ಲಿ ಗುರುತಿಸುತ್ತಾರೆ. ರಾಜಕೀಯದಲ್ಲಿ ಅಧಿಕಾರವನ್ನು ಬಳಸಿಕೊಂಡು ಸ್ಥಾನಮಾನಗಳನ್ನು ಬಳಸಿಕೊಳ್ಳುತ್ತಾರೆ. ರಾಜಕೀಯವನ್ನು ಸರಕಾರದ ಕಲೆ ಮತ್ತು ಪಾಲ್ಗೊಳ್ಳುವಿಕೆ ಒಪ್ಪಂದ ಮತ್ತು ಒಮ್ಮತ, ಅಧಿಕಾರ ಹಾಗೂ ಸಂಪತ್ತಿನ ಹಂಚಿಕೆ ರೂಪದಲ್ಲಿ ಭಾಗ ಮಾಡಿ ನೋಡಬೇಕಾಗುತ್ತೆ. ಸಾಮಾಜಿಕ ಕ್ಷೇತ್ರದಲ್ಲಿ ಸರಕಾರ, ನ್ಯಾಯಾಲಯ, ಆರಕ್ಷಕ, ಸೇನೆ, ಸಾಮಾಜಿಕ ಭದ್ರತೆ, ಸಂಸ್ಥೆಗಳು ಕೆಲಸಮಾಡುತ್ತಲೇ ಸರ್ಕಾರದ ಪರವಾಗಿ ಹಾಗೂ ವ್ಯಕ್ತಿ ತನ್ನ ಆಸಕ್ತಿಗೆ ಅನುಗುಣವಾಗಿ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಖಾಸಗಿ, ಸಾಮಾಜಿಕ ವಲಯಗಳಾಗಿ ಗುರುತಿಸುತ್ತಾ ಅರ್ಥೈಸಿದ್ದಾರೆ.[೧೦]

ಪ್ರಕಾಶ್ ಕಾರಟ್, (೨೦೧೨) "ಐಡೆಂಟಟಿ ರಾಜಕೀಯದ ಸವಾಲು ಎಂಬ ಲೇಖನದಲ್ಲಿ ಐಡೆಂಟಟಿ ರಾಜಕೀಯ ಮತ್ತು ಇತರ ರಾಜಕೀಯಗಳು ಎನ್ನುವ ವಿಷಯದ ಮೂರು ಪ್ರಬಂಧಗಳನ್ನು ವಿವರಿಸಿದ್ದಾರೆ. ಇಂದು ಐಡೆಂಟಟಿ (ಅಂದರೆ 'ಅಸ್ಮಿತೆ'ಯ) ರಾಜಕೀಯ ಜಗತ್ತಿನಾದ್ಯಂತ ರಾಜಕೀಯದ ಮತ್ತು ರಾಜಕೀಯ ಚಟುವಟಿಕೆಗಳ ಒಂದು ಮಹತ್ವದ ಲಕ್ಷಣವಾಗಿಬಿಟ್ಟಿದೆ. ಐಡೆಂಟಟಿ ರಾಜಕೀಯ ಅಂದರೆ ವ್ಯಕ್ತಿಗಳನ್ನು ಜನಾಂಗ, ಕುಲ, ಲಿಂಗ, ಭಾಷೆ, ಅಥವಾ ಧರ್ಮವನ್ನು ಆಧರಿಸಿದ ಆ ವ್ಯಕ್ತಿಗಳು ತಮ್ಮನ್ನು ಯಾವ ಆಧಾರದಲ್ಲಿ ಗುರುತಿಸಿಕೊಳ್ಳುತ್ತಾರೋ ಅಂತಹ 'ಅಸ್ಮಿತೆ' ಅಥವಾ ಐಡೆಂಟಟಿಯ ಆಧಾರದಲ್ಲಿ ನಿರೂಪಿಸುವುದು. ಇಂದು ಜಾತಿ ಐಡೆಂಟಟಿಯನ್ನು ಆಧರಿಸಿದ ರಾಜಕೀಯ ಚಟುವಟಿಕೆಗಳು ಹೆಚ್ಚುತ್ತಿರುವುದು ಒಂದು ಗಂಭೀರ ಸವಾಲು. ಮತ್ತು ಸಾಮಾಜಿಕ ದಮನವನ್ನು ಎದುರಿಸುವ ಮತ್ತು ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿರುವ ಸಮುದಾಯಗಳು ಮತ್ತು ವಲಯಗಳು ಐಡೆಂಟಟಿ ರಾಜಕೀಯಕ್ಕೆ ಸ್ಪಂದಿಸುತ್ತವೆ. ನಾವು ಅರಿಯಬೇಕು ಎನ್ನುವ ವಿಷಯಗಳನ್ನು ವಿವರಿಸಿದ್ದು ಮತ್ತು ವಾಸ್ತವಿಕ ಬದಲಾವಣೆ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನು ರಾಜಕೀಯ ಬದಲಾವಣೆಗಳ ಮೂಲಕ ಈಡೇರಿಸುತ್ತಾರೆ. ಒಂದು ರಾಜಕೀಯ ಸಂಸ್ಥೆಯಾದರೆ ಅದಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಎತ್ತುವುದು ಅದನ್ನು ಜನಜನಿತಗೊಳಿಸುವುದು ಹಾಗೂ ಸಾರ್ವಜನಿಕ ಅಭಿಪ್ರಾಯವನ್ನು ಯಾವ ರೀತಿ ಕ್ರೂಢೀಕರಿಸುವುದು ಎನ್ನುವ ವಿಚಾರಗಳನ್ನು ಬಿಡಿಸಿದ್ದಾರೆ.[೧೧]

ಹೊನ್ನೂರಾಲಿ,(೨೦೧೫), ಅವರು **ಗುರುತು/ಅಸ್ಮಿತೆ** ಎಂಬ ಪರಿಭಾಷೆ ಲೇಖನದಲ್ಲಿ ಐಡೆಂಟಟಿ ಎನ್ನುವ ಇಂಗ್ಲೀಷ್ ಪದಕ್ಕೆ ಕನ್ನಡದಲ್ಲಿ ಗುರುತು ಅಥವಾ ಅಸ್ಮಿತೆ ಎನ್ನುವ ರೂಪದಲ್ಲಿ

ಬಳಸುತ್ತಾರೆ. ಐಡೆಂಟಿಟಿಯನ್ನು ಎರಡು ದೃಷ್ಟಿಯಿಂದ ನೋಡಲಾಗುತ್ತಿದೆ. ಒಂದು ಮನಃಶಾಸ್ತ್ರೀಯ ಆಯಾಮ, ಮತ್ತೊಂದು ಸಮಾಜ ಶಾಸ್ತ್ರೀಯ ಆಯಾಮ. ಐಡೆಂಟಿಟಿ ಎಂದರೆ 'ನಿಜವಾದ ನಾನು' ಅಥವಾ 'ಸ್ವ'ದ ಕಲ್ಪನೆಯ ರೂಪವನ್ನು ವಿವರಿಸುತ್ತದೆ. ಐಡೆಂಟಿಟಿ ಪರಿಕಲ್ಪನೆಯನ್ನು ಅಭಿವೃದ್ಧಿ ಪಡಿಸಿದವರು ಅಮೇರಿಕದ ಮನಃಶಾಸ್ತ್ರೀಯ ವಿಶ್ಲೇಷಕ ಎರಿಕ್‌ಸನ್, ಇವರು ಗುರುತಿಸುವ ಪ್ರಕಾರ ಪ್ರಾಯ ಬೆಳೆಯುವ ಸಂದರ್ಭದಲ್ಲಿ ಅಥವಾ ಸಾಮಾಜಿಕ ಪಾತ್ರದ ಅರಿವು ಸ್ಪಷ್ಟವಾಗಿ ಮೂಡಿ, ಸದ್ಯದಲ್ಲಿ ಇಂತಹ ಸಂದಿಗ್ಧತೆ ಸೃಷ್ಟಿಯಾಗುತ್ತದೆ. ಅಂದರೆ ಮನುಷ್ಯರು ಹಾಗೂ ವಸ್ತುಗಳನ್ನು ಹುಡುಕಿಕೊಳ್ಳುವ ಪ್ರಕ್ರಿಯೆಯಲ್ಲಿ ತನ್ನನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆ ಒಳಗೊಂಡಿದೆ. ಹಾಗೂ ಕೆಲವರ ಪ್ರಕಾರ ವ್ಯಕ್ತಿಯ ಬಹುಗುರುತಿಗೂ ವ್ಯಕ್ತಿಯ ಬಹು ಪಾತ್ರಕ್ಕೂ ವ್ಯತ್ಯಾಸವಿದೆ. ವ್ಯಕ್ತಿ ಹೆಂಡತಿಯಾಗಿ, ತಾಯಿಯಾಗಿ, ಮಗಳಾಗಿ ವಿವಿಧ ಪಾತ್ರಗಳನ್ನು ನಿಭಾಯಿಸುತ್ತಾಳೆ. ಆದರೆ ಇದನ್ನು ಬಹು ಐಡೆಂಟಿಟಿ ಎನ್ನಲಾಗುವುದಿಲ್ಲ. ಐಡೆಂಟಿಟಿ ರೂಪುಗೊಳ್ಳುವುದರಲ್ಲಿ ವ್ಯಕ್ತಿಯ ಪ್ರಶ್ನೆ ಇದೆ. ಮೂರು ಪ್ರಮುಖ ರೂಪದ ಐಡೆಂಟಿಟಿಗಳನ್ನು ಗುರುತಿಸಬಹುದು. ಒಂದು: ಲೆಜಿಟಿಮೈಸಿಂಗ್ ಐಡೆಂಟಿಟಿ, ಎರಡು: ರೆಸಿಸ್ಟೆಟ್ಸ್ ಐಡೆಂಟಿಟಿ ಮತ್ತು ಮೂರು: ಪ್ರೊಜೆಕ್ಸ್ ಐಡೆಂಟಿಟಿಗಳಾಗಿ ವಿಂಗಡಿಸಿದ್ದಾರೆ ಹಾಗೂ ನಮ್ಮಲ್ಲಿ ಜಾತಿ ಹಾಗೂ ಧರ್ಮಗಳ ಗುರುತುಗಳ ಉದಾಹರಣೆ ಮೂಲಕ ಅರ್ಥಮಾಡಿಕೊಳ್ಳುವುದಾದರೆ ಹಿಂದೂ ಮುಸ್ಲಿಂ ಗುರುತುಗಳು ತುಂಬಾ ಪ್ರಚಾರದಲ್ಲಿವೆ. ದೇಶಪ್ರೇಮ, ಕಡಿಮೆ ಮಕ್ಕಳು, ಪ್ರಾಮಾಣಿಕತೆ, ತರಕಾರಿ ಊಟ, ಶಾಂತಿಪ್ರಿಯತೆ ಇವೆಲ್ಲ ಲೆಜಿಟಿಮೈಸಿಂಗ್ ಅಥವಾ ಡೋಮಿನೆಂಟ್ ಐಡೆಂಟಿಟಿಯ ಗುಣಗಳು ಹಿಂದೂಗಳಿಗೆ ಇವೆ ಎಂದು ಗುರುತಿಸಬಹುದು. ಅದೇ ಮುಸ್ಲಿಂರಿಗೆ ಇರುವ ಗುಣಗಳೆಂದರೆ, ವ್ಯಾಪಾರದಲ್ಲಿ ಮೋಸವಂಚನೆ ಮಾಡುವುದು, ಮಾಂಸಹಾರಿ ಊಟ ಮಾಡುವುದು, ಹಿಂಸೆ ಮಾಡುವುದು ಇವೆಲ್ಲವು ಡೊಮಿನೆಂಟ್‌ಗಳೆಂದು ಸೂಚಿಸುತ್ತದೆ ಎಂದು ವಿಶ್ಲೇಷಣೆ ಮಾಡಿದ್ದಾರೆ. ಅಂದರೆ ಪ್ರತಿಯೊಂದು ಸಮುದಾಯ ತನ್ನದೇ ಆದ ವೃತ್ತಿ, ಆಹಾರ ಪದ್ಧತಿ, ಕುಲ – ಕಸುಬು ಹಾಗೂ ರಾಜಕೀಯ ಸಹಭಾಗಿತ್ವ ಹೊಂದಿರುವುದರ ಆಧಾರದ ಮೇಲೆ ತನ್ನ ಅಸ್ಮಿತೆಯನ್ನು ತೋರಿಸುಕೊಳ್ಳುತ್ತದೆ[೨] ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಜಯಣ್ಣ. ಸಿ.ವಿ(೨೦೧೫) ಅವರು **ಅಸ್ಮಿತ(ಗುರುತು) ರಾಜಕೀಯ** ಎಂಬ ಲೇಖನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರಿಯತೆಯೇ ಬಂಡವಾಳ. ಸರ್ಕಾರಗಳು ನಿರ್ದಿಷ್ಟ ಗುಂಪುಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಗುರುತು ರಾಜಕೀಯ ಹುಟ್ಟಿಕೊಳ್ಳುತ್ತದೆ. ಗುರುತುಗಳನ್ನು ಆಧರಿಸಿ ಬೇಡಿಕೆ ಮತ್ತು ಅಗತ್ಯಗಳನ್ನು ಮುಂದಿಡುವ ರಾಜಕೀಯವನ್ನು 'ಗುರುತು ರಾಜಕೀಯ' ಎನ್ನುತ್ತಾರೆ. ಇಲ್ಲಿ ಒಬ್ಬ ವ್ಯಕ್ತಿಯ ಗುರುತು ಜಾತಿ, ಧರ್ಮ, ಜನಾಂಗ, ಲಿಂಗ, ಭಾಷೆ ಆಧಾರದ ಮೇಲೆ ಗುರುತಿನ ರಾಜಕೀಯವನ್ನು ನೋಡಬಹುದು. ಈ ಪದವನ್ನು ಮೊದಲ ಬಾರಿಗೆ ಬಳಸಿದವರು

'ಅನ್‌ಸ್ಪ್ಯಾಂಚ್' ಗುರುತು ರಾಜಕೀಯ ಭಾರತದ ರಾಜಕೀಯ ವ್ಯವಸ್ಥೆಯ ಅತೀ ಪ್ರಧಾನ ಅಂಶವಾಗಿ ಬೆಳೆದು ರಾಜಕೀಯವನ್ನು ಸ್ವಾತಂತ್ರ್ಯೋತ್ತರ ಬೆಳವಣಿಗೆಯಾಗಿದೆ. ಹಿಂದುಳಿದ ವರ್ಗಗಳ ಚಳುವಳಿ, ಧಾರ್ಮಿಕ ಗುರುತುಗಳು, ಭಾಷೆ ಆಧಾರಿತ ಗುರುಗಳನ್ನು ವಿವರಿಸಿದ್ದಾರೆ. ಲೇಖಕರು ಸ್ವಾತಂತ್ರ್ಯ ನಂತರದಲ್ಲಿ ಮಂಡಲ್ ಆಯೋಗದ ವರದಿಯು ಜಾತಿ ಗುರುತು ರಾಜಕೀಯಕ್ಕೆ ಹೊಸ ಅಧ್ಯಾಯವನ್ನು ಸೇರಿಸಿತು. ೧೯೯೦ ರ ಆರಂಭದಲ್ಲಿ ಜಾತಿ ರಾಜಕಾರಣದಲ್ಲಿ ಬದಲಾವಣೆ ಕಂಡು, ಮೇಲ್ಜಾತಿಗಳ ನಾಯಕತ್ವದ ಏಕ ಪಕ್ಷ ಆಳ್ವಿಕೆ ಕೊನೆಗೊಂಡು ಜಾತಿ ಆಧಾರಿತ ಪಕ್ಷಗಳು ಬೆಳಕಿಗೆ ಬಂದವು. ಮತದಾರರು ತಮ್ಮ ಜಾತಿಗೆ ಸೇರಿದ ಅಥವಾ ಜಾತಿ ಹಿತಾಸಕ್ತಿಗಳನ್ನು ಪೂರೈಸುವವನಿಗೆ ಮತದಾನ ಮಾಡಿ ವ್ಯಕ್ತಿಗಳು ಜಾತಿಯೊಡನೆ ಗುರುತಿಸಿಕೊಳ್ಳಲು ಪ್ರಾರಂಭಿಸಿದರು. ಇದರ ಹಿನ್ನೆಲೆಯಲ್ಲಿ ಜಾತಿ ಆಧಾರದ ಮೇಲೆ ರಾಜಕೀಯ ಪಕ್ಷಗಳು ಹುಟ್ಟಿಕೊಂಡವು. ಜಾತಿಯೊಂದಿಗೆ ಗುರುತಿಸಿಕೊಂಡ ರಾಜ್ಯಗಳಲ್ಲಿ ಪ್ರಭಾವಿ ಜಾತಿ ಗುಂಪುಗಳೆಂದರೆ ಬಿಹಾರ: ಯಾದವ್, ಕೂರ್ಮಿ, ಭೂಮಿಹಾರ್, ಉತ್ತರ ಪ್ರದೇಶ: ದಲಿತ್, ಜಾಟ್, ಬ್ರಾಹ್ಮಣ, ಕರ್ನಾಟಕ: ಲಿಂಗಾಯತ್, ಒಕ್ಕಲಿಗ, ಕುರುಬ, ಸೀಮಾಂಧ್ರ: ಕಮ್ಮ, ಕಾಪು, ರೆಡ್ಡಿ, ತಮಿಳುನಾಡು: ಗೌಂಡರ್, ಮೊದಲಿಯಾರ್, ಪಿಳ್ಳೈ, ವೆಲ್ಲಿಯಾರ್. ಗುಜರಾತ್: ಬ್ರಾಹ್ಮಣ, ಪಟೇಲ, ದರ್ಮರ್ ಅಹಿರ್, ಮೆರ್ ಸಮುದಾಯಗಳು ಗುರುತಿಸಿಕೊಂಡಿರುವುದನ್ನು ವಿವರಿಸಿದ್ದಾರೆ ಲೇಖಕರು.[೧೩] ಇಲ್ಲಿ ಅರ್ಥವಾಗುವ ಸಂಗತಿಗಳೆಂದರೆ ಪ್ರತಿಯೊಂದು ಸಮುದಾಯವು ಮತ್ತೊಂದು ಸಮುದಾಯದಿಂದ ಸ್ವತಂತ್ರವಾಗಿ ಇರುವ ಪ್ರಯತ್ನ ನಡೆಸಲು ಯತ್ನಿಸುತ್ತವೆ.

ಚಂದ್ರಪೂಜಾರಿ. ಎಂ (೨೦೧೯) ಅವರು **ಐಡೆಂಟಿಟಿ ಪಾಲಿಟಿಕ್ಸ್** ಎಂಬ ತಮ್ಮ ಲೇಖನದಲ್ಲಿ ಸ್ವಾತಂತ್ರ್ಯ ಬಂದ ನಂತರ ಎಲ್ಲ ರಾಜ್ಯಗಳಲ್ಲೂ ಬಲಾಢ್ಯ ಜಾತಿಗಳು ರಾಜಕೀಯ ಅಧಿಕಾರ ಪಡೆಯುವುದು ವಾಡಿಕೆಯಾಗಿದೆ. ಪ್ರಚಲಿತ ದಿನಗಳಲ್ಲಿ ಚುನಾವಣೆ ಗೆಲ್ಲಲು ಜಾತಿ, ಧರ್ಮ ಅಥವಾ ಹಲವು ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಅಗತ್ಯವಿಲ್ಲ. ಜಾತಿ, ಧರ್ಮ, ಹಣದ ಬದಲು ಉತ್ತಮ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆತಂದರೆ ಸಾಕು. ಚುನಾವಣೆ ಗೆಲ್ಲಬಹುದು ಎಂದು ಮಾಧ್ಯಮಗಳು ಹೇಳುತ್ತಿವೆ. ಇಂದು ರಾಜಕೀಯ ಅಧಿಕಾರ ಮೇಲ್ವರ್ಗಗಳ ಕೈಯಲ್ಲಿದೆ. ಇಂದು ಮಾತ್ರವಲ್ಲ ಹಿಂದೆ ಕೂಡ, ಅನುಕೂಲಸ್ಥರೇ ಅಧಿಕಾರಕ್ಕಾಗಿ ಪಟ್ಟನ್ನು ಹಿಡಿಯುತ್ತಿದ್ದರು. ಭೂ ಒಡೆತನ ಮತ್ತು ಜನಸಂಖ್ಯೆ ಎರಡು ಹೊಂದಿರುವ ಪ್ರಬಲ ಜಾತಿಗಳು ಸತತ ಅಧಿಕಾರದಲ್ಲಿವೆ. ಪ್ರಸ್ತುತ ಮಧ್ಯಪ್ರದೇಶ, ಒರಿಸ್ಸಾ, ರಾಜಸ್ಥಾನ ರಾಜ್ಯಗಳಲ್ಲಿ ಮೇಲ್ಜಾತಿಗಳ ರಾಜಕೀಯ ನಡೆಯುತ್ತದೆ. ರಾಜಸ್ಥಾನದಲ್ಲಿ ಬ್ರಾಹ್ಮಣ, ರಜಪೂತರೊಂದಿಗೆ ಜಾತಿಗಳು ಕೂಡ ಪ್ರಬಲರಾಗಿದ್ದಾರೆ. ಇನ್ನುಳಿದ ರಾಜ್ಯಗಳಲ್ಲಿ ಮೇಲ್ಜಾತಿಗಳ ಪ್ರಾಬಲ್ಯ ಕಡಿಮೆಯಾಗಿ ಮಧ್ಯಮ ಜಾತಿಗಳ ಪ್ರಾಬಲ್ಯ ಹೆಚ್ಚಾಗಿದೆ. ಹರಿಯಾಣ, ಪಂಜಾಬ್, ರಾಜಸ್ಥಾನ್‌ಗಳಲ್ಲಿ ಜಾಟರು, ಗುಜರಾತಿನಲ್ಲಿ

ಪಟೇಲರು, ಉತ್ತರ ಪ್ರದೇಶ ಮತ್ತು ಬೀಹಾರದಲ್ಲಿ ಯಾದವರು ಮತ್ತು ಕುರ್ಮಿಗಳು, ಮಹಾರಾಷ್ಟ್ರದಲ್ಲಿ ಮರಾಠರು, ಕರ್ನಾಟಕದಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರು. ಆಂಧ್ರದಲ್ಲಿ ರೆಡ್ಡಿ ಮತ್ತು ಕಮ್ಮಗಳು ಅಧಿಕಾರ ಚುಕ್ಕಾಣಿ ಹಿಡಿದಿದ್ದಾರೆ. ನಮ್ಮಲ್ಲಿ ವರ್ಗ ರಾಜಕೀಯಕ್ಕಿಂತ ಹೆಚ್ಚು ಗುರುತಿನ(ಜಾತಿ, ಧರ್ಮಗಳ ಗುರುತಿನ) ರಾಜಕೀಯ ಕಾರುಬಾರು ಮಾಡುತ್ತದೆ. ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದು ನಿಂತರೆ ಗುರುತಿನ ರಾಜಕೀಯ ಸಮುದಾಯಗಳಿಗೆ ನ್ಯಾಯ ಒದಗಿಸುತ್ತಿದೆಯೇ ಎನ್ನುವ ಪ್ರಶ್ನೆ ಇದೆ. ಯಾಕೆಂದರೆ ಮಾರುಕಟ್ಟೆಯಲ್ಲಿ ಜಾತಿ ನೋಡಿ ಕೆಲಸ ವ್ಯವಹಾರ ನೋಡಿರುವುದಿಲ್ಲ. ಖರೀದಿಸುವ ಶಕ್ತಿ ಮತ್ತು ಮಾರುವುದರ ಆಧಾರದ ಮೇಲೆ ನಿಂತಿರುತ್ತದೆ. ತಮ್ಮ ಜಾತಿ ಧರ್ಮಕ್ಕೆ ಸೇರಿದವರೆಂದು ಮತ ಹಾಕಿ ಚುನಾಯಿಸಿದ ಪ್ರತಿನಿಧಿಗಳು ಇವರ ಆಸಕ್ತಿಗಳನ್ನು ರಕ್ಷಿಸುವ ಮಾರುಕಟ್ಟೆ ಅಥವಾ ಅಭಿವೃದ್ಧಿ ನೀತಿಗಳನ್ನು ಜಾರಿಗೆ ತರುತ್ತಿಲ್ಲ. ವಾಸ್ತವ ಹೇಗಿದ್ದರು ರಾಜಕೀಯ ಪಕ್ಷಗಳು ಜಾತಿ, ಧರ್ಮದ ಹೆಸರಲ್ಲಿ ಚುನಾವಣೆ ಗೆಲ್ಲುತ್ತಾರೆ. ಇಂದು ಎಲ್ಲಾ ಸಮುದಾಯಗಳಲ್ಲಿ ಬಡವರು ಇದ್ದಾರೆ. ಸಮಸ್ಯೆಯ ಸಂಪನ್ಮೂಲ ಪಾಲು ಕೇಳಿದರೆ ಮಾತ್ರ ಪರಿವರ್ತನೆ ಕಾಣಲು ಸಾಧ್ಯವಿದೆ.'' ಎಂದು ಲೇಖಕರು ತಮ್ಮ ನಿಲುವನ್ನು ಬರವಣಿಗೆಯ ಮೂಲಕ ಹೇಳುತ್ತಾರೆ.

ವೀಣಾ. ಈ. (೨೦೧೮) ಅವರು **ಭಾರತದಲ್ಲಿ ಅಸ್ಮಿತೆ ರಾಜಕೀಯ ಹಾಗೂ ಪರಿಣಾಮಗಳು** ಎಂಬ ಲೇಖನದಲ್ಲಿ ಐಡೆಂಟಿಟಿ ರಾಜಕೀಯ ಜಾತಿ ವ್ಯವಸ್ಥೆ ನಿರ್ಮೂಲನಕ್ಕೆ ಪರವಾಗಿ ಕೆಲಸ ಮಾಡುತ್ತದೆಯೇ ಅಥವಾ ರಾಜಕೀಯ ನಾಯಕರು ಜಾತಿಯ ಹೆಸರಲ್ಲಿ ಸ್ಥಾನ – ಮಾನಗಳನ್ನು ಪಡೆದುಕೊಳ್ಳಲು ಉಪಯೋಗ ಮಾಡಿಕೊಳ್ಳುತ್ತಾರೆಯೇ ಎನ್ನುವ ಪ್ರಶ್ನೆಗಳನ್ನು ಇಟ್ಟುಕೊಂಡು ವಿಶ್ಲೇಷಿಸುತ್ತ ಹೋಗುತ್ತಾರೆ. ಐಡೆಂಟಿಟಿ ರಾಜಕೀಯ ಜಾತಿ ವ್ಯವಸ್ಥೆಯ ವಿರುದ್ಧ ಜಾತಿವಿನಾಶದ ಹೋರಾಟವೆಂದು ಪರಿಗಣಿಸಲ್ಪಟ್ಟಿದೆ. ಆದರೆ ಐಡೆಂಟಿಟಿ ರಾಜಕೀಯದ ಉಗಮವನ್ನು ಗಮನಿಸಿದಾಗ, ಐಡೆಂಟಿಟಿ ರಾಜಕೀಯ ಎನ್ನುವುದು ಸಮಾಜದ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು ಅನ್ಯಾಯಕ್ಕೊಳಗಾದಾಗ ಅವುಗಳನ್ನು ಸಾಮಾಜಿಕ ಐಡೆಂಟಿಟಿ ಗುಂಪಿಗೆ ಗುರುತಿಸುವುದರ ಮೂಲಕ ಕಾಪಾಡಬೇಕು. ಆದ್ದರಿಂದ ಐಡೆಂಟಿಟಿ ರಾಜಕೀಯ ಅಸ್ಥಿತ್ವಕ್ಕೆ ಬಂದಿದೆ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆ ವಿರುದ್ಧ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ. ಅದು ಹೇಗೆ ಎಂದರೆ ಸಾಮಾಜಿಕ, ರಾಜಕೀಯ, ಆರ್ಥಿಕ ಅಸಮಾನತೆಯ ಮೂಲವೆಂದು ಜಾತಿ ವ್ಯವಸ್ಥೆಯ ಹಿಡಿತವನ್ನು ಸಡಿಲಗೊಳಿಸಿ ನಂತರ, ದೂರಮಾಡುವ ನಿಟ್ಟಿನಲ್ಲಿ ಪ್ರಯತ್ನಪಡುತ್ತಿವೆ. ಇದೇ ಕಾರಣಕ್ಕಾಗಿ ಐಡೆಂಟಿಟಿ ರಾಜಕೀಯದ ನೆಲೆಯಲ್ಲಿ ವ್ಯಕ್ತಿಗಳನ್ನು ಜಾತಿಯ ಐಡೆಂಟಿಟಿಯ ಮೂಲಕ ಗುರುತಿಸುವ ಪ್ರಯತ್ನ ಮಾಡಿ, ಶೋಷಿತ ಜಾತಿಗಳ ಅಸ್ಮಿತೆಯನ್ನು ಕಾಪಾಡುವ ಹಾಗೂ ಅವುಗಳಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡುವ ಧ್ಯೇಯವನ್ನು ಹೊಂದಿದೆ. ಭಾರತದಲ್ಲಿ ವಿಚ್ಛಿದ್ರಕಾರಿ, ಸ್ವಾರ್ಥಶಕ್ತಿಗಳ ಕೈಯಲ್ಲಿ

ಜಾತಿ ಆಟಿಕೆಯಾಗಿ ಬಳಕೆಯಾಗುತ್ತಿದೆ. ಸ್ವಾರ್ಥ ರಾಜಕಾರಣಿಗಳು ಇದನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ಜಾತಿವ್ಯವಸ್ಥೆಯನ್ನು ಐಡೆಂಟಿಟಿ ರಾಜಕೀಯವು ಸೃಷ್ಟಿಸುತ್ತದೆ. ಅಷ್ಟೆ ಅಲ್ಲದೇ ಜಾತಿ ವ್ಯವಸ್ಥೆಯನ್ನು ಬಲಪಡಿಸಿ ತಮ್ಮಷ್ಟಕ್ಕೆ ತಾವು ಮಾತ್ರ ರಾಜಕೀಯ ಸ್ಥಾನ ಮಾನಗಳನ್ನು ಪಡೆಯುತ್ತಾರೆ.[೧೫] ಆದ್ದರಿಂದ ಐಡೆಂಟಿಟಿ ರಾಜಕೀಯವು ಕೇವಲ ರಾಜಕೀಯ ವ್ಯವಸ್ಥೆಯೊಳಗೆ ಅಷ್ಟೆ ಅಲ್ಲದೇ ಜಾತಿ ವ್ಯವಸ್ಥೆಯನ್ನು ಸಹ ಸೃಷ್ಟಿ ಮಾಡುತ್ತದೆ ವಿನಃ ಸಾಮಾಜಿಕ ವಾಸ್ತವತೆಯನ್ನಲ್ಲ ಎಂದು ಲೇಖಕರು ಈ ಲೇಖನದಲ್ಲಿ ವಾದ ಮಾಡಿ ಅನೇಕ ವಿದ್ವಾಂಸರ ಬರಹಗಳನ್ನು ಇಟ್ಟುಕೊಂಡರು.

ವೀರಭದ್ರಪ್ಪ. ಎ. (೨೦೧೮) ಅವರು **ಭಾರತದಲ್ಲಿ ಅಸ್ಮಿತೆ ರಾಜಕೀಯದ ಸ್ಥಿತಿಗತಿಗಳು** ಎಂಬ ಲೇಖನದಲ್ಲಿ ಭಾರತದಲ್ಲಿ ಧಾರ್ಮಿಕ ಅಸ್ಮಿತೆ ರಾಜಕೀಯ, ಪ್ರಾದೇಶಿಕ ಮತ್ತು ಭಾಷಾ ಅಸ್ಮಿತೆ ರಾಜಕೀಯ, ಅಲ್ಪ ಸಂಖ್ಯಾತರ ಅಸ್ಮಿತೆ ರಾಜಕೀಯ, ಜಾತಿ ಅಸ್ಮಿತೆ ರಾಜಕೀಯ ಎಂದು ನಾಲ್ಕು ಭಾಗಗಳನ್ನಾಗಿ ಮಾಡಿಕೊಂಡು, ಅಸ್ಮಿತೆ ರಾಜಕೀಯ ಬೆಳೆದುಬಂದ ದಾರಿ ಹೇಗಿದೆ, ಜನ ಸಮುದಾಯಗಳು ತಮ್ಮನ್ನೂ ಗುರುತಿಸಿಕೊಳ್ಳಲು ಏನುಮಾಡುತ್ತಾರೆ, ಇವರನ್ನು ರಾಜಕೀಯ ನಾಯಕರು ಹೇಗೆ ಬಳಸಿಕೊಳ್ಳುತ್ತಾರೆ, ಎಂದು ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಇಂದು ಅಸ್ಮಿತೆ ರಾಜಕೀಯ ಕಂಡುಬರುತ್ತದೆ. ಭಾರತ ದೇಶದಲ್ಲಿ ಜನಬಾಹುಳ್ಯ ವೈವಿಧ್ಯಮಯ ಸಂಸ್ಕೃತಿಯನ್ನು ಹೊಂದಿರುವುದರಿಂದ ದೇಶದಲ್ಲಿ ಹೆಚ್ಚು ಎಂದೇ ಹೇಳಬಹುದು. ಆಧುನಿಕ ಕಾಲದಲ್ಲಿ ಅಸ್ಮಿತೆ ರಾಜಕೀಯದ ಮೂಲ ಅಮೇರಿಕಾ ದೇಶದಲ್ಲಿ ಗುರುತಿಸುತ್ತಿದ್ದರು. ಆದರೆ ಇಂದು ದೇಶಗಳಲ್ಲಿ ತಮ್ಮನ್ನೂ ತಾವು ಗುರುತಿಸಿಕೊಳ್ಳುವುದು ಸಾಮಾನ್ಯ ಸಂಗತಿಯಾಗಿದೆ. ಜಾಗತೀಕರಣ ಮತ್ತು ಉದಾರೀಕರಣದಿಂದ ಇದು ಬೆಳೆಯಲು ಸಾಧ್ಯವಾಯಿತು. ಇದರ ಹೋರಾಟಕ್ಕೆ ಮುಖ್ಯ ಕಾರಣವೆಂದರೆ, ಪ್ರತಿಯೊಬ್ಬರಿಗೂ ತಮ್ಮದೇ ಆದ ಸಮಸ್ಯೆಗಳಿವೆ. ಒಬ್ಬ ವ್ಯಕ್ತಿ ತನ್ನ ಆಸ್ತಿಯನ್ನು ಕಳೆದುಕೊಂಡರೂ, ತನ್ನ ಜಾತಿ, ಧರ್ಮ, ಭಾಷೆ, ಪ್ರಾದೇಶಿಕತೆ, ಸಂಸ್ಕೃತಿಯನ್ನು ಕಳೆದುಕೊಳ್ಳುವುದಿಲ್ಲ ಹಾಗೂ ಮರೆಯುವುದಿಲ್ಲ. ಅಸ್ಮಿತೆಯನ್ನು ಬಳಸಿಕೊಂಡು ನ್ಯಾಯಕ್ಕಾಗಿ ಹೋರಾಟ ಮಾಡುವುದನ್ನು ಕಾಣಬಹುದು. ಇದು ಆರಂಭವಾಗಿದ್ದು ಮೊದಲು ವರ್ಗ ಚಳವಳಿ ಮೂಲಕ. ನಂತರ, ಮಹಿಳಾ ಚಳುವಳಿ, ವಿಕಲಚೇತನರ ಚಳುವಳಿ, ಸಲಿಂಗೀಯ ಹಕ್ಕುಗಳ ಚಳುವಳಿಗಳ ಮೂಲಕ ಪ್ರಾಮುಖ್ಯತೆ ಪಡೆದು, ಅಸ್ಮಿತೆ ರಾಜಕೀಯವೆಂದರೆ ಸ್ವಂತಿಕೆಯ ಹುಡುಕಾಟ ಸಮುದಾಯವನ್ನು ತಲುಪುವುದು. ಪ್ರಾದೇಶಿಕವಾಗಿ ನೋಡುವುದಾದರೆ ಒಂದು ರಾಜ್ಯಕ್ಕಿಂತ ಮತ್ತೊಂದು ರಾಜ್ಯ ಭಾಷೆ ಆಧಾರದ ಮೇಲೆ ಅಥವಾ ರಾಜ್ಯದ ಆರ್ಥಿಕ ಸಾಮಾಜಿಕ ಅಭಿವೃದ್ಧಿಯ ಅಂತರವೂ ಸಹ ಪ್ರಾದೇಶಿಕ ಅಸ್ಮಿತೆಗೆ ಕಾರಣ. ರಾಜಕೀಯ ಪಕ್ಷಗಳು ಚುನಾವಣೆಗಳನ್ನು ಎದುರಿಸುವ ಸಂದರ್ಭದಲ್ಲಿ ಟಿಕೇಟ್ ಕೊಡುವಾಗ, ಅದರ ಜಾತಿ ಆದರಿಸಿ ಟಿಕೇಟ್ ಕೊಡುತ್ತಾರೆ. ಅದು

ಸಾಮಾನ್ಯವಾಗಿ ತಮ್ಮ ಕ್ಷೇತ್ರಗಳ ಬಹುಸಂಖ್ಯಾತ ಸಮುದಾಯದ ಪ್ರತಿನಿಧಿ ಆಗಿರುತ್ತಾನೆ. ಇಷ್ಟಕ್ಕೆ ಮುಗಿಯುವುದಿಲ್ಲ ಇದು. ನಿರ್ದಿಷ್ಟ ಪಕ್ಷ ಅಧಿಕಾರಕ್ಕೆ ಬಂದ ಮೇಲೂ ಸಂಪುಟ ರಚನೆ ಮಾಡುವ ಸಂದರ್ಭದಲ್ಲಿ, ಜಾತಿ ಲೆಕ್ಕಚಾರ ನಡೆಯುತ್ತಿದೆ.[೧೬] ಆದ್ದರಿಂದ ಇಂದು ಅಸ್ಮಿತೆ ರಾಜಕೀಯ ಮಾಡಲು ಹೊರಟವರು ನಾಗರೀಕ ಸಮುದಾಯವನ್ನು ಸರಿಯಾದ ಮಾರ್ಗದಲ್ಲಿ ನಡೆಸುವ ಜವಾಬ್ದಾರಿ ಮತ್ತು ನಾಯಕನಾದವನು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ ಎಂದು ವಾದಿಸುತ್ತಾರೆ.

ಮುಜಾಪರ್ ಅಸ್ಸಾದಿ (೨೦೦೯) ಅವರು ಐಡೆಂಟಿಟಿ(ಅಸ್ಮಿತೆ) ರಾಜಕೀಯ ಒಂದು ಅವಲೋಕನ ಎಂಬ ಲೇಖನದಲ್ಲಿ ಐಡೆಂಟಿಟಿ ರಾಜಕೀಯ ಸಮುದಾಯಗಳು ಚಾರಿತ್ರಿಕ ವಾಸ್ತವಿಕವಾಗಿ ಪ್ರಚಲಿತವಾಗಿ ತಮ್ಮ ಅನುಭವಗಳ ಮೂಲಕ ತಮ್ಮನ್ನು ಗುರುತಿಸಿಕೊಳ್ಳುತ್ತಿವೆ. ಸಮುದಾಯಗಳು ತತ್ವ ಅಥವಾ ರಾಜಕೀಯ ಪಕ್ಷಗಳ ನೆಲೆಗಟ್ಟಿನಲ್ಲಿ ಗುರುತಿಸಿಕೊಳ್ಳದೆ ತಳದಲ್ಲಿರುವ ಅಥವಾ ಉಪೇಕ್ಷೆಗೊಳಿಸಿದ ಸಮುದಾಯಗಳ ಹಾದಿಯಲ್ಲಿ ಬಲಾಢ್ಯ, ದೃಢ ಹಾಗೂ ವಿಶಾಲವಾಗಿರುವ ಶೋಷಣೆಯ ವೃತ್ತವನ್ನು ಪ್ರಶ್ನೆ ಮಾಡುವ ಮೂಲಕ ಐಡೆಂಟಿಟಿಯನ್ನು ತೋರಿಸಿಕೊಳ್ಳುತ್ತವೆ ಎಂದು ಐಡೆಂಟಿಟಿಯ ಪರಿಕಲ್ಪನೆ, ಐಡೆಂಟಿಟಿ ಮತ್ತು ವರ್ಗ, ಐಡೆಂಟಿಟಿ ಹಾಗೂ ಶಕ್ತಿ ಸಂಬಂಧಗಳು ಎಂಬ ಮೂರು ವಿಭಾಗಗಳಲ್ಲಿ ಲೇಖಕರು ವಿಶ್ಲೇಷಿಸುತ್ತಾರೆ. ಸಮುದಾಯಗಳು ಯಾವ ಸಾಂಸ್ಕೃತಿಕ ಸಾಮ್ರಾಜ್ಯ ಶಾಹಿಯಿಂದ ತುಳಿಯಲ್ಪಡುತ್ತಿವೆ ಹಾಗೂ ದೌರ್ಜನ್ಯಗಳು ತಳ ಸಮುದಾಯಗಳ ಮೇಲೆ ಪುನಃ ಪುನಃ ನಡೆದು ಆ ಸಮುದಾಯಗಳು ತಳದಲ್ಲಿರುವಂತೆಯೆ ಮಾಡಿದೆ. ಇದು ಹೇಗೆ ಸಮುದಾಯಗಳಿಗೆ ಮಾರಕವಾಗಿದೆ ಎಂದು ಪ್ರಶ್ನೆಗಳನ್ನು ಹಾಕಿಕೊಂಡು ಐಡೆಂಟಿಟಿ ರಾಜಕೀಯ ಹುಟ್ಟಿಕೊಂಡಿತು. ಆದ್ದರಿಂದ ವಿವಿಧ ಸಮುದಾಯಗಳು ವಿವಿಧ ಸಮಯಗಳಲ್ಲಿ ತಮ್ಮ ಐಡೆಂಟಿಟಿಯನ್ನು ಕಟ್ಟಿಕೊಳ್ಳಲು ಸಾಮಾನ್ಯ ಪ್ರಕ್ರಿಯೆ ಆಗಿದೆ. ತಳದಲ್ಲಿರುವಂತ ಸಮುದಾಯಗಳು ತಮ್ಮ ಐಡೆಂಟಿಟಿಯನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಡದೆ ಇರುವ ಕಾಲಘಟ್ಟ ಬೆಳೆದು ಬಂದರೆ ಇದು ಒಂದು ರೀತಿಯ ಶೋಷಣೆಯಾಗಿ ನಿರ್ಮೀಸಿಕೊಳ್ಳುತ್ತದೆ? ಇಂದು ಎಷ್ಟೋ ಮೂಲ ನಿವಾಸಿಗಳು, ಸಮುದಾಯಗಳು ತಮ್ಮ ಮೂಲ ಭಾಷೆ, ಸಂಸ್ಕೃತಿ, ಆಚಾರ – ವಿಚಾರ, ರೂಡಿ ಸಂಪ್ರದಾಯಗಳನ್ನು ಕಳೆದುಕೊಂಡು ವಸಾಹತುಶಾಹಿಯ ಭಾಷೆ, ಸಂಸ್ಕೃತಿ, ಆಚಾರ, ವೃತ್ತಿಗಳಿಗೆ ಜೋತುಬಿದ್ದು, ತಮ್ಮ ಮೂಲ ಐಡೆಂಟಿಟಿಯನ್ನು ಕಳೆದುಕೊಂಡು ಅಂಚಿನ ಸ್ಥಿತಿಯಲ್ಲಿದೆ. ಐಡೆಂಟಿಟಿಯೆನ್ನುವುದು ಗುಣಮಟ್ಟ ಮತ್ತು ಸಂಖ್ಯೆ ಐಡೆಂಟಿಟಿ ಬದಲಾಗದ ಗುಣಾತ್ಮಕವಾಗಿ ವ್ಯಕ್ತಿ ಮತ್ತು ಸಮುದಾಯಗಳು ಮತ್ತು ವ್ಯಕ್ತಿಗೂ ತಮ್ಮದೇ ಆದ ಬಹುಮುಖಿ ಐಡೆಂಟಿಟಿ ಇರುತ್ತದೆ.[೧೭] ಎಂದು ಉದಾಹರಿಸಿದ್ದಾರೆ. ಹಾಗೂ ಐಡೆಂಟಿಟಿ ಎನ್ನುವುದನ್ನು ವಿಶಾಲವಾದ ಚೌಕಟ್ಟಿನಲ್ಲಿ ನೋಡಿದಾಗ ಅಂದರೆ ವಸಾಹತುಶಾಹಿ ಸಂದರ್ಭದಲ್ಲಿ ಆರಂಭಗೊಂಡು ಜತಿಗಣತಿಗಳಲ್ಲಿ

ಜಾತಿ, ಧರ್ಮ, ಸಮುದಾಯಗಳು, ಬಹುಸಂಖ್ಯಾತ, ಅಲ್ಪಸಂಖ್ಯಾತರು, ಹಿಂದುಳಿದ, ಬಲಹೀನ, ಬಲಶಾಲಿ ಎಂಬ ಹುನ್ನಾರವನ್ನು ಪುಷ್ಟಿಮಾಡಿ ಐಡೆಂಟಿಟಿ ನೀಡಿರುವುದು ಸುಳ್ಳಲ್ಲವೆಂದು ವಿವರಿಸುತ್ತಾರೆ.

ಮುಜಾಫ್ಫರ್ ಅಸ್ಸಾದಿ (೨೦೧೭) ಅವರು **ವಂಚಿತ ಸಮುದಾಯಗಳ ರಾಜಕೀಯ ದ್ರುವೀಕರಣ** ಲೇಖನದಲ್ಲಿ ಹಿಂದುಳಿದ ವರ್ಗದವರು, ಒಕ್ಕಲಿಗರು, ದಲಿತರು, ಲಿಂಗಾಯತರು, ಬ್ರಾಹ್ಮಣರು, ಆದಿವಾಸಿಗಳು, ಬುಡಕಟ್ಟುಗಳ ರಾಜಕೀಯ ಧ್ರುವೀಕರಣದ ಸ್ಥಿತಿಯನ್ನು ಬಿಡಿಸಿದ್ದಾರೆ. ರಾಜಕೀಯದಲ್ಲಿ ಇಂದು 'ಉತ್ತಮ ಆಡಳಿತ' ಹಾಗೂ ಅಭಿವೃದ್ಧಿ ಎಂಬ ಮಾನದಂಡಗಳ ಮೇಲೆ ಚುನಾವಣೆಗಳು ನಡೆಸಬೇಕು ಎಂಬ ಚರ್ಚೆಗಳು ಹೋರಬರುತ್ತವೆ. ಕರ್ನಾಟಕದ ರಾಜಕೀಯ ಚಿತ್ರಣವನ್ನು ಗಮನಿಸಿದರೆ ಉತ್ತಮ ಆಡಳಿತ ಹಾಗೂ 'ಅಭಿವೃದ್ಧಿಗಿಂತಲೂ' ಜಾತಿಯ ಮೂಲಕವೇ ಪ್ರಮುಖ ಅಂಶವೆಂದು ಎಲ್ಲಾ ರಾಜಕೀಯ ಪಕ್ಷಗಳು ಒಪ್ಪಿಕೊಂಡಿವೆ. ಸ್ವಾತಂತ್ರ್ಯ ಬಂದು ಆರು ದಶಕಗಳಾದರೂ ಹತ್ತುಹಲವು ಸಮುದಾಯಗಳನ್ನು 'ವಂಚಿತ ಸಮುದಾಯಗಳೆಂದು' ಕರೆಯುತ್ತೇವೆ. ರಾಜಕೀಯ ಧ್ರುವೀಕರಣಗೊಳ್ಳಲು ಇರುವ ವಿವಿಧ ಆಯಾಮಗಳ ಬಗ್ಗೆ ಚರ್ಚಿಸಿದ್ದಾರೆ. ಭೂ ಮಸೂದೆ, ಹಸಿರುಕ್ರಾಂತಿ, ಅಧಿಕಾರದ ವಿಕೇಂದ್ರಿಕರಣ, ಮೀಸಲಾತಿ ಎಂಬ ನಾಲ್ಕು ಕ್ರಾಂತಿಗಳನ್ನು ಆರು ದಶಕಗಳಲ್ಲಿ ಕಂಡಿದೆ. ಈ ಎಲ್ಲಾ ಕ್ರಾಂತಿಗಳು ಹತ್ತು ಹಲವು ಸಮುದಾಯಗಳನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳದೇ ಹೋಯಿತು. ಭೂಮಸೂದೆ ಕಾಯಿದೆ ಕರ್ನಾಟಕದಲ್ಲಿ ತಕ್ಕಮಟ್ಟಿಗೆ ಪರಿಣಾಮಕಾರಿಯಾಗಿ ಅಳವಡಿಸಿಕೊಂಡರೆ, ಇತರೆ ರಾಜ್ಯಗಳಲ್ಲಿ ಸೋತುಹೋಯಿತು. ದಲಿತರು ಚಿಕ್ಕಪುಟ್ಟ ಭೂ ಹಿಡುವಳಿದಾರರಾಗಿ ಪರಿವರ್ತಿತರಾದರೇ ಹೊರತು ಮಾಲೀಕರಾಗಲು, ಹಸಿರು ಕ್ರಾಂತಿ ಮಧ್ಯೆ ಜಾತಿಯ ನೀರಾವರಿ ರೈತರಿಗೆ ಅಧಿಕಾರದ ವಿಕೇಂದ್ರಿಕರಣದ ಲಾಭ ಪಡೆದಿದ್ದು ಅತೀ ಹಿಂದುಳಿದವರಲ್ಲ, ಹಿಂದುಳಿದವರಲ್ಲಿ ಬಲಾಢ್ಯರು, ಮೀಸಲಾತಿ ಇದರಿಂದ ಹೊರತಾಗಿಲ್ಲ. ಮೇಲಿನ ನಾಲ್ಕು ಕ್ರಾಂತಿಗಳ ಲಾಭ ಪಡೆದದ್ದು ಬಲಾಢ್ಯರು. ಉಳಿದವರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ವಂಚಿತರಾಗುತ್ತಾರೆ. ಬಲಾಡ್ಯರೆ ದೊಡ್ಡ ದೊಡ್ಡ ಹೋಟೆಲುಗಳ ಮಾಲೀಕರಾದರು. ಲಾಭ ಪಡೆಯಬೇಕಾದವರು ಲಾಭ ಪಡೆಯದೇ 'ವಂಚಿತರಲ್ಲಿ ವಂಚಿತ'ರಾಗುತ್ತಲೇ ಇದ್ದಾರೆ.[೧೮] ಇದು ರಾಜಕೀಯ ಅಭಿವೃದ್ಧಿಯ ವಿಪರ್ಯಾಸ. ಯಾಕೆಂದರೆ ಇವರ ನಡುವೆ ರಾಜಕೀಯ ಶಕ್ತಿಯಾಗಿ ಬೆಳೆಯುವುದು ಅಷ್ಟು ಸುಲಭವಾದ ಕೆಲಸವಲ್ಲ, ಆದ್ದರಿಂದ ರಾಜಕೀಯ ಧ್ರುವೀಕರಣವಾಗುವುದು ಕಷ್ಟವೆಂದು ವಿವರಿಸುತ್ತಾರೆ.

ಮುಜಾಫ್ಫರ್ ಅಸ್ಸಾದಿ (೨೦೧೭) ಅವರು **ಕರ್ನಾಟಕದಲ್ಲಿ ಸಮಾಜ ಅಧಿಕಾರ ರಾಜಕಾರಣ ಮತ್ತು ಅಸ್ಮಿತೆ** ಎಂಬ ಕೆಲವು ಟಿಪ್ಪಣಿಗಳಲ್ಲಿ ಸಮಾಜ ಮತ್ತು ಅಧಿಕಾರ ರಾಜಕಾರಣ ಎನ್ನುವುದು ಎರಡು ವಾದಗಳನ್ನು ಒಪ್ಪಿಕೊಂಡಿದೆ. ಒಂದು ಐಡೆಂಟಿಟಿ ಅಥವಾ ಅಸ್ಮಿತೆ ಗುರುತಿನ ರಾಜಕಾರಣ

ಪ್ರಕ್ರಿಯೆಗಳು, ಎರಡು ಸಾಮಾಜಿಕ ಧ್ರುವೀಕರಣ ಹೊಸ ರಾಜಕೀಯಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ವಾದಿಸುತ್ತ ಅಸ್ಮಿತೆ ಅಥವಾ ಐಡೆಂಟಿಟಿ ಹುಡುಕಾಟ ಮತ್ತು ನಿರ್ಮಿತಿ, ಸಾರ್ವಜನಿಕನೀತಿ ಹೊಸ ಸಾಮಾಜಿಕ ಅಸ್ಮಿತೆ ಮತ್ತು ಅಧಿಕಾರ ರಾಜಕಾರಣ, ಭೋವಿ ಸಮುದಾಯದ ಸುಧಾರಣೆ, ಅಧಿಕಾರ ಮತ್ತು ಅಸ್ಮಿತೆ ಬದಲಾಗುತ್ತಿರುವ ಸಮಾಜ, ಕೋಮುವಾದ ಬಗ್ಗೆ ವಾದಿಸುತ್ತಾರೆ. ಕರ್ನಾಟಕ, ಕನ್ನಡದ ಏಕರೂಪದ ಅಸ್ಮಿತೆ/ಐಡೆಂಟಿಟಿ ಇಲ್ಲ, ಯಾಕೆಂದರೆ ಅನೇಕ ಭಾಷೆಗಳನ್ನು ಮಾತಾಡುವವರು ಇದ್ದಾರೆ. ಏಕಭಾಷೆ ನಿರ್ಮಿಸಿಕೊಳ್ಳುವ ಸಂದರ್ಭದಲ್ಲಿ ಭೌಗೋಳಿಕತೆ, ಸಂಸ್ಕೃತಿ, ವಿವಿಧ ಜಾತಿ, ಉಪಜಾತಿ, ಭಾಷೆಗಳು, ನದಿಗಳ ಗಡಿಗಳು, ನಗರಗಳ ಸರಹದ್ದುಗಳು, ಅಭಿವೃದ್ಧಿ ಮಾದರಿಗಳು, ಇತಿಹಾಸದ ಸ್ಮೃತಿಗಳು ಕೂಡಾ ತಮ್ಮ ಐಡೆಂಟಿಟಿಯನ್ನು ನಿರ್ಮಿಸಿಕೊಳ್ಳಲು ಬಹು ಮುಖ್ಯವಾದ ಸ್ಥಾನದಲ್ಲಿ ಬರುತ್ತವೆ. ರಾಜ್ಯದ ವಿಷಯಕ್ಕೆ ಬಂದರೆ ಕರ್ನಾಟಕ ನೆಲದ ಈ ಆಧುನಿಕೋತ್ತರ ಕಾಲಾವಧಿಯಲ್ಲಿ " ಬೆಂಗಳೂರು" ಕರ್ನಾಟಕದ ಅಸ್ಮಿತೆಯ/ಐಡೆಂಟಿಟಿಯ ಬಹುಮುಖ್ಯ ಅಂಶವಾಗಿ ಉಲ್ಲೇಖವಾಗುತ್ತದೆ. ಜಾತಿ, ಸಮುದಾಯಗಳಿಗೆ ಬಂದರೆ ನಮ್ಮ ಜಾತಿ ಮೇಲಿನಸ್ಥಾನದಲ್ಲಿ ಬರುತ್ತದೆ, ನಿಮ್ಮ ವೃತ್ತಿ ಆಧಾರಿತವಾಗಿ ದಾಖಲೆಗಳು ಇವೆ. ನಮ್ಮನ್ನು ನಮ್ಮದೇ ಆದ ಐಡೆಂಟಿಟಿಯನ್ನು ಹೊಂದಿದೆ.[೧೯] ಎಂದು ಲೇಖಕರು ದೇಶ ರಾಜ್ಯ, ಜಿಲ್ಲೆ, ನಗರ, ಗ್ರಾಮ, ಜಾತಿ, ಸಮುದಾಯಗಳು, ದಮನಿತರು, ಅಂಚಿನಲ್ಲಿರುವರನ್ನು ಉದಾಹರಣೆಕೊಡುತ್ತ ಈ ಲೇಖನದಲ್ಲಿ ಅಸ್ಮಿತೆ/ಐಡೆಂಟಿಟಿ ವಿಷಯಗಳನ್ನು ಚರ್ಚಿಸಿದ್ದಾರೆ.

೨.೪. ಸಮುದಾಯಕ್ಕೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

ಚಂದ್ರ ಪೂಜಾರಿ. ಎಂ.(೨೦೧೪) ಜಾತಿ ಎನ್ನುವ ಪರಿಭಾಷೆಯ ಲೇಖನದಲ್ಲಿ ಬ್ರಿಟೀಷರು ಭಾರತಕ್ಕೆ ಬಂದಾಗ ಜನರನ್ನು ಚರ್ಮದ ಬಣ್ಣದ ನೆಲೆಯಲ್ಲಿ ವಿಂಗಡಿಸುತ್ತಿದ್ದರು. ತುಂಬಾ ಭಿನ್ನತೆ ಇರುವ ಜನರೊಂದಿಗೆ ವ್ಯವಹರಿಸುವುದು ಬ್ರಿಟಿಷರಿಗೆ ಕಷ್ಟವಾಯಿತು. ಆದ್ದರಿಂದ ಉಡುಗೆ – ತೊಡುಗೆ, ಊಟ – ಉಪಚಾರ, ದೇವರು – ದಿಂಡರು, ಆಚಾರ – ವಿಚಾರ, ಉದ್ಯೋಗ ಆಧಾರದ ಮೇಲೆ ಜಾತಿ ಪರಿಭಾಷೆಯನ್ನು ರೂಪಿಸಿದರು. ಜಾತಿಯೆನ್ನುವ ಪರಿಭಾಷೆ ಬ್ರಿಟಿಷರ ಕೊಡುಗೆಯಲ್ಲ. ಚಾರಿತ್ರಿಕವಾಗಿ ಸಮಾಜದ ಕೊಡುಗೆ ಎನ್ನುವ ವಾದವು ಇದೆ ಹಾಗೂ ವರ್ಣಪದ್ದತಿ, ಜಾತಿ ಪದ್ದತಿಯ ಮೂಲ, ಕಾಲಕ್ರಮದಲ್ಲಿ ಅದು ಜಾತಿಯಾಗಿ ಬದಲಾಯಿತೆಂದು ವಾದಿಸುವವರಿದ್ದಾರೆ. ಜಾತಿಗೊಂದು ಕಸುಬು, ಜಾತಿಗೊಂದು ಭಾಷೆ, ಜಾತಿಗೊಂದು ಉಡುಗೆ ತೊಡುಗೆ, ಜಾತಿಗೊಂದು ದೇವರು ಎಲ್ಲವೂ ಇಂದು ಕಾಣೆಯಾಗಿದೆ. ಆಧುನಿಕ ಶಿಕ್ಷಣ ಹೊಸಭಾಷೆ ಕಲಿಸಿದೆ. ಮಾರುಕಟ್ಟೆಯಲ್ಲಿ ಜಾತಿ ಕಾಣೆಯಾಗಿದೆ ಎಂದು ಕೆಲವರ ವಾದವನ್ನು ತಿರಸ್ಕರಿಸುವವರಿದ್ದಾರೆ. ಇಂದು ಕೂಡ ಜಾತಿ ಜೀವಂತವಿದೆ. ಸಾಂಪ್ರದಾಯಿಕ ಸಮಾಜದ ಗುಣ ಲಕ್ಷಣಗಳನ್ನು ಅಡಿಮೇಲು ಮಾಡುವ ಆಧುನೀಕರಣ ಪ್ರಕ್ರಿಯೆ ನಮ್ಮಲ್ಲಿ ನಡೆದಿಲ್ಲ. ಜಾತಿ ಉಳಿದಿರುವುದು ಮದುವೆ ಮತ್ತು

ಗುರುತಿನ ರಾಜಕೀಯದಿಂದ ವಸಾಹತು ಆಡಳಿತ ಮತ್ತು ಅದರಿಂದ ಬಿಡುಗಡೆಗಾಗಿ ನಡೆಸಿದ ಹೋರಾಟಗಳು ಮತ್ತು ನಂತರದ ನಮ್ಮ ರಾಜಕೀಯ ಜಾತಿ/ಧರ್ಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿವೆ.[೨೦] ಜಾತಿ ನಮ್ಮ ಬದುಕಿನಿಂದ ಸಂಪೂರ್ಣವಾಗಿ ಮಾಯವಾಗಿಲ್ಲ ಜಾತಿಗೊಂದು ಗುರುತಾಗಿ ಸೋಶಿಯಲ್ ನೆಟ್‌ವರ್ಕಾಗಿ ಕೆಲಸ ಮಾಡುತ್ತಿದೆ ಎಂದು ಸಂಕ್ಷಿಪ್ತವಾಗಿ ವಿಶ್ಲೇಷಣೆ ಮಾಡಿದ್ದಾರೆ ಈ ಲೇಖನದಲ್ಲಿ.

ತಿಮ್ಮಯ್ಯ. ಜಿ. (೧೯೮೩) ಅವರು ತಮ್ಮ ಲೇಖನ **ಕಾಸ್ಮ ಆಂಡ್ ಕ್ಲಾಸ್ ಇನ್ ಕರ್ನಾಟಕ** ರಾಜ್ಯದಲ್ಲಿನ ಜನರ ಸಮಾಜೋ ರಾಜಕೀಯ ಸ್ಥಿತಿಗಳನ್ನು ಒಟ್ಟು ಮೂರು ಹಂತಗಳನ್ನಾಗಿ ವಿಂಗಡಿಸುತ್ತಾರೆ. ಮೊದಲನೆಯದು ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ ಸಾಮಾಜಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಕ್ಷೇತ್ರಗಳಲ್ಲಿ ಹಿಡಿತದ ವಿರುದ್ಧ ಬ್ರಾಹ್ಮಣರೇತರರು ಮಾಡಿದ ಹೋರಾಟ, ಎರಡನೇಯದು ಬಲಾಢ್ಯ ಬ್ರಾಹ್ಮಣರೇತರ ಜಾತಿಗಳಾದ ಒಕ್ಕಲಿಗ ಮತ್ತು ಲಿಂಗಾಯತರ ಬೆಳವಣಿಗೆ, ಮೂರನೇಯದು ೧೯೭೦ರಲ್ಲಿ ಆದ ಬಲಾಢ್ಯರಲ್ಲದ ಬ್ರಾಹ್ಮಣರೇತರ ಹಿಂದುಳಿದ ಅಥವಾ ಅಲ್ಪ ಜಾತಿಗಳನ್ನು ಒಟ್ಟು ಗೂಡಿಸಿ ಒಕ್ಕಲಿಗ ಮತ್ತು ಬ್ರಾಹ್ಮಣರ ದಬ್ಬಾಳಿಕೆಯ ವಿರುದ್ಧ ದೇವರಾಜ ಅರಸರ ಹೋರಾಟದ ಕಾಲವೆಂದು ವಿಂಗಡಿಸುತ್ತಾರೆ.[೨೧] ಸಮುದಾಯಗಳು ಆರ್ಥಿಕ ಬಲಾಢ್ಯ ಜಾತಿಗಳೆಂದು ೩ ರೀತಿಯ ಅಂಶಗಳನ್ನು ಇಟ್ಟುಕೊಂಡು ಉಲ್ಲೇಖಿಸುತ್ತಾರೆ ಲೇಖಕರು.

ಮುರಳಿ ನಾಗಲಾಬಿ (೨೦೧೯) ಅವರು **ಒಡ್ಡರ ಸಮುದಾಯ: ಒಂದು ಐತಿಹಾಸಿಕ ಪಕ್ಷಿನೋಟ** ಎನ್ನುವ ಲೇಖನದಲ್ಲಿ ಭೋವಿ ಸಮುದಾಯದವರು ೨೦೧೧ರ ಜನಗಣತಿ ಪ್ರಕಾರ ಕರ್ನಾಟದಲ್ಲಿ ೯೫೫,೭೫೨ ಇದ್ದಾರೆ, ರಾಜ್ಯದ ಶೇಕಡ ೧೧.೨ ಸಮುದಾಯದ ಜನಸಂಖ್ಯೆಯಿದೆ. ಈ ಜನಸಂಖ್ಯೆ ಶೇಕಡ ೪೯.೨ ರಷ್ಟು ಸಾಕ್ಷರತೆ ಇದ್ದು, ಶೇಕಡ ೨.೯ ರಷ್ಟು ಮಾತ್ರ ಪದವೀಧರರು ಇದ್ದಾರೆ. ಭೋವಿ ಸಮುದಾಯದಲ್ಲಿಯೂ ಒಳ ಪಂಗಡಗಳು ಇವೆ. ಮಣ್ಣು ಒಡ್ಡರು, ಕಲ್ಲು ಒಡ್ಡರು, ಗಿರಣಿ ಒಡ್ಡರು, ಉಪ್ಪು ಒಡ್ಡರು, ಬಂಡಿ ಒಡ್ಡರು, ಬೈಲು ಒಡ್ಡರು ಎಂದು ವಿವರಿಸಿದ್ದಾರೆ. ಈ ಸಮುದಾಯದಲ್ಲಿರುವ ಪಂಗಡಗಳಲ್ಲಿ ಮಣ್ಣ ಒಡ್ಡರು ಬಾವಿ ತೊಡುವುದು, ಒಡ್ಡು ಹಾಕುವುದು, ಕೆರೆ ಒಡ್ಡುಗಳನ್ನು ನಿರ್ಮಿಸುತ್ತಾರೆ. ಕಲ್ಲು ಒಡ್ಡರು ಗುಡಿ ಗುಂಡಾರಗಳನ್ನು ಕಟ್ಟುವುದು, ಮೂರ್ತಿ ಹಾಗೂ ಶಿಲಾಶಾಸನಗಳನ್ನು ಕೆತ್ತುವುದು, ಕಲ್ಲು ಹೊಡೆಯುವ ಕೆಲಸ ಮಾಡುತ್ತಾರೆ. ಗಿರಣಿ ಒಡ್ಡರು: ನೂಲಿನ ಕೆಲಸ, ಉಪ್ಪು ಒಡ್ಡರು ಸಮುದ್ರ ತೀರದಲ್ಲಿ ಉಪ್ಪನ್ನು ತಯಾರು ಮಾಡುತ್ತಾರೆ. ಬಂಡೆ ಒಡ್ಡರು ದೊಡ್ಡ ದೊಡ್ಡ ಬಂಡೆಗಳನ್ನು ಎಬ್ಬಿಸುವಂತವರು, ಬೈಲು ಒಡ್ಡರು ಬಂಡೆ ಒಡ್ಡರಿಂದ ಬಂಡೆಗಳನ್ನು ಪಡೆದು ಬೀಸು ಕಲ್ಲುಗಳನ್ನು ಮಾಡಿ ಮಾರಾಟ ಮಾಡುತ್ತಾರೆ. ಭೋವಿ ಸಮುದಾಯವು ಅಭಿವೃದ್ಧಿಯ ಆಯಾಮಗಳಿಂದ ದೂರನೇ ಉಳಿದುಕೊಂಡಿದೆ. ಆದ್ದರಿಂದ ಭೋವಿ ಸಮುದಾಯ ಜಿಲ್ಲಾ ಮತ್ತು ತಾಲ್ಲೂಕು ಸಂಘಟನೆಗಳು ಕರ್ನಾಟಕ ಭೋವಿ ವಿಕಾಸ

ವೇದಿಕೆ ಇತರೆ ಸಂಘಟನೆಗಳು ಸಮುದಾಯದ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದೆ ಉಳಿದು, ರಾಜಕೀಯ ಪ್ರಾತಿನಿದ್ಯ ಪಡೆಯಲು ಸಾಧ್ಯವಾಗಿಲ್ಲ. ಸಮುದಾಯದ ಮಕ್ಕಳ ಶಿಕ್ಷಣದಿಂದ ವಂಚಿತರಾಗಿ ಅವರಂತೆ ತಮ್ಮ ವೃತ್ತಿಗಳನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ರಸ್ತೆ, ಮತ್ತು ಕಟ್ಟಡ ಕಾಮಗಾರಿಗಳಲ್ಲಿ ಭೋವಿ ಸಮುದಾಯದವರಿಗೆ ಶೇಕಡ ೧೦ ರಷ್ಟು ಅವಕಾಶ ಕಲ್ಪಿಸಿ ಕೊಡಬೇಕು. ಸಮುದಾಯದಲ್ಲಿ ಗಂಡು ಹೆಣ್ಣು ಇಬ್ಬರು ಸಹ ಕಲ್ಲು ಮಣ್ಣಿನ ಕೆಲಸ ಮಾಡುತ್ತಾರೆ.” ಎಂದು ವಿವರಿಸುತ್ತಾ, ಸಮುದಾಯದವರು ಮೂಲತಃ ಒರಿಸ್ಸಾದವರು ಆಂದ್ರದ ಮೂಲಕ ಕರ್ನಾಟಕದ ರಾಯಚೂರು, ಗುಲ್ಬರ್ಗ ಮೂಲಕ ಇತರೆ ಜಿಲ್ಲೆಗಳಿಗೆ ಬಂದು ನೆಲೆಸಿ ತಮ್ಮ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಂಜುನಾಥ ನಾಯಕ್ ಕೆ. ಅವರು ಚಿತ್ರದುರ್ಗ ಜಿಲ್ಲಾ ದರ್ಶನ ಎಂಬ ಪುಸ್ತಕದಲ್ಲಿ ಜಗತ್ತು ಕಂಡ ಅತ್ಯಂತ ಶ್ರಮ ಜೀವಿಗಳಲ್ಲಿ ಭೋವಿ ಸಮುದಾಯವು ಒಂದು, ಕಲ್ಲು ಬಂಡೆಗಳು ಮತ್ತು ಬೆಂಕಿಯ ಮಧ್ಯೆ ಮೌನಮುರಿದು ಮಾತಾಡುವ ಪರಂಪರೆಯಲ್ಲಿ ಕೋಟೆಗಳನ್ನು, ಮಂದಿರ ಮಸೀದಿ ಹಾಗೂ ಅದೇ ಕಲ್ಲಿನ ಜಲ್ಲಿಯಿಂದ ರಸ್ತೆ ಮಾಡಿದ ಇವರು ಕಲ್ಲು ಬಂಡೆಯನ್ನು ಒಡೆಯುವ ಕುಶಲ ಕರ್ಮಿಗಳಾಗಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ ತುಂಬಾ ಹಿಂದುಳಿದಿರುವ ಸ್ಥಿತಿಜನಕವನ್ನು ಸಮುದಾಯದಲ್ಲಿ ಗುರುತಿಸಬಹುದು. ಯಾವುದೋ ಒಂದು ಮೂಲೆಯಲ್ಲಿ ಗುಬ್ಬಚ್ಚಿಯ ಗೂಡಿನಂತಹ ಮನೆಗಳನ್ನು ಕಟ್ಟಿಕೊಂಡು ಊರಿನಿಂದ ಊರಿಗೆ ಕೆಲಸಕ್ಕೆ ಅಲೆಯುವ ಸ್ಥಿತಿಯನ್ನು ಕಂಡು ಚಿತ್ರದುರ್ಗದ ಬೃಹನ್ಮಠದ ಡಾ. ಶ್ರೀ ಶಿವಮೂರ್ತಿ ಮುರಘಾಶರಣರು ಶೋಷಣೆ ಮುಕ್ತ ಸಮಾಜವನ್ನು ನಿರ್ಮಿಸುವ ಸಲುವಾಗಿ ಭೋವಿ ಸಮುದಾಯಕ್ಕೊಬ್ಬ ನಡೆದಾಡುವ ಮೂರ್ತಿಯಾದ ಪೂಜ್ಯಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಶರಣರನ್ನು ಈ ಹಿಂದುಳಿದ ಸಮುದಾಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಆದ್ದರಿಂದ ಇವರು ಶ್ರೀಸಿದ್ಧರಾಮೇಶ್ವರ ಸಂದೇಶ ಯಾತ್ರೆಮಾಡುತ್ತಾ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆಯನ್ನು ಮೂಡಿಸುತ್ತಿದ್ದಾರೆ ಎಂದು ವಿಶ್ಲೇಷಿಸುತ್ತ, ಭೋವಿ ಸಮುದಾಯದವರು ಮೂಲತಃ ದ್ರಾವಿಡರು ಇವರಾಡುವ ಭಾಷೆ ಮೊದಲು 'ಒಡಾರಿ' ಇತ್ತು, ಕಾಲಕ್ರಮೇಣ ವಲಸೆಹೋಗುತ್ತ ಪ್ರಾದೇಶಿಕ ಹಿನ್ನೆಲೆಯಿಂದ ತೆಲುಗು ಭಾಷೆಯಲ್ಲಿ ವಿಲೀನಗೊಳ್ಳುತ್ತದೆ. ಇಂತಹ ಸಮುದಾಯಗಳಿಗೆ ದಿಟ್ಟವಾದ ಹೆಜ್ಜೆಯನ್ನು ಕಲ್ಪಿಸಿಕೊಟ್ಟರು. ಜ್ಯೋತಿಬಾಪುಲೆ ಹಾಗೂ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಎಂದು ಲೇಖಕರು ವಿವರಿಸುತ್ತ, ೧೮೮೮ ರಲ್ಲಿ ಕನ್ನಂಬಾಡಿಕಟ್ಟೆ(ಕೆ.ಆರ್.ಎಸ್) ನಿರ್ಮಾಣ ಮಾಡುವ ಸಮಯದಲ್ಲಿ ಭೋವಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿದ್ದರು. ಕಾರ್ಯ ಪರಿಶೀಲನೆಗೆ ಬಂದಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಂಬಾಡಿ ಕಟ್ಟುವ ವಡ್ಡರ ಜನಾಂಗದ ಬೌದ್ಧಿಕ, ದೈಹಿಕ, ಪರಿಶ್ರಮ ಪರಿಶೀಲಿಸಿ ಇವರಿಗೆ ಸರ್ಕಾರದಿಂದ ಸದಾವಕಾಶ

ದೊರೆಯುವಂತೆ 'ಭೋವಿ' ಎಂಬ ಪದನಾಮದಿಂದ ಕರೆದು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ.[೨೩] ಸಮುದಾಯದಲ್ಲಿ ಸೌಮ್ಯ, ಮುಗ್ಧ ಹಾಗೂ ಪ್ರಾಮಾಣಿಕ, ಶ್ರಮಜೀವಿಗಳು ಆದ್ದರಿಂದ ಒಡೆಯರು ಈ ಸಮುದಾಯ ಅಭಿವೃದ್ಧಿಗೆ ಹೆಚ್ಚಿನ ಕಾಳಜಿ ವಹಿಸಿದ್ದಾರೆ ಎಂದು ಲೇಖಕರು ಬರವಣಿಗೆ ಮೂಲಕ ದಾಖಲಿಸಿದ್ದಾರೆ.

ವಿವೇಕ ರೈ, (೨೦೧೫) ಇವರಲ್ಲಿ ಕಲ್ಲುವಡ್ಡರು, ಮಣ್ಣುವಡ್ಡರು ಎಂಬ ಎರಡು ಪಂಗಡಗಳು ಇವೆ. ಭೋವಿ ಸಮುದಾಯದವರು ಕಲ್ಲು ಮಣ್ಣನ್ನು ನಂಬಿಕೊಂಡು ದೇವಾಲಯ, ಅಣೆಕಟ್ಟು ಮನೆಗಳನ್ನು ಕಟ್ಟುತ್ತಾ ಜೀವನವನ್ನು ಕಟ್ಟಿಕೊಂಡು ಪ್ರಕೃತಿಯ ಸಂಪನ್ಮೂಲಗಳ ಮಧ್ಯೆ ವಾಸಿಸುತ್ತಿದ್ದಾರೆ. ಸಮಾಜದಲ್ಲಿರುವ ಹಲವಾರು ಸಮುದಾಯಗಳೊಂದಿಗೆ ಬೆರತು ಅವರಿಗೆ ಬೇಕಾದ ರೀತಿಯಲ್ಲಿ ಮನೆಗಳು ದೇವಾಲಯ ಇತರೆ ಕಟ್ಟಡಗಳನ್ನು ಕಟ್ಟಿಕೊಟ್ಟು ಬಡತನ, ಹಸಿವನ್ನು ನೀಗಿಸಿಕೊಳ್ಳಲು ಇವರು ಊರಿಂದ ಊರುಗಳಿಗೆ ವಲಸೆಹೋಗುವ ವ್ಯವಸ್ಥೆಯನ್ನು ಸಮುದಾಯಲ್ಲಿ ಕಾಣಬಹದು. ಇವರಂತೆ ಇವರ ಮಕ್ಕಳನ್ನು ತಮ್ಮ ವೃತ್ತಿಗೆ ಅಂಟಿಸಿಕೊಂಡು ಶಿಕ್ಷಣ ಮತ್ತು ಇತರೆ ಮೂಲಭೂತ ಸೌಕರ್ಯಗಳಿಂದು ದೂರ ಉಳಿದು, ಬೆಂಕಿ ಬಂಡೆಗಳ ಮಧ್ಯೆ ಶ್ರಮವಹಿಸಿ ಮಾಲಿಕರು ಕೊಟ್ಟಷ್ಟು ಹಣಪಡೆದುಕೊಂಡು ತೃಪ್ತಿ ಪಡೆಯಬೇಕಾಗಿದೆ. ಸಮುದಾಯಗಳ ಅಭಿವೃದ್ಧಿಗೆ ಬೇಕಾದ ಕೆಲಸಕಾರ್ಯಗಳನ್ನು ಮಾಡಿಕೊಟ್ಟಂತ ಭೋವಿ ಸಮುದಾಯಕ್ಕೆ ಸ್ವಂತ ಕೃಷಿ ಭೂಮಿ ಇಲ್ಲದೇ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿದಿರುವುದನ್ನು ಕಾಣಬಹುದು. ಭೋವಿ ಸಮುದಾಯದವರು ಪರಂಪರಿಕ ವೃತ್ತಿಗಳನ್ನು ನಂಬಿಕೊಂಡು ಬದುಕುತ್ತಿವೆ. ಆದರೆ ಇಂದು ಆಧುನಿಕತೆ ಬೆಳೆವಣಿಗೆ ಕೈಗಾರಿಕೆಗಳ ಬೆಳವಣಿಗೆಯಿಂದ ಇವರ ಕೆಲಸವನ್ನು ಯಂತ್ರಗಳು ಕಸಿದುಕೊಂಡಿವೆ. ಹಾಗಾಗಿ ಸಮುದಾಯದಲ್ಲಿ ನಿರುದ್ಯೋಗ, ಬಡತನ ಹೆಚ್ಚಾಗುತ್ತಿದೆ. ಆದ್ದರಿಂದ ಅನಿವಾರ್ಯವಾಗಿ ಇತರೆ ಕೆಲಸಗಳ ಕಡೆ ಮುಖಮಾಡಿ ಆರೋಗ್ಯದ ಬಗ್ಗೆ ಕಾಳಜಿ ವಹಿಸದೇ ಮಾಲಿಕರು ಕೊಟ್ಟಷ್ಟು ಹಣಕ್ಕೆ ದುಡಿಯುವುದನ್ನು ಈ ಭೋವಿ ಸಮುದಾಯದಲ್ಲಿದೆ[೨೪] ಎಂದು ಮಾತನಾಡುತ್ತಾರೆ.

ದೇವೇಂದ್ರ ಕುಮಾರ್. ಹಕಾರಿ(ಸಂ), ಗ್ರಾಮ ಸಂಸ್ಕೃತಿ ಮಾಲೆ ಎಂಬ **"ಕಲ್ಲುಕುಟಿಗರು** ಮೂಲಭೂತವಾಗಿ ವಲಸೆ ಹೋಗುವವರು, ತಿರುಗಾಡುವವರು ಇವರ ಭಾಷೆ ತೆಲುಗು, ಮಾತಾನಾಡುವುದರಿಂದ ಇವರು ಆಂಧ್ರದ ಮೂಲದವರಿರಬೇಕು, ಭೋವಿ/ವಡ್ಡರು ಎಂತಲೂ ಕಲ್ಲುವಡ್ಡರೂ ಎಂತಲೂ ಕರೆದುಕೊಳ್ಳುತ್ತಾರೆ. ಕಲ್ಲುವಡ್ಡರು ಬಂಡಿವಡ್ಡರು, ಬಿಸುಕಲ್ಲು ವಡ್ಡರು ಮಣ್ಣುವಡ್ಡರು ವರ್ಗೀಕರಿಸಿ ಗುರುತಿಸಿದ್ದಾರೆ. ಸಾಮಾನ್ಯವಾಗಿ ೮೦–೯೦ ವರ್ಷಗಳಿಗಿಂತ ಹಿಂದೆ ಕರ್ನಾಟಕದಲ್ಲಿ ಬಂದು ನೆಲೆಸಿರಬಹುದು ಎಂದು ಹೇಳಿದ್ದಾರೆ."೩೧೩ ಬೋವಿ/ವಡ್ಡರು ಸಾಂಪ್ರದಾಯಿಕ ವೃತ್ತಿಯನ್ನು ಆಧರಿಸಿಕೊಂಡು ಊರೂರು ಅಲೆಯುತ್ತಾರೆ. ಸಮಾಜದ ಎಲ್ಲಾ

ಸಮುದಾಯಗಳೊಂದಿಗೆ ಬೆರೆತು ಅವರು ವಾಸಿಸಲು ಮನೆಗಳನ್ನು ಕಟ್ಟುತ್ತಾರೆ ಮತ್ತು ಗೃಹೋಪಯೋಗಿ ಸಲಕರಣೆಗಳಾದ ವರಳುಕಲ್ಲು, ಬಿಸುವಕಲ್ಲು, ರುಬ್ಬು ಗಂಡು ಮಾಡುತ್ತಾರೆ. ಗ್ರ್ಯಾಂಡರ್, ಮಿಕ್ಸಿ ಬಂದ ಮೇಲೆ ಇವರ ಬದುಕು ಸಂಕಷ್ಟಕರವಾಗಿದೆ. ಆಹಾರ ತಯಾರಿಸಲು ಬೇಕಾದ ಸಲಕರಣೆಯನ್ನು ಮಾಡುವ ಈ ಸಮುದಾಯ ಇಂದು ಆಧುನಿಕ ಪೈಪೋಟಿಯಿಂದ ಗೃಹ ಕೈಕೆಲಸಗಳು ಮಾಯಾವಾಗುತ್ತಿವೆ. ಕಲ್ಲು ಕೆಲಸ ಮಾಡುವುದರಿಂದ ಬಹುತೇಕವಾಗಿ ಅಪಾಯ ತಪ್ಪಿದ್ದಲ್ಲ, ನೆರಳಲ್ಲಿದ್ದು ಎಸಿ ಆಕಿಕೊಳ್ಳುವ ಕಾಲದಲ್ಲಿ ಬಂಡೆಯಮೇಲೆ ಬೆಂಕಿ ಹಾಕಿಕೊಂಡು ಕಲ್ಲು ಕೆಲಸ ಮಾಡುತ್ತಾರೆ[೨೫] ಎಂದು ತಿಳಿಸಿದ್ದಾರೆ.

ಅಮೃತ ಕಟಕೆ (೨೦೧೦) ಅವರು **ಒಡ್ಡರು/ಭೋವಿ ಜನಾಂಗ/ ಮೇನೆಯವರ ಸಂಸ್ಕೃತಿ** ಎಂಬ ಲೇಖನದಲ್ಲಿ ಭೋವಿ ಸಮುದಾಯಕ್ಕೆ ಪ್ರಾಚೀನ ಕಾಲದಿಂದಲೂ ಅನೇಕ ರೀತಿಯ ಉಲ್ಲೇಖಗಳ ಬಗ್ಗೆ ಲೇಖಕರು ಗುರುತಿಸುತ್ತಾರೆ. ರಾಜ್ಯ ಶಾಸ್ತ್ರದ ಚಿಂತಕನಾದ ಸಾಕ್ರೇಟಿಸ್‌ನು ತನ್ನ ಜೀವನ ಚರಿತ್ರೆಯಲ್ಲಿ ಹೇಳಿಕೊಂಡಂತೆ ಅವನ ತಂದೆ ಭೋವಿ ಸಮುದಾಯಕ್ಕೆ ಸೇರಿದವನು ಆದ್ದರಿಂದ ಸುತ್ತಿಗೆ ಮತ್ತು ಚಾಣವನ್ನು ತನಗೆ ಕೊಟ್ಟಿದ್ದನೆಂದು ತಿಳಿಸಿದ್ದಾನೆ. ಹಾಗೂ ಲಂಡನ್ ನಗರದಲ್ಲಿ ಲಂಡನ್ ಟವರ್, ಸೇತುವೆಗಳು ಕಾಲುವೆಗಳು, ಒಳಚರಂಡಿಗಳನ್ನು ಇತರೆ ಮೂಲಭೂತ ಸಂಖ್ಯೆಗಳನ್ನು ಆಶ್ಚರ್ಯಕರ ರೀತಿಯಲ್ಲಿ ನಿರ್ಮಿಸಿದವರು. ಭೋವಿ ಸಮುದಾಯದವರು ಆದ್ದರಿಂದ ಇವರು ಶಕ್ತಿ ಸಾಮರ್ಥ್ಯವನ್ನರಿತು ಮಹಮ್ಮದ್ ಘಜನಿ ಮತ್ತು ಮಹಮ್ಮದ್ ಘೋರಿ ೧೦೨೦ ರಲ್ಲಿ ಭಾರತಕ್ಕೆ ಬಂದಿದ್ದಾಗ, ೧೭೦೦ ಸಮುದಾಯದ ಜನರನ್ನು ಕರೆದೊಯ್ದ ಸಂಗತಿಯನ್ನು ಬಿಡಿಸುತ್ತಾರೆ. ಭಾರತ ದೇಶದ ಓರಿಸ್ಸಾ ಇವರ ಮೂಲ. ನಂತರ ಮಹಾರಾಷ್ಟ್ರ, ತಮಿಳುನಾಡು, ಆಂದ್ರ ಪ್ರದೇಶ, ಕರ್ನಾಟಕದಲ್ಲಿ ವಾಸಮಾಡುತ್ತ ಇರುವುದು ತಿಳಿಯುತ್ತದೆ. ಒರಿಸ್ಸಾದಲ್ಲಿ ಇವರಿಗೆ 'ಒಡ್ಡೆ' ಎಂದು ಕರೆದರೆ ತಮಿಳುನಾಡಿನಲ್ಲಿ 'ಬೋವಿಗಳು' ಎಂದು ಗುರುತಿಸುತ್ತಾರೆ. ಉತ್ತರ ಪ್ರದೇಶದಲ್ಲಿ 'ಮಸ್ತರಿ' ಎಂದು ಕರ್ನಾಟಕದಲ್ಲಿ 'ವಡ್ಡರು/ಭೋವಿ' ಎಂದು ಕರೆಯಲಾಗುತ್ತದೆ. ದಕ್ಷಿಣ ಭಾರತ ಕೆಲವು ರಾಜ್ಯಗಳ ಪ್ರಮುಖ ಪಟ್ಟಣ/ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಕರ್ನಾಟಕದಲ್ಲಿ ಕೋಲಾರ, ಚಿತ್ರದುರ್ಗ, ಕೊಪ್ಪಳ, ರಾಯಚೂರು, ಸಿಂಧನೂರು ಹಾಗೂ ಗುಲ್ಬರ್ಗ ಜಿಲ್ಲೆಯಾಂದ್ಯಾತ ವಿಶೇಷವಾಗಿ ಶಹಾಬಾದ್ ಪಟ್ಟಣದಲ್ಲಿ ಇವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಕರ್ನಾಟಕದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ೧೯೭೧ ನೇಯ ಜನಗಣತಿ ಪ್ರಕಾರ ೩೮,೦೦೦ ಕೆರೆಗಳನ್ನು ಹಾಗೂ ೨೫,೦೦೦ ಶಿಲಾಶಾಸನಗಳನ್ನು ನಿರ್ಮಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.[೨೬] ಎಂದು ಲೇಖಕರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಸಂಗಳದ ಎಸ್. ಬಿ. (೨೦೧೪), ಅವರು ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಭೋವಿ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ

ರಾಜಕೀಯ ಸ್ಥಿತಿಗತಿ ಸಮುದಾಯದ ಸಂಪ್ರದಾಯ, ಭಾಷೆ, ವಾಸ್ತುಶಿಲ್ಪ ಕಲೆಗಳು, ಭೋವಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು, ಸಮುದಾಯದಲ್ಲಿ ಕೆಲಸ ಮಾಡುವ ಸಂಘಟನೆಗಳು ಹಾಗೂ ಸರಕಾರಿ ಸೌಲಭ್ಯಗಳು ಮತ್ತು ಪ್ರಚಲಿತ ಪರಿವರ್ತನೆ ಎಂಬ ಉದ್ದೇಶಗಳನ್ನು ಇಟ್ಟುಕೊಂಡು ಸಂಶೋಧಕರು ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದಲ್ಲಿ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಬಳ್ಳಾರಿ, ಚಿತ್ರದುರ್ಗ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿಯ ೫೧ ತಾಲ್ಲೂಕುಗಳನ್ನು ಬಳಸಿಕೊಂಡು ೧೫೩ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಭೋವಿ ಸಮುದಾಯದ ಹಿನ್ನೆಲೆ, ಭೋವಿ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ಜೀವನ, ಸಮುದಾಯದ ಸಂಪ್ರದಾಯ ಮತ್ತು ಆಚರಣೆಗಳು, ಸಂಘಟನೆ ಸೌಲಭ್ಯಗಳ ಕಡೆ ಗಮನ ಹರಿಸಿದ್ದಾರೆ. ರಾಜ್ಯದಲ್ಲಿನ ಸಮುದಾಯದ ಜನಸಂಖ್ಯೆಯಲ್ಲಿ ಕೋಲಾರ ಪ್ರಥಮ ನಂತರ ಚಿತ್ರದುರ್ಗ ಕ್ರಮವಾಗಿ, ಧಾರವಾಡ, ಬಳ್ಳಾರಿ, ಬಿಜಾಪೂರ, ಹಾವೇರಿ, ಗದಗ, ಬೆಳಗಾವಿ, ಬಾಗಲಕೋಟೆಗಳಲ್ಲಿ ಈ ಸಮುದಾಯದವರು ಇದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಮುಖ್ಯವಾಗಿ ಭೋವಿ ಸಮುದಾಯದ ಬಡತನ, ಅನಕ್ಷರತೆ, ಆರ್ಥಿಕ ಅಸಮಾನತೆ, ಅಂದಾನುಕರಣೆ, ಆರೋಗ್ಯ, ವಲಸೆ ಹಾಗೂ ವಸತಿ ಸಮಸ್ಯೆ, ಬಾಲ ಕಾರ್ಮಿಕ ಸಮಸ್ಯೆ, ಅಪರಾದ, ಮದ್ಯಪಾನ ಹಾಗೂ ಮಾದಕ ದ್ರವ್ಯಗಳ ಸೇವನೆ, ರಾಜಕೀಯದಲ್ಲಿ ಸ್ಥಾನಮಾನ ಪಡೆಯುವದರಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಭೋವಿ ಸಮುದಾಯದವರು ರಾಜ್ಯ ಮಟ್ಟದಲ್ಲಿ ಅಖಿಲ ಕರ್ನಾಟಕ ರಾಜ್ಯ ಭೋವಿ ಗುರುಪೀಠ ಬಾಗಲಕೋಟೆ, ಕರ್ನಾಟಕ ರಾಜ್ಯ ವಡ್ಡರ ಸಂಘ ಬೆಂಗಳೂರು, ಅಖಿಲ ಕರ್ನಾಟಕ ಭೋವಿ ಕ್ರಿಯಾ ಸಮಿತಿ ಎಂಬ ಸಂಘಟನೆಗಳಿವೆ. ಅಧ್ಯಯನದಲ್ಲಿ ಶೇಕಡ ೫೩.೦೬ ಪುರುಷರನ್ನು ಶೇಕಡ ೪೬.೯೪ ಮಹಿಳೆಯರನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಶೇಕಡ ೬೩ ರಷ್ಟು ಅವಿಭಕ್ತ ಕುಟುಂಬಗಳಿವೆ. ಸಮುದಾಯದಲ್ಲಿ ಅತೀ ಹೆಚ್ಚು ಶೇ. ೨೮.೯೨ ಕಲ್ಲು ಒಡ್ಡರು ಇದ್ದಾರೆ. ಸಾಕ್ಷರತೆ ಪ್ರಮಾಣ ೬೨.೬೮ ಶೇಕಡ ೪೩.೦೪ ರಷ್ಟು ಭೂಮಿ ಇಲ್ಲದವರು ಇದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಭೂರಹಿತ ಕುಟುಂಬಗಳ ಸಂಖ್ಯೆ ಶೇಕಡ ೮.೯೧ ಇದೆ. ಸಮುದಾಯದ ರಾಜಕೀಯ ಸ್ಥಾನಮಾನ ಗ್ರಾಮ ಪಂಚಾಯಿತಿಯಲ್ಲಿ ಶೇಕಡ ೧.೮೫, ತಾಲ್ಲೂಕು ಪಂಚಾಯಿತಿಯಲ್ಲಿ ಶೇಕಡ ೦.೪೮, ಜಿಲ್ಲಾ ಪಂಚಾಯಿತಿಯಲ್ಲಿ ೦.೨೧ ರಷ್ಟು ಮಾತ್ರ ಸದಸ್ಯರಿದ್ದಾರೆ. ಎಂದು ಫಲಿತಗಳಲ್ಲಿ ಸಂಶೋಧಕರು ವಿವರಿಸಿದ್ದಾರೆ.[೨೭] ಭೋವಿ ಸಮುದಾಯಕ್ಕೆ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಸ್ಥಾನಮಾನ ಕಲ್ಪಿಸಿಕೊಟ್ಟು ಭೂ ರಹಿತರಿಗೆ ಸರ್ಕಾರ ಭೂಮಿ ಕೊಡಬೇಕೆಂದು ಸಲಹೆಗಳನ್ನು ನೀಡಿದ್ದಾರೆ.

ಗಂಗಾಧರಯ್ಯ, (೨೦೦೭) ಅವರು **ಭೋವಿ ಸಮಾಜದ ಸಂಸ್ಕೃತಿ ಮತ್ತು ಕೊಡುಗೆಗಳು** ಎಂಬ ಪುಸ್ತಕದಲ್ಲಿ ಲೇಖಕರು ಭೋವಿ ಸಮುದಾಯದ ಐತಿಹಾಸಿಕ ಹಿನ್ನೆಲೆ, ಸಮುದಾಯದ

ಐತಿಹ್ಯ ಕಥೆಗಳು ಭೋವಿ ಪದದ ಅರ್ಥ ಐತಿಹಾಸಿಕವಾಗಿ ಭೋವಿ ಸಮುದಾಯದ ಸಾಂಸ್ಕೃತಿಕ ಕೊಡುಗೆಗಳು, ಸಂಪ್ರದಾಯಗಳು ಹಾಗೂ ಆಚರಣೆಗಳು, ಸಮುದಾಯ ಆರ್ಥಿಕವಾಗಿ ಬೆಳವಣಿಗೆ – ಯಾಗಲು ಸಮಾಜ ಹೇಗೆ ಪ್ರಮುಖ ಪಾತ್ರವಹಿಸುತ್ತದೆ. ಭೋವಿ ಸಮುದಾಯದಲ್ಲಿ ಮಣ್ಣುವಡ್ಡರು, ಕಲ್ಲುವಡ್ಡರು, ಬಂಡಿವಡ್ಡರು ಎಂಬ ಮೂರು ಪಂಗಡಗಳಿವೆ. ರಾಜಕೀಯ ಕ್ಷೇತ್ರದಲ್ಲಿ ಎಷ್ಟು ಪ್ರಮಾಣದಲ್ಲಿ ಗುರುತಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದಲು ಪ್ರಚಲಿತದವರೆಗೆ ಎಂದು ತುಲನಾತ್ಮಕವಾಗಿ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಸರ್ಕಾರದ ಸವಲತ್ತು ಪಡೆದಿರುವುದು ಲೇಖಕರು ವಿಶ್ಲೇಷಣೆ ಮಾಡುತ್ತ, ರಾಜಕೀಯ ಕ್ಷೇತ್ರದಲ್ಲಿ ಪ್ರಾಚೀನ ಮಧ್ಯಕಾಲೀನ ಹಾಗೂ ಆಧುನಿಕ ಯುಗಗಳನ್ನು ಒಳಗೊಂಡಂತೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬದಲಾವಣೆಗಳು ಎಂಬ ಅಧ್ಯಯನದಲ್ಲಿ ಬೆರಳಣಿಕೆಯಷ್ಟು ಸಮುದಾಯದಲ್ಲಿ ರಾಜರುಗಳಾಗಿ, ಸಾಮಂತ ರಾಜರಾಗಿ ಆಡಳಿತ ನಡೆಸಿರುವುದು ದಾಖಲೆ ಸಿಗುತ್ತದೆ. ಸಮುದಾಯದಲ್ಲಿ ರಾಜರುಗಳಾಗಿದ್ದವರು, ವಿಜಯನಗರ ಕಾಲದ ಸಮಕಾಲೀನರಾದ ಗಜಪತಿರಾಜು, ಗಂಗರ ಸಮಕಾಲೀನವಾದ ಚೋಡಗಂಗದೇವ ಮತ್ತು ಭಗೀರಥ ಎಂಬುವರು ಗುರುತಿಸಿಕೊಂಡಿದ್ದಾರೆ. ಭೋವಿ ಸಮುದಾಯದ ಅಭಿವೃದ್ಧಿ ಆಗ ಬೇಕಾದರೆ ರಾಜಕೀಯ ಕ್ಷೇತ್ರದಲ್ಲಿ ಸ್ಥಾನಮಾನ ಸಿಗದೆ ವಂಚಿತರಾಗಿದ್ದಾರೆ. ಅಧಿಕಾರ ಸ್ಥಾನಮಾನ ಪಡೆದ ಅಲ್ಪ ಜನರು ಮೇಲ್ವರ್ಗದ ಹಿಡಿತಕ್ಕೆ ಸಿಕ್ಕಿ ರಾಜಕೀಯ ಅಧಿಕಾರದಿಂದ ದೂರ ಉಳಿದಿದ್ದಾರೆ. ಸಮುದಾಯದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಇಂದಿನವರೆಗೆ ಇಬ್ಬರು ಲೋಕಸಭಾ ಸದಸ್ಯರು, ಮಹಿಳಾ ವಿಧಾನ ಸಭೆಯ ಸದಸ್ಯರು ಮೂರು ಜನ, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ೨೦ ಜನ ವಿಧಾನ ಸಭೆ ಸದಸ್ಯರಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಭಾರತದ ಭವ್ಯ ಪರಂಪರೆಯನ್ನು ನಿರ್ಮಾಣಮಾಡಿದ ಭೋವಿ ಸಮುದಾಯದವರು, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದು ಕರ್ನಾಟಕ ಸರ್ಕಾರದಲ್ಲಿ ಕೇವಲ ೨೫ ಜನರು ಮಾತ್ರ ರಾಜಕೀಯ ಕ್ಷೇತ್ರದಲ್ಲಿ ಸ್ಥಾನಮಾನದೊರಕಿದೆ. ೪೫ ರಿಂದ ೫೦ ಲಕ್ಷ ಜನಸಂಖ್ಯೆ ಇರುವ ಭೋವಿ ಸಮುದಾಯದಲ್ಲಿ ಕೊನೆ ಪಕ್ಷ, ೫ ಜನ ವಿಧಾನಸಭೆ ಸದಸ್ಯರಾಗಿ ಸ್ಥಾನಮಾನ ಪಡೆಯುವುದು ವೇದನೆಯ ಸಂಗತಿ.[೨೮] ಎಂದು ಸಂಶೋಧಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಬೆಟಗೇರಿ. ವೈ.ವೈ.(೧೯೯೯), ರವರು **ವಡ್ಡರ ಮೋಹಂಜೋದಾರೊ ಸಂಸ್ಕೃತಿಯವರು** ಎಂಬ ಲೇಖನದಲ್ಲಿ ಭೋವಿ ಸಮುದಾಯದವರು ಮೋಹಂಜೋದಾರೋ ಮತ್ತು ಹರಪ್ಪದಲ್ಲಿ ದೊರೆತಂತಹ ಚಿಪ್ಪುಕಲ್ಲು, ಪಿಂಗಾಣಿ, ತಾಮ್ರ, ಬೆಳ್ಳಿ, ಭೋವಿ ಸಮುದಾಯದವರು ಉಪಯೋಗಿಸುವುದು ಉಲ್ಲೇಖವಾಗಿದೆ. ಮಣ್ಣಿನಿಂದ ನಿರ್ಮಿತವಾದ ಹೆಣ್ಣು ದೇವತಾ ವಿಗ್ರಹಗಳು ಸಮುದಾಯದವರು ನಿರ್ಮಿಸಿದ್ದಾರೆ ಮತ್ತು ಸಮುದಾಯದವರು ಮೋಹೆಂಜೋದಾರೋ ಸಂಸ್ಕೃತಿಯವರನ್ನು

ಹೋಲುತ್ತಾರೆ ಎಂಬುವದರಲ್ಲಿ ಸಂದೇಹವಿಲ್ಲ.[೨೯] ಆದ್ದರಿಂದ ಇಲ್ಲಿ ದೊರೆತ ಮಾದರಿ ನಗರಗಳನ್ನು ನೋಡಿದಾಗ ಅಂತಹ ನಗರಗಳನ್ನು ನಿರ್ಮಿಸಿದರು. ಅದಕ್ಕೆ ಬೇಕಾದ ಸೈಜು ಕಲ್ಲುಗಳನ್ನು ಹೊಡೆದು ಗೋಡೆಗಳನ್ನು ಕಟ್ಟಿದವರು ಭೋವಿ ಸಮುದಾಯದವರು ಎಂದು ಬೆಟಗೇರಿಯವರು ವಿವರಿಸುತ್ತಾರೆ.

ಸ್ಟುವರ್ಟ್ ಮಿ.ಎಚ್.ಎ.(೧೯೯೯) ಅವರು **'ಒಡ್ಡೆ'** ಉತ್ತರ ಅರ್ಕಾಟ ಜಿಲ್ಲೆಯ ಕೈಫಿಯತ್ತಿನಲ್ಲಿ ದಾಖಲಿಸಿರುವಂತೆ ಭಾರತದ ಮೂಲ ನಿವಾಸಿಗಳೆಂದೆನಿಸಿಕೊಂಡು ಇವರನ್ನು ಒಡ್ಡೆ ಅಥವಾ ಒಡ್ಡರು, ವಡ್ಡರೆಂದು ಗುರುತಿಸುತ್ತಿದ್ದರು. ಯಾಕೆಂದರೆ ಇವರು ಪೂರ್ವಿಕವಾಗಿ ಕೆರೆಯ ಒಡ್ಡಗಳು, ಹಣಿಗಳಲ್ಲಿ ಕಲ್ಲುಗಳನ್ನು ತೆಗೆಯುವುದು, ಬಾವಿಗಳನ್ನು ತೋಡುವುದು ಮತ್ತು ಇತರೆ ಮಣ್ಣಿನ ಕೆಲಸಗಳನ್ನು ಭೋವಿ ಸಮುದಾಯ ತೀವ್ರವಾಗಿ ಮಾಡಿ ಮುಗಿಸುವ ಚಾಣಾಕ್ಷತೆಯನ್ನು ಪಡೆದಿದ್ದರು. ತೆಲುಗು ಭಾಷಿಕರು ಇವರು ಮೂಲತಃ ಓರಿಸ್ಸಾದಿಂದ ಬಂದ ಕಾರಣ, ಕರ್ನಾಟಕ ಮತ್ತು ಆಂದ್ರದಲ್ಲಿ ಒಡ್ಡ, ವಡ್ಡರು ಎಂಬ ಹೆಸರು ಅಸ್ಮಿತೆ ಪಡೆದುಕೊಂಡಿದೆ. ಇವರು ಬಹು ಮಿತವ್ಯಯಿಗಳಾಗಿದ್ದು, ನಂಬಿಕಸ್ಥರಾಗಿ ಕೆಲಸಮಾಡಿದ ನಂತರ ಬಂದ ಹಣದಿಂದ ಮದ್ಯಪ್ರಿಯರಾಗಿ ನಿಶೆಯಲ್ಲಿ ಮುಳಗಿ ಆನಂದ ಪಡೆಯುತ್ತಾರೆ. ಇದು ಹಣವಿರುವವರೆಗೆ ನಡೆದು ಹಣ ಖಾಲಿಯಾದಾಗ ಕೆಲಸದ ಕಡೆ ಮುಖ ಮಾಡಿ ನಂಬಿಕೆಯಿಂದ ಕೆಲಸ ಮಾಡಿ ಮಾಲೀಕರು ಕೊಟ್ಟಷ್ಟು ಹಣಕ್ಕೆ ತೃಪ್ತಿ ಪಟ್ಟುಕೊಳ್ಳುತ್ತಾರೆ.[೩೦] ತೆರೆದ ಹೃದಯಿಗಾಳಾಗಿ ತಮ್ಮ ವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ ಎಂದು ದಾಖಲೆಯಾಗಿದೆ.

ಕಲಬುರ್ಗಿ ಎಂ.ಎಂ.(೧೯೯೯) ಅವರು **ಮಣ್ಣುವಡ್ಡಿ ಜಾತಿ ಕೈಪಿಯತ್ತು, ಮೆಕೆಂಝಿ, ಸಂಪುಟ–೧೭೪ ರಲ್ಲಿ ಮಣ್ಣು ವಡ್ಡರ ಸಂಪ್ರದಾಯಗಳನ್ನು** ಉಲ್ಲೇಖಿಸಿದ್ದಾರೆ. ಸಮುದಾಯದಲ್ಲಿ ಕೂಸು ಹುಟ್ಟಿದರೆ ಒಲೆ ಆಯಿದು ಮನೆಸಾರಿಸಿ ಚೊಕ್ಕಟವಾಗಿ ಮಾಡಿ. ತೊಟ್ಟಿಲಲ್ಲಿ ಮಗುವನ್ನು ಹಾಕಿ ತಮ್ಮ ಬಂದು ಬಳಗದವರೆಲ್ಲ ಸೇರಿಕೊಂಡು ಊಟಮಾಡುವ ಪದ್ಧತಿಯನ್ನು ಬೆಳಸಿಕೊಂಡು ಬಂದಿದ್ದಾರೆ. ಮದುವೆಗಳನ್ನು ಭಾನುವಾರದ ದಿನದಲ್ಲಿ ಮಾಡುತ್ತಾರೆ. ಮದುವೆ ಹೆಣ್ಣಿಗೆ ಬಿಳಿ ಸೀರೆ, ಮೂಗುತಿ, ವಾಲೆಜೋಡು, ಒಂದು ಕರೆಮಣಿಸರ, ಕಂಕಣ, ಅರಶಿಣಪುಡಿ, ಮಾಲೆತೊಡಿಸಿ, ಅಕ್ಕಿಶಿದ್ದೆ, ಉತ್ತತ್ತಿ, ಅಡಿಕೆ, ಆಯಿದೆಲೆ, ವಿಳ್ಯದೆಲೆ ಹಾಕಿ. ಉಡಿ ತುಂಬಿಸಿ ಮುತ್ತೈದೆಯರು ಅಯಿದು ಕೂಡಿಸುವ ಪದ್ಧತಿ ಇದೆ. ಮಣ್ಣುವಡ್ಡರ ಕುಲ ಕಸುಬು ಗೋಡೆ ಕಟ್ಟೋದು, ಪುರುಷ ಮತ್ತು ಮಹಿಳೆಯರು ಸಹ ಕೂಡಿ ಗೋಡೆಹಾಕೋದು, ಮಣ್ಣುತರೋದು, ಕಟ್ಟಿಗೆಹೋರೆಗಳನ್ನು ತರುವ ಕೆಲಸ ಮಾಡುತ್ತಾರೆ.[೩೧] ಎಂದು ಕೈಪಿಯತ್ತಲ್ಲಿ ಲೇಖಕರು ಮಣ್ಣು ಒಡ್ಡರ ಸಂಪ್ರದಾಯಗಳು ಮತ್ತು ಕುಲ ಕಸುಬುಗಳ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ.

ಲಸ್ಕರಿ ಆರ್.ಎಸ್. (೧೯೯೯) ಅವರು ಪುರಾಣ ಇತಿಹಾಸಗಳಲ್ಲಿ ಒಡ್ಡರ ಅರಸು ಮತ್ತು ಆಧ್ಯಾತ್ಮಿಗಳು ಎಂಬ ಲೇಖನದಲ್ಲಿ ವಡ್ಡರ ರಾಜರು ಆಂಧ್ರಪ್ರದೇಶದ ಕೃಷ್ಣ, ಗುಂಟೂರು, ಜಿಲ್ಲೆಗಳಲ್ಲಿ ಸಾರ್ವಭೌಮರಾಗಿ ಮೊದಲ ಅರಸರು ಸಮುದಾಯದಲ್ಲಿ ಇದ್ದರು ಎಂದು ಕರೆಸಿಕೊಂಡಿದ್ದಾರೆ. ಸಮುದಾಯದ ಬಾಲನಾಗಮ್ಮನ ಸ್ಮರಣಾರ್ಥವಾಗಿ ಆಂಧ್ರಪ್ರದೇಶದ ಮೆಹಬೂಬನಗರ ವನವರ್ತಿ ತಾಲ್ಲೂಕಿನ ಪಾಣಿಗಲ್ ಹಳ್ಳಿಯಲ್ಲಿ ಒಂದು ಕೋಟೆ ಕಟ್ಟಲಾಗಿದೆ ಹಾಗೂ ದ್ವಾಪರ ಯುಗದಲ್ಲಿ ಮಹಾಭಾರತದ ಧರ್ಮರಾಜನಿಗೆ ಭೋವಿ ಸಮುದಾಯದ ಅರಸನು ಕಪ್ಪ ಕಾಣಿಕೆ ನೀಡಿದ ಬಗ್ಗೆ ಉಲ್ಲೇಖಿಸಿದ್ದಾರೆ. ಮತ್ತು ತ್ರೇತಾ ಯುಗದಲ್ಲಿ ಶ್ರೀರಾಮನಿಗೆ ರಾಜಧಾನಿ, ಲಂಕೆಗೆ ನಲ್ಲ ಮತ್ತು ನೇಲರು ರಾವಣನ ರಾಜಧಾನಿ ಲಂಕೆಗೆ ಹೋಗಲು ಬೇಕಾದ ಸೇತುವೆ ನಿರ್ಮಿಸಿದರೆಂದು ವಿವರಿಸುತ್ತಾ, ಭಾರತದ ಬಹುಪಾಲು ಕೋಟೆಗಳನ್ನು ಭೋವಿ ಸಮುದಾಯದವರು ನಿರ್ಮಿಸಿದ್ದಾರೆ. ಸಮುದಾಯದ ಕರ್ಮಯೋಗಿ ಸಿದ್ಧರಾಮ ಭೋವಿ ಸಮುದಾಯದ ಏಕೈಕ ಗುರು ಹಾಗೂ ಥರ್ಸಸ್ಟನ್ ಅವರು ಪ್ರಪಂಚದ ಪ್ರಮುಖ ನಗರಗಳಲ್ಲಿ ಭೋವಿ ಸಮುದಾಯದವರು ವಾಸವಾಗಿದ್ದಾರೆ ಮತ್ತು ಲಂಡನ್ ನಗರದಲ್ಲಿ ೧ ಲಕ್ಷ ಜನ ನಗರದ ಗೋಪುರ, ಅಣೆಕಟ್ಟು, ಕಾಲುವೆ, ಕೋಟೆ, ಕೊತ್ತಲ, ರಸ್ತೆಗಳನ್ನು ನಿರ್ಮಿಸಿದ ಸಂಗತಿಗಳನ್ನು ವಿಶ್ಲೇಷಿಸುತ್ತ ೧೦೩೦ ರಲ್ಲಿ ಘಜನಿ ಮಹ್ಮದ್, ಘೋರಿ ಮಹ್ಮದ್ ಅವರು ಭೋವಿ ಸಮುದಾಯದವರನ್ನು ರಷ್ಯ ದೇಶಕ್ಕೆ ಕರೆದುಕೊಂಡು ಹೋಗಿ ಕೋಟೆ ಅರಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ.[೨] ಎಂದು ಇತಿಹಾಸದಲ್ಲಿರುವ ಉಲ್ಲೇಖಗಳನ್ನು ಇಟ್ಟುಕೊಂಡು ಭೋವಿ ಸಮುದಾಯದ ಚಿತ್ರಣವನ್ನು ಬಿಡಿಸುತ್ತಾರೆ.

ಪ್ರದೀಪ ಕುಮಾರ್ ಕಡ್ನೊಲ್ (೨೦೧೪) "ಚಿತ್ರದುರ್ಗದಲ್ಲಿ ಸಮುದಾಯ ರಾಜಕೀಯವು ಪ್ರಮುಖ ಪಾತ್ರ ವಹಿಸುತ್ತದೆ" ಚಿತ್ರದುರ್ಗದ ೨೦೧೪ರ ಲೋಕಸಭೆ ಚುನಾವಣೆಯನ್ನು ಗಮನಿಸಿದಾಗ, ಜೆಡಿಎಸ್ ಪಕ್ಷದಿಂದ ಭೋವಿ ಸಮುದಾಯದ ಮಾಜಿ ಕ್ರೀಡ ಸಚಿವ ಗೂಳಿಹಟ್ಟಿ ಡಿ. ಶೇಖರ್, ಬಿಜೆಪಿ ಪಕ್ಷದದಿಂದ ಹಾಲಿ ಸಂಸದ ಜನಾರ್ಧನ ಸ್ವಾಮಿಯವರಿಗೆ ಈ ಎರಡು ಪಕ್ಷಗಳು, ಇವರನ್ನ ಕಣಕ್ಕೆ ಇಳಿಸಿರುವುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ. ಈ ಕ್ಷೇತ್ರ ಪರಿಶಿಷ್ಟ ಜಾತಿಗೆ ಮೀಸಲಿರಿಸಲಾಗಿದ್ದು, ಚಿತ್ರದುರ್ಗದ ಆರು ಅಸೆಂಬ್ಲಿ ವಿಭಾಗಗಳು ಮತ್ತು ತುಮಕೂರು ಜಿಲ್ಲೆಯ ಎರಡು ಆಸೆಂಬ್ಲಿ ವಿಭಾಗಗಳನ್ನು ಒಳಗೊಂಡಿದೆ. ಜನಾರ್ಧನಸ್ವಾಮಿ ಮತ್ತು ಗೂಳಿಹಟ್ಟಿ ಡಿ. ಶೇಖರ್ ರವರು ಭೋವಿ ಸಮುದಾಯಕ್ಕೆ ಸೇರಿದ ಕಾರಣ ಕಾಂಗ್ರಸ್ ಪಕ್ಷದಿಂದ ಯಾರನ್ನು ಕಣಕ್ಕೆ ಇಳಿಸಬೇಕು ಎನ್ನುವ ಗೊಂದಲದಲ್ಲಿ ಇದ್ದಾರೆ. ಈ ಲೋಕಸಭೆ ಕ್ಷೇತ್ರ ೧೪ ಲಕ್ಷ ಮತದಾರರನ್ನು ಹೊಂದಿದೆ. ಕಾಂಗ್ರೇಸ್ ಸ್ಕೀನಿಂಗ್ ಸಮಿತಿಯಿಂದ ಆಯ್ಕೆಯಾದವರು ತಿಪ್ಪೇಸ್ವಾಮಿ ಹೆಚ್, ಹನುಮಂತಪ್ಪ, ಚಂದ್ರಪ್ಪ, ಮತ್ತು ಭೋವಿ ಸಮುದಾಯದ ವೆಂಕಟರಮಣಪ್ಪನವರು

ಇದ್ದಾರೆ. ಇವರಲ್ಲಿ ಯಾರನ್ನು ಕಣದಲ್ಲಿರಿಸಬೇಕು ಎನ್ನುವ ಗೊಂದಲದಲ್ಲಿದ್ದಾರೆ. ಕಾಂಗ್ರೆಸ್ ಪಕ್ಷದವರು ಸ್ಥಳೀಯ ಅಭ್ಯರ್ಥಿಗೆ ಆದ್ಯತೆ ಕೊಡಬೇಕು ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ. ಜಿಲ್ಲೆಯಲ್ಲಿ ಬಿಜೆಪಿಯ ಅಲೆಯ ಪಕ್ಷದ ಅಭ್ಯರ್ಥಿಯ ವಿಜಯಕ್ಕೆ ಪ್ರಮುಖ ಕೊಡುಗೆ ನೀಡಿದೆ. ಕಾಂಗ್ರೆಸ್‌ನಲ್ಲಿ ಹಾಲಿ ಐದು ಶಾಸಕರು ಮತ್ತು ಇಬ್ಬರು ಮಂತ್ರಿಗಳಿದ್ದಾರೆ. ಆದರೆ ಗೆಲುವು ಯಾರು ಪಡೆದು ರಾಜಕೀಯ ಸ್ಥಾನವನ್ನು ಹೊಂದುತ್ತಾರೆ.[೩೩] ಎನ್ನುವ ವಿಷಯಗಳನ್ನು ವರದಿ ಮಾಡಿದ್ದಾರೆ.

ವಾಸವಿ ಎ.ಆರ್.(ಮೂಲ) ಪ್ರಶಾಂತ್ ಎಚ್.ಡಿ.(ಅನುವಾದ) ಸಾಮಾಜಿಕ ಆಕಾರ ರೇಖೆ **'ಜಾತಿ ಅವಮಾನ ಮತ್ತು ವ್ಯಕ್ತಿತ್ವ'** ಈ ಲೇಖನವು ಜಾತಿಯಿಂದ ಆಗುವ ಅವಮಾನ, ದೌರ್ಜನ್ಯ ಮತ್ತು ಅಸಮಾನತೆ ಪರಿಶಿಷ್ಟ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಮತ್ತು ಗುಂಪುಗಳ ಜನರ ವ್ಯಕ್ತಿತ್ವದ ಮೇಲೆ ಮಾಡುವ ಪರಿಣಾಮಗಳು ಹಾಗೂ ಅವರು ಹೇಗೆ ಬದುಕುತ್ತಿದ್ದಾರೆ ಎಂಬುದನ್ನು ಕುರಿತು ಕೆಲವು ಸೂಚನೆಗಳನ್ನು ಸೂಚಿಸುತ್ತದೆ. ಜಾತಿ ಪದ್ಧತಿಯು ಸೂಚಿಸುವ ಅಸ್ಪೃಶ್ಯತೆ ಮತ್ತು ಅದರ ಕಲುಷಿತ ನಿಮಯಗಳಿಗೆ ಶ್ರೇಣಿ ವ್ಯವಸ್ಥೆಯಲ್ಲಿ ಒಳಪಡುವವರ ಮೇಲೆ ಜಾತಿ ಪದ್ದತಿಯು ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದನ್ನು 'ಬೆರಿಮಾನ್' ಹೀಗೆ ಗುರುತಿಸುತ್ತಾರೆ. ಎಂದು ಮಾನವ ನೆಲೆಯಲ್ಲಿ ಜಾತಿಯ ಅನುಭವಗಳು ಅಧಿಕಾರ ಮತ್ತು ಶೋಷಣೆ, ಸ್ವಾತಂತ್ರ್ಯ ಮತ್ತು ದಬ್ಬಾಳಿಕೆ, ಗೌರವ ಮತ್ತು ನಿಂದನೆ, ಸಮೃದ್ಧಿ ಮತ್ತು ಅಭಾವ, ಇನಾಮು ಮತ್ತು ಕಳೆದುಕೊಳ್ಳುವಿಕೆ, ಪ್ರಬಲ ಮತ್ತು ದುರ್ಬಲ, ಭದ್ರತೆ ಮತ್ತು ಆತಂಕ ಎಂಬ ಅರ್ಥದಲ್ಲಿದೆ. ಇಂತಹ ಪ್ರಾತಿನಿಧಿಕ ಜೀವಂತ ಅನುಭವಗಳ ವಿವರಣೆಯು ಪ್ರಮುಖವಾಗಿ ಜಾತಿಯು ಒಂದು ಶ್ರೇಣಿ ವ್ಯವಸ್ಥೆಯಾಗಿ ಜನರ ಸ್ಥಾನವು ವಿವಿಧ ಜಾತಿಗಳ ನಡುವಿನ ಸಂಬಂಧದ ಮೂಲಕ ಹೇಗೆ ವಿನ್ಯಾಸಗೊಳ್ಳುತ್ತದೆ ಎಂಬುದನ್ನು ಮಾತ್ರ ತಿಳಿಸದೆ. ಅವರ ಅನನ್ಯತೆ, ವ್ಯಕ್ತಿತ್ವ ಮತ್ತು ಸ್ವಮಾನ್ಯತೆಯನ್ನು ಕೂಡ ತಿಳಿಸುತ್ತದೆ.[೩೪]

ಜಾವಿದ್ ಆಲಂ (ಮೂಲ) ಡಾ.ಎ ಶ್ರೀಧರ (ಅನುವಾದ) (೨೦೧೦) ಯಾರಿಗೆ ಪ್ರಜಾ ಪ್ರಭುತ್ವ 'ದಮನಿತ ಜಾತಿಗಳಲ್ಲಿ ಅಸ್ಮಿತೆಯ ರೂಪೀಕರಣ' ಈ ಲೇಖನವನ್ನು ಅಧ್ಯಯನ ಮಾಡಿದಾಗ, ಮೇಲುಜಾತಿಗಳು ಶೋಷಿತ ಸಮುದಾಯಗಳಿಗೆ ಅಧಿಕಾರವನ್ನು ಕೊಡದೆ ಉತ್ಪಾದಕರಾಗಿ ರೈತರನ್ನು, ಕೃಷಿ ಕಾರ್ಮಿಕರನ್ನು ಮತ್ತು ಶ್ರಮಿಕವರ್ಗದವರು ಮೇಲ್ಜಾತಿಯವರ ಅಬಲಂಬನೆ ಇಲ್ಲದೆ ಬದುಕಲು ಕಷ್ಟವಾದಂತಹ ಸನ್ನಿವೇಶವಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಏನೇ ನಿಯಮಗಳಿದ್ದರು ಅವು ಕಾರ್ಯರೂಪಕ್ಕೆ ತರಲು ಆಗುತ್ತಿಲ್ಲ. ಇಂದು ಕಾರ್ಮಿಕರು, ದಲಿತರು ಓಬಿಸಿಗಳು ಆಳಿಸಿಕೊಳ್ಳುವ ವರ್ಗವಾದರು. ಉತ್ಪಾದಕ ವರ್ಗದೊಂದಿಗೆ ನೇರವಾಗಿ ಗುರುತಿಸಿಕೊಂಡಿರುವುದನ್ನು ನೋಡಬಹುದು. ಸಮುದಾಯಗಳಲ್ಲಿ ಹಿಂದೆ ಇಂದಂತಹ ಕೆಲವು ಗುಣಗಳು, ನಿರ್ದಿಷ್ಟ ಲಕ್ಷಣಗಳು

ಇಂದು ಅವು ಮುಂದುವರೆದಿಲ್ಲ ಕೆಲವು ಮಾತ್ರ ಇವೆ. ಆದ್ದರಿಂದ ಆ ವರ್ಗಗಳು ತಮ್ಮ ಅಸ್ಮಿತೆಯನ್ನು ಕಳೆದುಕೊಂಡಿವೆ. ಆದ್ದರಿಂದ ಇಟಲಿ, ಪೋಲಿಶ್, ಅಥಾವ ಐರಿಶ್ ಸಮುದಾಯಗಳಂತೆ ಇಲ್ಲೂ ಉಳ್ಳವರು ಮತ್ತು ಇಲ್ಲದವರು ಎಂಬ ಎರಡು ಗುಂಪುಗಳನ್ನು ನೋಡಬಹುದು. ಆದ್ದರಿಂದ ಜಾತಿಯನ್ನು ಉಳಿಸಿಕೊಳ್ಳಲು ಏನು ಮಾಡಬೇಕು ಇಂದಿನ ರಾಜಕಾರಣದಲ್ಲಿ ಶೋಷಿತ ಸಮುದಾಯಗಳ ಪಾತ್ರವನ್ನು ಹೇಗೆ ನಿರ್ವಹಿಸಬೇಕು ಎನ್ನುವ ವಿಚಾರವನ್ನು ತಿಳಿದು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಈ ಮೇಲಿನ ವಿಚಾರಗಳನ್ನು ಗಮನಿಸಿದಾಗ ಶೋಷಣೆಗೆ ಹೋಳಗಾಗಿರುವಂತಹ ಈ ಕೆಳಜಾತಿಗಳನ್ನು ಗುರುತಿಸಲು ಮೇಲ್ಜಾತಿಗಳು ನಿರಾಕರಿಸಿರುವುದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ಮೌಲ್ಯಗಳಿಗೆ ಅರ್ಥವಿಲ್ಲದಂತಾಗಿದೆ. ಆದರೂ ಸಹ ಈ ಹಿಂದೆ ಬ್ರಾಹ್ಮಣರು ಇತರರ ಮೇಲೆ ಅಧಿಕಾರ ಚಲಾಯಿಸಿದ ರೀತಿಯಲ್ಲಿ ಇಂದು ಅದೇ ಅಧಿಕಾರವನ್ನು ಪಡೆಯಬೇಕು ಎನ್ನುವ ಆತುರದಲ್ಲಿದ್ದಾರೆ. ಆದರೆ ಇವರಿಗೆ ಸಂವಿಧಾನದಲ್ಲಿ ಮೀಸಲಾತಿಯನ್ನು ಕೊಟ್ಟಿದ್ದರಿಂದ ಸ್ವಲ್ಪ ಪ್ರಮಾಣದಲ್ಲಿ ಬದಲಾವಣೆಯಾಗಿರಬಹುದು. ಆದರೆ ಪೂರ್ಣ ಪ್ರಮಾಣದಲ್ಲಿ ಶೋಷಿತ ಸಮುದಾಯಗಳಿಗೆ ನ್ಯಾಯ ದೊರಕಿಲ್ಲ. ಆದ್ದರಿಂದ ಇವರ ಅಭಿವೃದ್ಧಿಯನ್ನು ಗಮನಿಸಿದರೆ ಜಾತಿಯಲ್ಲಿರುವಂತಹ ಮಾಹಿತಿಯ ಕೊರತೆಯಿಂದ ಇನ್ನು ಇವರು ತಮ್ಮನ್ನು ತಾವು ಗುರುತಿಸಿ ಕೊಳ್ಳಲು ಸಾಧ್ಯವಾಗುತ್ತಿಲ್ಲ. ಮೇಲ್ಜಾತಿಗಳು ಹಿಂದುತ್ವದೊಂದಿಗೆ ಗುರುತಿಸಿ ಕೊಳ್ಳುವದರಿಂದ ಸಮಾನತೆಯ ಸಮರದಲ್ಲಿ ಮುಸ್ಲಿಂ ಮತ್ತು ಓಬಿಸಿ ಗಳು ದಲಿತರ ಜೊತೆ ಸೇರುವ ಪರಿಸ್ಥಿತಿ ಬಂದಿದೆ.[೫೫] ಆದ್ದರಿಂದ ಇವತ್ತು ಪ್ರತಿ ಸಮುದಾಯವು ಸಹ ತನ್ನ ಅಧಿಕಾರ ಆಂತರಿಕ ಸಂಬಂಧವನ್ನು ಉಳಿಸಿಕೊಳ್ಳುವ ಅಂತರದಲ್ಲಿದೆ.

ಮಾನವ ಅಭಿವೃದ್ಧಿ ವರದಿ ೨೦೧೪ ಪರಿಶಿಷ್ಟ ಜಾತಿ & ಪಂಗಡಗಳ ಸ್ಥಿತಿಗತಿ ಚಿತ್ರದುರ್ಗ ಜಿಲ್ಲಾ ಪಂಚಾಯತ್ ಕರ್ನಾಟಕ ಸರ್ಕಾರ ಈ ವರದಿಯನ್ನು ಅಧ್ಯಯನ ಮಾಡಿದಾಗ, ಚಿತ್ತದುರ್ಗ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಶೇಕಡ ೨೩.೪೫ ರಷ್ಟಿದ್ದು, ಪರಿಶಿಷ್ಟ ಪಂಗಡದವರು ಶೇಕಡ ೧೮.೨೩ ರಷ್ಟು ಇರುವುದನ್ನು ಕಾಣಬಹುದು ಮತ್ತು ಇತರೆ ಸಮುದಾಯದವರು ಶೇಕಡ ೫೮.೩೨ರಷ್ಟು ಇರುವುದನ್ನು ನೋಡಬಹುದು. ಇನ್ನು ತಾಲ್ಲೂಕುವಾರು ನೋಡುವುದಾದರೆ ಪರಿಶಿಷ್ಟ ಜಾತಿಯವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹೊಳಲ್ಕೆರೆ ತಾಲ್ಲೂಕಿನಲ್ಲಿ ಶೇಕಡ ೨೭.೩೭ ರಷ್ಟು ಇರುವುದನ್ನು ನೋಡಬಹುದು. ನಂತರ ಹಿರಿಯೂರು ೨೫.೦೭, ಚಿತ್ರದುರ್ಗ ೨೩.೯೫, ಚಳ್ಳಕೆರೆ ೨೨.೬೬, ಹೊಸದುರ್ಗ ೨೦.೫೩, ಇದ್ದರೆ ಕೊನೆಯಸ್ಥಾನವನ್ನು ೧೯.೭೮.ರಷ್ಟು ಮೊಳಕಾಲ್ಮೂರು ತಾಲ್ಲೂಕು ಇರುವುದನ್ನು ನೋಡಬಹುದು. ಪರಿಶಿಷ್ಟ ಪಂಗಡದವರನ್ನು ನೋಡುವುದಾದರೆ ಜಿಲ್ಲೆಯ ಮೊಳಕಾಲ್ಮುರು ತಾಲೂಕಿನಲ್ಲಿ ಶೇಕಡ ೭೩.೫ರಷ್ಟು ಅತಿ ಹೆಚ್ಚಿನ ಸಂಖ್ಯೆಯಲ್ಲಿದೆ. ನಂತರದ ಸ್ಥಾನ ಚಳ್ಳಕೆರೆ ೨೯.೪, ಚಿತ್ರದುರ್ಗ ೧೬.೪೩, ಹೊಳಲ್ಕೆರೆ ೧೨.೩,

ಹಿರಿಯೂರು ೯.೮ ರಷ್ಟು ಇದ್ದಾರೆ. ಕೊನೆಯಸ್ಥಾನವನ್ನು ಹೊಸದುರ್ಗ ೮.೧ ಪಡೆದಿರುವುದನ್ನು ನೋಡಬಹುದು. ಇನ್ನು ಜಿಲ್ಲೆಯಲ್ಲಿ ಪ್ರಾಥಮಿಕ & ಪ್ರೌಢ ಶಾಲೆಗಳ ದಾಖಲೆಯನ್ನು ಗಮನಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದಾಖಲೆ ಗಣನೀಯವಾಗಿ ಏರಿಕೆ ಕಂಡಿರುವುದನ್ನು ಗಮನಿಸಬಹುದು. ಅತಿ ಹೆಚ್ಚಿನ ಭೂ ಹಿಡುವಳಿ ಹೊಂದಿದವರ ಪೈಕಿ ಪರಿಶಿಷ್ಟ ಪಂಗಡಗಳು, ಪರಿಶಿಷ್ಟ ಜಾತಿಗಳಿಗಿಂತ ಉತ್ತಮವಾಗಿ ಇರುವುದು ಕಂಡುಬರುತ್ತದೆ. ಆದರೆ ಇಲ್ಲಿರುವ ಕಹಿಸತ್ಯವೆಂದರೆ, ಪರಿಶಿಷ್ಟ ಪಂಗಡಗಳು ಕಾಡುಗಳಲ್ಲಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಮಾಡುವುದರಿಂದ ಅ ಪ್ರದೇಶ ಸರ್ಕಾರದ ಸ್ವತ್ತು ಆಗಿದೆಯೇ ಹೊರತು ಅವರ ಅದೀನದಲ್ಲಿಲ್ಲ. ಇನ್ನು ವಸತಿ ಬಗ್ಗೆ ಗಮನಿಸಿದರೆ ಪರಿಶಿಷ್ಟ ಜಾತಿ ವಸತಿ ರಹಿತರ ಪೈಕಿ ಅತ್ಯಂತ ಹೆಚ್ಚು ನೋಂದಾಯಿತ ಸಂಖ್ಯೆಯು ಚಿತ್ರದುರ್ಗದಲ್ಲಿ ಶೇಕಡ ೨೮.೩೦ ಕಂಡುಬಂದರೆ ನಂತರ ಹಿರಿಯೂರು ಶೇ.೨೫.೫೭ ಹೊಳಲ್ಕೆರೆ ೨೫.೫೨ ಚಳ್ಳಕೆರೆ ಶೇ.೨೫.೦೧ ಮೊಳಕಾಲ್ಮೂರು ಶೇ.೨೩.೫೪ ಇದ್ದರೆ ಕೊನೆಯಸ್ಥಾನದಲ್ಲಿ ಹೊಸದುರ್ಗ ಶೇ.೨೧.೮ ರಷ್ಟು ಇರುವುದನ್ನು ಈ ಮಾನವ ಅಭಿವೃದ್ಧಿ ವರದಿಯಲ್ಲಿ ಗಮನಿಸಬಹುದು.[೩೬]

ಚಂದ್ರಪೂಜಾರಿ ಎಂ. "ರಾಜಕೀಯದ ಬಡತನ" ರಾಜಕೀಯ ಅಧಿಕಾರದ ನಕರಾತ್ಮಕ ಚಿತ್ರಣಕ್ಕೆ ಕಾರಣವಾದ ಅಂಶಗಳನ್ನು ಚರ್ಚಿಸಲಾಗಿದೆ. ರಾಜಕೀಯ ಅಧಿಕಾರವನ್ನು ನಕರಾತ್ಮಕವಾಗಿ ಕಟ್ಟಿಕೊಡುವಲ್ಲಿ ಎರಡು ಸಂಗತಿಗಳು ಪ್ರಮುಖ ಪಾತ್ರ ವಹಿಸಿವೆ. ಒಂದು ದಿನ ನಿತ್ಯದ ಬದುಕಿನಲ್ಲಿ ಆಚರಣೆಯಲ್ಲಿರುವ ರಾಜಕೀಯ ಅಧಿಕಾರವನ್ನು ತುಂಬಾ ಸೀಮಿತ ನೆಲೆಯಲ್ಲಿ ಕಟ್ಟಿಕೊಡುವ ಸಮಾಜ ಅಧ್ಯಯನಗಳ ಕೊಡುಗೆ ಬಗ್ಗೆ ವಿವರಿಸಿದ್ದಾರೆ. ವರ್ಗ ಪ್ರಶ್ನೆಗಳನ್ನು ಬದಿಗೊತ್ತಿ ಜಾತಿ, ಧರ್ಮ, ಭಾಷೆ ಇತ್ಯಾದಿಗಳ ನೆಲೆಯಲ್ಲಿ ಜನ ಬೆಂಬಲಕ್ಕೆ ಪ್ರಯತ್ನಿಸುವಾಗ ಬಡತನವನ್ನು ಅಮೂಲಾಗ್ರವಾಗಿ ನಿವಾರಿಸುವ ಪ್ರಶ್ನೆ ಮೂಲೆ ಗುಂಪಾಗುತ್ತದೆ. ನಕರಾತ್ಮಕ ರಾಜಕೀಯ ಮತ್ತು ಅಧಿಕಾರದ ಕಲ್ಪನೆಗಳು ಯಾವ ಬಗೆಯ ಅಭಿವೃದ್ಧಿಯನ್ನು ಕಳೆದ ೫೦ ವರ್ಷಗಳಲ್ಲಿ ಕರ್ನಾಟಕದಲ್ಲಿ ಕಾರ್ಯರೂಪಕ್ಕೆ ತಂದಿವೆ ಎನ್ನುವುದು ವಿಶ್ಲೇಷಣೆಯನ್ನು ಮತ್ತು ಬಹುಜನ ರಾಜಕೀಯ ಅಥವಾ ಆದರ್ಶ ರೂಪದ ರಾಜಕೀಯದ ಕಿರುಪರಿಚಯವನ್ನು ವಿವರಿಸಿದ್ದಾರೆ.[೩೭]

ಎಂ. ಚಂದ್ರಪೂಜಾರಿ, "ಬಡತನ ಮತ್ತು ಪ್ರಜಾಪ್ರಭುತ್ವ" ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ನಡುವಿನ ಈ ವೈರುದ್ಯಗಳನ್ನು ಪರಿಹರಿಸಿಕೊಳ್ಳಲು ರಾಜಕೀಯ ಪಕ್ಷಗಳು ಹಲವು ಒಳದಾರಿಗಳನ್ನು ಕಂಡುಕೊಂಡಿವೆ. ಅವುಗಳಲ್ಲಿ ಗುರುತಿನ ರಾಜಕೀಯ, ಸಾಂಸ್ಕೃತಿಕ ರಾಜಕೀಯ, ಲಿಂಗ ತಾರತಮ್ಯ, ಶಿಕ್ಷಣ ಮಾಧ್ಯಮಗಳು ಪ್ರಮುಖ ಪಾತ್ರವಹಿಸುತ್ತಿವೆ. ಜಾತಿ, ಧರ್ಮಗಳ ಗುರುತಿನ ರಾಜಕೀಯ ಹಾಗೂ ದುಡ್ಡಿನ ಬಲಗಳು ಪ್ರಜಾಪ್ರಭುತ್ವ ಮತ್ತು ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ನಡುವಿನ

ವೈರುಧ್ಯಗಳನ್ನು ಪರಿಹರಿಸಲು ಬಳಕೆಯಾಗುತ್ತಿರುವುದು ಬಹು ಚರ್ಚಿತ ವಿಷಯ. ಅದು ಸುಲಭದಲ್ಲಿ ಅರ್ಥವಾಗುವ ಸಂಗತಿ. ಆದರೆ ಹಲವು ಬಗೆಯ ಅಸಮಾನತೆಗಳನ್ನು ಸೃಷ್ಟಿಸುವ ಅಭಿವೃದ್ಧಿಯನ್ನು ಜಾರಿಗೆ ತರಲು ಇವಷ್ಟೇ ಸಾಕಾಗುವುದಿಲ್ಲ. ಇವುಗಳ ಜೊತೆಗೆ ಏನೇನೂ ಬಂಡವಾಳ ವಿನಿಯೋಜಿಸದೆ ಮಹಿಳೆಯರ ಶ್ರಮವನ್ನು ಬಳಸಲು ಅನುವು ಮಾಡಿಕೊಡುವ ನಮ್ಮ ಸಂಸ್ಕೃತಿ ಕಲ್ಪನೆಗಳು, ತಮ್ಮ ಸ್ಥಾನಮಾನ ಹಾಗೂ ಗುರುತಿನ ಬಗ್ಗೆ ಕೀಳರಿಮೆ ಹೊಂದಿ ಅತಿ ಕಡಿಮೆ ಬೆಲೆಗೆ ತಮ್ಮ ಶ್ರಮವನ್ನು ವಿನಿಮಯ ಮಾಡಿಕೊಳ್ಳಲು ರೆಡಿಯಾಗುವ ತಳಸ್ತರದ ಜನರನ್ನು ಸೃಷ್ಟಿಸುವ ಸಾಂಸ್ಕೃತಿಕ ರಾಜಕೀಯ ಉತ್ಪಾದನೆ ಮತ್ತು ಮಾರುಕಟ್ಟೆ ಪರದಿಯಲ್ಲೊಂದು ಕೊಂಡಿಯಾಗಲು ತರಬೇತಿ ನೀಡುವ ಶಿಕ್ಷಣ ಇವೆಲ್ಲವೂ ಪ್ರಜಾಪ್ರಭುತ್ವ ಮತ್ತು ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ನಡುವಿನ ವೈರುಧ್ಯಗಳನ್ನು ಪರಿಹರಿಸಲು ತಮ್ಮದೇ ರೀತಿಯಲ್ಲಿ ಸಹಕರಿಸುತ್ತಿವೆ. ಇವುಗಳೊಂದಿಗೆ ಮಾಧ್ಯಮ ಕೂಡ ಉಳ್ಳವರ ಆಸಕ್ತಿಗಳನ್ನು ಬೆಳೆಸುವ ಅಭಿವೃದ್ಧಿಗೆ ಜನಬೆಂಬಲ ಗಳಿಸಿಕೊಡಲು ತನ್ನದೆ ರೀತಿಯಲ್ಲಿ ಪ್ರಯತ್ನಿಸುತ್ತಿದೆ[೩೮] ಎಂದು ವಿವರಿಸಿದ್ದಾರೆ.

ಮೊಗಳ್ಳಿ ಗಣೇಶ್(೨೦೦೬) "ಆಧುನಿಕತೆಯನ್ನು ಬೆನ್ನು ಹತ್ತಿದ ದಲಿತರು" ದಲಿತ ಮತ್ತು ಶೋಷಿತ ವರ್ಗದವರ ಸಾಮಾಜಿಕ ಜೀವನ ಚಿತ್ರಣವನ್ನು ಒಳಗೊಂಡಿದ್ದು, ಸಂಶೋಧನಾ ಅಧ್ಯಯನದ ದೃಷ್ಟಿಯಿಂದ ಒಂದು ಉತ್ತಮ ಪರಾಮರ್ಶನ ಕೃತಿಯಾಗಿದೆ. ಈ ಕೃತಿಯಲ್ಲಿ ದಲಿತರು ಪ್ರಾಚೀನ ಕಾಲದಿಂದಲೂ ಅನೇಕ ಅನರ್ಹತೆಗೆ ಹಾಗೂ ಶೋಷಣೆಗೆ ಒಳಗಾಗಿ ತಮ್ಮ ಜೀವನವನ್ನು ಸಾಗಿಸುತ್ತಾ ಬಂದಿದ್ದಾರೆ. ಸ್ವಾತಂತ್ರ್ಯ ನಂತರ ಸಂವಿಧಾನ ರಕ್ಷಣೆಯಲ್ಲಿ ಶಿಕ್ಷಣ ರಾಜಕೀಯವಾಗಿ ಮೀಸಲಾತಿ ಹಾಗೂ ಶಿಕ್ಷಣ ಕೈಗಾರೀಕರಣ, ನಗರೀಕರಣ, ಆಧುನೀಕರಣ ಹಾಗೂ ಪ್ರಾಚ್ಯತ್ತೀಕರಣಗಳ ಪ್ರಭಾವದಿಂದ ದಲಿತರು ಪ್ರಸ್ತುತ ದಿನಗಳಲ್ಲಿ ಯಾವ ರೀತಿ ಬದಲಾವಣೆ ಪ್ರಕ್ರಿಯೆಗೆ ಒಳಗಾಗುತ್ತಿದ್ದಾರೆ[೩೯] ಎನ್ನುವ ಅಂಶವನ್ನು ನಮ್ಮ ಮುಂದಿಟ್ಟಿದ್ದಾರೆ. **ಲೊಲೀಡ್ ಐ ರೋಡೂಲ್‌ಪೋ "ಎಕ್ಸ್‌ಪ್ಲೇನಿಂಗ್ ಇಂಡಿಯನ್ ಡೆಮಾಕ್ರಸಿ" ಆಕ್ಸ್‌ಫರ್ಡ್ ಯೂನಿವರ್ಸಿ ಪ್ರೆಸ್** ಜಾತಿ ಎಂಬುದು ಭಾರತೀಯ ರಾಜಕೀಯ ಅಧ್ಯಯನಕ್ಕೆ ಪೂರಕವಾದುದು. ಜಾತಿ ಎಂಬುದು ಒಂದು ಆಸಕ್ತಿ ಗುಂಪು ಅಥವಾ ಒಂದು ವರ್ಗವಲ್ಲ. ರಾಜಕೀಯ ಶಾಸ್ತ್ರದಲ್ಲಿ ಸ್ಥಾಪಿಸಲಾದ ಒಂದು ವರ್ಗ. ಜಾತಿಯನ್ನು ಚಾರಿತ್ರಿಕವಾಗಿ ಭಾರತದಲ್ಲಿ ಅಧ್ಯಯನ ಮಾಡಿದಾಗ ಎರಡು ಅಂಶಗಳು ತಿಳಿದುಬರುತ್ತದೆ. ೧. ಜಾತಿ ಒಂದು ಆ್ಯಂಟಿ ಕ್ಯಾಸ್ಟ್ ಮತ್ತು ೨. ಜಾತಿ ಪ್ರಭುತ್ವವನ್ನು ಬಲಗೊಳಿಸುತ್ತದೆ.೪೦ ಎಂದು ಐಡೆಂಟಿಟಿ ಪಾಲಿಟಿಕ್ಸ್‌ನಲ್ಲಿ ತಿಳಿಸಿದ್ದಾರೆ. **ಬಾಲಾಜಿ ಸಿಂಗ್, "ದ ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್ (ಅಸೋಷಿಯೇಷನ್)"** ಗುರುತಿನ ರಾಜಕಾರಣ ಎನ್ನುವುದು ಒಂದು ಕಠಿಣ ನಿಜ ಅಥವಾ ಸತ್ಯವಾಗಿದೆ. ಗುರುತಿನ ರಾಜಕಾರಣವು ಭಾರತದಲ್ಲಿ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳು ರಾಷ್ಟ್ರೀಯತೆಯ ಮತ್ತು ಪ್ರಕ್ರಿಯೆಗೆ ಕಾರಣವಾಗಿದೆ.

ಈ ಪ್ರಕ್ರಿಯೆಯಲ್ಲಿ ಭಾರತವು ರಾಷ್ಟ್ರೀಯತೆಯ ನೆಲೆಯಲ್ಲಿ ಗುರುತಿಸಿಕೊಂಡಿದೆ. ಇದರಲ್ಲಿ ಪ್ರಮುಖವಾಗಿ ಸಮುದಾಯಗಳ ಸಮೂಹ ಮತ್ತು ಭಾಷೆಗಳ ಆಧಾರದ ಮೇಲೆ ಗುರುತಿಸಿಕೊಂಡಿದೆ. ಭಾರತವು ರಾಜಕೀಯ ವಿಚಾರಗಳನ್ನು ವಾಸ್ತವಕ್ಕೆ ಬದಲಾಯಿಸಲು ಸಾಧ್ಯವಾಗಿಲ್ಲ. ಭಾರತವು ರಾಜಕೀಯ ವಿಚಾರಗಳ ಸಿದ್ಧಾಂತವೆನ್ನುವುದು ಒತ್ತಡಕ್ಕೆ ಮಾತ್ರ ಒಳಗೊಂಡಿದೆ. ಅಲ್ಲದೆ ರಾಜಕೀಯವು ಪ್ರಮುಖವಾದ ಪ್ರಕ್ರಿಯಾತ್ಮಕವಾದ ಗುರುತಿಗೆ ಒಳಗಾಗಿದೆ. ಮತ್ತು ಭಾರತವು ಸಮುದಾಯಗಳ ಸಮೂಹಗಳ ಜೊತೆಗೆ ಗುರುತಿಸಿಕೊಂಡಿದೆ.[೪೧]

ತರಣ್ ವಿಜಯ ಶ್ರೀಮಂತರ ರಾಜಕಾರಣದಲ್ಲಿ ಬಡವರು ಕೆಟ್ಟರು ನಮ್ಮ ದೇಶದಲ್ಲಿರುವ ಯಾವುದೇ ರಾಜಕಾರಣಿಗಳು ಬಡತನದಲ್ಲಿರುವುದನ್ನು ನೀವು ನೋಡಿದ್ದಿರಾ? ಅವರಿಗೆ ಇರುವ ಸವಲತ್ತುಗಳು ಲೆಕ್ಕಮಾಡಲಿಕ್ಕೆ ಆಗಲ್ಲಾ ಯಾವುದೇ ಜನದಟ್ಟಣೆ ಪ್ರದೇಶಗಳಲ್ಲಿ ಅವರು ಅಲೆದಾಡುವ ಪರಿಸ್ಥಿತಿ ಇಲ್ಲ ಅವರೇನಾದರು ರೈಲ್ವೆ ಟಿಕೆಟ್‌ಗಾಗಿ, ದೇವರದರ್ಶನಕ್ಕಾಗಿ, ಶಿಕ್ಷಣ ಪಡೆಯಲಿಕ್ಕೆ ಆಗಲಿ ಅವರು ಕಾಯುವಸ್ಥಿತಿ ಇಲ್ಲ. ಅವರೇನಾದರು ಇಂತಹ ಸ್ಥಳಗಳಿಗೆ ಬಂದರೆ ರಾಜಕಾರಣಿಗಳು ಯಾದವ, ಗುಪ್ತಾ, ಠಾಕೂರ್, ಬ್ರಾಹ್ಮಣ.......ಹೀಗೆ ಯಾವುದೇ ಜಾತಿಗೆ ಸೇರಿರಲಿ. ಮೊದಲು ಪರಿಗಣನೆಗೆ ಬರುವುದು ಅವರೊಬ್ಬ ವಿಐಪಿ ಎನ್ನುವುದು ಮಾತ್ರ. ಜಾತಿ ಧರ್ಮ ಎಲ್ಲ ಆಮೇಲೆ. ಆಶ್ಚರ್ಯ ವಿಷಯವೆಂದರೆ ನಮ್ಮ ಬಹುತೇಕ ಸಂಸದರು ಸಂಸತ್ತಿನ ಒಳಗೂ ಹೊರಗು ಕೇವಲ ಶ್ರೀಮಂತ ವರ್ಗದವರು ಬಗ್ಗೆ ಚರ್ಚಿಸುವುದಕ್ಕಷ್ಟೆ ಸೀಮಿತವಾಗಿದ್ದಾರೆ. ಸಂಸತ್ತಿನಲ್ಲಿ ದೇಶದ ಬಡತನದ ಕುರಿತು ಎಂದಾದರು ಒಂದು ಗಂಟೆ ಚರ್ಚೆ ಆಗಿರುವುದುನ್ನು ಕಂಡಿದ್ದೀರಾ? ಬಡ ಕುಟುಂದಲ್ಲಿ ಜನಿಸಿದ ಮಕ್ಕಳಿಗೆ ಹಾಲು, ಹಣ್ಣು ಸೇರಿದಂತೆ ಪೌಷ್ಟಿಕ ಆಹಾರ ಮಾರಿಚಿಕೆಯೇ ಸರಿ. ಶ್ರೀಮಂತ ರಾಜಕಾರಣಿಗಳಿಗೆ ಇಂಥ ಕೊರತೆ ಇಲ್ಲ. ಒಂದು ವೇಳೆ ಅಭಿವೃದ್ಧಿಪರ ಚರ್ಚೆಯಾದರೆ, ಬಡವರ ಬಗ್ಗೆ ಏನಾದರು ವಿಚಾರ ಮಂಡನೆ ನಡೆದಿದೆಯಾ ಎನ್ನುವುದನ್ನು ಅವಲೋಕಿಸಲು ಅವರು ಹೋಗುವುದಿಲ್ಲ. ರಾಜಕಾರಣಿಗಳಿಗೆ ಅಭಿವೃದ್ಧಿಪರ ವಿಚಾರಗಳಿಗಿಂತ ಸ್ವಪ್ರತಿಷ್ಠೆ ಅಹಂಕಾರವೇ ಮುಖ್ಯವಾಗುತ್ತದೆ. ಹಳ್ಳಿಗಳಲ್ಲಿ ಗುಣಮಟ್ಟ ಶಿಕ್ಷಣ ನೀಡಬಲ್ಲ ಶಾಲೆಗಳನ್ನು ಏಕೆ ತೆರೆಯಬಾರದು? ದೇಶದಲ್ಲಿ ಯಾವುದೇ ವ್ಯಕ್ತಿ ಪುಟ್‌ಪಾತ್‌ಗಳಲ್ಲಿ ಹಾಗೂ ಖಾಲಿ ಹೊಟ್ಟೆಯಲ್ಲಿ ಮಲಗದಂತೆ ಕಟ್ಟು ನಿಟ್ಟಿನ ಕಾನೂನು ರೂಪಿಸುಲು ಏಕೆ ಸಾಧ್ಯವಿಲ್ಲ[೪೨] ಎನ್ನುವ ವಿಚಾರಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ರವೀಂದ್ರ ಭಟ್ಟ 'ಅಭಿವೃದ್ಧಿಗೆ ಸಿಕ್ಕಿದ್ದು ಉಂಡುಳಿದ ಅಗಳು' (೨೦೧೮) ಇವತ್ತು ಜನತೆಯ ಹಸಿವನ್ನು ನಿಗಿಸುವುದಕ್ಕೆ ಅನ್ನಭಾಗ್ಯ, ಕ್ಷೀರಭಾಗ್ಯಗಳು ಅವರಿಗೆ ಸಾಕಾಗಬಹುದು. ಅಪೌಷ್ಟಿಕತೆಯನ್ನು ತೋಲಗಿಸುವದಕ್ಕೆ ಅನೇಕ ರೀತಿಯ ಮಾತ್ರೆಗಳುಂಟು, ಆದರೆ ಹಣದ ಹಸಿವು ನೀಗುವುದಕ್ಕೆ ಇನ್ನೂ ಸಿಕ್ಕಿಲ್ಲ ಮೂಲ. ಹಿಂದೆ ಪ್ರಧಾನಿಯಾದ ರಾಜೀವ್ ಗಾಂಧಿಯವರು ಕೇಂದ್ರದಿಂದ

ನೀಡಿದ ಹಣ ರಾಜ್ಯಕ್ಕೆ ಬಂದು ತಲುಪಿ, ಅಭಿವೃದ್ಧಿ ಕಾರ್ಯಕ್ರಮಗಳು ಪ್ರಾರಂಭವಾಗುವುದಕ್ಕೆ ಮೊದಲೇ ಅದು ಮಂಜು ಗಡ್ಡೆಯ ರೀತಿಯಲ್ಲಿ ಕರಗಿ ಹೋಗುತ್ತಿತ್ತು. ಆದರೆ ಇಂದಿನ ವಿಧ್ಯಮಾನಗಳನ್ನು ಬದಲಾದ ಪರಿಣಾಮದಿಂದ ತಪಮಾನವ ಜಾಸ್ತಿಯಾಗುವ ರೀತಿಯಲ್ಲಿ ಹಣವನ್ನು ಜಾಸ್ತಿಮಾಡಿಕೊಂಡು ಅಭಿವೃದ್ಧಿ ಕಾರ್ಯಗಳಿಗೆ ಬಳಸದೆ ರಾಜಕಾರಣಿಗಳು, ಅಧಿಕಾರಿಗಳು, ಗುತ್ತಿಗೆದಾರರ ಹೊಟ್ಟೆ ತುಂಬಿಸಿಕೊಂಡು ಉಳಿದ್ದನ್ನು ಅಭಿವೃದ್ಧಿಗೆ ಬಳಸಲು ಪ್ರಯತ್ನಿಸುತ್ತಾರೆ. ಅಧಿಕಾರಿಗಳ ಮನೆ ಮೇಲೆ ಎಸಿಬಿ ದಾಳಿ ಮಾಡಿದಾಗ ನಮಗೆ ಅರಿವು ಆಗುತ್ತದೆ. ಅವರ ಹೊಟ್ಟೆ ಎಷ್ಟು ದೊಡ್ಡದು ಅವರು ತಿಂದ್ದು ತೇಗಿ ಅವರಿಗೆ ಜೀರ್ಣವಾಗದೆ ಉಳಿದಿರುವುದು ಮಾತ್ರ ಬಡ ಜನರಿಗೆ ಸಿಗುತ್ತದೆ. ಗಾಂಧೀಜಿ ಹೇಳಿದ ಮಾತಿನಂತೆ 'ಭಾರತ ಶ್ರೀಮಂತ ರಾಷ್ಟ್ರ ಆದರೆ ಪ್ರಜೆಗಳು ಬಡವರು' ಎನ್ನುವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಗ್ರಾಮ ಪಂಚಾಯ್ತಿ ಪಿಡಿಒನಿಂದ ಹಿಡಿದು ವಿಧಾನಸೌಧದಲ್ಲಿ ಕುಳಿತ ಇತರೆ ಇಲಾಖೆ ಕಾರ್ಯದರ್ಶಿಯ ಮನೆಯಲ್ಲಿ ಲೋಡುಗಟ್ಟಲೆ ಚಿನ್ನಾಭರಣ, ಹಣ ಸಿಗುತ್ತದೆ. ಇದರಲ್ಲಿ ಗಮನಿಸಬೇಕು ನಾವುಗಳು ಎಲ್ಲಾ ಕಡೆ ತಿಮಿಂಗಲಗಳೇ ಊಟಕ್ಕೆ ಬಾಯಿ ತೆರೆದು ಕುಳಿತಿರುವಾಗ ಪ್ರಜೆಗಳ ಹಸಿವಿಗೆ ಅನ್ನ ಹಾಕುವವರು ಯಾರು? ಇಂದೊಂದು ದೊಡ್ಡ ರೋಗ ಈ ರೋಗಕ್ಕೆ ಮದ್ದು ಸಿಗುತ್ತಲೇ ಇಲ್ಲ ಎನ್ನುವುದು ದೊಡ್ಡ ದುರಂತ[೪೩] ಎನ್ನುವ ವಿಷಯಗಳನ್ನು ಬಿಡಿಸಿದ್ದಾರೆ.

ವಾಸವಿ ಎ.ಆರ್. 'ಕವಲು ದಾರಿಯಲ್ಲಿ ಕರ್ನಾಟಕ(೨೦೧೮) ಈ ಲೇಖನವನ್ನು ಅಧ್ಯಯನ ಮಾಡಿದಾಗ ರಾಜ್ಯದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹರಿವಿನ ಜಾಡನ್ನು ಗುರುತಿಸಲು ಯತ್ನಿಸಿದ್ದಾರೆ. ಇವತ್ತಿನ ವಿಧಾನಸಭೆ ಫಲಿತಾಂಶವನ್ನು ಗಮನಿಸಿದಾಗ ಆರ್ಥಿಕ– ರಾಜಕೀಯವಾಗಿ ಇರುವ ಮಿಶ್ರ ಸಾಮಾಜಿಕ ಸಾಂಸ್ಕೃತಿಕ ಪ್ರವೃತ್ತಿಗಳನ್ನು ತೋರಿಸಿಕೊಟ್ಟಿದೆ. ಇದರಿಂದ ನಮಗೆ ಅರ್ಥವಾಗುತ್ತದೆ ರಾಜಕೀಯದಲ್ಲಿ ಬಂಡವಾಳಗಾರರ ಮಾತಿಗೆ ಬಲಿಯಾಗಿ ಜಾತಿಗಳ ಮೇಲೆ ಅಬ್ಬರದ ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿಗೆ ತಂದು ಪ್ರಾಕೃತಿಕ ಸಂಪತ್ತು, ಆರ್ಥಿಕ ಸ್ಥಿರತೆ, ಮತ್ತು ಸಾಂಸ್ಕೃತಿಕ ಬಹುತ್ವದ ಪ್ರಾಂತ್ಯಗಳನ್ನು ಇವತ್ತು ನಾಶಮಾಡುತ್ತವೆ. ಮತ್ತು ಇತ್ತೀಚಿನ ರಾಷ್ಟ್ರೀಯ ಸಮೀಕ್ಷೆಯೊಂದರ ಪ್ರಕಾರ ರಾಜ್ಯದ ಶಾಸಕರೇ ಪರಮ ಸಿರಿವಂತರು ಇದಕ್ಕೆ ಕಾರಣವೆಂದರೆ ಉದ್ದಿಮೆ, ಸಂಸ್ಥೆ, ಭೂಮಿ, ಇವರ ಬಳಿ ಇವೆ. ಆದ್ದರಿಂದ ಇವರಿಗೆ ಬರುವ ಆರ್ಥಿಕ ಮೂಲವಾಗಿ ರಾಜಕೀಯದಲ್ಲಿ ಅಧಿಕಾರ ಪಡೆದು ಇನ್ನುಷ್ಟು ಆಗಾದವಾದ ಸಂಪತ್ತು ಪಡೆಯಲು ನೆರವಾಗುತ್ತವೆ. ರಾಜಕೀಯ ಮತ್ತು ಬಂಡವಾಳಶಾಹಿಗಳು ಇಂದು ಸಾರ್ವಜನಿಕರ ಮೂಲ ಸೌಕಾರ್ಯಗಳ ಕಡೆ ಮುಖಮಾಡಿ ಕಾಂಕ್ರೀಟು ಹಾಕುವುದು, ರಸ್ತೆ ವಿಸ್ತರಣೆ, ಮೇಟ್ರೋ ಮಾರ್ಗ, ವೈಟ್ ಟಾಪಿಂಗ್, ಎತ್ತರಿಸಿದ ಹೆದ್ದಾರಿ, ಅಣೆಕಟ್ಟು ಗಣಿಗಾರಿಕೆ–ಇತಂಹ ಕಾಮಗಾರಿಗಳು ಅಧಿಕಾರದಲ್ಲಿದ್ದವರಿಗೆ ಸ್ವಿಸ್ ಬ್ಯಾಂಕ್‌ನ ಮೂಲಗಳಾಗುತ್ತವೆಯೇ ಹೊರತು, ಇದರಿಂದ ನಾಗರಿಕರ

ಸೌಕರ್ಯಗಳ ವಿಸ್ತರಣೆಯೇನಲ್ಲ. ಆದ್ದರಿಂದ ಸಾಮಾನ್ಯ ಜನತೆಗೆ ಬೇಕಾದ ಆರೋಗ್ಯ, ಶಿಕ್ಷಣ, ಕಾರ್ಯಕ್ರಮಗಳು ಗೈರು ಹಾಜರಾಗಿದೆ. ಗ್ರಾಮಿಣ ಭಾಗದಲ್ಲಿ ಕೃಷಿ ಕ್ಷೇತ್ರದ ನಿರ್ಲಕ್ಷ್ಯದಿಂದ ಎದ್ದು ಕಾಣುತ್ತಿರುವಾಗ ಇಂದಿನ ಸರ್ಕಾರ ಸಾಲಮನ್ನಾ ಮಾಡಿದೆ. ಇದರಿಂದ ಲಾಭವಾಗುತ್ತಿರುವುದು ಯಾರಿಗೆ? ಸ್ವಲ್ಪ ಭೂಮಿಯನ್ನು ಹೊಂದಿರುವ ಬಡವರಿಗಲ್ಲ, ದೊಡ್ಡ ರೈತರಿಗೆ ರಾಜ್ಯದಲ್ಲಿರುವ ಬಹುತೇಕ ಯೋಜನೆಗಳು ಆರ್ಥಿಕ ಅಭಿವೃದ್ಧಿ ಪ್ರಾತಿನಿಧಿಕವಾದ ನೀತಿಗಳಾಗಿವೆ. ಪ್ರತಿ ಹಳ್ಳಿಗೂ ಕುಡಿಯುವ ನೀರಿನ ಹೆಸರಿನಲ್ಲಿ ನದಿಗಳಿಗೆ ಅಣೆಕಟ್ಟೆಗಳನ್ನು ಕಟ್ಟುತ್ತಾರೆ. ಇವೆಲ್ಲ ದುಬಾರಿ ವೆಚ್ಚಗಳಾದ ಇವುಗಳನ್ನು ಕೈಗೆತ್ತಿಕೊಳ್ಳುತ್ತಾರೆ ಸ್ಥಳೀಯ ಸಂಪನ್ಮೂಲಗಳಾದ ಕೆರೆ, ಕುಂಟೆ, ಕಾಡು, ಗೋಮಾಳ ಕೃಷಿ ಭೂಮಿಗಳನ್ನು ನಾಶ ಮಾಡಿ ನಿರ್ಮಾಣ ಮಾಡುತ್ತಾರೆ[೪೪] ಎನ್ನುವ ವಿಚಾರಗಳನ್ನು ಕ್ರೂಢೀಕರಿಸಿ ವಿಶ್ಲೇಷಿಸಿದ್ದಾರೆ.

ಅಮೂರ್ತ (ಎಥ್ನ ಹೆಲ್ತ್) 'ಆರೋಗ್ಯ ಮತ್ತು ಗುರುತಿನ ರಾಜಕೀಯದ ಸಮುದಾಯ ಅಭಿವೃದ್ಧಿ' ಸಮುದಾಯಗಳು ವಾಸ್ತವವಾಗಿ ಬರುವ ಆರೋಗ್ಯದ ಸಮಸ್ಯೆಗಳನ್ನು ಗುರುತಿಸಿ ಆರೋಗ್ಯದ ಬಗ್ಗೆ ಪ್ರಚಾರಮಾಡಿ ಜನಸಮುದಾಯಗಳನ್ನು ಒಂದು ಕಡೆ ಒಗ್ಗೂಡಿಸಿ ಮುಂದೆ ಬರಬಹುದಾದ ಅನಾರೋಗ್ಯದ ಅಪಾಯವನ್ನು ತಡೆಯಲು ಸಾಮೂಹಿಕ ಚಟುವಟಿಕೆಗಳನ್ನು ಮಾಡಬೇಕಾಗಿದೆ. ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಹೋರಾಟಗಳಲ್ಲಿ ಭಾಗಿಯಾದವರನ್ನು ಹೊರಗಿಡವಿಕೆಯ ಪರಿಶೀಲನೆ ಬಗ್ಗೆ ಗುರುತಿಸುವ, ರಾಜಕೀಯ ನಿರ್ದಶನಗಳುನ್ನು ಗುರುತಿಸಿ ಅವಶ್ಯಕವಾದ ಆಲೋಚನೆಗಳನ್ನು ಸ್ವಯಂ ಮತ್ತು ಇನ್ನಿತರ ಪ್ರಯೋಜನಗಳನ್ನು ಪಡೆಯುವಲ್ಲಿ ಅವರನ್ನು ಪ್ರತ್ಯೇಕವಾಗಿ ಬೇರೆ ಮಾಡಬಾರದು. ಯಾಕೆಂದರೆ ಸಾಮಾಜಿಕ ಗುರುತಿನ ಪ್ರಶ್ನೆಗಳೊಂದಿಗೆ ಸಮುದಾಯಗಳ ಆರೋಗ್ಯದ ಅಭಿವೃದ್ಧಿ ಕಡೆ ಗಮನ ಕೊಡಬೇಕಾಗುತ್ತದೆ.[೪೫]

ಕೊನೆಯ ಟಿಪ್ಪಣಿಗಳು

೧. ಶಮೀಮಾ ಸಿದ್ದೀಕಿ, ಭಾರತದ ಪರಿವರ್ತನೆ, ಯೋಜನಾ, ಅಭಿವೃದ್ಧಿ ಮಾಸ ಪತ್ರಿಕೆ, ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೋರಮಂಗಳ, ಬೆಂಗಳೂರು, ಮಾರ್ಚ್, ೨೦೧೯

೨. ಚಂದ್ರ ಶೇಖರ್ ಟಿ.ಆರ್. ಸಾಮಾಜಿಕ ಮತ್ತು ಮಾನವಿಕ ಅಧ್ಯಯಗಳ ಪರಿಭಾಷಾ ಕೋಶ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು, ೨೦೧೫.

೩. ದಿನೇಶ ಹೆಗಡೆ, ಅಭಿವೃದ್ಧಿ ಅಂಚಿನ ಸಮುದಾಯಗಳ : ಹಿಂದುಳಿದ ವರ್ಗಗಳ ಒಂದು ಅಧ್ಯಯನ ಅಭಿವೃದ್ಧಿ ಅಧ್ಯಯನ ಸಂಪುಟ-೬, ಸಂಚಿಕೆ-೨ ೨೦೦೭.

೪. ಚಂದ್ರಪೂಜಾರಿ ಎಂ. ಸಮುದಾಯ ಮತ್ತು ಸಹಭಾಗಿತ್ವ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ, ೨೦೦೨.

೫. ಅಮಿತ್ ಭಾದುರಿ (ಮೂಲ) ರಾಹು (ಅನುವಾದ) ಘನತೆಯೊಂದಿಗೆ ಅಭಿವೃದ್ಧಿ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಎ-೫ ಗ್ರೀನ್‌ಪಾರ್ಕ್, ಹೊಸದೆಹಲಿ, ೨೦೦೫.

೬. ಚಂದ್ರಶೇಖರ್ ಟಿ.ಆರ್., ಮಾನವ ಅಭಿವೃದ್ಧಿ ಮಾನವ ಬಡತನ ಮತ್ತು ಮಾನವ ಹಕ್ಕುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

೭. ಶೇಖರ್ ಗುಪ್ತ 'ಪ್ರಚಾರದ ಗೀಳಿಗೆ ಬಲಿಯಾದ ಅಭಿವೃದ್ಧಿ 'ಪ್ರಜಾವಾಣಿ, ೧೫/೧೦/೨೦೧೭.

೮. ಚಂದ್ರಪೂಜಾರಿ ಎಂ., ದಲಿತ ಮಾನವ ಅಭಿವೃದ್ಧಿ, ಚಿಂತನ ರಂಗ ಅಧ್ಯಯನ ಕೇಂದ್ರ (ರಿ), ಉತ್ತರ ಕನ್ನಡ, ೨೦೧೬.

೯. ಚಂದ್ರಪೂಜಾರಿ ಎಂ., ಅಭಿವೃದ್ಧಿ ಮತ್ತು ರಾಜಕೀಯ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ, ೨೦೧೪.

೧೦. ಶ್ರೀಧರ ಎ., ಬಹುಮುಖಿ ಚಿಂತನೆ, ವೈಚಾರಿಕ ಲೇಖನಗಳ ಸಂಗ್ರಹ, ಗೌತಮ ಬುಕ್ ಹೌಸ್, ಕಮಲಾಪುರ, ಪು. ಸಂ. ೩೩ ರಿಂದ ೩೮, ೨೦೧೪.

೧೧. ಪ್ರಕಾಶ್ ಕಾರಟ್, ಐಡೆಂಟಿಟಿ ರಾಜಕೀಯ ಮತ್ತು ಇತರ ರಾಜಕೀಯಗಳು" ಕ್ರೀಯಾ ಪ್ರಕಾಶನ, ಬೆಂಗಳೂರು ೨೦೧೨

೧೨. ಚಂದ್ರ ಶೇಖರ್ ಟಿ.ಆರ್. ಸಾಮಾಜಿಕ ಮತ್ತು ಮಾನವಿಕ ಅಧ್ಯಯಗಳ ಪರಿಭಾಷಾ ಕೋಶ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು,೨೦೧೫.

೧೩. ಜಯಣ್ಣ. ಸಿ. ವಿ.(ಸಂ), ಅಸ್ಮಿತೆ(ಗುರುತು), ರಾಜಕೀಯ, ರಾಜ್ಯಶಾಸ್ತ್ರ, ಸಪ್ನ ಬುಕ್ ಹೌಸ್, ಬೆಂಗಳೂರು ಪು.ಸಂ.೬೮ ರಿಂದ ೭೧, ೨೦೧೫.

೧೪. ಚಂದ್ರ ಪೂಜಾರಿ. ಎಂ., ಐಡೆಂಟಿಟಿ ಪಾಲಿಟಿಕ್ಸ್, ಅಭಿವೃದ್ಧಿ ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೯.

೧೫. ಷಣ್ಮುಖ. ಎ. (ಸಂ), ಕರ್ನಾಟಕ ಜರ್ನಲ್ಸ್ ಆಫ್ ಪೊಲಿಟಿಕ್ಸ್, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಪು.ಸಂ. ೧೪೮-೧೫೨, ೨೦೧೮.

೧೬. ಅದೇ ಪುಸ್ತಕ ಪುಸ್ತಕ ಪು.ಸಂ.೧೬೨-೧೬೫೪

೧೭. ಮುಜಾಫರ್ ಅಸ್ಸಾದಿ, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ಪು.ಸಂ. ೧೬೧-೧೬೯, ೨೦೦೯.

೧೮. ಮುಜಾಫರ್ ಆಸ್ಸಾದಿ, ಅಸ್ಮಿತೆ, ರಾಜಕಾರಣ ಮತ್ತು ಮೂಲಭೂತವಾದ ಕೆಲವು ಚಿಂತನೆಗಳು, ಲಡಾಯಿ ಪ್ರಕಾಶನ, ಗದಗ, ೨೦೧೭, ಪು.ಸಂ.೧೮೬-೧೯೦.

೧೯. ಅದೇ ಪುಸ್ತಕ
೨೦. ಚಂದ್ರ ಪೂಜಾರಿ. ಎಂ.,. ಸಾಮಾಜಿಕ ಮತ್ತು ಮಾನವಿಕ ಅಧ್ಯಯಗಳ ಪರಿಭಾಷಾ ಕೋಶ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಕಲಾಗ್ರಾಮ, ಜ್ಞಾನ ಭಾರತಿ, ಬೆಂಗಳೂರು, ೨೦೧೫.
೨೧. ತಿಮ್ಮಯ್ಯ. ಜಿ. ಕಾಸ್ಟ್ ಆಂಡ್ ಕ್ಲಾಸ್ ಇನ್ ಕರ್ನಾಟಕ, ಸೋಶಿಯಲ್ ಸೈಂಟಿಸ್ಟ್, ಸಂಪುಟ-೧೧, ಸಂಚಿಕೆ-೧೧೭, ಪು.ಸಂ-೩೧ ರಿಂದ ೩೬, ೧೯೮೩.
೨೨. ಮುರಳಿ ನಾಗಲಾಂಬಿ, ಒಡ್ಡರ ಸಮುದಾಯ ಒಂದು ಐತಿಹಾಸಿಕ ಪಕ್ಷಿನೋಟ ಸಮಕಾಲೀನ ಭಾರತೀಯ ಸಮಾಜ ಸಂ.೨, ಡಾ. ಹನಮಗೌಡ. ಸಿ(ಸಂ), ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೯.
೨೩. ಮಂಜುನಾಥ ನಾಯಕ್. ಕೆ (ಸಂ) ಚಿತ್ರದುರ್ಗ ಜಿಲ್ಲಾ ದಾರ್ಶನ ಪಾರ್ವತಿ ಪ್ರಕಾಶನ, ಚಿತ್ರದುರ್ಗ, ೨೦೦೯
೨೪. ರಮೇಶ. ಸ.ಚಿ. (ಸಂ), ಅಲೆಮಾರಿಗಳ ಸ್ಥಿತಿಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, (೨೦೦೫).
೨೫. ದೇವೇಂದ್ರ ಕುಮಾರ್ (ಸಂ), ಗ್ರಾಮ ಸಂಸ್ಕೃತಿ ಮಾಲೆ-೧, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು-೨೦೦೦.
೨೬. ನಾಡೋಜ ಡಾ. ಗೀತಾ ನಾಗಭೂಷಣ(ಸಂ), ಸಂಸ್ಕೃತಿಕ ಮಹಿಳಾ ಮಾಳಿಕೆ ಸಂಪುಟ-೭, ಕರ್ನಾಟಕ ಸಾಹಿತ್ಯ ಅಕಾಡೇಮಿ, ಬೆಂಗಳೂರು, ೨೦೧೦.
೨೭. ಸಂಗಳದ. ಎಂ. ಬಿ, ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ಶಶಿ ಪ್ರಕಾಶನ ಗರಗ, ೨೦೧೪.
೨೮. ಗಂಗಾಧರಯ್ಯ ಭೋವಿ ಸಮುದಾಯದ ಸಂಸ್ಕೃತಿ ಮತ್ತು ಕೊಡುಗೆಗಳು, ಪ್ರಕಾಶಕರು, ವಿ. ತಿಮ್ಮಪ್ಪನವರು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ೨೦೦೭.
೨೯. ಬೆಟಗೇರಿ. ವೈ. ವೈ. ಡಾ. ವಡ್ಡರ ಪರಂಪರೆ, ಜೆ. ಬಿ. ಪಬ್ಲಿಕೇಷಣ್, ಗದಗ, ಪು. ಸಂಖ್ಯೆ ೧೬ ರಿಂದ ೨೧, ೧೯೯೯.
೩೦. ಅದೇ-ಪುಸ್ತಕ ಪು. ಸಂ. ೧೭೯-೧೮೧.
೩೧. ಅದೇ-ಪುಸ್ತಕ ಪು. ಸಂ ೯೧ ರಿಂದ ೯೨.
೩೨. ಅದೇ-ಪುಸ್ತಕ ಪು. ಸಂ ಪು. ಸಂ. ೧೭೧ ರಿಂದ ೧೭೨.
೩೩. ಪ್ರದೀಪ ಕುಮಾರ್ ಕಡ್ಕೊಲ್, ಚಿತ್ರದುರ್ಗದಲ್ಲಿ ಸಮುದಾಯ ರಾಜಕೀಯವು ಪ್ರಮುಖ ಪಾತ್ರ ವಹಿಸುತ್ತದೆ, ಪ್ರಜಾವಾಣಿ, ೨೦/೦೨/೨೦೧೪.
೩೪. ವಾಸವಿ ಎ.ಆರ್., (ಮೂಲ) ಎಚ್.ಡಿ. ಪ್ರಶಾಂತ್ (ಅನುವಾದ), ಸಾಮಾಜಿಕ ಆಕಾರ ರೇಖೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫.

೩೫. ಜಾವಿದ್ ಆಲಂ (ಮೂಲ). ಶ್ರೀಧರ ಎ. (ಅನುವಾದ) ಯಾರಿಗೆ ಪ್ರಜಾ ಪ್ರಭುತ್ವ 'ದಮನಿತ ಜಾತಿಗಳಲ್ಲಿ ಅಸ್ಮಿತೆಯ ರೂಪೀಕರಣ' ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ ,ಹಂಪಿ, ೨೦೧೦.
೩೬. ಮಾನವ ಅಭಿವೃದ್ಧಿ ವರದಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸ್ಥಿತಿಗತಿ ಚಿತ್ರದುರ್ಗ ಜಿಲ್ಲಾ ಪಂಚಾಯತ್ ಕರ್ನಾಟಕ ಸರ್ಕಾರ, ೨೦೧೪
೩೭. ಚಂದ್ರಪೂಜಾರಿ ಎಂ., ರಾಜಕೀಯ ಬಡತನ. ಸಿದ್ಧಾರ್ಥ ಪ್ರಕಾಶನ, ಗಿರಿಕೃಪ ಶಂಕರ ಕಾಲೋನಿ, ಎಂ.ಪಿ. ಪ್ರಕಾಶನ ನಗರ, ಹೊಸಪೇಟೆ, ೨೦೦೮.
೩೮. ಚಂದ್ರಪೂಜಾರಿ ಎಂ., ಬಡತನ ಮತ್ತು ಪ್ರಜಾಪ್ರಭುತ್ವ, ಗಾಯತ್ರಿ ಪ್ರಕಾಶನ, ಬಳ್ಳಾರಿ, ೨೦೧೪.
೩೯. ಮೊಗಳ್ಳಿ ಗಣೇಶ್ "ಆಧುನಿಕತೆಯನ್ನು ಬೆನ್ನು ಹತ್ತಿದ ದಲಿತರು" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.
೪೦. ಲೊಲೀಡ್ ಐ ರೋಡೂಲ್‌ಪೋ "ಎಕ್ಸ್‌ಪ್ಲೇನಿಂಗ್ ಇಂಡಿಯನ್ ಡೆಮಾಕ್ರಸಿ" ಆಕ್ಸ್‌ಫರ್ಡ್ ಯೂನಿವರ್ಸಿ ಪ್ರೆಸ್, ೨೦೦೮.
೪೧. ಬಾಲಾಜಿ ಸಿಂಗ್, ದ ಇಂಡಿಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್ (ಅಸೋಷಿಯೇಷನ್), ೨೦೦೬.
೪೨. ತರುಣ್ ವಿಜಯ್ ಶ್ರೀಮಂತರ ರಾಜಕಾರಣದಲ್ಲಿ ಬಡವರು ಕೆಟ್ಟರು, ವಿಜಯವಾಣಿ, ೨೦೧೩-೧೪
೪೩. ರವೀಂದ್ರ ಭಟ್ಟ ಅಭಿವೃದ್ಧಿಗೆ ಸಿಕ್ಕಿದ್ದು ಉಂಡುಳಿದ ಅಗಳು, ಪ್ರಜಾವಾಣಿ, ೨೧-೧೦-೨೦೧೮.
೪೪. ವಾಸವಿ ಎ ಅರ್. 'ಕವಲು ದಾರಿಯಲ್ಲಿ ಕರ್ನಾಟಕ ಪ್ರಜಾವಾಣಿ, ನವೆಂಬರ್ ೧, ೨೦೧೮.
೪೫. ಅಮೂರ್ತ (ಎಥ್ನ ಹೆಲ್ತ್) 'ಆರೋಗ್ಯ ಮತ್ತು ಗುರುತಿನ ರಾಜಕೀಯದ ಸಮುದಾಯ ಅಭಿವೃದ್ಧಿ' ಸೆಂಟರ್ ಫಾರ್ ರಿಸರ್ಚ್ ಇನ್ ಎಥ್ನಿಕ್ ರಿಲೇಶನ್ಸ್, ಯುನಿವರ್ಸಿಟಿ ಆಫ್ ವಾರ್ವಿಕ್, ಯುಕೆ ಆಗಸ್ಟ್ ೧೯೯೭

ಅಧ್ಯಾಯ – ಮೂರು

ಅಧ್ಯಯನ ಕೈಗೊಂಡ ಜಿಲ್ಲೆ ಮತ್ತು ಕ್ಷೇತ್ರಗಳ ಪರಿಚಯ

೩.೧ ಅಧ್ಯಯನ ಕ್ಷೇತ್ರದ ಪರಿಚಯ

೩.೨ ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

೩.೩ ಚಿತ್ರದುರ್ಗ ಜಿಲ್ಲೆಯ ಧರ್ಮ ಮತ್ತು ಜಾತಿಗಳು

೩.೪ ಚಿತ್ರದುರ್ಗ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

೩.೫ ಚಿತ್ರದುರ್ಗ ಜಿಲ್ಲೆಯ ರಾಜಕೀಯದಲ್ಲಿ ಗುರುತಿಸಿಕೊಂಡವರು

೩.೬ ಮೊಳಕಾಲ್ಮೂರು ತಾಲ್ಲೂಕು ಮತ್ತು ಅಧ್ಯಯನಕ್ಕೊಳಪಡಿಸಿದ ಗ್ರಾಮಗಳ ಪರಿಚಯ

೩.೭ ಹೊಳಲ್ಕೆರೆ ತಾಲ್ಲೂಕು ಮತ್ತು ಅಧ್ಯಯನಕ್ಕೊಳಪಡಿಸಿದ ಗ್ರಾಮಗಳ ಪರಿಚಯ

ಅಧ್ಯಾಯ – ಮೂರು

ಅಧ್ಯಯನ ಕೈಗೊಂಡ ಜಿಲ್ಲೆ ಮತ್ತು ಕ್ಷೇತ್ರಗಳ ಪರಿಚಯ

೩.೧ ಅಧ್ಯಯನ ಕ್ಷೇತ್ರದ ಪರಿಚಯ

ಪ್ರಸ್ತುತ ಅಧ್ಯಯನ ಕೈಗೊಂಡಿರುವ ಚಿತ್ರದುರ್ಗ ಜಿಲ್ಲೆಯ ಸ್ಥೂಲ ಪರಿಚಯವನ್ನು ಮಾಡಿಕೊಡಲು ಪ್ರಯತ್ನಿಸಲಾಗಿದೆ. "ಈ ಜಿಲ್ಲೆಯು ಕರ್ನಾಟಕ ರಾಜ್ಯದ ೩೦ ಜಿಲ್ಲೆಗಳಲ್ಲೊಂದಾಗಿದೆ. 'ಕರ್ನಾಟಕ ರಾಜ್ಯವು ೧೯೫೬ರಲ್ಲಿ ಭಾಷಾವಾರು ಆಧಾರದ ಮೇಲೆ ರಾಜ್ಯದ ಪುನರ್ ವಿಂಗಡಣೆಯಾದಾಗ ಕರ್ನಾಟಕ ಉಗಮವಾಗಿದೆ."[೧] "ರಾಜ್ಯದ ಒಟ್ಟು ವಿಸ್ತಿರ್ಣ ೧.೯೨ಲಕ್ಷ ಚ.ಕಿ ಮೀ ಆಗಿದ್ದು ೧.೮೮ಲಕ್ಷ ಪ್ರದೇಶವು ಗ್ರಾಮೀಣ ಪ್ರದೇಶ ವಾಗಿದ್ದು, ೦.೦೪ ಚ.ಕಿ. ಮೀ ಪ್ರದೇಶವು ನಗರ ಪ್ರದೇಶ ಪ್ರದೇಶವಾಗಿರುತ್ತದೆ."[೨] ಚಿತ್ರದುರ್ಗ ಜಿಲ್ಲೆಯ ಜನಸಂಖ್ಯೆಯು ೧೫,೧೦,೨೨೭ ಹೊಂದಿದ್ದು, ೮,೩೮೮ ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ೭,೭೨,೬೪೯ ಪುರುಷರು, ೭,೩೭,೫೭೮ ಸ್ತ್ರೀಯರಿದ್ದಾರೆ. ೨೨ ಹೋಬಳಿಗಳನ್ನು ಒಳಗೊಂಡಿದ್ದು, ೬ ತಾಲ್ಲೂಕುಗಳಲ್ಲಿ ೧೮೯ ಗ್ರಾಮ ಪಂಚಾಯಿತಿಗಳು, ೩೧೨ ಗ್ರಾಮ ಲೆಕ್ಕಿಗರ ವೃತ್ತಗಳೂ ೨೨ ನಾಡಕಛೇರಿಗಳೂ, ೯೪೯ ಜನವಸತಿ ಇರುವ ಗ್ರಾಮಗಳು, ೧೧೫ ಜನವಸತಿ ಇಲ್ಲದ ಗ್ರಾಮಗಳು ಸೇರಿ ೧೦೬೪ ಗ್ರಾಮ ಪ್ರದೇಶಗಳನ್ನು ಒಳಗೊಂಡಿರುವ ಈ ಜಿಲ್ಲೆಯು ಪ್ರಸಕ್ತ ಅಧ್ಯಯನ ಕ್ಷೇತ್ರವಾಗಿದ್ದು, ಇಂತಹ ಜಿಲ್ಲೆಯ ಹಿನ್ನೆಲೆ ಜೊತೆಗೆ ಭೌಗೋಳಿಕ ಹಿನ್ನೆಲೆಯನ್ನು ತಿಳಿಯುವುದು ಅಗತ್ಯವಾಗಿದೆ.[೩]

೩.೨ ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

"ಗಂಡು ಮೆಟ್ಟಿನ ನಾಡೆಂದು ಪ್ರಸಿದ್ದವಾಗಿದ್ದು, ಹಲವಾರು ಪ್ರೇಕ್ಷಣೀಯ ಸ್ಥಳಗಳಿಂದ ಕೂಡಿರುವಂತಹ ಚಿತ್ರದುರ್ಗ ಜಿಲ್ಲೆಯು ಕರ್ನಾಟಕದ ಒಂದು ಐತಿಹಾಸಿಕ ಜಿಲ್ಲಾ ಕೇಂದ್ರವಾಗಿ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಿಂದ ವಾಯುವ್ಯ ದಿಕ್ಕಿನಲ್ಲಿ ೨೦೦ ಕಿ.ಮೀ ದೂರದಲ್ಲಿದ್ದು, ಸಮುದ್ರ ಮಟ್ಟದಿಂದ ೮೫೪ ಮೀ. ಎತ್ತರದ ಈ ಸ್ಥಳ ರಾಷ್ಟ್ರೀಯ ಹೆದ್ದಾರಿ

೪ ಮತ್ತು ೧೩ರ ಸಂಗಮ ಸ್ಥಳ ಕರ್ನಾಟಕ ರಾಜ್ಯದ ಮಧ್ಯ ಭಾಗದಲ್ಲಿದೆ. ಇತಿಹಾಸವನ್ನು ನೋಡಿದಾಗ ಬೇರೆ ಬೇರೆ ಕಾಲಗಳಲ್ಲಿ ಚಿತ್ರದುರ್ಗಕ್ಕೆ ಸೂಳ್ಗಲ್ಲು, ಚೋಳಂಗಲ್ಲು, ಚಿಮ್ಮತ್ತಿನೂರು, ಚಿಮ್ಮತ್ತಿನಕಲ್ಲು, ಚಿತ್ರಕಲ್ಲುದುರ್ಗ, ಚಿನ್ಮೂಲಾದ್ರಿ, ಚಿನ್ಮಯಗಿರಿ, ಚಿತ್ರದುರ್ಗ, ಚಟಲ್‌ದ್ರುಗ್, ಫರಕಾಬಾದ್, ಮುಂತಾದ ಹೆಸರುಗಳಿವೆ. ಈ ಜಿಲ್ಲೆಯ ಉತ್ತರಕ್ಕೆ ಬಳ್ಳಾರಿ, ದಕ್ಷಿಣಕ್ಕೆ ತುಮಕೂರು, ಪೂರ್ವಕ್ಕೆ ಆಂಧ್ರಪ್ರದೇಶ ರಾಜ್ಯದ ಅನಂತಪುರ ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆಗಳನ್ನು ಹೊಂದಿದೆ. ಈ ಜಿಲ್ಲೆಯು ಸುಮಾರು, ೧೨.೬ ಡಿಗ್ರಿ ರಿಂದ ೧೫.೩ ಡಿಗ್ರಿ ಅಕ್ಷಾಂಶ, ೭೫ ಡಿಗ್ರಿ ದಿಂದ ೭೭ ಡಿಗ್ರಿ ರೇಖಾಂಶದ ಮಧ್ಯೆ ಇದೆ. ಇಲ್ಲಿ ಉಷ್ಣಾಂಶ ೩೬.೨ಡಿಗ್ರಿ ಸೆಲ್ಸಿಯಸ್ ನಿಂದ ೪೧ ಡಿಗ್ರಿ ಸೆಲ್ಸಿಯಸ್‌ನವರೆಗೂ ಇರುತ್ತದೆ. ಚಿತ್ರದುರ್ಗ ಜಿಲ್ಲೆಯು ರಾಜ್ಯದಲ್ಲಿಯೇ ಅತಿ ಕಡಿಮೆ ಮಳೆ ಬೀಳುವ ಪ್ರದೇಶ ಹೊಂದಿದ್ದು, ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಹೋಬಳಿ ಎಂದು ದಾಖಲೆಯಾಗಿದೆ.[೪] ಕಪ್ಪು, ಕೆಂಪು, ಜೌಗು ಭೂಮಿಯನ್ನು ಹೊಂದಿದೆ. ಇಲ್ಲಿ ರಾಗಿ, ಜೋಳ, ಹತ್ತಿ, ಶೇಂಗಾ, ಸೂರ್ಯಕಾಂತಿ, ಮೆಕ್ಕೆಜೋಳ, ಎಳ್ಳು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ, ಇವು ಪ್ರಮುಖ ವ್ಯಾಪಾರ ವಾಣಿಜ್ಯ ಬೆಳೆಗಳಾಗಿವೆ. ತೆಂಗು, ಅಡಿಕೆಯನ್ನು ಬೆಳೆಯುತ್ತಾರೆ. ಈ ಜಿಲ್ಲೆಯು ವ್ಯಾಪಾರ ವಾಣಿಜ್ಯ ಕೇಂದ್ರವಾಗಿದ್ದು, ಗುಡ್ಡ ಬೆಟ್ಟ ಸಾಲುಗಳನ್ನು ಒಳಗೊಂಡಿದ್ದು, ಇದು ಜಿಲ್ಲೆಗೆ ರಕ್ಷಾ ಕವಚದಂತಿದೆ. ವರ್ಷವಿಡೀ ಹಿತಕರ ಹವೆಯ ಸಂತೋಷಧಾಮ, ಕುತೂಹಲಕಾರಿಯಾದ ಸ್ಥಳ ಪುರಾಣಗಳು, ಶಿಲಾಯುಗದಷ್ಟು ಪುರಾತನದ ಮನುಷ್ಯ ವಾಸದ ನೆಲೆಗಳು, ಪ್ರಾಚೀನ, ಐತಿಹಾಸಿಕ, ಧಾರ್ಮಿಕ ಪ್ರಾಶಸ್ತ್ಯದ ಸ್ಥಳಗಳಿಂದ ತುಂಬಿರುವ ಚಿತ್ರದುರ್ಗ ಜಿಲ್ಲೆ ಸಾವಿರ ವರ್ಷಗಳ ನಾಗರೀಕತೆಗಳ ತವರು, ಪ್ರಾಚೀನತೆ, ಆಧುನಿಕತೆಗಳ ಸಮ್ಮಿಲನ ಹೊಂದಿರುವ ಸುಂದರ ಪ್ರದೇಶವಾಗಿದೆ.

ಈ ಜಿಲ್ಲೆಯು ೬ ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ ೧. ಮೊಳಕಾಲ್ಮೂರು, ೨. ಚಳ್ಳಕೆರೆ, ೩. ಹಿರಿಯೂರು, ೪. ಹೊಸದುರ್ಗ, ೫. ಹೊಳ್ಳಲ್ಕೆರೆ ಮತ್ತು ೬. ಚಿತ್ರದುರ್ಗ.

ಪ್ರತಿಯೊಂದು ತಾಲ್ಲೂಕುಗಳು ತಮ್ಮದೇ ಆದ ವೈಶಿಷ್ಟತೆಯನ್ನು ಹೊಂದಿದೆ. ಹಿರಿಯೂರು ತಾಲ್ಲೂಕಿನಲ್ಲಿ "ವೇದಾವತಿ ನದಿಯು ಈ ಜಿಲ್ಲೆಯಲ್ಲಿ ೧೨೦ ಮೈಲಿ ದೂರ ಹರಿಯುತ್ತದೆ.[೫] ಮಾರಿಕಣಿವೆಯಲ್ಲಿ ಈ ನದಿಗೆ ಅಡ್ಡಲಾಗಿ ಕರ್ನಾಟಕದಲ್ಲೇ ಮೊದಲನೇ ಅಣೆಕಟ್ಟಾಗಿ ಕಟ್ಟಿ ವಾಣಿವಿಲಾಸ ಜಲಾಶಯವನ್ನು ನಿರ್ಮಿಸಲಾಗಿದೆ. ಈ ಜಲಾಶಯ ತಾಲ್ಲೂಕಿನ ಜಮೀನುಗಳಿಗೆ ನೀರನ್ನು ಪೂರೈಸುತ್ತಿದೆ. ಸ್ವರ್ಣಮುಖಿ ನದಿ ತುಮಕೂರು ಜಿಲ್ಲೆಯಲ್ಲಿ ಹುಟ್ಟಿ ಹಿರಿಯೂರು ತಾಲ್ಲೂಕಿನ ವೇದಾವತಿಯನ್ನು ಸೇರುತ್ತದೆ. ಹಿರಿಯೂರು ತಾಲ್ಲೂಕಿನ ಇಕ್ಕನೂರಿನ ಬಳಿ ಚಿತ್ರದುರ್ಗ ಸೇರುತ್ತದೆ. ಕರಿಯಾಲದ ಬಳಿ ಅಣೆಕಟ್ಟು ಕಟ್ಟಿ ಅದರ ನೀರನ್ನು ವ್ಯವಸಾಯಕ್ಕೆ ಬಳಸಲಾಗಿದೆ. "ಜಿಲ್ಲೆಯಲ್ಲಿ ಮಳೆ ಕಡಿಮೆ ತಾಪಮಾನ ಹೆಚ್ಚು ಚಳಿಗಾಲ ಹಿತಕರ, ಚಳಿಗಾಲದ ಸರಾಸರಿ

ಉಷ್ಣತೆ ೨೭.೯ ಡಿಗ್ರಿ ಸೆಲ್ಸಿಯಸ್, ಬೇಸಿಗೆಯಲ್ಲಿ ೩೬.೨ ಡಿಗ್ರಿ ಯಿಂದ ೪೧ ಡಿಗ್ರಿ ಸರಾಸರಿ ವಾರ್ಷಿಕ ಮಳೆ ೩೭೯.೩ ಮಿ. ಮೀ ಇರುತ್ತದೆ.[೬]

ಖನಿಜಗಳು

ಜಿಲ್ಲೆಯಲ್ಲಿ ವಿವಿಧ ಖನಿಜಗಳ ಪದರ ಶಿಲೆಗಳುಂಟು. ಚಿತ್ರದುರ್ಗಕ್ಕೆ ದಕ್ಷಿಣದಲ್ಲಿ ಶಿಲಾಸ್ತರಗಳ ಗರಿಷ್ಟ ಅಗಲ ೨೫ ಮೈಲಿ, ಜಿಲ್ಲೆಯ ಮುಖ್ಯ ಖನಿಜಗಳು ಕಲ್ನಾರು, ಆನ್ಟಿಮೊನಿ, ಬಾಕ್ಸೈಟ್, ತಾಮ್ರ, ಕಬ್ಬಿಣದ ಅದಿರು, ಸುಣ್ಣಗಲ್ಲು, ಮ್ಯಾಂಗನೀಸ್, ಸೀಸ್, ಬೆಣಚುಕಲ್ಲು, ಸ್ಪಟಿಕ ಶಿಲೆ ಹಾಗೂ ಹಾಸುಗಲ್ಲುಗಳನ್ನು ಒಳಗೊಂಡಿದೆ.

ಚಳ್ಳಕೆರೆ, ಮೊಳಕಾಲ್ಮೂರುಗಳಲ್ಲಿ ಕಣಿವೆಯ ಬೆಟ್ಟಗಳಿವೆ. ಚಿತ್ರದುರ್ಗ ತಾಲ್ಲೂಕಿನ ಕೋಟೆ ಮರಡಿ, ಗೋನೂರು, ಹೊಸದುರ್ಗ ತಾಲ್ಲೂಕಿನ ಬೂದಿಮರಡಿ, ಹಿರಿಯೂರು ತಾಲ್ಲೂಕಿನ ಜವಗೊಂಡನಹಳ್ಳಿ, ಆನೆಸಿಂಧ್ರಿ, ದಿಂಡಾವರ ಹಾಗೂ ಇತ್ತಿಚೆಗೆ ಚಿತ್ರದುರ್ಗ ತಾಲ್ಲೂಕು ಗುಡ್ಡದ ರಂಗವ್ವನಹಳ್ಳಿ ಮುಂತಾದ ಕಡೆ ಚಿನ್ನದ ನಿಕ್ಷೇಪಗಳು ಕಂಡು ಬಂದಿದೆ.[೭] ಈ ಜಿಲ್ಲೆಯ ಮಳೆಯ ಪ್ರಮಾಣ ಕಡಿಮೆಯಾದುದರಿಂದ "ಬಯಲು ಸೀಮೆ" ಎಂದು ಗುರುತಿಸಲಾದ ಈ ಜಿಲ್ಲೆಯು ೭೩.೭೧೯ ಹೆಕ್ಟರ್ ಅರಣ್ಯ ಪ್ರದೇಶವನ್ನು ಹೊಂದಿದೆ. ಇಲ್ಲಿ ಹೆಚ್ಚಾಗಿ ಕುರುಚಲು ಮತ್ತು ಜಾಲಿಗಿಡಗಳಿವೆ.[೮]

ಭೂ ರಚನೆ

ಜಿಲ್ಲೆಯ ಶಿಲಾ ವಿನ್ಯಾಸವು ಜಗತ್ತಿನಲ್ಲಿಯೇ ಅತೀ ಪ್ರಾಚೀನವಾದ ಶಿಲಾ ವಿನ್ಯಾಸ ಹೊಂದಿದ್ದು, ಒರಟು ಕಣಶಿಲೆ, ಫ್ಲೇಟುಶಿಲೆ, ಜೋಡುಶಿಲೆ, ಕ್ಲೋರೈಟ್ ಹಾಗೂ ಹಾರ್ನ ಬೆಂಡ್ ಶಿಲೆಗಳು ಸೇರಿದಂತೆ ಒಟ್ಟಾರೆ ಚಿತ್ರದುರ್ಗ ಜಿಲ್ಲೆ ಪದರು ಶಿಲಾಮಯ ಎಂದೇ ಪ್ರಪಂಚದ ಭೂಗರ್ಭ ಶಾಸ್ತ್ರದ ಪ್ರಕಾರ ಪ್ರಸಿದ್ಧವಾಗಿದೆ. ಚಿತ್ರದುರ್ಗದ ಕೋಟೆಗೆ ಬಳಸಿದ ಕಣ ಶಿಲೆಯ ವಯಸ್ಸು ೨೬೦ ಕೋಟಿ ವರ್ಷಗಳಷ್ಟು ಹಳೆಯದು ಎಂಬ ಸಂಗತಿ ಭೂಗರ್ಭ ತಜ್ಞರ ಸಂಶೋಧನೆಯಿಂದ ತಿಳಿದು ಬಂದಿದೆ.[೯]

೩.೩ ಚಿತ್ರದುರ್ಗ ಜಿಲ್ಲೆಯ ಧರ್ಮ ಮತ್ತು ಜಾತಿಗಳು

ಚಿತ್ರದುರ್ಗ ಜಿಲ್ಲೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ ಧರ್ಮಗಳು ಮುಖ್ಯವಾಗಿ ಕಂಡುಬರುತ್ತವೆ. ಈ ಜಿಲ್ಲೆಯಲ್ಲಿ ಹಿಂದೂಗಳು ಪ್ರಥಮ ಸ್ಥಾನದಲ್ಲಿದ್ದು ಅನೇಕ ಜಾತಿ, ಉಪಜಾತಿ ಮತ್ತು ಪಂಗಡಗಳು, ಕಂಡುಬಂದರೂ, ಅವರ ಸಾಮಾಜಿಕ ಮೌಲ್ಯಗಳು, ನಂಬಿಕೆಗಳು ಹಾಗೂ ಪವಿತ್ರ ಗ್ರಂಥಗಳು ಒಂದೇ ಆಗಿದ್ದು, ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣಬಹುದು. ವೇದಗಳು. ಉಪನಿಷತ್ತುಗಳು, ಪುರಾಣಗಳು, ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಇವರ ಪ್ರಮುಖ ಗ್ರಂಥಗಳಾಗಿವೆ. ಶೈವ ಹಾಗೂ ವೈಷ್ಣವ ದೇವರುಗಳನ್ನು ಆರಂಭಿಸುತ್ತಾರೆ.[೧೦]

ಜಿಲ್ಲೆಯಲ್ಲಿ ಭೋವಿ, ಆದಿಕರ್ನಾಟಕ, ಆದಿದ್ರಾವಿಡ, ಕೊರಚ, ಛಲವಾದಿ, ಉಪ್ಪಾರರು, ಲಂಬಾಣಿ, ದೊಂಬಿದಾಸರು, ನಾಯಕ, ಕಾಡುಗೊಲ್ಲ, ಊರುಗೊಲ್ಲ, ಕುರುಬರು, ಲಿಂಗಾಯಿತ, ಬ್ರಾಹ್ಮಣರು, ಕುಂಚಿಟಿಗರು, ಶೆಟ್ಟರು, ಅಕ್ಕಸಾಲಿಗರು, ಕ್ಷೌರಿಕರು, ರೆಡ್ಡಿಗಳು, ನೇಕಾರರು, ದೇವಾಂಗ, ಶೆಟ್ಟಿಬಣಜಿಗರು, ಬಳೆಗಾರರು, ಲದ್ದಿಗ, ಒಕ್ಕಲಿಗರು, ಹೆಳವರು, ಜೋಗಿಗಳು, ಅಯ್ಯನೋರು, ಶಿಳ್ಳೇಕ್ಯಾತರು, ಈಡಿಗ, ಕಮ್ಮಾರರು, ಬಳ್ಳೆ ಒಕ್ಕಲಿಗರು, ಗಂಗಡಿಗ ಒಕ್ಕಲಿಗರು, ಸರ್ಪಒಕ್ಕಲಿಗರು, ಹಳ್ಳಿಕಾರರು, ಅಯ್ಯಂಗಾರರು, ಬಾಂಬೆ, ಮರಾಠಿ, ಮತ್ತು ತಮಿಳು ಗೌಂಡರ್, ಇತರೆ ಮುಂತಾದ ಹಿಂದುಳಿದ ಜಾತಿಗಳು ಕಂಡುಬರುತ್ತವೆ.[೧೧]

೩.೪ ಚಿತ್ರದುರ್ಗ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

ಕಮಿಷನ್ನರ ಆಡಳಿತ ಕೊನೆಗೊಂಡು, ಮೈಸೂರು ಸಂಸ್ಥಾನವನ್ನು ಬ್ರಿಟಿಷರು ಒಡೆಯರ ಆಡಳಿತಕ್ಕೆ ವಹಿಸಿಕೊಟ್ಟ ಮೇಲೆ ಚಿತ್ರದುರ್ಗ ವಿಭಾಗ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳನ್ನು ಒಳಗೊಂಡಿತ್ತು.[೧೨] ೧೮೬೩ ರಲ್ಲಿ ಆ ವಿಭಾಗವನ್ನು ರದ್ದುಗೊಳಿಸಿ, ಚಿತ್ರದುರ್ಗ ಜಿಲ್ಲೆಯನ್ನು ನಗರ ವಿಭಾಗಕ್ಕೆ ಸೇರಿಸಲಾಯಿತು. ೧೮೭೯ ರಲ್ಲಿ ಈ ವ್ಯವಸ್ಥೆ ರದ್ದಾಯಿತು. ೧೮೮೨ ರಲ್ಲಿ ಚಿತ್ರದುರ್ಗವನ್ನು ತುಮಕೂರು ಜಿಲ್ಲೆಗೆ ಸೇರಿಸಿ, ಅದನ್ನು ಒಂದು ಉಪ ವಿಭಾಗವನ್ನಾಗಿ ಮಾಡಲಾಯಿತು. ಈಗಿನ ಚಿತ್ರದುರ್ಗ ಜಿಲ್ಲೆ ಅಸ್ತಿತ್ವಕ್ಕೆ ಬಂದದ್ದು. ೧೮೮೬ ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಮತ್ತೆ ಸ್ಥಾಪಿಸಿ ಪಾವಗಡ ತಾಲ್ಲೂಕನ್ನು ತುಮಕೂರು ಜಿಲ್ಲೆಗೆ ಸೇರಿಸಲಾಯಿತು. ೧೯೫೬ರಲ್ಲಿ ರಾಜ್ಯ ಪುನರ್ ವಿಂಗಡಣೆಯಾದಾಗ ಚಿತ್ರದುರ್ಗ ಜಿಲ್ಲೆ ಬೆಂಗಳುರು ವಿಭಾಗದ ಅಂಗವಾಯಿತು. ಈ ಜಿಲ್ಲೆಯಲ್ಲಿ ಎರಡು ಉಪವಿಭಾಗಕ್ಕೆ ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು ಮೊಳಕಾಲ್ಮೂರು, ತಾಲ್ಲೂಕು, ದಾವಣಗೆರೆ ಉಪವಿಭಾಗಕ್ಕೆ ದಾವಣಗೆರೆ, ಜಗಳೂರು, ಹೊಸದುರ್ಗ, ಹೊಳಲ್ಕೆರೆ, ಹರಿಹರ ತಾಲ್ಲೂಕುಗಳು ಸೇರಿದ್ದವು. ಕ್ರಮೇಣವಾಗಿ ದಾವಣಗೆರೆಯು ಪ್ರತ್ಯೇಕ ಜಿಲ್ಲೆಯಾಯಿತು, ದಾವಣಗೆರೆ ವಿಭಾಗದ ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆಗೆ ಸೇರಿದ್ದವು.[೧೩]

ಈ ಜಿಲ್ಲೆಯಲ್ಲಿ ಹತ್ತಿ, ಸಕ್ಕರೆ, ಸಾಬೂನು ಮತ್ತು ಎಣ್ಣೆ ಕಾರ್ಖಾನೆಗಳಿವೆ, ಈ ಜಿಲ್ಲೆಗೆ ವಾಣಿವಿಲಾಸ ಸಾಗರದಿಂದ ನೀರು ಸರಬರಾಜು ಆಗುತ್ತಿದ್ದು, ಈ ವ್ಯವಸ್ತೆಯನ್ನು ೧೯೬೮–೭೦ರಲ್ಲಿ ಕಲ್ಪಿಸಲಾಯಿತು. ವಿವಿಧ ರಾಜವಂಶಗಳು ಈ ಜಿಲ್ಲೆಯಲ್ಲಿ ಅಳ್ವಿಕೆ ಮಾಡಿದ್ದಾರೆ. ೧೫, ೧೬ನೇ ಶತಮಾನದಲ್ಲಿ ಹಲವು ಪಾಳೆಗಾರರು ಈ ಜಿಲ್ಲೆಯಲ್ಲಿ ಅಲ್ಲಲ್ಲಿ ಆಳ್ವಿಕೆ ಮಾಡಲಾರಂಭಿಸಿದರು. ಅವರಲ್ಲಿ ಮುಖ್ಯವಾದವರು ಚಿತ್ರದುರ್ಗ ಮತ್ತು ನಿಡುಗಲ್ ದುರ್ಗದ ಪಾಳೆಗಾರರು, ಕಾಮಗೇತಿ ವಂಶಕ್ಕೆ ಸೇರಿದ ಚಿತ್ರದುರ್ಗದ ಪಾಳೇಗಾರರು ಆರಂಭದಲ್ಲಿ ವಿಜಯನಗರಕ್ಕೆ ಅದೀನರಾಗಿದ್ದರು. ೧೫೬೪ರಲ್ಲಿ ವಿಜಯನಗರದ ಪತನ ನಂತರ ಸ್ವತಂತ್ರವಾಗಿ ಅಧಿಪತ್ಯ ನಡೆಸಿದರು.[೧೪] ಇವರಲ್ಲಿ ಮದಕರಿನಾಯಕ, ಕಸ್ತೂರಿ ರಂಗಪ್ಪ ನಾಯಕ ಮೊದಲಾದವರು ಪ್ರಬಲರು, ಮರಾಠ ಮತ್ತು

ಹೈದರ್‌ನೊಂದಿಗೆ ಇವರು ಹೋರಾಟ ಮಾಡಬೇಕಾಯಿತು. ನಂತರ “೧೮೮೬ ಈಗಿನ ಚಿತ್ರದುರ್ಗ ಜಿಲ್ಲೆ ಅಸ್ತಿತ್ವಕ್ಕೆ ಬಂದಿತು. ಈ ಜಿಲ್ಲೆಯಲ್ಲಿ ಕದಂಬರ ಕಾಲದಲ್ಲಿ ಪ್ರಸಿದ್ದ ಮೊಟ್ಟ ಮೊದಲ ಪ್ರಾಚೀನ ಶಾಸನ ಹಲ್ಮಿಡಿ ಶಾಸನ ಹಾಗೂ ರೋಮನ್ ನಾಣ್ಯಗಳೂ ದೊರೆತಿವೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಅಶೋಕನ ಶಾಸನಗಳು ದೊರೆತಿವೆ, ಬ್ರಹ್ಮಗಿರಿ ಶಾಸನ ಬ್ರಾಹ್ಮೀ ಲಿಪಿಯಲ್ಲಿದೆ. ಜಟಂಗ ರಾಮೇಶ್ವರ ಈ ಬೆಟ್ಟ ಬ್ರಹ್ಮಗಿರಿಯಿಂದ ೩ ಕಿ.ಮೀ. ದೂರದಲ್ಲಿದೆ. ರಾವಣ ಸೀತೆಯನ್ನು ಕದ್ದೊಯ್ಯುತ್ತಿರುವಾಗ ಜಟಾಯು, ಇಲ್ಲಿ ಅವನನ್ನು ತಡೆದು ಹೋರಾಡಿ ವೀರ ಮರಣ ಹೊಂದಿತೆಂಬ ಅಂಶವನ್ನು ಕ್ರಿ.ಶ. ೯೦೧ರಲ್ಲಿ ಶಾಸನ ತಿಳಿಸಿದೆ. ರಾಮನೇ ಜಟಾಯುವಿನ ಹೆಸರಿನಲ್ಲಿ ಲಿಂಗವನ್ನು ಸ್ಥಾಪಿಸಿದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿ ಪ್ರಸಿದ್ದವಾದ ಹಾಲುರಾಮೇಶ್ವರ ಇದೆ. ಈ ಜಿಲ್ಲೆಯಲ್ಲಿ ಬಿಚ್ಚುಗತ್ತಿ ಭರಮಣ್ಣ ನಾಯಕನ ಕಾಲದಲ್ಲಿ ನಿರ್ಮಿಸಲಾದ ಮುರುಘ ರಾಜೇಂದ್ರ ಮಠ ಇಂದು ಅನೇಕ ಅನಾಥ ಮಕ್ಕಳಿಗೆ ಆಶ್ರಯವಾಗಿರುವುದಲ್ಲದೆ, ಶೈಕ್ಷಣಿಕವಾಗಿ ಸಾಕಷ್ಟು ಯುಕ್ತವಾದ ತಾಣವಾಗಿದೆ.[೧೫]

ಚಿತ್ರದುರ್ಗ ಕೇವಲ ಜಿಲ್ಲೆ ಮಾತ್ರ ಅಲ್ಲ ಐತಿಹಾಸಿಕವಾಗಿ ಪ್ರಸಿದ್ಧವಾದ ಪ್ರೇಕ್ಷಣೀಯ ತಾಣವೂ ಕೂಡ ಆಗಿದೆ. ಇಲ್ಲಿ ಕದಂಬರು, ಶಾತವಾಹನರು, ಗಂಗರು, ಮತ್ತು ರಾಷ್ಟ್ರಕೂಟರು ಅಳ್ವಿಕೆಯನ್ನು ಮಾಡಿದ್ದಾರೆ. ಈ ಜಿಲ್ಲೆಯನ್ನು ಒಂದೊಂದು ರಾಜ ಮನೆತನಗಳು ಒಂದೊಂದು ರೀತಿಯಲ್ಲಿ ಕರೆದಿದ್ದಾರೆ. ಪುರಾಣ ಕಾಲದಲ್ಲಿ ಚಿನ್ಮೂಲಾದ್ರಿ, ದ್ವಾಪರಾಂತ್ಯದಲ್ಲಿ ಹಿಡಿಂಬ ಪಟ್ಟಣವೆಂದು, ಶಾತವಾಹನರು ಕದಂಬರ ಕಾಲದಲ್ಲಿ ಚಂದ್ರವಳ್ಳಿ, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರ ಕಾಲದಲ್ಲಿ ಸೂಳ್ಗಲ್ಲು ನಾಡೆಂದು ಮತ್ತು ಕಲಚೂರಿಗಳು ಮತ್ತು ಹೊಯ್ಸಳರ ಕಾಲದಲ್ಲಿ ‘ಪೆರಾಮಾಳ್ಪುರವೆಂದು, ವಿಜಯನಗರ ಕಾಲದಲ್ಲಿ ‘ಚಿತ್ರಕಲ್ಲುದುರ್ಗ’ ಹೈದರಾಲಿಯ ಕಾಲದಲ್ಲಿ ‘ಫರ್ರಾಕಾಬಾದ್’ ಎಂದು ಕಾರೆದಿದ್ದಾರೆ.[೧೬] ಚಿತ್ರದುರ್ಗ ಎಂಬ ಹೆಸರು ಹೀಗೆಯೇ ಬಂದಿದೆ ಎಂದು ನಿಖರವಾಗಿ ಹೇಳಲು ಯಾವುದೇ ಆಧಾರವಿಲ್ಲ. ಈ ಬಗ್ಗೆ ಇರುವ ಅಭಿಪ್ರಾಯಗಳು ಹೀಗಿವೆ. ಹಿಂದೆ ಚಂದ್ರವಳ್ಳಿಯ ‘ದವಳೇಶ್ವರನಗುಡ್ಡ’ ದೂರಕ್ಕೆ ಛತ್ರಿಯಂತೆ ಕಾಣುತ್ತಿದ್ದರಿಂದ ‘ಛತ್ರಿಕಲ್ಲು’ ಎಂದು ಬಂದ ಹೆಸರು ಕ್ರಮೇಣ ಚಿತ್ರಕಲ್ಲು, ಚಿತ್ರಕಲ್ಲುದುರ್ಗ ಚಿತ್ರದುರ್ಗ ವಾಗಿರಬಹುದು ಎಂತಲೂ, ನಂತರ ಈ ನಾಡನ್ನು ಆಳಿದ ಪಾಳೆಗಾರನ ಮನೆದೇವರ ಹೆಸರು ‘ಚಿತ್ರನಾಯಕ ಇವೆರಡೂ ಸೇರಿ ಚಿತ್ರಕಲ್ಲು ದುರ್ಗವಾಗಿರಬಹುದು ಎಂಬ ಪ್ರತೀತಿ ಇದೆ. ಹೀಗೆ ಫರಾಕಾಬಾದ್, ಚಟಲ್ ದುರ್ಗ, ಚಿತ್ರಕಲ್ಲುದುರ್ಗ, ಚಿತ್ರದುರ್ಗ ಎಂಬ ಹೆಸರನ್ನು ಪಡೆದಿದೆ. ಸುಪ್ರಸಿದ್ದ ಸಾಹಿತಿ ತ.ರಾ.ಸು, ಅವರ ತವರೂರು. ದಿವಂಗತ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಜನ್ಮ ಭೂಮಿ ಈ ಜಿಲ್ಲೆಯಾಗಿದೆ. ಏಳು ಸುತ್ತಿನ ಕೋಟೆಯನ್ನು ಹೊಂದಿರುವ ಜಿಲ್ಲೆಯಲ್ಲಿ

ವೀರವನಿತೆ ಓನಕೆ ಓಬವ್ವ, ವೀರ ಮದಕರಿ ನಾಯಕ ಆಳ್ವಿಕೆ ಮಾಡಿದಂತಹ ಪ್ರದೇಶವಾಗಿದೆ. ಕೋಟೆಯ ಏಳು ಸುತ್ತುಗಳಲ್ಲಿ ಮೂರು ಸುತ್ತು ಚಿತ್ರದುರ್ಗ ಬೆಟ್ಟದ ತಳ ಭಾಗದಲ್ಲಿ ನಾಲ್ಕು ಬಾಗಿಲುಗಳಿವೆ. ಅವುಗಳಲ್ಲಿ ರಂಗಯ್ಯನಬಾಗಿಲು ಪೂರ್ವಕ್ಕೂ ಸಂತೆಬಾಗಿಲು ಇವೆ. ಚಿತ್ರದುರ್ಗದ ಕೋಟೆಯಲ್ಲಿ ಒಟ್ಟು ೧೯ ದ್ವಾರಗಳು, ೩೮ ದಿಡ್ಡ ಬಾಗಿಲು, ೩೫ ಗುಪ್ತ ದ್ವಾರಗಳು, ೪ ಸುರಂಗ ಮಾರ್ಗಗಳು ಇದ್ದವೆಂದು ಹೇಳಲಾಗಿದೆ.[೭] ಪಾಳೆಗಾರರ ಪಾಳು ಬಿದ್ದ ಅರಮನೆಯ ಅವಶೇಷಗಳನ್ನು ಈಗಲೂ ಕಾಣಬಹುದು. ಹೀಗೆ ಚಿತ್ರದುರ್ಗದ ಐತಿಹಾಸಿಕ ಚಿತ್ರಣವನ್ನು ಕಾಣಬಹುದು.

೩.೫ ಚಿತ್ರದುರ್ಗ ಜಿಲ್ಲೆಯ ರಾಜಕೀಯದಲ್ಲಿ ಗುರುತಿಸಿಕೊಂಡವರು

ಚಿತ್ರದುರ್ಗ ಜಿಲ್ಲೆಯು ಕರ್ನಾಟಕದ ಮುಖ್ಯವಾದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಜಿಲ್ಲೆಯು ಪ್ರಾಚೀನ ಕಾಲದ ರಾಜರ ಆಳ್ವಿಕೆಯಿಂದ ಹಿಡಿದು ಸ್ವಂತಂತ್ರ ಬಂದು ಆಧುನಿಕ ಕಾಲದವರೆಗೆ ಈ ಜಿಲ್ಲೆಯಲ್ಲಿ ರಾಜಕೀಯವಾಗಿ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟವಾದ ಪಾತ್ರವನ್ನು ಹೊಂದಿದೆ.

ಮೈಸೂರು ರಾಜ್ಯವಿದ್ದಾಗ, ಈ ಚಿತ್ಲದುಗ್ರ (ಚಿತ್ರದುರ್ಗ) ಜಿಲ್ಲೆಯ ಲೋಕಸಬೆಗೆ ಮೊದಲ ಬಾರಿಗೆ ಆಯ್ಕೆಯಾದವರು ೧೯೫೧ರಲ್ಲಿ ಎಸ್. ನಿಜಲಿಂಗಪ್ಪನವರು (ಕಾಂಗ್ರೆಸ್), ೧೯೫೭ ಮುಷಿರ್ ಉಲ್-ಮುಲ್ಕ ಜೆ.ಎಂ. ಮಹಮದ್ ಇಮಾಮ್ ಸಾಬ್ (ಪ್ರಜಾ ಸೊಸಿಯಲಿಸ್ಟ), ೧೯೬೨ ರಲ್ಲಿ ಮೈಸೂರು ರಾಜ್ಯವಿದ್ದಗಲೇ ಚಿತ್ಲದುಗ್ರ –ಚಿತ್ರದುರ್ಗ ಆಯಿತು. ಆ ಸಂದಂರ್ಭದಲ್ಲಿ ಎಸ್. ವೀರಬಸಪ್ಪ (ಕಾಂಗ್ರಸ್), ೧೯೬೭ ಜೆ.ಎಂ. ಇಮಾಮ್ (ಸ್ವಂತಂತ್ರ ಪಕ್ಷ), ೧೯೭೧ ಕೊಂಡಜ್ಜಿ ಬಸಪ್ಪ (ಕಾಂಗ್ರಸ್) ಪಕ್ಷದಿಂದ ಆಯ್ಕೆಯಾಗುತ್ತಾರೆ. ನಂತರ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿ ಮೈಸೂರು ರಾಜ್ಯ ಕರ್ನಾಟಕ ರಾಜ್ಯವಾಗಿ ಅಸ್ತಿತ್ವಕ್ಕೆ ಬರುತ್ತದೆ. ೧೯೭೭ ಮತ್ತು ೧೯೮೦ರಲ್ಲಿ ಮರು ಆಯ್ಕೆಯಾಗುತ್ತಾರೆ. ಕೆ. ಮಲ್ಲಣ್ಣ (ಕಾಂಗ್ರಸ್), ೧೯೮೪ ಕೆ.ಹೆಚ್ ರಂಗನಾಥ (ಕಾಂಗ್ರಸ್), ೧೯೮೯-೧೯೯೧- ೧೯೯೮ರಲ್ಲಿ ಸೇರಿ ಒಟ್ಟು ಮೂರು ಭಾರಿ ಸಿ.ಪಿ. ಮುಡಲಗಿರಿಯಪ್ಪ (ಕಾಂಗ್ರಸ್) ನವರು ಮರು ಆಯ್ಕೆಯಾಗುತ್ತಾರೆ. ೧೯೯೬ ಪಿ. ಕೊಂದಂಡರಾಮಯ್ಯ (ಜನತಾದಳ), ೧೯೯೯ರಲ್ಲಿ ಚಿತ್ರರಂಗದ ನಾಯಕ ನಟನಾದ ಶಶಿಕುಮಾರ್ (ಜನತಾದಳ ಯುನೆಟೆಡ್) ರವರು, ೨೦೦೪ ಎನ್. ವೈ. ಹನುಮಂತಪ್ಪ (ಕಾಂಗ್ರಸ್). ೨೦೦೯ರಲ್ಲಿ ಚಿತ್ರದುರ್ಗ ಲೋಕಸಭೆಯು ತುಮಕೂರಿನ ಶಿರಾ ಮತ್ತು ಪಾವಗಡ ಕ್ಷೇತ್ರಗಳು ಒಂದು ಭಾಗ ಇದ್ದು, ಎಸ್.ಸಿ ಮೀಸಲು ಕ್ಷೇತ್ರವಾಗಿ ಮಾರ್ಪಾಡು ಆಯಿತು. ಅದರಿಂದ ಜಿಲ್ಲೆಯಲ್ಲಿ ಭೋವಿ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ದೊರಕಿದಂತೆಯಾಗಿ, ಬಿ.ಜೆ.ಪಿ ಯಿಂದ ಜನಾರ್ಧನಸ್ವಾಮಿ ಬುನಾದಿ ಆಕಿದರು. ಆದ್ದರಿಂದ ಅಂದಿನಿಂದ ಜಿಲ್ಲೆಯಲ್ಲಿ ಭೋವಿ ಸಮುದಾಯದವರು ಕಾಂಗ್ರಸ್‌ನಿಂದ ಹೊರಬಂದು, ಶೇಕಡ ಸುಮಾರು ೭೦ರಷ್ಟು ಬಿ.ಜೆ.ಪಿಗೆ ಬೆಂಬಲಿಸಲು ಶುರುಮಾಡಿದರು.

೨೦೧೪ ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಬಿ.ಜೆ.ಪಿ ಇಂದ ಜನಾರ್ಧನಸ್ವಾಮಿ, ಜೆ.ಡಿ.ಎಸ್‌ನಿಂದ ಮಾಜಿ ಕ್ರೀಡಾ ಸಚಿವರಾದ ಗೂಳಿಹಟ್ಟಿ ಡಿ. ಶೇಖರ್ ಅವರು ಸ್ಪರ್ದೆ ಮಾಡುತ್ತಾರೆ. ಆದ್ದರಿಂದ ಸಮುದಾಯದ ಮತಗಳು ಭಾಗವಾಗುತ್ತವೆ. ಕಾಂಗ್ರಸ್‌ನಿಂದ ಸ್ಪರ್ದೆಮಾಡಿದ ಚಿಕ್ಕಮಗಳೂರಿನ ಬಿ.ಎನ್ ಚಂದ್ರಪ್ಪನವರು ೪,೬೭,೩೭೨. ಶೇಕಡ ೪೨.೬ ಮತಗಳನ್ನು ಪಡೆದು ಜಯಶಾಲಿಯಾದರೆ, ಜನಾರ್ಧನಸ್ವಾಮಿಯವರು ೩,೬೬,೨೨೦, ಶೇಕಡ ೩೩.೪% ಪಡೆದರೆ, ಗೂಳಿಹಟ್ಟಿ ಡಿ. ಶೇಖರ್ ೨,೦೨೧೦೮. ೧೮,೪% ಪಡೆದು ಪರಭವಗೊಂಡರು ಎನ್ನುವುದನ್ನು ತಿಳಿಯಬಹುದು. ೨೦೧೯ರ ಲೋಕಸಭೆ ಚುನಾವಣೆಯಲ್ಲಿ ಭೋವಿ ಸಮುದಾಯಕ್ಕೆ ಯಾವುದೇ ಪಕ್ಷದಿಂದಲೂ ಅವಕಾಶಕೊಡದೆ, ಹಾಲಿ ಸಂಸದ ಬಿ.ಎನ್ ಚಂದ್ರಪ್ಪರವರಿಗೆ ಕಾಂಗ್ರೇಸ್ ಪಕ್ಷದಿಂದ ಅವಕಾಶ ಮಾಡಿಕೊಟ್ಟರೆ, ಬಿ.ಜೆ.ಪಿ ಪಕ್ಷದಿಂದ ಮಾಜಿ ಸಮಾಜ ಕಲ್ಯಾಣ ಸಚಿವರಾದ ನಾರಾಯಣಸ್ವಾಮಿಯವರಿಗೆ ಬೆಂಬಲಕೊಟ್ಟು ಗೆಲ್ಲಿಸುತ್ತಾರೆ ಜಿಲ್ಲೆಯ ಮುಖಂಡರು.[೧೮]

ಇನ್ನು ಜಿಲ್ಲೆಯ ವಿಧಾನಸಭೆಗಳನ್ನು ಗಮನಿಸುವುದಾದರೆ, ೧೯೬೨ ರಲ್ಲಿ ಹೊಳಲ್ಕೆರೆ ಎಸ್.ಸಿ ಮೀಸಲು ಕ್ಷೇತ್ರದಿಂದ ಜಿ. ದುರ್ಗಪ್ಪ (ಕಾಂಗ್ರೆಸ್) ೧೯೬೭ರಿಂದ ೨೦೦೪ರ ವರೆಗೆ ಈ ಕ್ಷೇತ್ರ ಸಾಮಾನ್ಯ ಕ್ಷೇತ್ರವಾಗಿರುತ್ತದೆ. ೧೯೬೭ ಮತ್ತು ೧೯೭೨ರಲ್ಲಿ ಬಿ. ಪರಮೇಶ್ವರಪ್ಪ (ಎಸ್.ಡ್ಲಿ ್ಬಯು.ಎ), ೧೯೭೮ ಕೆ.ಹೆಚ್.ಸಿದ್ದರಾಮಪ್ಪ (ಕಾಂಗ್ರೆಸ್–ಐ), ೧೯೮೦ರ ಉಪಚುನಾವಣೆಯಲ್ಲಿ ಎಂ.ಬಿ. ತಿಪ್ಪೇರುದ್ರಪ್ಪ (ಕಾಂಗ್ರೆಸ್–ಐ), ೧೯೮೩ ಜಿ.ಶಿವಲಿಂಗಪ್ಪ (ಜೆ.ಎನ್.ಪಿ), ೧೯೮೫ ಜಿ.ಎಸ್. ಮಂಜುನಾಥ(ಜೆ.ಎನ್.ಪಿ), ೧೯೮೯ಮತ್ತು ೨೦೦೪ರಲ್ಲಿ ಎ.ವಿ. ಉಮಪತಿ (ಕಾಂಗ್ರಸ್) ೧೯೯೪ ಯು.ಹೆಚ್. ತಿಮ್ಮಣ್ಣ(ಜೆಡಿ) ೧೯೯೯ ಪಿ. ರಮೇಶ(ಬಿಜೆಪಿ) ೨೦೦೮ರಲ್ಲಿ ಈ ಕ್ಷೇತ್ರ ಎಸ್.ಸಿ ಮೀಸಾಲು ಕ್ಷೇತ್ರವಾಗುತ್ತದೆ. ಆದ್ದರಿಂದ ೨೦೦೮ ರಲ್ಲಿ ಭೋವಿ ಸಮುದಾಯದಿಂದ ಎಂ. ಚಂದ್ರಪ್ಪರವರು (ಬಿಜೆಪಿ) ಆಯ್ಕೆಯಾಗುತ್ತಾರೆ. ಅಂದಿನಿಂದ ತಾಲ್ಲೂಕಿನ ಭೋವಿ ಸಮುದಾಯದ ಜನತೆ ಬಿಜೆಪಿಯನ್ನು ಬೆಂಬಲಿಸಲು ಶುರುಮಾಡಿದರು. ಅದಕ್ಕಿಂತ ಮೊದಲು ಕಾಂಗ್ರೇಸ್ ಪಕ್ಷದ ಬೆಂಬಲಿಗರಾಗಿದ್ದರು. ನಂತರ ೨೦೧೩ರಲ್ಲಿ ನಡೆದ ಚುನಾವಣೆಯಲ್ಲಿ ಹೆಚ್. ಆಚಿಜನೇಯ್ಯ ವಿರುದ್ದ ಸೋಲುಂಡರು. ಇತ್ತಿಚ್ಚಿಗೆ ೨೦೧೮ ಮೇ ೧೨ರ ಚುನಾವಣೆಯಲ್ಲಿ ಎಂ. ಚಂದ್ರಪ್ಪರವರು ಗೆದ್ದು, ತಾಲ್ಲೂಕಿನ ರಾಜಕೀಯ ಚಿತ್ರಣವನ್ನು ತನ್ನ ತೆಕ್ಕೆಗೆ ತೆಗೆದುಕೊಂಡರು. ಈ ತಾಲ್ಲೂಕಿನಲ್ಲಿ ಸುಮಾರು ೨೦ ರಿಂದ ೨೫ ಭೋವಿ ಸಮುದಾಯದ ಗ್ರಾಮ ಪಂಚಾಯತ್ ಸದಸ್ಯರು ಇರುವುದು ಕಂಡುಬರುತ್ತದೆ.[೧೯]

ಮೊಳಕಾಲ್ಮೂರು ರಾಜಕೀಯ ಚಿತ್ರಣವನ್ನು ಗಮನಿಸುವುದಾದರೆ ೧೯೫೭ರಿಂದ ೨೦೦೪ರವರೆಗೆ ಸಾಮಾನ್ಯ ಕ್ಷೇತ್ರವಾಗಿರುತ್ತದೆ. ೨೦೦೮ರಿಂದ ಎಸ್.ಟಿ.ಮೀಸಲು ಕ್ಷೇತ್ರವಾಗಿ ಮುಂದುರೆದಿರುತ್ತದೆ. ಈ ತಾಲ್ಲೂಕಿನಲ್ಲಿ ಎಸ್.ಟಿ ಸಮುದಾಯದವರು ಜಿಲ್ಲೆಯಲ್ಲೆ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಎಸ್.ಸಿ ಸಮುದಾಯದವರು ಚಿತ್ರದುರ್ಗ ಜಿಲ್ಲೆಯಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿ ಮೊಳಕಾಲ್ಮೂರು ಇರುವುದು ಮಾನವ ಅಭಿವೃದ್ಧಿ ೨೦೧೪ ವರದಿ ಇಂದ ತಿಳಿಯುತ್ತದೆ. ೧೯೫೭ರಲ್ಲಿ ಎಸ್. ನಿಜಲಿಂಗಪ್ಪನವರು ಕಾಂಗ್ರೆಸ್ ಪಕ್ಷದಿಂದ ಸ್ಪರ್ದೆಮಾಡಿ ಗೆದ್ದು ಮುಖ್ಯಮಂತ್ರಿಯಾಗುತ್ತಾರೆ. ೧೯೭೨ ಕಾಂಗ್ರೆಸ್ ಪಕ್ಷದಿಂದ ಮತ್ತು ೧೯೭೮ರಲ್ಲಿ (ಕಾಂಗ್ರೆಸ್-ಐ) ಸೇರಿ ಎರಡು ಭಾರಿ ಪಾಟೀಲ್ ಪಾಪಾನಾಯಕರವರು. ೧೯೮೯ಮತ್ತು ೧೯೮೯ರಲ್ಲಿ ಎನ್.ಜಿ.ನಾಯ್ಕ(ಕಾಂಗ್ರೆಸ್), ೧೯೮೫ರಲ್ಲಿ (ಜೆಎನ್.ಪಿ) ೧೯೯೪ರಲ್ಲಿ (ಜೆಡಿ) ಎರಡು ಭಾರಿ ಪೂರ್ಣಮುತ್ತಪ್ಪ ಆಯ್ಕೆಯಾಗುತ್ತಾರೆ. ೧೯೯೭ರಲ್ಲಿ ಉಪಚುನಾವಣೆಯಲ್ಲಿ ಎನ್. ವೈ ಗೋಪಾಲಕೃಷ್ಣರವರು (ಕಾಂಗ್ರೆಸ್) ಆಯ್ಕೆಯಾಗುತ್ತಾರೆ. ನಂತರ ಬಂದ ೧೯೯೯ರ ಚುನಾವಣೆಯಿಂದ ೨೦೦೪ ರವರಗೆ ಮುಂದುವರೆಯುತ್ತಾರೆ. ೨೦೦೮ರಲ್ಲಿ ಈ ಕ್ಷೇತ್ರ ಎಸ್.ಟಿ ಮೀಸಾಲು ಆಗಿ ಮುಂದುವರೆಯುತ್ತದೆ. ಆದರಿಂದ ಅದೃಷ್ಟವಶ ನಾಲ್ಕನೆ ಭಾರಿಗೆ ಶಾಸಕರಾಗಿ ಎನ್. ವೈ ಗೋಪಾಲಕೃಷ್ಣರವರು ಮುಂದುವರೆದು ದಾಖಲೆ ಬರೆಯುತ್ತಾರೆ. ೨೦೧೩ರ ಚುನಾವಣೆಯಲ್ಲಿ ಬಿ.ಎಸ್.ಆರ್. ಕಾಂಗ್ರೆಸ್ ಪಕ್ಷದ ನೇರ್ಲಗುಂಟೆ ತಿಪ್ಪೇಸ್ವಾಮಿ. ಇತ್ತೀಚೆಗೆ ೨೦೧೮ರ ಚುನಾವಣೆಯಲ್ಲಿ ಬಿಜೆಪಿ ಇಂದ ಶ್ರೀರಾಮುಲು ಆಯ್ಕೆಯಾಗುತ್ತಾರೆ.[೨೦]

ಚಿತ್ರದುರ್ಗ ವಿಧಾನಸಭೆ ಕ್ಷೇತ್ರ ೧೯೬೭ರಿಂದ ಇಂದಿನವರೆಗೆ ಸಾಮಾನ್ಯ ಕ್ಷೇತ್ರವಾಗಿ ಉಳಿದು ಕೊಂಡಿದೆ. ೧೯೬೭ ಮತ್ತು ೧೯೬೭ರಲ್ಲಿ ಹೆಚ್.ಸಿ. ಬೋರಯ್ಯ(ಕಾಂಗ್ರೆಸ್), ೧೯೭೨ ಸಿ.ಆರ್. ಮೊಹಮದ್ ಸಫಧಿನ್(ಕಾಂಗ್ರೆಸ್), ೧೯೭೮ ವಿ ಮಸೀಯಪ್ಪ(ಕಾಂಗ್ರೆಸ್-ಐ), ೧೯೮೩ ಬಿ.ಎಲ್. ಗೌಡ(ಜೆಎನ್.ಪಿ), ಹೆಚ್. ಏಕಾಂತಪ್ಪ ನವರು ೧೯೮೫ರಲ್ಲಿ (ಜೆಎನ್.ಪಿ) ಪಕ್ಷದಿಂದ, ಮತ್ತು ೧೯೮೯ (ಜೆಡಿ) ಪಕ್ಷದಿಂದ ಪುನರ್ ಆಯ್ಕೆಯಾಗುತ್ತಾರೆ. ೧೯೯೪ ಮತ್ತು ೧೯೯೯ರ ಚುನಾವಣೆಯಲ್ಲಿ ಜಿ.ಹೆಚ್. ತಿಪ್ಪೇರೆಡ್ಡಿ (ಐಎನ್.ಡಿ) ಪಕ್ಷದಿಂದ ಎರಡು ಭಾರಿ ಆಯ್ಕೆಯಾಗಿ ನಂತರ ೨೦೦೪ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಗೆಲ್ಲುತ್ತಾರೆ. ಆದರೆ ೨೦೦೮ರ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಎಸ್.ಕೆ. ಬಸವರಾಜನ್ ಜಯಗಳಿಸುತ್ತಾರೆ. ೨೦೧೩ ಮತ್ತು ೨೦೧೮ ರಲ್ಲಿ ಜಿ.ಹೆಚ್. ತಿಪ್ಪಾರೆಡ್ಡಿಯವರು ಬಿಜೆಪಿ ಪಕ್ಷದಿಂದ ಗೆದ್ದು, ಐದು ಭಾರಿ ಆಯ್ಕೆಯಾಗಿ ಸೋಲು ಇಲ್ಲದ ಸರದಾರ ಎನ್ನುವ ಬಿರುದು ಪಡೆಯುತ್ತಾರೆ ಜಿಲ್ಲೆಯಲ್ಲಿ.[೨೧]

ಚಳ್ಳಕೆರೆ ವಿಧಾನಸಭೆ ಕ್ಷೇತ್ರವು ೧೯೫೭ರಲ್ಲಿ ಎಸ್.ಸಿ ಮೀಸಾಲು ಕ್ಷೇತ್ರವಾಗಿರುತ್ತದೆ. ಆದ್ದರಿಂದ ಪರಿಶಿಷ್ಟಜಾತಿ ಸಮುದಾಯಕ್ಕೆ ಸೇರಿದ ಟಿ. ಹನುಮಂತಪ್ಪ ನಂತರ ಎ. ಬೀಮಪ್ಪನಾಯ್ಕ ರವರು ಕಾಂಗ್ರೆಸ್‌ನಿಂದ ಆಯ್ಕೆಯಾಗುತ್ತಾರೆ. ೧೯೬೭ರಿಂದ ೨೦೦೪ರ ವರೆಗೆ ಸಾಮಾನ್ಯ ಕ್ಷೇತ್ರವಾಗಿರುತ್ತದೆ. ಈ ಸಂದಂರ್ಭದಲ್ಲಿ ೧೯೬೭ ಬಿ.ಎಲ್. ಗೌಡ(ಪಿಎಸ್.ಪಿ) ಪಕ್ಷದಿಂದ ಮತ್ತು ೧೯೬೭ರಲ್ಲಿ ಕಾಂಗ್ರೇಸ್ ಪಕ್ಷದಿಂದ ಪುನರ್ ಆಯ್ಕೆಯಾಗುತ್ತಾರೆ. ೧೯೭೨ರಲಿ ವಿ. ಮಸೀಯಪ್ಪ(ಕಾಂಗ್ರೆಸ್),

೧೯೮೩ರ ಚುನಾವಣೆಯಲ್ಲಿ ಹೆಚ್. ಸಿ ಶಿವಶಂಕರಪ್ಪ(ಜೆಎನ್.ಪಿ), ೧೯೮೫ ತಿಪ್ಪೇಸ್ವಾಮಿ(ಜೆಎನ್.ಪಿ), ೧೯೮೯ ಜಯಣ್ಣ(ಕಾಂಗ್ರೆಸ್), ೧೯೯೪ ತಿಪ್ಪೇಸ್ವಾಮಿ(ಜೆಡಿ), ೧೯೯೯ ಜಿ. ಬಸವರಾಜ ಮಂಡಿಮಠ(ಬಿಜೆಪಿ), ೨೦೦೪ ಡಿ.ಸುಧಾಕರ್(ಕಾಂಗ್ರೆಸ್). ೨೦೦೮ರಲ್ಲಿ ಈ ಕ್ಷೇತ್ರ ಎಸ್.ಟಿ ಮೀಸಲು ಕ್ಷೇತ್ರವಾಗಿ ಬದಲಾಯಿತು. ಆದ್ದರಿಂದ ಸ್ಥಳಿಯ ನಾಯಕನಾದ ತಿಪ್ಪೇಸ್ವಾಮಿ(ಬಿಜೆಪಿ) ಆಯ್ಕೆಯಾಗುತ್ತಾರೆ. ೨೦೧೩ ಮತ್ತು ೨೦೧೮ರ ಚುನಾವಣೆಯಲ್ಲಿ ಟಿ. ರಘುಮೂರ್ತಿ(ಕಾಂಗ್ರೆಸ್) ಮರು ಆಯ್ಕೆಯಾಗಿ ಪ್ರಸ್ತುತ ಈವರೆಗೆ ಮುಂದುವರೆದಿರುತ್ತಾರೆ.[೨೨]

ಹಿರಿಯೂರು ೧೯೫೭ರಿಂದ ೧೯೬೨ರ ವರೆಗೆ ಸಾಮಾನ್ಯ ಕ್ಷೇತ್ರವಾಗಿರುತ್ತದೆ. ೧೯೫೭ ಕೆ. ಕೆಂಚಪ್ಪ(ಪಿಎಸ್.ಪಿ), ೧೯೬೨ ವಿ ಮಸೀಯಪ್ಪ(ಕಾಂಗ್ರೆಸ್), ೧೯೬೭ರಿಂದ ೨೦೦೪ರ ವರೆಗೆ ಎಸ್.ಸಿ ಮೀಸಲು ಕ್ಷೇತ್ರವಾಗಿ ಬದಲಾಯಿತು. ೧೯೬೭ರಲ್ಲಿ ಡಿ. ಮಂಜುನಾಥ(ಕಾಂಗ್ರೆಸ್) ರವರು ಜಯಗಳಿಸಿದರು. ಆದರೆ ಇವರ ವಿರುದ್ದವಾಗಿ ಭೋವಿ ಸಮುದಾಯದ ಯಲ್ಲಭೋವಿಯವರು ಕೇವಲ ೨೧೫೨ ಮತಗಳ ಅಂತರದಿಂದ ಸೋತವರು. ನಂತರ ೧೯೭೨ರಿಂದ ೧೯೭೮-೧೯೮೩-೧೯೮೫-೧೯೮೯ ಮತ್ತು ೧೯೯೯ರಲ್ಲಿ ಸೇರಿ ಒಟ್ಟು ಆರು ಭಾರಿ ಕಾಂಗ್ರಸ್ ಪಕ್ಷದಿಂದ ಕೆ. ಹೆಚ್ .ರಂಗನಾಥರವರು ಜಯಗಳಿಸಿದರು. ೧೯೯೪ ಮತ್ತು ೨೦೦೪ರಲ್ಲಿ ಡಿ. ಮಂಜುನಾಥ(ಜೆಡಿ/ಎಸ್). ೨೦೦೮ರಲ್ಲಿ ಸಾಮಾನ್ಯ ಕ್ಷೇತ್ರವಾಗಿ ಪರಿವರ್ತನೆಯಾಗುತ್ತಾದೆ. ಆ ಸಂದರ್ಭದಲ್ಲಿ ೨೦೦೮ರಲ್ಲಿ (ಐಎನ್.ಡಿ) ೨೦೧೩ರಲ್ಲಿ ಕಾಂಗ್ರೆಸ್ ಪಕ್ಷದಿಂದ ಡಿ. ಸುಧಾಕರ ರವರು ಆಯ್ಕೆಯಾಗುತ್ತಾರೆ. ೨೦೧೮ ಬಿಜೆಪಿ ಇಂದ ಪೂರ್ಣಿವ್ ಶ್ರೀನಿವಾಸ್ ಆಯ್ಕೆಯಾಗಿರುತ್ತಾರೆ.[೨೩]

ಹೊಸದುರ್ಗ ೧೯೫೭ ರಿಂದ ಇಂದಿನವರೆಗೂ ಇದು ಸಾಮಾನ್ಯ ಕ್ಷೇತ್ರವಾಗಿ ಉಳಿದುಕೊಂಡಿದೆ. ೧೯೫೭ ಬಿ.ಸಿ. ಶಂಕರಪ್ಪ (ಐಎನ್.ಡಿ) ೧೯೬೨ ಜಿ.ಟಿ. ರಂಗಪ್ಪ (ಪಿಎಸ್.ಪಿ), ೧೯೬೭ ಎಂ.ರಮಪ್ಪ (ಕಾಂಗ್ರೆಸ್), ೧೯೭೨ ಎಂ. ವಿ. ರುದ್ರಪ್ಪ (ಕಾಂಗ್ರೆಸ್), ೧೯೭೮ ಕೆ. ವೆಂಕಟರಾಮಯ್ಯ (ಕಾಂಗ್ರೆಸ್-ಐ), ೧೯೮೨ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಎಂ.ವಿ. ರುದ್ರಪ್ಪ ಪುನರ್ ಆಯ್ಕೆ, ೧೯೮೩ ಜ.ಬಸಪ್ಪ ಜೆಎನ್.ಪಿ), ೧೯೮೫ ಜಿ. ರಾಮದಾಸ್ (ಕಾಂಗ್ರೆಸ್), ೧೯೮೯ ಈ. ವಿಜಯಕುಮಾರ್ (ಐಎನ್.ಡಿ), ೧೯೯೪ ಟಿ.ಹೆಚ್.ಬಸವರಾಜ (ಐಎನ್.ಡಿ), ೧೯೯೯ರಲ್ಲಿ ಐಎನ್.ಡಿ ೨೦೦೪ ಕಾಂಗ್ರೆಸ್ ಪಕ್ಷದಿಂದ ಬಿ.ಜಿ. ಗೋವಿಂದಪ್ಪರವರು ಆಯ್ಕೆಯಾಗುತ್ತಾರೆ. ೨೦೦೮ರ ಚುನಾವಣೆಯಲ್ಲಿ ಭೋವಿ ಸಮುದಾಯದ ಗೂಳಿಹಟ್ಟಿ ಡಿ. ಶೇಖರ್ ಅವರು ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಯಾಗುತ್ತಾರೆ. ಆದರೆ ೨೦೧೩ರ ಚುನಾವಣೆಯಲ್ಲಿ ಗೂಳಿಹಟ್ಟಿ ಡಿ. ಶೇಖರ್ ರವರು ಬಿಜೆಪಿ ಯಿಂದ ಸ್ಪರ್ದೆಮಾಡಿ, ಕಾಂಗ್ರೆಸ್‌ನ ಬಿ.ಜಿ ಗೋವಿಂದಪ್ಪ ವಿರುದ್ದ ಸೋತು ಹೋಗುತ್ತಾರೆ. ಇತ್ತೀಚೆಗೆ ನಡೆದ ೨೦೧೮ರ ಚುನಾವಣೆಯಲ್ಲಿ ಗೂಳಿಹಟ್ಟಿ ಡಿ ಶೇಖರ್ ಅವರು ಮರು ಆಯ್ಕೆಯಾಗಿ ಮುಂದುವರೆದಿರುತ್ತಾರೆ.[೨೪]

೨೦೧೮ರ ಕರ್ನಾಟಕದ ವಿಧಾನಸಭೆ ಚುನಾವಣೆಯಲ್ಲಿ ಭೋವಿ ಸಮುದಾಯದ ಪ್ರತಿನಿಧಿಗಳು ೭ಜನ ಗೆದ್ದಿರುವುದನ್ನು ನೋಡಬಹುದು. ಇದರಲ್ಲಿ ಕಾಂಗ್ರೇಸ್‌ನಿಂದ ಮೂರು ಜನ. ಅವರೆಂದರೆ ಪುಲಿಕೇಶಿ ನಗರದಿಂದ ಅಖಂಡ ಶ್ರೀನಿವಾಸ್ ಮೂರ್ತಿ, ಪಾವಗಡದಿಂದ ವೆಂಕಟರಮಣ್ಣಪ್ಪ ನವರು ಗೆದ್ದು ಕಾರ್ಮಿಕ ಸಚಿವರಾಗಿ ಮತ್ತು ಚಿತ್ರದುರ್ಗ ಜಿಲ್ಲೆಯ ಉಸ್ತವರಿಯಾಗಿ ಕೆಲಸ ಮಾಡಿದ್ದಾರೆ. ಲಿಂಗಸ್ೂಗುರಲ್ಲಿ ಮೂರು ಪಕ್ಷಗಳಿಂದಲು ಭೋವಿ ಸಮುದಾಯದವರುನ್ನು ನಿಲ್ಲಿಸಿರುತ್ತಾರೆ. ಜೆಡಿಎಸ್ ನಿಂದ ಸಿದ್ದಪ್ಪ ಬಂಡಿ, ಬಿಜೆಪಿ ಇಂದ ಮಾನಪ್ಪ ವಜ್ಜಲ್, ಕಾಂಗ್ರೆಸ್ ನಿಂದ ಹೂಲಿಗೇರಿ ಅವರು. ಇದರಲ್ಲಿ ಹೂಲಿಗೇರಿ ಜಯಗಳಿಸುತ್ತಾರೆ. ಇನ್ನು ಬಿಜೆಪಿ ಯಿಂದ ನಾಲ್ಕು ಜನ ಜಯಗಳಿಸಿರುತ್ತಾರೆ. ಅದರಲ್ಲಿ ಮಾಜಿ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ, ಬೆಂಗಳೂರಿನ ಮಹದೇವಪುರದಿಂದ, ಎಸ್. ರಘು ಸಿ.ವಿ ರಾಮನ್ ನಗರ, ಗೂಳಿಹಟ್ಟಿ ಡಿ. ಶೇಖರ್ ಹೊಸದುರ್ಗ ಸಾಮಾನ್ಯ ಕ್ಷೇತ್ರದಿಂದ, ಹೊಳಲ್ಕೇರಿ ಎಸ್.ಸಿ ಮೀಸಲು ಕ್ಷೇತ್ರದಿಂದ ಎಂ. ಚಂದ್ರಪ್ಪ ನವರು ಗೆದ್ದರೆ ಕನಕಗಿರಿ ಇಂದ ಸ್ಪರ್ಧೆ ಮಾಡಿದ ಶಿವರಾಜ ತಂಗಡಗಿ, ಮತ್ತು ಲಿಂಗಸ್ೂಗುರು ನಿಂದ ಸ್ಪರ್ದೆ ಮಾಡಿದ ಮಾನಪ್ಪಪಜ್ವಲ್ ಮತ್ತು ಸಿದ್ದಪ್ಪ ಬಂಡಿ ಯವರು ಸೋಲುತ್ತಾರೆ. ಒಟ್ಟಾರೆಯಾಗಿ ೧೦ಜನ ಸ್ಪರ್ದೆಮಾಡಿ ೭ಜನ ಗೆದ್ದು ಗುರುತಿಸಿಕೊಂಡಿದ್ದಾರೆ ಸಮುದಾಯದಲ್ಲಿ.[೨೫]

೨೦೧೮ರ ವಿಧಾನಸಭೆಯ ಚುನಾವಣೆ ಚಿತ್ರದುರ್ಗ ಜಿಲ್ಲೆಯಲ್ಲೆಯಲ್ಲಿ ಒಟ್ಟು ೧೩,೩೭,೯೪೦ ಮತದಾರರು ಇದ್ದು, ಅದರಲ್ಲಿ ೧೦,೭೭,೬೯೯ ಮತದಾರರು ಮತದಾನ ಮಾಡಿದ್ದಾರೆ. ೨,೬೦,೨೪೧ ಮತದಾರರು ಮತದಾನ ಮಾಡದಿರುವುದು ಬೆಳಕಿಗೆ ಬಂದಿದೆ. ಕ್ಷೇತ್ರವಾರು ನೋಡುವುದಾದರೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ, ೨,೩೧,೧೧೬ ಮತದಾರರು ಇದ್ದು, ೧,೯೧,೧೮೪ ಮತದಾನವಾಗಿದೆ. ಹೊಳಲ್ಕೆರೆ ೧,೮೬,೮೮೭ ಇದೆ ಮತದಾನ ಮಾಡಿರುವುದು ಇಷ್ಟು ೧,೧೪,೧೨೭. ಹೊಸದುರ್ಗ ೧,೮೭,೧೧೧ ಇದರಲ್ಲಿ ಮತದಾನವಾಗಿರುವುದು ೧,೫೭,೭೬೧. ಚಳ್ಳಕೆರೆ ೨,೦೮,೯೦೯ ಇದ್ದು ೧,೬೭,೭೨೭ ಮತದಾನವಾಗಿದೆ. ಚಿತ್ರದುರ್ಗ ೨,೫೦,೯೬೭ ಮತಗಳು ಇದ್ದು ೧,೮೭,೧೯೧ ಮತದಾನವಾಗಿದೆ. ಹಿರಿಯೂರು ೨,೩೫,೪೪೪ ಮತಗಳು ಇದ್ದು ೧,೮೬,೯೪೯ ಮತದಾನವಾಗಿದೆ. ೨೦೧೮ ಮೇ೧೨ರ ಚುನಾವಣೆಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಶೇಕಡ ೮೦,೫೪ ರಷ್ಟು ಮತದಾನವಾಗಿದೆ. ಕಳೆದ ೨೦೧೩ರ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಶೇಕಡ ೭೬,೭೯ರಷ್ಟು ಮತದಾನವಾಗಿರುವುದು ಬೆಳಕಿಗೆ ಬಂದಿದೆ.[೨೬]

೩.೬ ಮೊಳಕಾಲ್ಮೂರು ತಾಲ್ಲೂಕು ಮತ್ತು ಅಧ್ಯಯನಕ್ಕೊಳಪಡಿಸಿದ ಗ್ರಾಮಗಳ ಪರಿಚಯ

ಚಿತ್ರದುರ್ಗ ಜಿಲ್ಲಾ ಕೇಂದ್ರದಿಂದ ಈಶಾನ್ಯ ದಿಕ್ಕಿನ ೯೦ ಕಿ.ಮೀ. ದೂರದಲ್ಲಿದೆ. ತಾಲ್ಲೂಕು ಕೇಂದ್ರವಾಗಿದೆ. ಭಾರತದಲ್ಲೇ ಮೊಳಕಾಲ್ಮೂರು ರೇಷ್ಮೆ ಸೀರೆಗೆ ಪ್ರಸಿದ್ಧಿ ಪಡೆದಿದೆ. ಬೃಹದಾಕಾರದ

ಹೆಬ್ಬಂಡೆ, ಗುಡ್ಡಗಳಿಂದ ಆವೃತಗೊಂಡ ಬೆಟ್ಟಗಳ ಸಾಲು ಇದೆ. ಸೀತಾಫಲಕ್ಕೆ ಪ್ರಸಿದ್ಧಿ ಪಡೆದಿದೆ. ಅತಿಕಡಿಮೆ ಮಳೆ ಬೀಳುವ ಪ್ರದೇಶ ಹಾಗೂ ಹೆಚ್ಚು ಬಿಸಿಲಿನ ತಾಪ ಹೊಂದಿದ್ದು ಹಿಂದುಳಿದು, ಬರಗಾಲ ಪೀಡಿತ ಪ್ರದೇಶವಾಗಿದೆ. ಪೂರ್ವಕ್ಕೆ ಆಂದ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕು, ಪಶ್ಚಿಮಕ್ಕೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು, ಉತ್ತರಕ್ಕೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು, ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಗಡಿಭಾಗಗಳನ್ನು ಹೊಂದಿದೆ.[೨೭] ಹಿಂದೆ ಮಹಾರಾಜರ ಕಾಲದಲ್ಲಿ ಶತ್ರುಗಳು ಬೆಟ್ಟವನ್ನು ಅತಿಕ್ರಮಿಸಿದಂತೆ ಮೂರನೇ ಸಾಲಿನ ಕೋಟೆಯ ಕೆಳಭಾಗದ ಅತ್ಯಂತ ವಿಶಾಲಾವಾದ ಇಳಿಜಾರದ ಬಂಡೆಗೆ ಎಣ್ಣೆ ಸವರಿ ಅದರ ಮೇಲೆ ಸೈನಿಕ ಕಾಲುಜಾರಿ ಮೊಣಕಾಲು ಮುರಿಯುವಂತೆ ಬಿದ್ದು ಹತರಾಗುತ್ತಿದ್ದರಂತೆ. ಅದರಿಂದ ಈ ಊರಿಗೆ 'ಮೊಳಕಾಲುಮುರಿ' ಮೊಳಕಾಲ್ಮೂರಿ ನಂತರದ ದಿನಗಳಲ್ಲಿ ಮೊಳಕಾಲ್ಮೂರು ಎಂದು ಹೆಸರು ಬಂದಿದೆ.[೨೮] ಭೌಗೋಳಿಕ ವಿಸ್ತೀರ್ಣ ೩೮೫೭,೦೫ ಹೆಕ್ಟೆರ್ ಗಳು, ೩೨೯೫,೩೨ ಖರಾಬು ಸಾಗು ಭೂಮಿ ವಿಸ್ತೀರ್ಣ ೫೨೧,೭೩ ಹೆಕ್ಟೇರ್ಗಳು ಹೊಂದಿದೆ. ಬಯಲು ಪ್ರದೇಶ ಕೆಲವು ಶಿಲೆಗಳಿಂದ ಕೂಡಿದ ಮರಳು ಮಿಶ್ರಿತ ಕೆಂಪು ಮಣ್ಣಿನ ಲಕ್ಷಣವನ್ನು ಹೊಂದಿದೆ. ಕೃಷಿ ಪ್ರಧಾನವಾಗಿದ್ದು, ಶೇಂಗಾ ಪ್ರಮುಖ ಬೆಳೆಯಾಗಿದೆ. ತೊಗರಿ, ಅಲಸಂದಿ, ಹೆಸರುಕಾಳು ಉಪ ಬೆಳೆಗಳಾಗಿವೆ. ಮೆಕ್ಕೆಜೊಳ, ರಾಗಿ, ಹತ್ತಿ, ಭತ್ತ, ಪ್ರಮುಖ ನೀರಾವರಿ ಬೆಳೆಗಳು. ಮಲ್ಲಿಗೆ ಹೂ, ಈರುಳ್ಳಿ, ತೆಂಗು, ಮಾವು, ಸಪೋಟ, ದಾಳಿಂಬೆ, ತೋಟಗಾರಿಕೆ ಬೆಳೆಗಳು. ರೇಷ್ಮೆ ಸಾಕಣಿಕೆ, ಇದಕ್ಕೆ ಜೋಗಪ್ಪನ ಗುಡ್ಡ ಪೂರ್ವಕ್ಕೆ ದವಳಪ್ಪನಕೆರೆಯಿದೆ ಹಾಗೂ ಮೊಳಗುವ ಕಲ್ಲು ಎಂಬ ಇನ್ನಿತರೆ ಹೆಸರುಗಳಿವೆ.[೨೯]

ಮೊಳಕಾಲ್ಮೂರು ನಿಂದ ಆಂಧ್ರದ ರಾಯದುರ್ಗದವರೆಗೂ ಗ್ರಾನೈಟ್ ಶಿಲೆಯ ಬೆಟ್ಟಗುಡ್ಡಗಳಿವೆ. ಈ ತಾಲ್ಲೂಕು ಸಮುದ್ರ ಮಟ್ಟದಿಂದ ೨೯೮೮ ಅಡಿ ಎತ್ತರದಲ್ಲಿದೆ. ಬಯಲು ಸೀಮೆ ತಾಲ್ಲೂಕು ಆಗಿ ಬೇಸಿಗೆಯಲ್ಲಿ ಬಿಸಿಲು ಹೆಚ್ಚಾಗಿರುತ್ತದೆ. ಕಡಿಮೆ ಮಳೆ ಬರುವುದರಿಂದ ಅನಾವೃಷ್ಟಿಗೆ ತುತ್ತಾಗಿರುವ ತಾಲ್ಲೂಕು ಎನ್ನುವ ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ.[೩೦] ೨೦೧೧ರ ಜನಗಣತಿ ಪ್ರಕಾರ ಒಟ್ಟು ೧೪೧,೨೮೪ರಷ್ಟು ಜನಸಂಖ್ಯೆ ಇದೆ ಇದರಲ್ಲಿ ೭೨,೦೪೯ ಪುರುಷರು, ೬೯,೨೩೫ ಮಹಿಳೆಯರು ಇದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿಯವರು ೨೭,೯೫೧. ಇದರಲ್ಲಿ ಪುರುಷರು ೧೪,೩೯೧, ಮಹಿಳೆಯರು ೧೩,೫೬೦ ಇದ್ದಾರೆ. ಜಿಲ್ಲೆಯಲ್ಲಿಯೇ ಅತ್ಯಂತ ಕಡಿಮೆ ಪರಿಶಿಷ್ಟಜಾತಿಯವರನ್ನು ಹೊಂದಿದ ತಾಲ್ಲೂಕು.[೩೧] ಜೀವನಮಟ್ಟ ಸೂಚ್ಯಂಕ ಮೌಲ್ಯ ೦.೨೫೧ ಸ್ಥಾನ ೧೧೪, ಆರೋಗ್ಯ ಸೂಚ್ಯಂಕ ಮೌಲ್ಯ ೦.೬೪೯ ಸ್ಥಾನ ೧೦೦, ಶೈಕ್ಷಣಿಕ ಮೌಲ್ಯ ೦.೩೫೧, ಸ್ಥಾನ ೧೬೭, ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ೦.೩೮೫ ಸ್ಥಾನ ೧೨೯, ಇರುವುದನ್ನು ತಿಳಿಯಬಹುದು.[೩೨] ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬಿ.ಜಿ.ಕೆರೆ, ಚಿಕ್ಕೇರಹಳ್ಳಿ,

ದೇವಸಮುದ್ರ, ಹಾನಗಲ್, ಹಿರೆಕೆರೆಹಳ್ಳಿ, ಜೆ. ಬಿ ಹಳ್ಳಿ, ಕೋನಸಾಗರ, ಕೊಂಡ್ಲಹಳ್ಳಿ, ನಾಗಸಮುದ್ರ, ನೇರ್ಲಹಳ್ಳಿ, ರಾಂಪುರ, ರಾಯಪುರ, ಸಂತೆಗುಡ್ಡ, ಸಿದ್ದಾಪುರ, ತಮ್ಮೇನಹಳ್ಳಿ, ತೂಮಕ್ಲೂರಹಳ್ಳಿ. ಸೇರಿ ಒಟ್ಟು ೧೬ ಗ್ರಾಮ ಪಂಚಾಯಿತಿಗಳು, ಎರಡು ನಾಡಕಛೇರಿಗಳು, ೨೮ ಗ್ರಾಮ ಲೆಕ್ಕಿಗರ ವೃತ್ತಗಳು, ೨ ಹೋಬಳಿಗಳು, ೭೮ ಜನವಸತಿ ಇರುವ, ೧೧ ಜನವಸತಿ ಇಲ್ಲದವು ಸೇರಿ ಒಟ್ಟು ೮೯ ಗ್ರಾಮಗಳು ಇದ್ದಾವೆ.[೩೩] ತಾಲ್ಲೂಕಿನಲ್ಲಿ ಭೋವಿ ಸಮುದಾಯದವರು ಒಟ್ಟು ೧೫ ಹಳ್ಳಿಗಳಲ್ಲಿ ಇದ್ದರೆ, ಚಿಕ್ಕೇರಹಳ್ಳಿ, ಸಿದ್ದಯ್ಯನಕೋಟೆ, ಮಹಂತೇಶ್ ನಗರ, ಜಯಂತಿ ನಗರದಲ್ಲಿ ದೊಡ್ಡಮಟ್ಟದಲ್ಲಿದ್ದಾರೆ. ಹಾನಗಲ್, ಭೈರಾಪುರ, ಕೋನಸಾಗರ, ಉಡೇವು, ನೇತ್ರನಹಳ್ಳಿ, ಕೊಂಡ್ಲಹಳ್ಳಿ, ನಾಗಸಮುದ್ರ, ಹಿರೇಕೆರೆಹಳ್ಳಿ, ತುಮಾಕ್ಲೂರಹಳ್ಳಿ, ಚಿಕ್ಬೋನಹಳ್ಳಿ, ರಾಂಪುರದಲ್ಲಿ ಚಿಕ್ಕಮಟ್ಟದಲ್ಲಿದ್ದಾರೆ.[೩೪] ತಾಲ್ಲೂಕಿನಲ್ಲಿ ನಾಯಕರದ್ದು ದೊಡ್ಡ ಸಮುದಾಯವಾಗಿ, ಪದ್ಮಸಾಲಿ, ಮುಸ್ಲಿಂ, ಪೊಕ್ಕಳ್ ಸಾಲಿ, ಲಿಂಗಾಯತ, ಶೆಟ್ಟರು, ಮಾದಿಗ, ಮಡಿವಾಳ, ಕುರುಬ, ಕಾಡುಗೊಲ್ಲ, ಊರುಗೊಲ್ಲ, ಭೋವಿ, ಚಲವಾದಿ, ಕುಂಬಾರ್, ಬ್ರಾಹ್ಮಣರು, ಕೊರಚ, ವಿಶ್ವಕರ್ಮ, ಕ್ಷೌರಿಕರು, ವೈಶರು, ಇತರೆ ಸಣ್ಣ ಸಮುದಾಯಗಳು. ಕನ್ನಡ ಪ್ರಮುಖ ಭಾಷೆಯಾಗಿ ತೆಲುಗು, ಮರಾಠಿ ಉರ್ದು ಭಾಷೆಯನ್ನು ಮಾತನಾಡುತ್ತಾರೆ.[೩೫] ತಾಲ್ಲೂಕಿನ ಜನಸಂಸ್ಥಾನ, ಭೂಮಿಕ ಅಕ್ಷರಗ್ರಾಮೀಣ ವಿಕಾಸ ಸಂಸ್ಥೆ, ಭೂಮಿಕ, ಸ್ಪಂದನ, ಕರ್ನಾಟಕ ರಾಜ್ಯಟೈಲರ್ಸ್ ಒಕ್ಕೂಟ, ಕರ್ನಾಟಕ ರಾಜ್ಯ ಚಿಕನ್ ಸೆಂಟರ್ ಕಾರ್ಮಿಕ ಒಕ್ಕೂಟ, ನಿವೃತ್ತನೌಕರರ ಸಂಘ, ಸ್ತ್ರೀ ಶಕ್ತಿ ಸಂಘಗಳ ತಾಲ್ಲೂಕು ಮಟ್ಟದ ಒಕ್ಕೂಟ, ಕವಾರ್ಡ ನಬರ್ಡ, ವಿಷ್ಣು, ಸ್ಪೂರ್ತಿ, ಕನ್ನಡ ಕಲಾಸಂಘ, ವಿನಾಯಕ ಯುವಕರ ಸಂಘ, ಸಮುದಾಯಸಂಘ, ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ, ಯುವಜಾಗೃತ ವೇದಿಕೆ, ಇತ್ಯಾದಿ ಸಂಘಟನೆಗಳು ಇರುವುದು ಬೆಳಕಿಗೆ ಬರುತ್ತದೆ.[೩೬]

ನಾಗಸಮುದ್ರ ಗ್ರಾಮದ ಪರಿಚಯ ಮತ್ತು ಹಿನ್ನೆಲೆ

ಮೊಳಕಾಲ್ಮೂರು ತಾಲ್ಲೂಕು ಕೇಂದ್ರದಿಂದ ಉತ್ತರದಿಕ್ಕಿಗೆ ೧೯ ಕಿ.ಮೀ ದೂರದಲ್ಲಿದೆ. ಹೋಬಳಿ ಕೇಂದ್ರವಾಗಿದ್ದು, ಕಂದಾಯ ಗ್ರಾಮ. ನಾಗ ಎಂಬ ಹೆಸರಿನ ವ್ಯಕ್ತಿಯೊಬ್ಬ ಕಟ್ಟಿಸಿದ ಕೆರೆಯ ಪ್ರದೇಶದಲ್ಲಿ ಆದ ಊರು ನಾಗಸಮುದ್ರ ಎಂಬ ಹೆಸರು ಪಡೆದಿರುವಂತೆ ಕಂಡು ಬರುತ್ತದೆ.[೩೭] ಭೌಗೋಳಿಕ ವಿಸ್ತೀರ್ಣ ೩೬೪೮,೦೮ ಹೆಕ್ಟ್‌ರ್‌ಗಳು, ಕೆಂಪು ಮಣ್ಣಿನ ಲಕ್ಷಣ ಹೊಂದಿದೆ. ಕೆರೆಮಾಗಣಿ ಇದ್ದು. ಉತ್ತರಕ್ಕೆ ಚಿನ್ನಹಗರಿ ಇದೆ. ಪಶ್ಚಿಮಕ್ಕೆ ಕೆರೆಗುಡ್ಡ ಇದೆ. ದಕ್ಷಿಣಕ್ಕೆ ನುಂಕಪ್ಪನಗುಡ್ಡ, ಸೂಳೆಯರ ಗುಡ್ಡಗಳಿವೆ. ಕೃಷಿ ಪ್ರಮುಖ ಕಸುಬು. ರಾಗಿ, ಜೋಳ, ಭತ್ತ ಮುಖ್ಯ ಆಹಾರ ಬೆಳೆಗಳು. ಶೇಂಗಾ, ಹತ್ತಿ, ಸೂರ್ಯಕಾಂತಿ, ಮೆಕ್ಕೆಜೋಳ, ಸಜ್ಜೆ, ಮೆಣಸಿನಕಾಯಿ, ಈರುಳ್ಳಿ, ಟಮಟೋ ಮಲ್ಲಿಗೆ ಹೂ, ಚಂಡು ಹೂ, ವಾಣಿಜ್ಯ ಬೆಳೆಗಳು. ತೊಗರಿ, ಹುರಿಳಿ,

ಹೆಸರು, ಕುರಸಾಲಿ ದಾಳಿಂಬೆ, ಬಾಳೆ, ತೆಂಗು, ಮಾವು ತೋಟಗಾರಿಕೆ ಬೆಳೆಗಳು. ಸಾಂಪ್ರದಾಯಿಕ ಹೈನುಗಾರಿಕೆ ಇದೆ. ಖಾಸಗಿ ಹಾಲಿನಡೈರಿ ಇದೆ.[೩೮] ೨೦೧೧ರ ಜನಗಣತಿ ಪ್ರಕಾರ ೧.೫೩೪ ಮನೆಗಳಿವೆ. ೭,೯೦೨ ಜನಸಂಖ್ಯೆ ಹೊಂದಿದೆ. ತಾಲ್ಲೂಕಿನಲ್ಲಿಯೇ ಎರಡನೇ ದೊಡ್ಡ ಗ್ರಾಮ. ೪೬೯೯ ಗಂಡಸರು, ೩,೮೦೩ ಹೆಂಗಸರಿದ್ದಾರೆ.[೩೯] ನಾಯಕರದು ದೊಡ್ಡ ಸಮುದಾಯ. ಊರಲ್ಲಿ ಮಾದಿಗ, ಕೊರಚ, ಶೆಟ್ಟರು, ಬ್ರಾಹ್ಮಣ, ಲಿಂಗಾಯಿತ, ಮುಸ್ಲಿಂ, ಕ್ರಿಶ್ಚಿಯನ್, ಮಡಿವಾಳ, ಭಾರಿಕೇರು, ಮಣಿಗಾರ, ಕುಂಬರ, ಕಾಡುಗೊಲ್ಲ, ಮತ್ತು ಊರು ಗೊಲ್ಲರು ಇದ್ದು, ಭೋವಿ ಸಮುದಾಯದ ೧೫೦ ಮನೆಗಳು ೪ನೇ ವಾರ್ಡನಲ್ಲಿವೆ. ಒಟ್ಟು ಗ್ರಾಮ ಪಂಚಾಯಿತಿಯಲ್ಲಿ ಐದು ವಾರ್ಡಗಳು ಮತ್ತು ಆಂದ್ರಪ್ರದೇಶದ ಗಡಿಭಾಗದಲ್ಲಿರುವ ಹುಚ್ಚಂಗಿದುರ್ಗವು ಈ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ.[೪೦] ಗ್ರಾಮವು ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರ, ಹಿಂದೆ ಹಾನಗಲ್ ಜಿಲ್ಲಾ ಪಂಚಾಯಿತಿ ಕ್ಷೇತ್ರವಾಗಿತ್ತು ೨೦೧೬ರ ಚುನಾವಣೆಯಿಂದ ನಾಗಸಮುದ್ರ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರವಾಗಿದೆ. ೨೦೧೦ರಲ್ಲಿ ೧೯ ಗ್ರಾಮ ಪಂಚಾಯಿತಿ ಸದಸ್ಯರು ಇದ್ದರು. ಅದರಲ್ಲಿ ಹೆಚ್. ನಾಗಭೂಷಣ ರವರು ಭೋವಿ ಸಮುದಾಯ ಪ್ರತಿನಿಧಿ. ೨೦೧೫ರ ಚುನಾವಣೆಯಲ್ಲಿ ಒಂದು ವಾರ್ಡ ಹೆಚ್ಚಿಗೆ ಆದ ಪರಿಣಾಮದಿಂದ ೨೦ ಸದಸ್ಯರು ಆಯ್ಕೆಯಾಗುತ್ತಾರೆ. ಅದರಲ್ಲಿ ಭೋವಿ ಸಮುದಾಯದ ಟಿ. ತಿಪ್ಪೇಸ್ವಾಮಿ ೨ನೇ ವಾರ್ಡನಿಂದ ಗೆದ್ದು ಸದಸ್ಯರಾಗಿ, ಪದ್ಮ ನಾಗರಾಜ ರವರು ೪ನೇ ವಾರ್ಡ್ ನಿಂದ ಗೆದ್ದು ಅಧ್ಯಕ್ಷರಾಗಿ ಗುರುತಿಸಿಕೊಳ್ಳುತ್ತಾರೆ. ೨೦೨೦ರ ಚುನಾವಣೆಯಲ್ಲಿ ಭೋವಿ ಸಮುದಾಯದ ಮಹಿಳೆ ತಿಮ್ಮಕ್ಕ ಶೆಲಿಯಪ್ಪನಹಳ್ಳಿ ಮಾರಣ್ಣ ಅವರು ೩ನೇ ವಾರ್ಡ್‌ನಿಂದ ಆಯ್ಕೆಯಾಗಿ ಗುರುತಿಸಿಕೊಳ್ಳುತ್ತಾರೆ.

ಸಿದ್ದಯ್ಯನಕೋಟೆ ಗ್ರಾಮದ ಪರಿಚಯ ಮತ್ತು ಹಿನ್ನೆಲೆ

ಮೊಳಕಾಲ್ಮೂರು ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೧ ಕಿ.ಮೀ ದೂರದಲ್ಲಿದೆ. ೨೫೫ ವರ್ಷಗಳ ಇತಿಹಾಸವನ್ನು ಹೊಂದಿದ ಗ್ರಾಮ. ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿದ್ದು, ಊರಿನದಡದಲ್ಲಿ ಚಿನ್ನಹಗರಿ ನದಿ ಹರಿಯುತ್ತಿದೆ. ಈ ನದಿಯ ದಡದಲ್ಲಿ ಹಿಂದೆ ಸಿದ್ದ ಪುರುಷರು ತಪೋನಿರತರಾಗಿದ್ದರು. ಮತ್ತು ಈ ಪ್ರದೇಶದಲ್ಲಿ ಪಾಳೆಗಾರರ ಕಾವಲು ಸೈನ್ಯವು ತಂಗಲೆಂದು ಒಂದು ಚಿಕ್ಕ ಕೋಟೆ ನಿರ್ಮಿಸಿದ್ದರು. ಆದ್ದರಿಂದ ಸಿದ್ದಯ್ಯನಕೋಟೆ ಎಂದು ಹೆಸರು ಬಂದಿದೆ.[೪೧] ಮೊದಲು ಕಲ್ಲು ಮಣ್ಣಿನಿಂದ ನಿರ್ಮಿತವಾದ ಕೋಟೆ ಇರುವುದರಿಂದು ಕೋಟೆ ಎಂದು ಹೆಸರು ಇತ್ತು. ಚಿತ್ರದುರ್ಗದ ದೊರೆ ಭರಮಣ್ಣ ನಾಯಕನ ಕಾಲದಲ್ಲಿ ಅರಳಿಕಟ್ಟೆ ಎಂಬ ಹೆಸರು ಇರುತ್ತದೆ ಕಾಲನಂತರ ಸಿದ್ದಯ್ಯನಕೋಟೆ ಎನ್ನುವ ಹೆಸರು ಬಳಕೆಗೆ ಬಂದಿದೆ.

ಗ್ರಾಮದಲ್ಲಿ ನ್ಯಾಯಮಂಡಲಿ ಇದೆ. ಮತ್ತು ಹಾಲು ಉತ್ಪಾದಕರ ಸಹಕಾರ ಸಂಘ, ಒಂಭತ್ತು ಸ್ತ್ರೀ ಶಕ್ತಿ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮೀಣ ಮಹಿಳಾ ಸಂಘಗಳು, ಬಸವೇಶ್ವರ ಯುವಕರ ಸಂಘ, ಅಂಬೇಡ್ಕರ್ ಯುವಕರ ಸಂಘಗಳು ಇವೆ.[೪೩] ಭೌಗೋಳಿಕ ವಿಸೀರ್ಣ ೮೨೭,೯೩ ಹೆಕ್ಟೇರ್ ಗಳು, ರಕ್ಷಿತ ಅರಣ್ಯ ಪ್ರದೇಶವಿದೆ. ಕೃಷಿಭೂಮಿ ವಿಸ್ತೀರ್ಣ ೬೬೨.೦೨ ಹೆಕ್ಟೇರ್‌ಗಳು, ಬಯಲು ಸೀಮೆ ಕೆಂಪು ಶಿಲೆಯಿಂದ ಕೂಡಿದ್ದು, ಕೆಂಪು ಮಣ್ಣಿನ ಲಕ್ಷಣ ಹೊಂದಿದೆ. ಶೇಂಗಾ, ಪ್ರಮುಖ ಬೆಳೆ. ಹುರುಳಿ, ಅಲಸಂದಿ, ಮಡಿಕೆ, ಹೆಸರು, ತೊಗರಿ, ಉಪಬೆಳೆಗಳು. ವೀಳ್ಯದೆಲೆ, ಅಡಿಕೆ, ಬಿಳಿಜೋಳ, ಮುಸುಕಿನ ಜೋಳ, ರಾಗಿ, ಭತ್ತ ಮತ್ತು ತರಕಾರಿ ಸೊಪ್ಪು ತೋಟಗಾರಿಕೆ ಬೆಳೆಗಳು ಬೆಳೆಯುತ್ತಾರೆ.[೪೪]

೨೦೧೧ರ ಜನಗಣತಿ ಪ್ರಕಾರ ಒಟ್ಟು ೩೩೯ ಮನೆಗಳು ಇದ್ದು, ಒಟ್ಟು ಊರಲ್ಲಿ ೧೭೦೪ ಜನಸಂಖ್ಯೆ ಇದ್ದು, ಗಂಡಸರು ೮೮೪, ಹೆಂಗಸರು ೮೨೦ ಇದ್ದಾರೆ. ಇದರಲ್ಲಿ ೨೦೦ ಮನೆಗಳು ಭೋವಿ ಸಮುದಾಯದ ಮನೆಗಳು ಜಾಸ್ತಿ ಇದ್ದಾವೆ. ಇವರ ಜೊತೆಯಲ್ಲಿ ಇತರೆ ಸಮುದಾಯಗಳಾದ, ಲಿಂಗಾಯಿತ, ಸರ್ಪಒಕ್ಕಲಿಗರು, ಕಮ್ಮಾರರು, ಕುಂಬಾರರು, ಮಾದಿಗ, ಕ್ಷೌರಿಕರು, ಮುಸ್ಲಿಂ, ಮತ್ತು ನಾಯಕ ಸಣ್ಣ ಸಮುದಾಯಗಳು ವಾಸವಿದ್ದಾರೆ. ಕನ್ನಡ ಪ್ರಮುಖ ಭಾಷೆಯಾಗಿ ಕನ್ನಡ ಮಿಶ್ರಿತ ತೆಲುಗು ಭಾಷೆ ರೂಡಿಯಲ್ಲಿದೆ.[೪೫] ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರ ಹಾನಗಲ್ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ರಾಯಪುರ ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಿಂದ ೨೦೧೦ರ ಗ್ರಾಮ ಪಂಚಾಯಿತಿಗೆ ಊರಿನಿಂದ ೫ಜನ ಆಯ್ಕೆಯಾಗುತ್ತಾರೆ. ಅದರಲ್ಲಿ ಭೋವಿ ಸಮುದಾಯದಿಂದ ಸದಸ್ಯರಾಗಿ ಪಿ. ಮರಿಸ್ವಾಮಿ, ಅಧ್ಯಕ್ಷರಾಗಿ ಶಾಂತಮ್ಮ ಶಾಮ್ಯಣ್ಣನವರು ಗುರುತಿಸಿಕೊಳ್ಳುತ್ತಾರೆ. ೨೦೧೧ರ ತಾಲ್ಲೂಕು ಪಂಚಾಯಿತಿಯ ಸದಸ್ಯರಾಗಿ, ನಂತರ ಅಧ್ಯಕ್ಷ ಸ್ಥಾನವನ್ನು ಜಯಪದ್ಮ ಬಸಣ್ಣ ರವರು ಅಧಿಕಾರವನ್ನು ನಿಭಾಯಿಸಿರುತ್ತಾರೆ. ೨೦೧೫ರ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಗುರುಸ್ವಾಮಿ ಎಂ. ರವರು ಮಾತ್ರ ಸಮದಾಯದ ಪ್ರತಿನಿಧಿಯಾಗಿ ಆಯ್ಕೆಯಾಗುತ್ತಾರೆ.[೪೬] ೨೦೨೦ರ ಚುನಾವಣೆಯಲ್ಲಿ ಮೀನಾಕ್ಷಿ ಮತ್ತು ಮಂಜಣ್ಣ ಅವರು ಆಯ್ಕೆಯಾಗುತ್ತಾರೆ. ಗ್ರಾಮದಲ್ಲಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಶಾಖಾಮಠ ಇದೆ. ಪೂಜ್ಯ ಶ್ರೀ. ಮಾ.ನಿ. ಪ್ರ ಬಸವಲಿಂಗಸ್ವಾಮಿಗಳಿದ್ದು ಮಠದ ಹೊಣೆಯಾಗಿದ್ದು, ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಮಠದ ವತಿಯಿಂದ ಗಡಿನಾಡ ಉತ್ಸವ ಆಚರಿಸುತ್ತಾರೆ. ಮಠದಲ್ಲಿ ಬಡಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯ ನೀಡುತ್ತಾರೆ.[೪೭] ಮತ್ತು ಮಠವು ಸಮಾಜ ಮುಖಿ ಕ್ಷೇತ್ರದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡವರಿಗೆ "ಕಾರುಣ್ಯ" ಎಂಬ ಪ್ರಶಸ್ತಿಯನ್ನು ಕೊಟ್ಟು ಪ್ರೋತ್ಸಾಹಿಸುತ್ತಾರೆ. ೨೦೧೭ರಲ್ಲಿ ಇದೆ ತಾಲ್ಲೂಕಿನ ಬಿ.ಜಿ ಕೆರೆ ಗ್ರಾಮದ ಸಾವಯುವ ರಾಷ್ಟ್ರಪ್ರಶಸ್ತಿ- ಪುರಸ್ಕೃತ ಕೃಷಿ ಸಾಧಕ ಎಸ್.ಸಿ ವೀರಭದ್ರಪ್ಪ ಅವರಿಗೆ ನೀಡಿದೆ.[೪೮]

ಜಯಂತಿನಗರ ಗ್ರಾಮದ ಪರಿಚಯ ಮತ್ತು ಹಿನ್ನೆಲೆ

ಮೊಳಕಾಲ್ಮೂರು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೦ ಕಿ.ಮೀ ದೂರದಲ್ಲಿದೆ. ಹಿರೆಕೆರೆಹಳ್ಳಿಯ ಕೆರೆಗೆ ಸಮೀಪವೇ ಈ ಗ್ರಾಮವಿದೆ. ಹಿಂದೆ ಮುನಿಸ್ವಾಮಿ ಎಂಬ ತಾಲ್ಲೂಕು ದಂಡಾಧಿಕಾರಿಯೊಬ್ಬರು ಹಿರೇಕೆರೆಹಳ್ಳಿಗೆ ಬಂದು ಕಿ.ಮೀ ದೂರದ ಕೆರೆಯ ಸಮೀಪದಲ್ಲಿರುವ ಜಮೀನಲ್ಲಿ ಭೋವಿ ಸಮುದಾಯದ ಜನಾಂಗಕ್ಕೆ ವಸತಿ ನಿರ್ಮಿಸಿಕೊಳ್ಳಲು ಅವಕಾಶ ಕೊಟ್ಟಿದ್ದಾರೆ. ಅವರ ನೆನಪಿಗೋಸ್ಕರ ಅವರ ಮಗಳಾದ ಜಯಂತಿ ಎಂಬ ಹೆಸರು ಈ ಗ್ರಾಮಕ್ಕೆ ಬಂದಿದೆ. ಎಂಬುದು ಗ್ರಾಮಸ್ಥರ ವಾದ.[೨೯] ಮುನಿಸ್ವಾಮಿ ಎಂಬ ಭೋವಿ ಜನಾಂಗದ ವ್ಯಕ್ತಿ ಇಲ್ಲಿ ಬಂದು ಚಿಕ್ಕ ಮಠವನ್ನು ನಿರ್ಮಿಸಿ, ಆತನ ಮಗಳ ಹೆಸರನ್ನು ಈ ಗ್ರಾಮಕ್ಕೆ ಇಡಲಾಗಿದೆ. ಎಂಬ ಅಭಿಪ್ರಾಯ ಇದೆ.[೩೦] ಭೌಗೋಳಿಕ ವಿಸ್ತೀರ್ಣ ೮೩೯.೬೩ ಹೆಕ್ಟೇರ್‌ಗಳು ಬಯಲುಸೀಮೆ, (ಹಿರೆಕೆರೆಹಳ್ಳಿ ಭೌಗೋಳಿಕ ವ್ಯಾಪ್ತಿಗೆ ಸೇರ್ಪಡೆಯಾಗಿರುತ್ತದೆ) ಭೂಮಿ ಕೆಂಪು ಶಿಲೆಯಿಂದ ಕೂಡಿದ್ದು ಕೆಂಪು ಮಿಶ್ರಿತ ಬಿಳಿ ಮಣ್ಣಿನ ಲಕ್ಷಣ ಹೊಂದಿದೆ. ಬಿಳಿ ಮಿಶ್ರಿತ ಕೆಂಪು ಕಲ್ಲುಗಳು ಅಲ್ಪಪ್ರಮಾಣದಲ್ಲಿ ಕಪ್ಪುಕಲ್ಲುಗಳು ಕಂಡುಬರುತ್ತವೆ. ಗ್ರಾಮದ ವಾಯುವ್ಯ ದಿಕ್ಕಿಗೆ ಊರಕಲ್ಲು ಗುಡ್ಡವಿದೆ.[೩೧] ೨೦೧೧ರ ಜನಗಣತಿ ಪ್ರಕಾರ ೧೭೯೨ ಜನಸಂಖ್ಯೆ ಇದ್ದು, ಇವರಲ್ಲಿ ೯೧೯ ಗಂಡಸರು ೮೭೬ ಹೆಂಗಸರಿದ್ದಾರೆ. (ಹಿರೆಕೇರಹಳ್ಳಿ ಗ್ರಾಮ ವ್ಯಾಪ್ತಿಯ ಜನಗಣತಿಗೆ ಒಳಪಟ್ಟಿರುತ್ತದೆ). ಭೋವಿಗಳದ್ದು ದೊಡ್ಡ ಸಮುದಾಯ (ಕಲ್ಲುವಡ್ಡರು) ದೇವಾಂಗ(ನೇಕಾರ) ಮತ್ತು ದೊಂಬರ ಸಮುದಾಯಗಳು ಇದ್ದಾವೆ. ಕನ್ನಡ ಮುಖ್ಯ ಭಾಷೆ. ಕನ್ನಡ ಮಿಶ್ರಿತ ತೆಲುಗು ಭಾಷೆ ಬಳಕೆಯಲ್ಲಿದೆ. ಗ್ರಾಮ ನ್ಯಾಯ ಮಂಡಳಿ ಇದೆ. ಒಟ್ಟು ಎರಡು ಸ್ತ್ರೀಶಕ್ತಿ ಸಂಘಗಳಿವೆ.[೩೨] ಗ್ರಾಮವು ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರ, ಹಾನಗಲ್ ಜಿಲ್ಲಾ ಪಂಚಾಯಿತಿ, ಹಿರೆಕೆರೆಹಳ್ಳಿ ತಾಲ್ಲೂಕು ಪಂಚಾಯಿತಿಯಾಗಿದ್ದು, ಗ್ರಾಮದಿಂದ ೨೦೧೦ರಲ್ಲಿ ಭೋವಿ ಸಮುದಾಯದಿಂದ ತಿಪ್ಪೇಸ್ವಾಮಿ ಸದಸ್ಯರು, ೨೦೧೫ರ ಪ್ರಸ್ತುತ ಅಂಜಿನಮ್ಮನವರು ಪ್ರಸ್ತುತ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.[೩೩]

ಚಿಕ್ಕೇರಹಳ್ಳಿ ಗ್ರಾಮದ ಪರಿಚಯ ಮತ್ತು ಹಿನ್ನೆಲೆ

ಮೊಳಕಾಲ್ಮೂರು ತಾಲ್ಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ೧೫ ಕಿ.ಮೀ ದೂರದಲ್ಲಿದೆ. ಊರಿನ ಪಶ್ಚಿಮ ದಿಕ್ಕಿಗೆ ಚಿಕ್ಕ ಕೆರೆಯಿದ್ದು, ಚಿಕ್ಕಕೆರೆಯು ಕ್ರಮೇಣ ಜನರ ಆಡು ಭಾಷೆಯಲ್ಲಿ ಚಿಕ್ಕೇರಹಳ್ಳಿ ಎಂಬುದಾಗಿ ಹೆಸರು ಬಂದಿದೆ.[೩೪] ಭೌಗೋಳಿಕ ವಿಸ್ತೀರ್ಣ ೩೦೫ ಹೆಕ್ಟೇರ್‌ಗಳು. ಬಯಲು ಸೀಮೆ, ಭೂಮಿ ಕೆಂಪುಶಿಲೆ ಇಂದ ಕೂಡಿದ್ದು, ಕೆಂಪು ಮತ್ತು ಬಿಳಿ ಮಿಶ್ರಿತ ಮಣ್ಣಿನ ಲಕ್ಷಣವನ್ನು ಹೊಂದಿದೆ. ದಕ್ಷಿಣ ದಿಕ್ಕಿನಲ್ಲಿ ಘನ ಸಂಸ್ಕೃತಿಯನ್ನು ಎತ್ತಿತೋರಿಸುವ ಚಿನ್ನಹಗರಿ ನದಿ ಹರಿಯುತ್ತದೆ. ಕೃಷಿ ಭೂಮಿ ವಿಸ್ತೀರ್ಣ ೩೦೫ ಹೆಕ್ಟೇರ್‌ಗಳು, ಶೇಂಗಾ ಪ್ರಮುಖ ಬೆಳೆ. ತೊಗರಿ, ಅಲಸಂದಿ, ಹೆಸರುಕಾಳು, ಉಪ ಬೆಳೆಗಳಾಗಿವೆ. ರಾಗಿ, ಭತ್ತ, ಸೂರ್ಯಕಾಂತಿ ಜೋಳ, ತೋಟಗಾರಿಕೆ ಬೆಳೆಗಳು.[೩೫] ೨೦೧೧ರ ಜನಗಣತಿ ಪ್ರಕಾರ ೪೪೧ ಮನೆಗಳು, ೨೧೭೬ ಜನ

ಸಂಖ್ಯೆ ಹೊಂದಿದ್ದು ೧೧೨೪ ಗಂಡಸರು, ೧೦೫೨ ಹೆಂಗಸರಿದ್ದಾರೆ. ಭೋವಿಗಳದ್ದು ದೊಡ್ಡ ಸಮುದಾಯ. ನಾಯಕ, ಆದಿಕರ್ನಾಟಕ, ಲಿಂಗಾಯತ, ಈಡಿಗ, ಕುಂಬಾರ, ಕೊರಚ, ಗೊಲ್ಲ, ಮುಸ್ಲೀಮ್, ಬ್ರಾಹ್ಮಣ, ವೈಶ್ಯ ಸಮುದಾಯಗಳು ಇದ್ದಾವೆ. ಕನ್ನಡ ಮತ್ತು ತೆಲುಗು ಮಿಶ್ರಿತ, ಭಾಷೆ ಮಾತನಾಡುವವರಿದ್ದಾರೆ.[೫೬] ಗ್ರಾಮವು ಚಿತ್ರದುರ್ಗ ಲೋಕಸಬಾ ಕ್ಷೇತ್ರ, ಮೊಳಕಾಲ್ಮೂರು ವಿಧಾನ ಸಭಾಕ್ಷೇತ್ರ, ಹಾನಗಲ್ ಜಿಲ್ಲಾ ಪಂಚಾಯಿತಿ, ಚಿಕ್ಕೇರಹಳ್ಳಿ ತಾಲ್ಲೂಕು ಪಂಚಾಯಿತಿ, ಸದರಿ ಗ್ರಾಮ ಪಂಚಾಯಿತಿ ಕಾರ್ಯಾಲಯ ಹೊಂದಿದೆ. ಚಿಕ್ಕೇರಹಳ್ಳಿ ಪಂಚಾಯಿತಿ ವ್ಯಾಪ್ತಿಗೆ ಭಟ್ರಹಳ್ಳಿ, ಅಮುಕುಂದಿ, ಭೈರಾಪುರ ಗ್ರಾಮಗಳು ಒಳಪಡುತ್ತವೆ. ಒಟ್ಟು ೨೦೧೦ರಲ್ಲಿ ೧೪ ಸದಸ್ಯರಿದ್ದು, ಚಿಕ್ಕರಹಳ್ಳಿಯಲ್ಲಿ ೬ ಸದಸ್ಯರಿದ್ದರು, ಇದರಲ್ಲಿ ಶಾರದಮ್ಮ ವೆಂಕಟೇಶ ಎಂ ಮತ್ತು ನಾಗರಾಜ ಹನುಮಂತಪ್ಪ ಭೊವಿ ಸಮುದಾಯದ ಸದಸ್ಯರು. ೨೦೧೫ರ ಗ್ರಾಮ ಪಂಚಾಯಿತಿಗೆ ಒಂದು ಸ್ಥಾನ ಜಾಸ್ತಿಯಾಗಿ ಒಟ್ಟು ೧೫ಕ್ಕೆ ಏರಿಕೆಯಾಗುತ್ತದೆ. ಇದರಲ್ಲಿ ಶಾರದಮ್ಮ ಗುರುಸ್ವಾಮಿ, ಕವಿತ, ಜಯಲಕ್ಷ್ಮಿ ಸೇರಿ ನಾಲ್ಕು ಜನ ಸದಸ್ಯರಾಗಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ. ೨೦೧೧ರಲ್ಲಿ ವೆಂಕಟೇಶ್ , ೨೦೧೬ರಲ್ಲಿ ತಿಮ್ಮಕ್ಕ ಪೆದ್ದಣ್ಣ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ ಸಮುದಾಯದಿಂದ ಆಯ್ಕೆಯಾಗಿರುತ್ತಾರೆ.[೫೭] ವ್ಯವಸಾಯೋತ್ಪನ್ನ ಸೇವಾ ಸಹಕಾರ ಸಂಘ, ಕೊರಚ, ಕೊರಮ ಕ್ಷೇಮಾಭಿವೃದ್ಧಿ ಸಂಘಗಳು, ಆಟೋಚಾಲಕರ, ಹಮಾಲರ ಸಂಘಗಳು, ೧೨ಸ್ತ್ರೀ ಶಕ್ತಿ ಸಂಘಗಳಲ್ಲಿ ಊರಿನವರ ಗುರುತಿಸಿಕೊಂಡಿದ್ದಾರೆ.[೫೮]

೩.೭ ಹೊಳಲ್ಕೆರೆ ತಾಲ್ಲೂಕು ಮತ್ತು ಅಧ್ಯಯನ ಕೋಳ್ಳಪಡಿಸಿದ ಗ್ರಾಮಗಳ ಪರಿಚಯ

ಜಿಲ್ಲೆಯ ಐತಿಹಾಸಿಕ ಸ್ಥಳಗಳಲ್ಲಿ ಹೊಳಲ್ಕೆರೆಯು ಒಂದು ತಾಲ್ಲೂಕಿನ ಆಡಳಿತ ಕೇಂದ್ರ ಹಾಗೂ ಪಟ್ಟಣ. (ಕೆರೆಯ ಪಕ್ಕದಲ್ಲಿ ನಿರ್ಮಾಣ ವಾದ ಪಟ್ಟಣ, ಪೊಳಲು (ಪಟ್ಟಣ) > ಹೊಳಲು + ಕೆರೆ) ಪಟ್ಟಣದ ಸುತ್ತಾ ಮೂರು ಕೆರೆಗಳಿದ್ದು. ಹಿರೇಕೆರೆ, ಹೊನ್ನಕೆರೆ, ಕೆಸರುಕಟ್ಟೆ ಕೆರೆಗಳೆಂದು ಕರೆಯುತ್ತಾರೆ.[೫೯] ಶಿವಮೊಗ್ಗ ಚಿತ್ರದುರ್ಗ ಹೆದ್ದಾರಿಯಲ್ಲಿ (ರಾ.ಹೆ-೧೩) ಚಿತ್ರದುರ್ಗದ ಪಶ್ಚಿಮ ನೈರುತ್ಯಕ್ಕೆ ೩೨. ಕಿ.ಮೀ ದೂರದಲ್ಲಿದೆ. ಹೊಳಲ್ಕೆರೆಯು ವಾಯುವ್ಯಕ್ಕೆ ೧೧ ಕಿ.ಮೀ ಅಂತರದಲ್ಲಿ ಚಿಕ್ಕಜಾಜೂರಿನಲ್ಲಿ ಬೆಂಗಳೂರು ಧಾರವಾಡ ರೈಲು ಮಾರ್ಗದ ಜಂಕ್ಷನ ಇದೆ.[೬೦] ಹೊಳಲ್ಕೆರೆಯ ಪಶ್ಚಿಮಕ್ಕೆ ೧೦ ಕಿ.ಮೀ ಅಂತರದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳಿಂದ ಹೆಸರಾಗಿದ್ದ ಅನಾಥ ಸೇವಾಶ್ರಮವಿರುವ ಮಲ್ಲಾಡಿಹಳ್ಳಿ ಗ್ರಾಮವಿದೆ. ಚಳಿಗಾಲದಲ್ಲಿ ಹಿತಕರ ವಾತಾವರಣ, ವಾರ್ಷಿಕ ಸರಾಸರಿ ೬೪೦,೦೬ ಮಿ. ಮೀ ಮಳೆ ಪ್ರಮಾಣವಿದೆ. ಮುತ್ತಗದೂರಿನ ಕೆರೆ ತಾಲ್ಲೂಕಿಗೆ ದೊಡ್ಡಕೆರೆ ಇದೆ. ಇದರಿಂದ ವ್ಯವಸಾಯಕ್ಕೆ ಅನುಕೂಲವಾಗಿದೆ. ಹೆಚ್ಚು ಕಪ್ಪು ಮಣ್ಣಿನ ಪ್ರದೇಶವಿದ್ದು ಜೊತೆಗೆ ಕೆಂಪು ಮಿಶ್ರಿತ ಕಪ್ಪು ಭೂಮಿ ಇದೆ ಅಡಿಕೆ, ರಾಗಿ, ಜೋಳ, ತೊಗರಿ, ಭತ್ತ, ಹತ್ತಿ ಮತ್ತು ದ್ವಿ ದಳ ಧಾನ್ಯಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ.[೬೧]

೨೦೧೧ರ ಜನಗಣತಿ ಪ್ರಕಾರ ಹೊಳಲ್ಕೆರ ತಾಲ್ಲೂಕಿನಲ್ಲಿ ೪೫,೭೩೦ ಮನೆಗಳು, ೨೦೭,೨೬೦ ಜನಸಂಖ್ಯೆ ಇದೆ. ಇದರಲ್ಲಿ ೧೦೪,೯೯೨ ಪುರುಷರು, ೧೦೨,೨೬೮ ಮಹಿಳೆಯರು ಇದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿಯವರು ಒಟ್ಟು ೫೬,೭೩೩. ಇದರಲ್ಲಿ ೨೮,೭೩೦ ಪುರುಷರು, ೨೮,೦೦೩ ಮಹಿಳೆಯರು ಇದ್ದಾರೆ. ಒಟ್ಟು ತಾಲ್ಲೂಕಿನ ಜನಸಂಖ್ಯೆಯಲ್ಲಿ ೨೭.೩೭%ರಷ್ಟು ಪರಿಶಿಷ್ಟಜಾತಿಯವರು ಇದ್ದು, ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಪರಿಶಿಷ್ಟಜಾತಿಯವರನ್ನು ಹೊಂದಿದ ತಾಲ್ಲೂಕು.[೬೨]

ತಾಲ್ಲೂಕಿನ ೪೮ ಗ್ರಾಮಗಳಲ್ಲಿ ಭೋವಿ ಸಮುದಾಯದವರು ಇದ್ದಾರೆ. ಅವುಗಳೆಂದರೆ ಬೋರೆನಹಳ್ಳಿ, ರಾಮೇನಹಳ್ಳಿ, ಕಸವನಹಳ್ಳಿ, ವೆಂಕಟೇಶಪುರ, ಹೊಸಹಟ್ಟಿ, ಗೂಳಿಹೊಸಹಳ್ಳಿ, ಬೂದಿಪುರ, ಹಾಲೇನಹಳ್ಳಿ, ಕಣವಿಜೋಗಹಳ್ಳಿ, ಮಾರುತಿಹಳ್ಳಿ, ಪೂಣಜೂರು ಭೋವಿಹಟ್ಟಿ, ಅಜ್ಜಿಕ್ಯಾತನಹಳ್ಳಿ, ಕಾಳಘಟ್ಟ, ವಡ್ಡರಹಟ್ಟಿಯಲ್ಲಿ ಭೋವಿ ಸಮುದಾಯದವರು ದೊಡ್ಡಮಟ್ಟದಲ್ಲಿದ್ದಾರೆ. ತಾಳಿಕಟ್ಟಿ ಕಾವಲ್, ತುಪ್ಪದಹಳ್ಳಿ, ಕೆಂಚಾಪುರ, ರಂಗಪುರ, ಅಮೃತಪುರ, ಕಾಶಿಪುರ, ಕೇಶವಾಪುರ, ಹೆಚ್.ಡಿ.ಪುರ, ನಗರಘಟ್ಟ, ದುಮ್ಮಿ, ಮುದ್ದಾಪುರ, ತಾಳಿಕಟ್ಟೆ, ಮೇಲಿನಕೊಟ್ಟಿಗೆ, ಉಗಣಿಕಟ್ಟಿ, ಎನ್.ಜಿ.ಹಳ್ಳಿ, ಗೊಲ್ಲರಹಟ್ಟಿ ಕ್ಯಾಪ, ಗೌಡೇಹಳ್ಳಿ, ಬಾಲಿಹಾಳ್(ಉಪ್ಪಾರಹಟ್ಟಿ), ತೇಕಲವಟ್ಟಿ, ಕೊಮರನಹಳ್ಳಿ, ಉಪ್ಪರಿಗೇನಹಳ್ಳಿ, ನಂದನಹೊಸರು, ಮುಗುಳಿಕಟ್ಟೆ, ಬಂಜಗೊಂಡನಹಳ್ಳಿ, ತಿರುಮಲಾಪುರ, ಕೊಳಾಳ್, ಅರೇನಹಳ್ಳಿ, ದಾಸರಹಳ್ಳಿ, ಮೇಕೇನಹಟ್ಟಿ, ಅರಸನಘಟ್ಟ, ಅಪ್ಪರಸನಹಳ್ಳಿ, ಚನ್ನಪಟ್ಟಣ, ಪುಣಜೂರು, ಬಂಡೇ ಬೊಮ್ಮೇನಹಳ್ಳಿ, ವಡ್ಡರಹಟ್ಟಿ, ಆಲಿನಹಟ್ಟಿ, ತಿರುಮಲಾಪುರ (ಎಮ್ಮೇಹಟ್ಟಿ)ಯಲ್ಲಿ ಚಿಕ್ಕಮಟ್ಟದಲ್ಲಿ ಇರುವುದು ತಿಳಿಯುತ್ತದೆ.[೬೩]

ಕರ್ನಾಟಕ ತಾಲ್ಲೂಕಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳು ಮತ್ತು ಆಯಾಮವಾರು ಸೂಚ್ಯಂಕಗಳ ಮೌಲ್ಯ ಮತ್ತು ಸ್ಥಾನ ೨೦೧೧ರ ಪ್ರಕಾರ ಹೊಳಲ್ಕೆರೆ ಜೀವನಮಟ್ಟ ಸೂಚ್ಯಂಕ ಮೌಲ್ಯ ೦.೨೧೪ ಸ್ಥಾನ ೧೩೦, ಆರೋಗ್ಯ ಸೂಚ್ಯಂಕ ಮೌಲ್ಯ ೦.೩೬೮ ಸ್ಥಾನ ೧೦೩, ಶೈಕ್ಷಣಿಕ ಸೂಚ್ಯಂಕ ೦.೪೮೪ ಸ್ಥಾನ ೯೭, ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ೦.೪೦೪ ಸ್ಥಾನ ೧೧೨ ಇದೆ.[೬೪] ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಂದನೂರು, ಆಡನೂರು, ಅರೇನಹಳ್ಳಿ, ಬಿ.ದುರ್ಗ, ಬಿದರಕೆರೆ, ಚಿಕ್ಕ ಎಮ್ಮಿಗನೂರು, ಚಿಕ್ಕಜಾಜಾರು, ದುಮ್ಮಿ, ಗಂಗಸಮುದ್ರ, ಗುಂಡೇರಿ, ತಾಳಿಕಟ್ಟೆ, ತುಪ್ಪದಹಳ್ಳಿ, ಆರ್.ನುಲೇನೂರು, ಮದ್ದೇರು, ರಾಮಗಿರಿ, ಚಿತ್ರಹಳ್ಳಿ, ತಾಳ್ಯ, ಹೊರಕೆರೆದೇವರಪುರ, ಶಿವಗಂಗ, ನಾರಾಯಣಗೊಂಡನಹಳ್ಳಿ, ತೇಕಲವಟ್ಟಿ, ಉಪ್ಪರಿಗೇನಹಳ್ಳಿ, ಟಿ.ನುಲೇನೂರು, ಶಿವಪುರ, ಗುಂಜಿನೂರು, ಹಿರೇಎಮ್ಮಿಗನೂರು, ಮುತ್ತುಗದೂರು, ವಿಶ್ವನಾಥನಹಳ್ಳಿ, ಮಲ್ಲಾಡಿಹಳ್ಳಿ ಸೇರಿ ಒಟ್ಟು ೨೯ ಗ್ರಾಮ ಪಂಚಾಯಿತಿಗಳು, ೪ ನಾಡಕಛೇರಿಗಳು, ೫೨ ಗ್ರಾಮಲೆಕ್ಕಿಗರ ವೃತ್ತಗಳು, ೪ ಹೋಬಳಿಗಳು, ೧೬೪ ಜನವಸತಿ, ೩೮ ಜನವಸತಿ ಇಲ್ಲದ, ಎಲ್ಲ

ಸೇರಿ ಒಟ್ಟು ೨೦೨ ಗ್ರಾಮಗಳಿವೆ.[೬೫] ಮತ್ತು ತಾಲ್ಲೂಕಿನಾದ್ಯಂತ ಅನೇಕ ಸಾಹಿತಿಗಳು, ಚಿಂತಕರು, ಹೋರಾಟಗಾರರು, ಕಲಾವಿದರನ್ನು ಸೃಷ್ಟಿಸಿದ ಈ ನೆಲದಲ್ಲಿ ಯುವಕರ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು, ಬಯಲಾಟ, ಜಾನಪದ, ರಂಗಭೂಮಿಯ ಅತ್ಯುತ್ತಮ ಕಲಾವಿದರಿದ್ದಾರೆ.[೬೬]

ಬೋರೆನಹಳ್ಳಿ ಗ್ರಾಮದ ಪರಿಚಯ ಮತ್ತು ಹಿನ್ನೆಲೆ

ಹೊಳಲ್ಕೆರೆ ತಾಲ್ಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ೩೦ ಕಿ.ಮೀ ದೂರದಲ್ಲಿದೆ. ಕಂದಾಯ ಗ್ರಾಮ, ನಾಟಿವೈದ್ಯ ಪ್ರವೀಣ ಬೋರಪ್ಪನವರು ವಾಸ ಮಾಡಿದ ಪ್ರದೇಶ ಇದಾಗಿದ್ದು. ಕ್ರಮೇಣ ಜನವಸತಿ ಪ್ರದೇಶವಾಗಿದೆ. ವ್ಯಕ್ತಿ ಸಂಬಂಧಿ ಹಿನ್ನೆಲೆಯಲ್ಲಿ ಬೋರೆನಹಳ್ಳಿ ಎಂಬ ಹೆಸರು ಬಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೭೪,೦೨ ಹೆಕ್ಟೇರ್ಗಳು, ಅರೆಮಲೆನಾಡು ಪ್ರದೇಶ, ಚಿಕ್ಕ ಕೆಂಪು ಕಲ್ಲುಗಳಿಂದ ಕೂಡಿದ್ದು, ಕೆಂಪು ಮಣ್ಣಿನ ಭೂ ಲಕ್ಷಣವನ್ನು ಹೊಂದಿದೆ. ಸಾಮಾಜಿಕ ಅರಣ್ಯವಿದೆ. ಪಶ್ಚಿಮಕ್ಕೆ ವಜ್ರದ ಹಳ್ಳ, ಪೂರ್ವಕ್ಕೆ ಹಿರೇಹಳ್ಳಗಳಿವೆ. ೨೫೦ರಿಂದ ೩೫೦ ಅಡಿ ಆಳದ ಕೊಳವೆ ಬಾವಿಗಳಿದ್ದು, ಕೃಷಿ ಚಟುವಟಿಕೆಗೆ ನೀರು ಒದಗಿಸುತ್ತವೆ. ಮಿನಿ ಟ್ಯಾಂಕ್‌ಗಳು, ಕೊಳವೆ ಬಾವಿಗಳು, ತೆರೆದ ಬಾವಿಗಳು, ಕೈ ಪಂಪ್‌ಗಳ ಮೂಲಕ ಕುಡಿಯುವ ಮತ್ತು ಬಳಸುವ ನೀರಿನ ಸೌಲಭ್ಯ ಇದೆ. ವ್ಯವಸಾಯ ಪ್ರಮುಖ ಕಸುಬು. ಮೆಕ್ಕೆಜೋಳ ಪ್ರಮುಖ ಬೆಳೆ. ಆಹಾರ ಬೆಳೆಯಾಗಿ ರಾಗಿ, ಬಿಳಿಜೋಳ, ಉಪಬೆಳೆಯಾಗಿ ತೊಗರಿ, ಅವರೆ, ಹೆಸರು, ಅಲಸಂದಿ ಬೆಳೆಗಳು. ವಾಣಿಜ್ಯ ಬೆಳೆಯಾಗಿ ಹತ್ತಿ, ದಾಳಿಂಬೆ, ಪುಷ್ಪ ಕೃಷಿಯಲ್ಲಿ ಸೇವಂತಿಗೆ ಹೂವನ್ನು ಬೆಳೆಯುತ್ತಾರೆ. ಮೆಕ್ಕೆಜೋಳ, ಮೆಣಿಸಿನಕಾಯಿ, ಈರುಳ್ಳಿ, ತೆಂಗು, ಅಡಿಕೆ, ಬಾಳೆ ಇಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಉದ್ಯೋಗದಲ್ಲಿ ಬಡಗಿತನ, ಕೃಷಿ ಕೂಲಿ, ಟೈಲರಿಂಗ್ ಕಸೂತಿ ಹಾಕುವ ವೃತ್ತಿಯವರಿದ್ದಾರೆ.[೬೭] ೨೦೧೧ರ ಜನಗಣತಿ ಪ್ರಕಾರ ಒಟ್ಟು ೧೪೧ ಮನೆಗಳು ಇದ್ದು ಎಲ್ಲಾ ಭೋವಿ ಸಮುದಾಯದವರವು ಆಗಿರುತ್ತವೆ. ಜನಸಂಖ್ಯೆ ೭೫೬ ಅದರಲ್ಲಿ ಪುರುಷರು ೩೮೦, ಮಹಿಳೆಯರು ೩೭೬, ಮಕ್ಕಳ(೦-೬) ೧೧೦ ಗಂಡುಮಕ್ಕಳು ೫೪, ಹೆಣ್ಣುಮಕ್ಕಳು ೫೬, ಇದ್ದಾರೆ. ಸಾಕ್ಷರತೆ ಒಟ್ಟು ೬೮,೫೮% ಪುರುಷರು ೭೯.೪೫%, ಮಹಿಳೆಯರು ೫೭.೫೦% ಇದೆ. ಒಟ್ಟು ಕೆಲಸಗಾರರು ೪೭೭, ಪುರುಷರು ೨೪೪, ಮಹಿಳೆಯರು ೨೩೩ ಇದ್ದಾರೆ.

ಗ್ರಾಮವು ಚಿತ್ರದುರ್ಗ ಲೋಕಸಭಾ ಕ್ಷೇತ್ರ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ, ಹೊರಕೆದೇವರಪುರ ಜಿಲ್ಲಾ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಉಪ್ಪರಿಗೇನಹಳ್ಳಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿ. ಸಮುದಾಯದಿಂದ ಗ್ರಾಮ ಪಂಚಾಯಿತಿ ಸದಸ್ಯರಾಗಿ ೨೦೧೦ರಲ್ಲಿ ರೇವಣ್ಣ, ಸುಜಾತ, ೨೦೧೫ರಲ್ಲಿ ಸಾಕಮ್ಮ ರವರು ಗುರುತಿಸಿಕೊಂಡರೆ, ಉಪಾಧ್ಯಕ್ಷರಾಗಿ ಚಂದ್ರಪ್ಪ ಹೆಚ್. ರವರು ಗುರುತಿಸಿಕೊಳ್ಳುತ್ತಾರೆ.೬೮ ಗ್ರಾಮಕ್ಕೆ ಉತ್ತಮ ರಸ್ತೆ ಸಂಪರ್ಕವಿದ್ದು ಬಸ್‌ಗಳು ಸಂಚರಿಸುತ್ತವೆ.

ಅಂಚೆ ಕಛೇರಿ ವ್ಯವಸ್ಥೆಯಿದೆ, ಸ್ಥಿರದೂರವಾಣಿಗಳು, ಚರದೂರವಾಣಿಗಳು, ಕೇಬಲ್, ಡಿಟಿಹೆಚ್‌ಗಳು ಇವೆ. ಗ್ರಾಮ ನ್ಯಾಯ ಮಂಡಳಿ ಇದೆ. ಮತ್ತು ಒಂದು ಅಂಗನವಾಡಿ ಕೇಂದ್ರ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದೆ. ವೃದ್ಯಾಪ್ಯ ವೇತನ, ವಿಕಲಚೇತನ ವೇತನ, ವಿಧವ ವೇತನ, ಪಡೆಯುವ ಫಲನುಭವಿಗಳಿದ್ದಾರೆ. ಮತ್ತು ಅಂಜನೇಯ, ಕುಕ್ಕಾಡೇಶ್ವರಿ, ಬಸವೇಶ್ವರ, ಕರಿಯಮ್ಮ ದೇವಸ್ಥಾನಗಳಿವೆ. ಮಾರ್ಚ್ ತಿಂಗಳಲ್ಲಿ ಅಂಜನೇಯ ಸ್ವಾಮಿಯ ಕೆಂಡ ನಡೆಯುತ್ತದೆ. ಭಜನೆ ಸಂಘಗಳಿದ್ದು, ಜಾತ್ರೆಯ ಸಮಯದಲ್ಲಿ ಭಜನೆ ಮಾಡುತ್ತಾರೆ. ರಂಗಮಂದಿರವಿದೆ. ೪ ಸ್ತ್ರೀ ಶಕ್ತಿ ಸಂಘಗಳು ಇವೆ.[೧೯]

ರಾಮೇನಹಳ್ಳಿ ಗ್ರಾಮದ ಪರಿಚಯ ಮತ್ತು ಹಿನ್ನೆಲೆ

ಹೊಳಲ್ಕೆರೆ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿಗೆ ೩೩ ಕಿ.ಮೀ ದೂರದಲ್ಲಿದೆ. ಕಂದಾಯ ಗ್ರಾಮ ಪೌರಾಣಿಕ ಹಿನ್ನೆಲೆವುಳ್ಳ ಈ ಗ್ರಾಮಕ್ಕೆ ರಾಮೇನಹಳ್ಳಿ ಎಂಬ ಹೆಸರು ಬಂದಿದೆ. ವನವಾಸದ ಕಾಲದಲ್ಲಿ ರಾಮ, ಲಕ್ಷಣ, ಸೀತೆ ಈ ಪ್ರದೇಶಕ್ಕೆ ಬಂದಿದ್ದರಿಂದ, ಪುರಾಣ ಸಂಬಂಧಿ ಹಿನ್ನೆಲೆಯಾಗಿ ರಾಮೇನಹಳ್ಳಿ ಎಂದು ಹೆಸರು ಬಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೧೭,೩೬ ಹೆಕ್ಟರ್‌ಗಳು, ಅರೆಮಲೆನಾಡು ಪ್ರದೇಶ. ಬಿಳಿಕಲ್ಲುಗಳಿಂದ ಕೂಡಿದ ಕೆಂಪು, ಕಪ್ಪು ಮಣ್ಣಿನ ಪ್ರದೇಶವಿದೆ. ಪಶ್ಚಿಮಕ್ಕೆ ವಜ್ರದ ಗುಡ್ಡವಿದ್ದು, ಉತ್ತರಕ್ಕೆ ಮಲ್ಲಪ್ಪನ ಗುಡ್ಡ, ಪೂರ್ವಕ್ಕೆ ಮೂಡಲ ಗುಡ್ಡಗಳಿವೆ. ೨೮೫.೨೯ ಹೆಕ್ಟರ್ ಗಳಷ್ಟು ಅಭಯಾರಣ್ಯವಿದೆ. ಗ್ರಾಮದ ಪೂರ್ವಕ್ಕೆ ಹಿರೇಹಳ್ಳಿ, ಉತ್ತರಕ್ಕೆ ವಜ್ರದಹಳ್ಳ ಪಶ್ಚಿಮಕ್ಕೆ ದೊಡ್ಡಸರಗಳಿದ್ದು, ಜಾನುವಾರಗಳ ಬಾಯಾರಿಕೆ ನೀಗುತ್ತವೆ. ಕೊಳವೆ ಬಾವಿಗಳಿದ್ದು, ಕೃಷಿ ಚಟುವಟಿಕೆಗೆ ನೀರು ಪೂರೈಸುತ್ತವೆ. ವ್ಯವಸಾಯ ಪ್ರಮುಖ ಕಸುಬಾಗಿದ್ದು, ಮೆಕ್ಕೆಜೋಳ ಪ್ರಮುಖ ಬೆಳೆಯಾಗಿದೆ. ಆಹಾರ ಬೆಳೆಯಾಗಿ ರಾಗಿ, ಬಿಳಿಜೋಳ, ಉಪಬೆಳೆಯಾಗಿ ತೊಗರಿ, ಅವರೆ, ಹೆಸರು, ಅಲಸಂದಿ, ವಾಣಿಜ್ಯ ಬೆಳೆಯಾಗಿ ಹತ್ತಿ, ಶೇಂಗಾ, ಎಳ್ಳು, ತೋಟಗಾರಿಕಾ ಬೆಳೆಯಾಗಿ ಅಡಿಕೆ, ತೆಂಗು, ಬಾಳೆ ಬೆಳೆಯುತ್ತಾರೆ. ಮೆಕ್ಕೆಜೋಳ, ಹತ್ತಿ, ಮೆಣಸಿನಕಾಯಿ ಮುಖ್ಯ ಸರಕುಗಳಾಗಿವೆ. ಸಾಂಪ್ರದಾಯಿಕ ಬಡತನ ವೃತ್ತಿಯವರಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆ ಇದೆ. ಊರಿನಲ್ಲಿ ಮೂರು ಸ್ತ್ರೀ ಶಕ್ತಿ ಸಂಘಗಳು, ಮೂರು ಮೈರಾಡ ಸಂಘಗಳಿವೆ.[೨೦] ೨೦೧೧ರ ಜನಗಣತಿ ಪ್ರಕಾರ ಒಟ್ಟು ೧೦೨ ಮನೆಗಳು ಇದ್ದು, ೫೨೬ ಜನಸಂಖ್ಯೆ ಇದೆ. ಇದರಲ್ಲಿ ಪುರುಷರು ೨೬೯, ಮಹಿಳೆಯರು ೨೫೭, ಇದೆ. ಭೋವಿ ಸಮುದಾಯದವರು ದೊಡ್ಡಮಟ್ಟದಲ್ಲಿದ್ದು, ಲಿಂಗಾಯಿತ ೦೫, ನಾಯಕ ೧೦ ಮನೆಗಳು ಇವೆ. ಭೋವಿ ಸಮುದಾಯದವರು ಜನಸಂಖ್ಯೆ ಶೇಕಡ ೮೪.೦೩%, ನಾಯಕ ಸಮುದಾಯದ್ದು ೮.೯೪% ಉಳಿದ ಶೇಕಡ ೭.೦೩% ಲಿಂಗಾಯಿತ ಸಮುದಾಯದ್ದು. ಕನ್ನಡ ಮತ್ತು ತೆಲುಗು ಪ್ರಮುಖ ಭಾಷೆಯಾಗಿದೆ. ಸಾಕ್ಷರತೆ ಮಟ್ಟ ೭೫.೩೬% ಪುರುಷರು ೮.೩೧%, ಮಹಿಳೆಯರು ೬೪.೪೬%, ಇದೆ.

ಗ್ರಾಮವು ಚಿತ್ರದುರ್ಗ ಲೋಕಸಭಾ ಕ್ಷೇತ್ರ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ, ಹೊರಕೆದೇವರಪುರ ಜಿಲ್ಲಾ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಉಪ್ಪರಿಗೇನಹಳ್ಳಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿ, ಸಮುದಾಯದಿಂದ ಗ್ರಾಮ ಪಂಚಾಯಿತಿ ಸದಸ್ಯರಾಗಿ ೨೦೦೦ರಲ್ಲಿ ಚಂದ್ರಪ್ಪ, ೨೦೦೫ರಲ್ಲಿ ಸುನಂದಮ್ಮ ಪೆದ್ದಣ್ಣ, ೨೦೧೦ರಲ್ಲಿ ಆರ್ ಶ್ರೀಧರ್, ೨೦೧೫ರಲ್ಲಿ ರಾಜಪ್ಪ ಎ.ಟಿ ರವರು ಗುರುತಿಸಿಕೊಂಡರೆ, ೧೯೯೫ರಲ್ಲಿ ಬಿ.ಸಿ.ರಾಜಪ್ಪ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿ, ೨೦೦೦ರಲ್ಲಿ ಡಿ. ತಿಮ್ಮಣ್ಣ ರವರು ಸದಸ್ಯರಾಗಿ ಗುರುತಿಸಿಕೊಳ್ಳುತ್ತಾರೆ. ಮತ್ತು ೨೦೦೦ರಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಹನುಮಕ್ಕರವರು ಗುರುತಿಸಿಕೊಳ್ಳುತ್ತಾರೆ. ರಾಜಕೀಯದಲ್ಲಿ.[೮೦] ಊರಿನಲ್ಲಿ ಮೂರು ಸ್ತ್ರೀ ಶಕ್ತಿ ಸಂಘಗಳು, ಮೂರು ಮೈರಾಡ ಸಂಘಗಳಿವೆ. ಮತ್ತು ವೃದ್ಧಾಪ್ಯ ವೇತನ, ವಿಕಲಚೇತನ ವೇತನ, ವಿಧವಾ ವೇತನ ಪಡೆಯುವ ಫಲಾನುಭವಿಗಳಿದ್ದಾರೆ. ಒಂದು ದಾನಶಾಸನವಿದ್ದು, ೩ ಶೀಲಾಶಾನಗಳಿವೆ. ಆಂಜನೇಯ ದೇವಸ್ಥಾನದಲ್ಲಿ ಚಿತ್ರದುರ್ಗದ ಪಾಳೆಗಾರ ಭರಮಣ್ಣ ನಾಯಕ ೧೭-೧೮ ನೇ ಶತಮಾನದಲ್ಲಿ ನೀಡಿರುವುದಾಗಿದೆ. ತಿಪ್ಪಮ್ಮ, ಪೆದ್ದಮ್ಮ, ಆಂಜನೇಯ, ಯಲ್ಲಮ್ಮ, ದೇವಸ್ಥಾನಗಳಿವೆ. ಯಲ್ಲಮ್ಮ ಜಾತ್ರೆಯನ್ನು ೩ ವರ್ಷಗಳಿಗೊಮ್ಮೆ ಆಷಾಡ ಮಾಸದಲ್ಲಿ ಬಲಿ ಕೊಡುವ ಮೂಲಕ ವರ್ಷಕ್ಕೊಮ್ಮೆ ಮೊರಮ್ಮನ ಜಾತ್ರೆಯನ್ನು ಆಚರಿಸುತ್ತಾರೆ. ಬಲಿ, ಹರಿಕೆ ಆಚರಣೆಗಳಿವೆ. ಭಜನೆ ನಾಟಕ, ಕೋಲಾಟ, ಸಾಹಿತ್ಯ, ತಮಟೆ, ಡೊಳ್ಳು ಕುಣಿತ, ಕಲಾವಿದರಿದ್ದಾರೆ.[೮೧]

ಕಣಿವೆಜೋಗಹಳ್ಳಿ ಗ್ರಾಮದ ಪರಿಚಯ ಮತ್ತು ಹಿನ್ನೆಲೆ

ಹೊಳಲ್ಕೆರೆ ತಾಲ್ಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ೩೫ ಕಿ.ಮೀ ದೂರದಲ್ಲಿದೆ. ಕಂದಾಯ ಗ್ರಾಮ, ಉಪ ಗ್ರಾಮಗಳಾದ ಮಾರುತಿಹಳ್ಳಿ ಮತ್ತು ಸಂಗೇನಹಳ್ಳಿ ಇದರ ವ್ಯಾಪ್ತಿಗೆ ಸೇರುತ್ತವೆ. ಬೆಟ್ಟಗುಡ್ಡಗಳಿಂದ ಸುತ್ತುವರಿದು ಇಳಿಜಾರಿನ ಪ್ರದೇಶದಲ್ಲಿರುವದರಿಂದ ಕಣಿವೆಜೋಗಿಹಳ್ಳಿ ಎಂದು ಹೆಸರು ಬಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೦೭.೨೭ ಹೆಕ್ಟೇರ್ಗಳು, ಅರೆಮಲೆನಾಡಾಗಿದ್ದು, ಕೆಂಪು ಕಲ್ಲುಗಳಿದ್ದು, ಕಪ್ಪು ಮತ್ತು ಕಲ್ಲು ಮಿಶ್ರಿತ ಭೂ ಲಕ್ಷಣ ಹೊಂದಿದೆ. ಪೂರ್ವ ದಿಕ್ಕಿಗೆ ಕರೆಕಲ್ಲು ರಂಗಪ್ಪನ ಬೆಟ್ಟವಿದ್ದು, ಪಶ್ಚಿಮಕ್ಕೆ ಮೂರು ಮಟ್ಟಗಳ ಮತ್ತು ಕುಂಬಾರಕಟ್ಟೆ, ಕುಗಿನಮಟ್ಟೆ, ಕುರುಮರಡಿ ಕೆರೆಗಳಿವೆ. ಜಾನುವಾರುಗಳಿಗೆ ಕುಡಿಯಲು ನೀರನ್ನು ಒದಗಿಸುತ್ತವೆ. ಹೊಲಗಳಲ್ಲಿ ಚೆಕ್ ಡ್ಯಾಂಗಳಿದ್ದು, ಅಂತರಜಾಲ ಮಟ್ಟ ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ಬೇಸಾಯ ಪ್ರಮುಖ ಕಸುಬು, ಮೆಕ್ಕೆ ಜೋಳ, ಈರುಳ್ಳಿ ಮುಖ್ಯ ಬೆಳೆಗಳು. ಆಹಾರ ಬೆಳೆಯಾಗಿ ರಾಗಿ, ಜೋಳ, ಉಪಬೆಳೆಯಾಗಿ ಅವರೆ, ತೊಗರಿ, ಹೆಸರು ಅಲಸಂದಿ. ವಾಣಿಜ್ಯ ಬೆಳೆಗಳು ಅಡಿಕೆ, ತೆಂಗು ಮತ್ತು ಬಾಳೆ ಬೆಳೆಯುತ್ತಾರೆ. ಮೆಕ್ಕೆಜೋಳ, ಈರುಳ್ಳಿ, ಪ್ರಮುಖ ಸರಕುಗಳು. ಮತ್ತು ಊರಿನಲ್ಲಿ ಕರ್ನಾಟಕ ರಾಜ್ಯ ರೈತ ಸಂಘ, ಐದು ಸ್ತ್ರೀ ಶಕ್ತಿ ಸಂಘಗಳಿವೆ. ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನ ಪಡೆಯುವ ಫಲಾನುಭವಿಗಳಿದ್ದಾರೆ. ಮಡಿಲು, ಭಾಗ್ಯ

ಲಕ್ಷ್ಮೀ ಯೋಜನೆಗಳಿವೆ. ಚಿತ್ರಲಿಂಗೇಶ್ವರ, ತಿಮ್ಮಪ್ಪ, ಹೊಸಕೆರೆ ರಂಗಪ್ಪ, ಹುಲಿಗೆಮ್ಮ, ಚೌಡಮ್ಮ ದೇವಸ್ಥಾನಗಳಿವೆ. ಡಿಸೆಂಬರ್ ತಿಂಗಳ ಕಾರ್ತೀಕ ಮಾಸದಲ್ಲಿ ತಿಮ್ಮಪ್ಪ ವಿಶೇಷ ಪೂಜೆ ಮಾಡುತ್ತಾರೆ.[೭೩] ೨೦೧೧ರ ಜನಗಣತಿ ಪ್ರಕಾರ ಒಟ್ಟು ಮನೆಗಳು ೨೨೨. ಜನಸಂಖ್ಯೆ ೧,೨೦೧ ಪುರುಷರು ೬೧೭, ಮಹಿಳೆಯರು ೫೮೪, ಇದರಲ್ಲಿ ಭೋವಿ ಸಮುದಾಯದವರು ಒಟ್ಟು ೩೪೭ ಪುರುಷರು ೧೭೬, ಮಹಿಳೆಯರು ೧೭೧, ಇದ್ದು, ಶೇಕಡ ೨೮.೮೯% ಸಮುದಾಯದವರು ವಾಸವಿದ್ದಾರೆ. ಒಟ್ಟು ಸಾಕ್ಷರತೆ ಪ್ರಮಾಣ ೭೩.೧೨%, ಪುರುಷರು ೮೨.೨%, ಮಹಿಳೆ ೬೩.೬೯%, ಒಟ್ಟು ಕೆಲಸಗಾರರು ೭೦೮, ಪುರುಷರು ೩೬೫, ಮಹಿಳೆಯರು ೩೪೩ ಇದ್ದಾರೆ.

ಗ್ರಾಮವು ಚಿತ್ರದುರ್ಗ ಲೋಕಸಭಾ ಕ್ಷೇತ್ರ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ, ಹೊರಕೆದೇವರಪುರ ಜಿಲ್ಲಾ ಪಂಚಾಯಿತಿ ಮತ್ತು ತೇಕಲವಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಚಿತ್ರಹಳ್ಳಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿ, ಸಮುದಾಯದಿಂದ ಗ್ರಾಮ ಪಂಚಾಯಿತಿ ಸದಸ್ಯರಾಗಿ, ೨೦೧೦ರಲ್ಲಿ ಕೆ.ಪರಮೇಶ್ವರಪ್ಪ ೨೦೧೫ರಲ್ಲಿ ಹೇಮಾವತಿ ರವರು ಸದಸ್ಯರಾಗಿ ಗುರುತಿಸಿಕೊಳ್ಳುತ್ತಾರೆ.[೭೪]

ಮಾರುತಿ ಹಳ್ಳಿ ಗ್ರಾಮದ ಪರಿಚಯ ಮತ್ತು ಹಿನ್ನೆಲೆ

ಹೊಳಲ್ಕೆರೆ ತಾಲ್ಲೂಕು ಕೇಂದ್ರದಿಂದ ಆಗ್ನೆಯ ದಿಕ್ಕಿಗೆ ೩೭ ಕಿ.ಮೀ ದೂರದಲ್ಲಿದೆ. ಇದರ ವ್ಯಾಪ್ತಿ ಭೌಗೋಳಿಕ ವಿಸ್ತೀರ್ಣ, ಜನಸಂಖ್ಯೆ ಸಾಕ್ಷರತೆ ಮಾಹಿತಿಗಳು ಕಣವಿಜೋಗಹಳ್ಳಿ ಗ್ರಾಮದ ವ್ಯಾಪ್ತಿಗೆ ಒಳಪಡುತ್ತವೆ. ಕಣವಿ ಜೋಗಹಳ್ಳಿ ಇರುವ ಗುಡಿಸಲು ಮನೆಗಳು ಮಳೆಗೆ ಗಾಳಿಗೆ ಬಿದ್ದುಹೋದಾ ಪರಿಣಾಮದಿಂದ ವಾಸಮಾಡಲು ವಸತಿ ಸೌಲಭ್ಯ ಕೊರತೆಯಾಗಿ ಊರಿನಿಂದ ೨ ಕಿ.ಮೀ ದೂರದಲ್ಲಿರುವ, ಅರಣ್ಯ ಪ್ರದೇಶವಾದ ಸರ್ಕಾರಿ ಗೋಮಾಳದಲ್ಲಿ ೧೦ ವರ್ಷಗಳಿಂದ ಜಿಲ್ಲಾಧಿಕಾರಿಯವರಿಂದ ಅನುಮತಿ ಪಡೆದು, ಗುಡಿಸಲುಗಳನ್ನು ಹಾಕಿಕೊಂಡು ೬೦ ಕುಟುಂಬಗಳು ವಾಸಮಾಡುತ್ತ ಇದ್ದಾರೆ.

ಕೊನೆಯ ಟಿಪ್ಪಣಿಗಳು

೧. ನಾಯಕ. ಹಾ. ಮಾ. : "ಕನ್ನಡ ವಿಶ್ವಕೋಶ" ಸಂಪುಟ ೭ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಪು. ೩೯೬, ೩೯೭, ೪೦೧, ೪೦೨, ೧೯೭೪.

೨. ನಾಯಕ. ಹಾ. ಮಾ: ಪೂರ್ವೋಕ್ತ ಪು. ೩೯೬, ೩೯೭, ೪೦೧, ೪೦೨,

೩. ನಾಯಕ. ಹಾ. ಮಾ: ಪೂರ್ವೋಕ್ತ ಪು. ೩೯೬, ೩೯೭, ೪೦೧, ೪೦೨,

೪. ಜಿಲ್ಲಾಭಿವೃದ್ಧಿ ವರದಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ, ೨೦೦೬.

೫. ನಾಯಕ. ಹಾ. ಮಾ: ಪೂರ್ವೋಕ್ತ ಪು. ೩೯೭,

೬. "ರಾಜ್ಯ ಹವಾಮಾನ ಇಲಾಖೆ ವರದಿ", ಬೆಂಗಳೂರು, ೨೦೦೫- ೦೬.

೭. ಶೇಷಗಿರಿರಾವ್. ಎಲ್. ಎಸ್. : "ಕಿರಿಯರ ಕನ್ನಡ ವಿಶ್ವಕೋಶ" ಕನ್ನಡ ವಿಶ್ವವಿದ್ಯಾಲಯ ಹಂಪಿ, ಪುಟ, ೨೦೨, ೧೯೯೪.
೮. "ಜಿಲ್ಲಾ ಅರಣ್ಯ ಸಂರಕ್ಷಣಾ ಕಛೇರಿಯ ವಾರ್ಷಿಕ ಪ್ರಗತಿ ವರದಿ", ಅರಣ್ಯ ಇಲಾಖೆ, ಚಿತ್ರದುರ್ಗ, ೨೦೧೦.
೯. ಧರಣೇಂದ್ರಯ್ಯ 'ಮ್ಯಾಸಬೇಡರು' ಒಂದು ಸಮಾಜ ಶಾಸ್ತ್ರೀಯ ಅಧ್ಯಯನ ಪ್ರಕಟಿತ ಪ್ರಬಂಧ ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ ಪು. ೨೭, ೨೦೧೫.
೧೦. ಧರಣೇಂದ್ರಯ್ಯ 'ಮ್ಯಾಸಬೇಡರು' ಪೂರ್ವೋಕ್ತ ಪು. ೨೮.
೧೧. ಧರಣೇಂದ್ರಯ್ಯ 'ಮ್ಯಾಸಬೇಡರು' ಪೂರ್ವೋಕ್ತ ಪು. ೩೦.
೧೨. ನಾಯಕ. ಹಾ. ಮಾ: ಪೂರ್ವೋಕ್ತ ಪು. ೩೯೭,
೧೩. ಈಶ್ವರಪ್ಪ: "ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ" ಕನ್ನಡ ಸಾಹಿತ್ಯ ಪರಿಷತ್ತು, ಲಕ್ಷ್ಮೀ ಮುದ್ರಣ, ಬೆಂಗಳೂರು, ಪು. ೧೧೦, ೧೯೯೫.
೧೪. ನಾಯಕ. ಹಾ. ಮಾ: ಪೂರ್ವೋಕ್ತ, ಪು. ೪೦೧,
೧೫. ನಾಯಕ. ಹಾ. ಮಾ: ಪೂರ್ವೋಕ್ತ, ಪು. ೪೦೨,
೧೬. ಚಿತ್ರದುರ್ಗ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪.
೧೭. ಚಿತ್ರದುರ್ಗ ಜಿ. ಮಾ ಅ. ವರದಿ ೨೦೧೪.
೧೮. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ೨೦೧೯.
೧೯. ಜಿಲ್ಲಾಧಿಕಾರಿ ಹಾಗೂ ಜಿ. ಚು. ಕಾ. ಚಿತ್ರದುರ್ಗ, ಪೂರ್ವೋಕ್ತ ೨೦೧೯.
೨೦. ಜಿಲ್ಲಾಧಿಕಾರಿ ಹಾಗೂ ಜಿ. ಚು. ಕಾ. ಚಿತ್ರದುರ್ಗ, ಪೂರ್ವೋಕ್ತ ೨೦೧೯.
೨೧. ಜಿಲ್ಲಾಧಿಕಾರಿ ಹಾಗೂ ಜಿ. ಚು. ಕಾ. ಚಿತ್ರದುರ್ಗ, ಪೂರ್ವೋಕ್ತ ೨೦೧೯.
೨೨. ಜಿಲ್ಲಾಧಿಕಾರಿ ಹಾಗೂ ಜಿ. ಚು. ಕಾ. ಚಿತ್ರದುರ್ಗ, ಪೂರ್ವೋಕ್ತ ೨೦೧೯.
೨೩. ಜಿಲ್ಲಾಧಿಕಾರಿ ಹಾಗೂ ಜಿ. ಚು. ಕಾ. ಚಿತ್ರದುರ್ಗ, ಪೂರ್ವೋಕ್ತ ೨೦೧೯.
೨೪. ಜಿಲ್ಲಾಧಿಕಾರಿ ಹಾಗೂ ಜಿ. ಚು. ಕಾ. ಚಿತ್ರದುರ್ಗ, ಪೂರ್ವೋಕ್ತ ೨೦೧೯.
೨೫. ಪ್ರಜಾವಾಣಿ ಪತ್ರಿಕೆ ವರದಿ ಮೇ ೧೬ ೨೦೧೮.
೨೬. ಪ್ರಜಾವಾಣಿ ಪತ್ರಿಕೆ ವರದಿ ಮೇ ೧೪ ೨೦೧೮ .
೨೭. ೨೦೧೧ರ ಜನಗಣತಿ ವರದಿ.
೨೮. ಕರ್ನಾಟಕ ಗ್ರಾಮ ಚರಿತ್ರೆ ಕೋಶ, ಚಿತ್ರದುರ್ಗ ಜಿಲ್ಲಾ ಸಂಪುಟ ಭಾಗ-೨ ಪುಟ ಸಂಖ್ಯೆ ೧, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ ಹಾವೇರಿ ೨೦೧೭.
೨೯. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪು.
೩೦. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪು.
೩೧. ಜಿಲ್ಲಾ ಮಾನವ ಅಭಿವೃದ್ಧಿ ವರದಿ, ಚಿತ್ರದುರ್ಗ ಜಿಲ್ಲಾ ಪಂಚಾಯತ್, ೨೦೧೪.
೩೨. ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪.
೩೩. ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೧೬-೧೭.

೩೪. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪು. ೧೧.
೩೫. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪು. ೧೨.
೩೬. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೨.
೩೭. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೯.
೩೮. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪು, ೬೦.
೩೯. ಜನಗಣತಿ ವರದಿ, ೨೦೧೧.
೪೦. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ೬೦.
೪೧. ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಚಿತ್ರದುರ್ಗ ೨೦೧೯.
೪೨. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೬.
೪೩. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೭.
೪೪. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೮.
೪೫. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೯.
೪೬. ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ೨೦೧೮.
೪೭. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೬.
೪೮. ಪ್ರಜಾವಾಣಿ ೧೯-೦೨-೨೦೧೭.
೪೯. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೬೨.
೫೦. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪು.
೫೧. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪು.
೫೨. ಕರ್ನಾಟಕ ಗ್ರಾ. ಚ. ಕೊ. ಚಿತ್ರದುರ್ಗ ಪೂರ್ವೋಕ್ತ ಪು.
೫೩. ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ೨೦೧೮.
೫೪. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೨೫
೫೫. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ, ಪು.
೫೬. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ, ಪು.
೫೭. ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ೨೦೧೮.
೫೮. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೨೬.
೫೯. ಕರ್ನಾಟಕ ಗ್ರಾ. ಚ. ಕೊ,. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೦೧.
೬೦. ಕರ್ನಾಟಕ ಗ್ರಾ. ಚ. ಕೊ,. ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೦೨.
೬೧. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೨೬.
೬೨. ಮಾನವ ಅಭಿವೃದ್ಧಿ ವರದಿ, ೨೦೧೪.
೬೩. ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ, ಪು.೧೬, ೨೦೧೬-೧೭.
೬೪. ಸಾಮಾಜಿಕ ಆರ್ಥಿಕ ಅವಲೋಕನ, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಚಿತ್ರದುರ್ಗ, ೨೦೧೭.

೬೫. 'ಮಾನವ ಅಭಿವೃದ್ಧಿ: ಕರ್ನಾಟಕದ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಾಧನೆ, ೨೦೧೪- ಒಂದು ಕ್ಷಿಪ್ರ ನೋಟ'

೬೬. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೦೨.

೬೭. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೩೮.

೬೮. ಪಂಚಾಯತ್ ರಾಜ್ ಇಲಾಖೆ

೬೯. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೩೮.

೭೦. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೪೦.

೭೧. ಪಂಚಾಯತ್ ರಾಜ್ ಇಲಾಖೆ.

೭೨. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೪೦.

೭೩. ಕರ್ನಾಟಕ ಗ್ರಾ. ಚ. ಕೊ., ಚಿತ್ರದುರ್ಗ ಪೂರ್ವೋಕ್ತ ಪುಟ ಸಂಖ್ಯೆ ೫೭೭.

೭೪. ಪಂಚಾಯತ್ ರಾಜ್ ಇಲಾಖೆ.

ಅಧ್ಯಾಯ – ನಾಲ್ಕು

ಅಭಿವೃದ್ಧಿ ಮತ್ತು ರಾಜಕೀಯದಲ್ಲಿ ಭೋವಿ ಸಮುದಾಯದ ಬೆಳವಣಿಗೆ

೪.೧. ಅಭಿವೃದ್ಧಿ ಮತ್ತು ರಾಜಕೀಯದ ನಡುವಿನ ಸಂಬಂಧ

೪.೨. ಗುರುತಿನ ರಾಜಕೀಯ ಬೆಳೆದು ಬಂದ ದಾರಿ

೪.೩. ಭೋವಿ ಸಮುದಾಯದ ಸಾಮಾಜಿಕ ಹಿನ್ನಲೆ

೪.೪. ಭೋವಿ ಸಮುದಾಯದ ಐತಿಹಾಸಿಕ ಬೆಳವಣಿಗೆ

೪.೫. ಭೋವಿ ಸಮುದಾಯದ ಸಾಂಸ್ಕೃತಿಕ ಕೊಡುಗೆಗಳು

೪.೬. ಭೋವಿ ಸಮುದಾಯದ ಮಹಿಳೆ ಜಸ್ಮಳ ಹಿನ್ನಲೆ

೪.೭. ಜನಗಣತಿ ೧೮೭೧ರ ವರದಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೪.೮. ಮೈಸೂರು ಜನಗಣತಿ ೧೮೯೧ರ ವರದಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೪.೯. ಮುಂಬೈ ಕರ್ನಾಟಕ ಗೆಝೆಟೀಯರನಲ್ಲಿ ಒಡ್ಡರ ಉಲ್ಲೇಖ

೪.೧೦. ಸರ್ ಲೆಸ್ಲೀ ಮಿಲ್ಲರ್ ಸಮಿತಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೪.೧೧. ಓ ಚಿನ್ನಪ್ಪರೆಡ್ಡಿ ಸಮಿತಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೪.೧೨. ಭೋವಿ ಸಮುದಾಯದಲ್ಲಿ ಎಂ.ಎಲ್.ಎ./ಎಂ.ಪಿಗಳಾಗಿ ರಾಜಕೀಯದಲ್ಲಿ ಗುರುತಿಸಿಕೊಂಡವರು

೪.೧೩. ಭೋವಿ ಸಮುದಾಯದ ಕಟ್ಟಡ ಕಾರ್ಮಿಕರಿಗೆ ಇಲಾಖೆಯಿಂದ ಇರುವ ಸೌಲಭ್ಯಗಳು

ಅಧ್ಯಾಯ – ನಾಲ್ಕು

ಅಭಿವೃದ್ಧಿ ಮತ್ತು ರಾಜಕೀಯದಲ್ಲಿ ಭೋವಿ ಸಮುದಾಯದ ಬೆಳವಣಿಗೆ

೪.೧ ಅಭಿವೃದ್ಧಿ ಮತ್ತು ರಾಜಕೀಯದ ನಡುವಿನ ಸಂಬಂಧ

ಪ್ರಸ್ತುತ ದಿನಮಾನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿ ಎನ್ನುವ ಪರಿಭಾಷೆ ಬಹುತೇಕರು ಬಹು ಆಯಾಮಗಳಲ್ಲಿ ಬಳಸುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಅಭಿವೃದ್ಧಿ ಎಂದರೆ ಏನೆಂದು ಜನಸಾಮಾನ್ಯರಲ್ಲಿ ಕೇಳಿದರೆ, ಅವರಿಂದ ಬರುವ ಉತ್ತರ ಎಂದರೆ. ಅವರು ಹೊಂದಿರುವ ಐಹಿಕ ಸಂಗತಿಗಳ ಮೇಲೆ ನಿರ್ಧಾರವಾಗುತ್ತದೆ. ಸೈಕಲ್ ಹೊಂದಿದ್ದರೆ, ಅವರು ಇನ್ನು ಅಭಿವೃದ್ಧಿ ಆಗಿಲ್ಲ. ಬೈಕು, ಕಾರು ಹೊಂದಿದ್ದರೆ, ಅಭಿವೃದ್ಧಿ ಪತದಕಡೆ ಸಾಗುತ್ತಿದ್ದಾರೆ ಎಂದು. ಟಿವಿ, ಕಂಪ್ಯೂಟರ್, ಫ್ರಿಡ್ಜ್, ವಾಷಿಂಗ್‌ಮಿಷನ್ ಟ್ರ್ಯಾಕ್ಟರ್, ಹೊಂದಿ ಅತೀ ಹೆಚ್ಚಾಗಿ ಹಣ ಖರ್ಚುಮಾಡಿ ಮನೆಗಳನ್ನು ಕಟ್ಟಿಕೊಂಡು ಪರದೇಶಗಳಿಗೆ ಪ್ರವಾಸ ಹೋಗಿ ಪೈವ್‌ಸ್ಟಾರ್ ಹೋಟೆಲ್‌ಗಳಲ್ಲಿ ಊಟಮಾಡುತ್ತಾ ಇರುವುದೇ ಅಭಿವೃದ್ಧಿ ಎಂದುಕೊಂಡಿದ್ದಾರೆ. ಇದೇ ಪರಿಭಾಷೆಯನ್ನು ರಾಜಕಾರಿಣಿಗಳಿಂದ ಉತ್ತರವನ್ನು ನಿರೀಕ್ಷಣೆ ಮಾಡಿದರೆ ಹಳೇಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡಗಳನ್ನು ಕಟ್ಟುವುದು. ಅಗಲವಾದ ರಸ್ತೆಗಳನ್ನು ನಿರ್ಮಾಣಮಾಡಿ ಬಸ್ ತಂಗುದಾಣ, ಉದ್ಯಾನವನ ಶಾಲೆ, ದವಖಾನೆಗಳನ್ನು ಕಟ್ಟುವುದು. ಅಧಿಕಾರಿಗಳು ಕೃಷಿಮಾಡಲು ಆಧುನಿಕ ಯಂತ್ರಗಳ ಬಳಕೆಮಾಡುವುದು, ಕೈಗಾರಿಕೆಗಳು ಮತ್ತು ಬ್ಯಾಂಕಿಂಗ್ ಸಂಪರ್ಕ ಕೊಡುವುದು ಅಭಿವೃದ್ಧಿ ಎನ್ನುತ್ತಾರೆ.[೧] ಆದರೆ ನಿಜವಾದ ಅಭಿವೃದ್ಧಿ ಎಂದರೆ, ತಲಾ ಆದಾಯ ಹೆಚ್ಚಾಗುವುದು ಮತ್ತು ಆ ಕುಟುಂಬದ ವ್ಯಕ್ತಿಯ ದೇಶದ ಆರ್ಥಿಕ ಮೂಲಗಳನ್ನು ಬಲಪಡಿಸುವುದು ಹಾಗೂ ವ್ಯಾವಹಾರಿಕ ಸಂಬಂಧಗಳು ವಿಶಾಲಗೊಳಿಸುವುದನ್ನು ಗುರುತಿಸುವ ಮಾನದಂಡಕ್ಕೆ ಅಭಿವೃದ್ಧಿ ಹೊಂದುತ್ತಿದ್ದಾರೆ ಅಥವಾ ಹೊಂದಿದ್ದಾರೆ, ಎನ್ನುವ ಪರಿಕಲ್ಪನೆಯು ಸಹ ಬೆಳೆದುಕೊಂಡು ಬಂದಿದೆ.

ಆದ್ದರಿಂದ ಅಭಿವೃದ್ಧಿ ಎನ್ನುವ ಒಂದು ಪರಿಭಾಷೆಯನ್ನು ಇಟ್ಟುಕೊಂಡು ಅಳತೆಮಾಡಲು ಸಾಧ್ಯವಿಲ್ಲ. ಏಕೆಂದರೆ ಅಭಿವೃದ್ಧಿಗೆ ಅನೇಕ ರೀತಿಯ ಚೌಕಟ್ಟುಗಳು ಇವೆ. ವ್ಯಕ್ತಿ, ವೇಳೆಗೆ ನಿರ್ದಿಷ್ಟ ವಿವರಗಳಿಗೆ ಅನುಗುಣವಾಗಿ ಅಭಿವೃದ್ಧಿಯನ್ನು ಮಾಪನ ಮಾಡಬೇಕಾಗುತ್ತದೆ. ಒಬ್ಬ ವ್ಯಕ್ತಿಗೆ ನಾವು ಹೋಲಿಕೆ ಮಾಡಿದಾಗ, ಅವನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಂಬಂಧಿಸಿರುತ್ತದೆ. ಅದೇ ದೇಶಕ್ಕೆ ಸಂಬಂಧಿಸಿದರೆ ಸರಕು ಸೇವೆಗಳಿಗೆ ಅನುಗುಣವಾಗಿ ಮಾಪನ ಮಾಡುವ ವಾಡಿಕೆಯು ಇದೆ. ಹಾಗಾಗಿ ಅಭಿವೃದ್ಧಿಯ ಪರಿಭಾಷೆಯನ್ನು ಬಿಡಿಸಿ ಆರ್ಥಿಕ, ಸಾಮಾಜಿಕ, ಮತ್ತು ಶೈಕ್ಷಣಿಕ ಇತ್ಯಾದಿ ಮಜಲುಗಳಿಗೆ ಪೂರಕವಾಗಿ ನೋಡುತ್ತೇವೆ. ಸಮುದಾಯಗಳ ನಿತ್ಯ ಜೀವನದ ವಿಷಯಗಳನ್ನು ಇಟ್ಟುಕೊಂಡು ನೋಡಿದಾಗ, ಮಕ್ಕಳ ಅಭಿವೃದ್ಧಿ, ಮಹಿಳೆಯರ ಅಭಿವೃದ್ಧಿ, ಲಿಂಗವಾರು ಅಂಶಗಳ ಪಟ್ಟಿಯೇ ಬೆಳೆಯುತ್ತಾ ಸಾಗುತ್ತದೆ. ಒಂದು ನಿರ್ದಿಷ್ಟ ಸಮುದಾಯವನ್ನು ಕುರಿತು ಅಧ್ಯಯನ ಮಾಡಿದಾಗ ಸಾಮಾಜಿಕ ಪರಿಭಾಷೆಯನ್ನು ಇಟ್ಟುಕೊಂಡು ಅವರ ಶಿಕ್ಷಣ, ವಸತಿ, ನೈರ್ಮಲ್ಯ, ಕುಡಿಯುವ ನೀರು ಇತರೆ ಜಾತಿಗಳೊಂದಿಗೆ ಅವರ ಸ್ಥಾನಮಾನ ಲಿಂಗ ಸಮಾನತೆ, ಹಾಗೂ ಆರ್ಥಿಕವಾಗಿ, ಉದ್ಯೋಗ, ಆದಾಯ ಭೂಹಿಡುವಳಿ, ಆದಾಯದ ಮೂಲ ಮತ್ತು ಚರ ಹಾಗು ಸ್ಥಿರಾಸ್ತಿಗಳ ಆಧಾರದಮೇಲೆ ಅವರ ಅಭಿವೃದ್ಧಿಯನ್ನು ಮಾಪನ ಮಾಡಬೇಕಾಗುತ್ತದೆ.[೨]

ದಿನ ನಿತ್ಯದ ಬೆಳವಣಿಗೆಯನ್ನು ಗಮನಿಸುತ್ತ ಬಂದರೆ ರಾಜಕೀಯ ವಿದ್ಯಮಾನಗಳು ಅಪಾರ ಪ್ರಮಾಣದಲ್ಲಿ ಚರ್ಚೆಗೆ ಬರುವುದು ಕಂಡುಬರುತ್ತದೆ. ಚುನಾವಣೆ ಸಮಯದಲ್ಲಂತು ಯಾವ ಪಕ್ಷ ಅಧಿಕಾರಕ್ಕೆ ಬಂದರೆ ಒಳಿತಾಗಬಹುದು ಯಾರಿಗೆ ಮತ ಹಾಕಬೇಕು? ಯಾಕೆ ಮತ ಹಾಕಬೇಕು? ಎನ್ನುವ ವಿಷಯಗಳ ಬಗ್ಗೆ ಚರ್ಚೆಮಾಡುವವರು ಶೇಕಡ ೧೦ರಷ್ಟು ಸಿಗಬಹುದು. ಉಳಿದವರು ಅವನು ಯಾವ ಜಾತಿ, ಯಾವ ಧರ್ಮ, ಶ್ರೀಮಂತನ ದುಡ್ಡು ಎಷ್ಟು ಮಾಡಿದ್ದಾನೆ, ನಮಗೆ ಎಷ್ಟು ಹಂಚಿಕೆ ಮಾಡುತ್ತಾನೆ ಎಂದು ಚರ್ಚಿಸುವ ಒಂದು ಗುಂಪಾದರೆ. ಇನ್ನೊಂದು ಗುಂಪು ನಮ್ಮ ಮನೆಯಲ್ಲಿ ನಾಲ್ಕು ಮತಗಳು ಇದ್ದಾವೆ, ಹಣ ಜಾಸ್ತಿಕೊಟ್ಟವರಿಗೆ ೨ ಮತ ಕಡಿಮೆ ಕೊಟ್ಟವರಿಗೆ ಒಂದೊಂದರಂತೆ ಸಮನಾಗಿ ಹಾಕುತ್ತೇವೆ ಎನ್ನುವವರು ಇದ್ದಾರೆ.

ಸಂವಿಧಾನ ಜಾರಿಗೆ ಬಂದು ೬೦ ವರ್ಷಗಳು ಕಳೆದು ೭೦ರ ದಶಕದ ಅಂಚಿನಲ್ಲಿದ್ದರೂ ಪ್ರಜಾಪ್ರಭುತ್ವ ವ್ಯವಸ್ಥೆಯ ರಾಷ್ಟ್ರವಾದರು ಯಾರಿಗೆ ಯಾವ ಸ್ಥಾನಮಾನಗಳು ಸಿಗಬೇಕು ಅದು ಅವರಿಗೆ ಅವುಗಳು ಸಿಗುವುದಿಲ್ಲವೆಂದರೆ ಅರ್ಥಮಾಡಿಕೊಳ್ಳಬೇಕು. ಒಟ್ಟು ಜನಸಂಖ್ಯೆಯಲ್ಲಿ ಶೇ ೧೦ರಷ್ಟು ಶ್ರೇಣಿಯ ತುದಿಯಲ್ಲಿ ಬಂಡವಾಳಶಾಹಿಗಳು, ಶೇ ೨೦ರಷ್ಟು ಮಧ್ಯದಲ್ಲಿ ಮಧ್ಯಮ ವರ್ಗದವರು ಇದ್ದರೆ, ಉಳಿದ ಶೇಕಡ ೭೦ರಷ್ಟು ಎಲ್ಲಾ ಜನಸಮುದಾಯಗಳು ಅಧಿಕಾರ ಸ್ಥಾನಮಾನದಿಂದ ದೂರ ಉಳಿದಿರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ. ಹಾಗಾದರೆ

ಅಧಿಕಾರ ಸ್ಥಾನಮಾನಗಳನ್ನು ಪಡೆದು ಅನುಭವಿಸುತ್ತ ಇರುವವರು ಯಾರು ಎನ್ನುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಶ್ರೇಣಿಯ ಮೇಲ್ಭಾಗದಲ್ಲಿರುವವರು ಎಂದು. ರಾಜಕೀಯ ಎನ್ನುವ ಪರಿಭಾಷೆಗೆ ಉತ್ತರವನ್ನು ಹುಡುಕಲು ಕ್ಷೇತ್ರಕಾರ್ಯ ಹೋದಾಗ ಅನೇಕರು ತಮ್ಮದೆಯಾದ ಉತ್ತರಗಳನ್ನು ಕೊಡುತ್ತಾರೆ. ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ ದೇಶವನ್ನು ಮುನ್ನಡೆಸಿಕೊಂಡು ಹೋಗುವ ಪ್ರಕ್ರಿಯೆ, ರಾಜಕೀಯವೆಂದರೆ ಮೊದಲು ಅವನು ಜನಸೇವೆ ಮಾಡಬೇಕು. ಮತ್ತು ಜನರ ಗುಲಾಮರಾಗಿ ಕೆಲಸ ಮಾಡಬೇಕು. ಅದು ನಿಜವಾದ ರಾಜಕೀಯ ಸೇವೆ. ಆದರೆ ಇಂದಿನ ರಾಜಕಾರಣಿಗಳು ಮತ ಪಡೆಯುವವರೆಗೆ ಮಾತ್ರ ಜನಗಳ ಮುಂದೆ ನಟನೆ ಮಾಡುತ್ತಾರೆ.[೩] ಗೆದ್ದ ನಂತರ ಕ್ಷೇತ್ರಗಳ ಕಡೆ ಇಣುಕಿ ನೋಡದವರು ಇದ್ದಾರೆ ಎಂದು ಉತ್ತರಿಸುತ್ತಾರೆ.

ಕರ್ನಾಟಕದ ರಾಜಕೀಯದಲ್ಲಿ ಏನೆಲ್ಲಾ ಬದಲಾವಣೆ ಆಗುತ್ತದೆ ಎಂದು ಜನಸಮುದಾಯದವರ ಬಳಿ ಕೇಳಿದಾಗ, ಅನೇಕ ವಿಧವಾದ ಉತ್ತರಗಳು ಸರ್ವೇ ಸಾಮಾನ್ಯವಾಗಿ ಸಿಗುತ್ತವೆ. ಪ್ರಾಮಾಣಿಕ ನಾಯಕನಾಗಬೇಕು, ಆದರೆ ಅಧಿಕಾರ, ಸ್ಥಾನಮಾನಕ್ಕಾಗಿ ಎಂ.ಪಿ ಹಾಗೂ ಎಂ.ಎಲ್.ಎ ಗಳನ್ನು ಕೊಂಡುಕೊಳ್ಳುವುದು ಒಂದು ಗುಂಪು. ಪಕ್ಷದಿಂದ ಪಕ್ಷಕ್ಕೆ ಪಕ್ಷಿಗಳಂತೆ ಹಾರುವ ಇನ್ನೊಂದು ಗುಂಪು. ಇವರನ್ನು ಆಯ್ಕೆಮಾಡುವಂತಹ ಸಮುದಾಯಗಳು ಹಣ, ಹೆಂಡಕ್ಕಾಗಿ ತಮ್ಮ ಮತಗಳನ್ನು ಮಾರಿಕೊಳ್ಳುವ ಇವರು, ಮುಂದಿನ ಪ್ರಗತಿ ಬಗ್ಗೆ ಯೋಚನೆ ಮಾಡುವಂತಹ ಶಕ್ತಿ ಇವರಿಗೆ ಯಾವಾಗ ಬರುತ್ತದೆ ಎನ್ನುವುದು ಯೋಚಿಸುವ ಸಹೃದಯಿಗಳ ಪ್ರಶ್ನೆಯಾಗಿದೆ. ಪ್ರಜಾಪ್ರಭುತ್ವ ಅನ್ನುವ ಪರಿಭಾಷೆಯನ್ನು ಪದೇ ಪದೇ ಜನಸಮುದಾಯಗಳ ಮುಂದೆ ಮಾತಾನಾಡುತ್ತ ಅರಿವು ಮೂಡಿಸಬೇಕಾಗಿದೆ. ಸಹೃದಯರು ಸರ್ಕಾರವನ್ನು ನಾವು ಆಯ್ಕೆ ಮಾಡುತ್ತೇವೆ, ನಮ್ಮಿಂದ ಸರ್ಕಾರ ಯಾವಾಗ ಬೇಕಾದರು ಅದನ್ನು ಬದಲಿಸಿಕೊಳ್ಳಬಹುದು. ಮನಸ್ಸು ಮಾಡಿದ್ದೇ ಅದರೆ ಯಾಕೆ ಜನಸಮುದಾಯಗಳು ಮೌನವಾಗಿದ್ದಾರೆ. ಜನರಿಂದ ಜನರಿಗಾಗಿಯೇ ಇರುವ ರಾಜಕೀಯ ಪಕ್ಷಗಳು ಪಂಚಾಯತ್ ರಾಜ್ ಸಂಸ್ಥೆಗಳಿಂದ ಹಿಡಿದು ವಿಧಾನಸಭೆ, ವಿಧಾನಪರಿಷತ್, ರಾಜ್ಯಸಭೆ, ಲೋಕಸಭೆಗಳು ಇರುವ ಈ ಸಂಸ್ಥೆಗಳು ಜನರು ಆಯ್ಕೆಮಾಡಿದ್ದವುಗಳು. ಅದ್ದರಿಂದ ನಾವುಗಳು ಇಲ್ಲಿ ಅರ್ಥಮಾಡಿಕೊಳ್ಳಬೇಕು. ರಾಜಕೀಯವೆಂದರೆ ಆಳುವವರ ಪ್ರಕ್ರಿಯೆ ಮಾತ್ರ ಮುಖ್ಯವಲ್ಲ, ಅವರನ್ನು ಆಯ್ಕೆಮಾಡಿದಂತಹ ಸಮುದಾಯಗಳ ಪಾತ್ರವೂ ಮುಖ್ಯವಾಗುತ್ತದೆ ಎನ್ನುವುದು ಮರೆಯಬಾರದು. ಒಬ್ಬ ಜನಪ್ರತಿನಿಧಿಯನ್ನು ಆಯ್ಕೆಮಾಡಿದ ನಂತರ ಅಲ್ಲಿಗೆ ಕಥೆ ಕೊನೆಗೊಳ್ಳುವುದಿಲ್ಲ ಅದು ಹಾಗೆ ನಿರಂತರವಾಗಿ ಮುಂದುವರಿಯುವ ಪ್ರಕ್ರೀಯೇ ಆಗಬೇಕು. ಮತ್ತು ಜನರಿಗೂ ಮತ್ತು ರಾಜಕರಣಿಗಳಿಗೂ ಸರಪಳಿ ಕೊಂಡಿಯಾಗಿ, ಪ್ರಚಲಿತ ಸಂಗತಿಗಳು ಮತ್ತು ವಿಧ್ಯಮಾನಗಳನ್ನು ತಾವುಗಳು ಮಾಡಬೇಕಾದ ಕೆಲಸಗಳ ಬಗ್ಗೆ ಚರ್ಚೆಮಾಡುತ್ತ, ಎಚ್ಚರಿಸುತ್ತ, ಅಭಿವೃಧ್ಧಿಯ ಕಡೆ ಮುನ್ನಡೆಯುವಲ್ಲಿಗೆ ಪ್ರಜೆ ಮತ್ತು ಜನಪ್ರತಿನಿಧಿಗಳ ಪಾತ್ರ ಬಹು ಮುಖ್ಯವಾಗಿರುತ್ತದೆ.[೪]

ರಾಜಕೀಯ ಎನ್ನುವುದು ಸಂಪರ್ಕ ಸೇತುವೆ ಇದ್ದಂತೆ. ಅಧಿಕಾರದಲ್ಲಿರುವ ಪಕ್ಷಗಳಾಗಿರಬಹುದು ಅದರೊಟ್ಟಿಗೆ ಅನೇಕ ಸಂಘ ಸಂಸ್ಥೆಗಳು ಸಹ ಕೆಲಸಮಾಡುತ್ತವೆ. ಅಧಿಕಾರ ಪಕ್ಷಗಳಾಗಿರಬಹುದು, ವಿರೋಧಪಕ್ಷ, ಒತ್ತಡಗುಂಪುಗಳ ಜವಾಬ್ದಾರಿಯೂ ಇರುತ್ತದೆ. ಹಾಗಾದರೆ ಸರ್ಕಾರಕ್ಕೆ ಆದಾಯ ಎಲ್ಲಿಂದ ಬರುತ್ತದೆ, ಎಚಿದರೆ. ತಕ್ಷಣ ನಾವು ನೆನಪು ಮಾಡಿಕೊಳ್ಳಬೇಕು. ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ ಜನರಿಂದ ಜನರಿಗಾಗಿ ರಚನೆ ಆಗಿರುವಂತಹ ರಾಜಕೀಯ ವ್ಯವಸ್ಥೆ. ಆದ್ದರಿಂದ ವಿವಿಧ ತೆರಿಗೆಗಳ ಮೂಲಕ ಸಂಗ್ರಹಿಸಿದ ಆದಾಯಗಳ ಮೂಲಕ ಅಧಿಕಾರದಲ್ಲಿರುವ ರಾಜಕೀಯ ಪಕ್ಷಗಳು ಬಳಸಿಕೊಂಡು ಬಜೆಟ್ ಮಾಡಿಕೊಂಡು ಅಧಿಕಾರ ನಡೆಸುತ್ತಾರೆ. ಉದಾಹರಣೆಯಾಗಿ: ಯಾವರೀತಿ ಆದಾಯವನ್ನು ಸಂಗ್ರಹಿಸುತ್ತಾರೆ ಎಂದರೆ. ಒಂದು ಬೆಂಕಿಪಟ್ಟಣ ದರ, ೫೦ಪೈಸೆ ಅದರೆ ಇದರಲ್ಲಿ ೧೦ ಪೈಸೆ, ಟೂತ್‌ಪೇಸ್ಟ್ ದರ ೩೫. ರೂ ಅದರೆ ಸರ್ಕಾರಕ್ಕೆ ೭ ರೂ. ಸೋಪು ೧೦ ರೂಪಾಯಿ ಇದ್ದರೆ, ಶೇಕಡ ೨೦% ಅಂದರೆ ೨ ರೂ. ಸರ್ಕಾರಕ್ಕೆ ಸೇರುತ್ತದೆ. ಈ ರೀತಿಯಾಗಿ ನಾವುಗಳು ಬೆಳಗ್ಗೆಯಿಂದ ಸಂಜೆಯವರೆಗೆ ಒಂದಲ್ಲ ಒಂದು ಕೆಲಸ, ವ್ಯಾಪಾರ, ಮಾಡುವದರಿಂದಲೂ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಹೋಗುತ್ತದೆ. ಅದ್ದರಿಂದ ಸರ್ಕಾರವಾಗಲಿ ಅಥವಾ ರಾಜಕೀಯ ಪಕ್ಷಗಳಾಗಲಿ ನಿಂತಿರುವುದು ಜನರಿಂದಲೆ. ಆದ್ದರಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಎಂದರೆ ಜನರಿಂದ ಜನರಿಗಾಗಿಯೇ ಇರುವಂತಹ ವ್ಯವಸ್ಥೆ ಎನ್ನುವುದು ಆಳುವವರಾಗಲಿ ಆಳಿಸಿಕೊಳ್ಳುವವರಾಗಲಿ ಮರೆಯಬಾರದು. ರಾಜಕೀಯ ಮಾಡಬೇಕಾದರೆ ಉತ್ತಮವಾದ ನಾಯಕತ್ವದ ಗುಣಗಳನ್ನು ಹೊಂದಿರಬೇಕು. ಅಂದರೆ ಪ್ರಜೆಗಳ ಮನಸ್ಥಿತಿಯನ್ನು ಅರ್ಥಮಾಡಿಕೊಂಡು, ಸಮಯ ಪ್ರಜ್ಞೆ ಸಾಧಕನಾಗಿ ಪ್ರಣಾಳಿಕೆಯಲ್ಲಿ ಹೇಳಿದ ಶೇಕಡ ೭೦ರಷ್ಟು ಆದರೂ ಹೇಳಿದ ವಿಷಯಗಳನ್ನು, ಹೇಳಿದ ಸಮಯಕ್ಕೆ ಈಡೇರಿಸಬೇಕು. ಹಾಗಾದರೆ ರಾಜಕಾರಣಕ್ಕೆ ಒಂದು ಅರ್ಥಬರುತ್ತದೆ. ಜನರ ಮನಸ್ಸುಗಳಲ್ಲಿ ಉಳಿಯುತ್ತದೆ. ರಾಜಕೀಯ ಪಕ್ಷಗಳು ಹುಟ್ಟಿಕೊಂಡು ಸುಮಾರು ೧೨೫ ವರ್ಷಗಳು ಕಳೆದು ಹೋಗಿದೆ. ಆದರೆ ಇವುಗಳಿಗೆ ಸಾವು ಯಾವರೀತಿ ಬರುತ್ತದೆ ಎಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಿಟ್ಟಿದ್ದು. ಇಷ್ಟು ವರ್ಷಗಳು ಕಳೆದರೂ ಅಧಿಕಾರ ಪಡೆಯುತ್ತಿದ್ದವರೂ ಪಡೆದವರೇ ಮರಳಿ ಪಡೆಯುವುದು ವಂಶಪಾರಂಪರಿಕವಾಗಿ ಇದು ಬೆಳೆದು ಬಂದು ಬಿಟ್ಟಿದೆ. ಹಿಂದೆ ರಾಜಮಹಾರಾಜರ ಕಾಲದಲ್ಲಿ ರಾಜ ಮರಣ ಹೊಂದಿದ ನಂತರ ಅವನ ರಕ್ತ ಸಂಬಂಧಿಗಳಾದ ಅಣ್ಣ, ತಮ್ಮ, ಮಗ, ಮಗಳು, ಸೊಸೆ, ಹೀಗೆ ಸಾಲು ಸಾಗುತ್ತಲೇ ಇತ್ತು. ಸಾಮಾನ್ಯ ಜನತೆಗೆ ಅಧಿಕಾರ ದೊರೆಯದೇ ಇದ್ದುದರಿಂದ ಇದನ್ನು ತೊಡೆದು ಹಾಕಲು ಗಾಂಧೀಜಿ ಸ್ವಾತಂತ್ರ್ಯ ತಂದುಕೊಟ್ಟು, ಅಂಬೇಡ್ಕರ್‌ರವರು ಸಂವಿಧಾನವನ್ನು ಬರೆದು, ಜಾರಿಗೆ ತಂದು ತಳಸಮುದಾಯಗಳಿಂದ ಹಿಡಿದು ಶ್ರೇಣಿಯ ತುತ್ತತುದಿಯಲ್ಲಿರುವ ಸಮುದಾಯಗಳ ಅರಿವು ಇಟ್ಟಿಕೊಂಡು, ಎಲ್ಲರಿಗೂ ಅಧಿಕಾರ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟು, ೭೦ ವರ್ಷಗಳ

ಅಂತರಕ್ಕೆ ಬಂದರೂ, ಪೂರ್ಣಪ್ರಮಾಣದಲ್ಲಿ ಯಶ್ವಸಿಯಾಗಲು ಸಾಧ್ಯವಾಗಿಲ್ಲದಿರುವುದನ್ನು ನೋಡಬಹುದು.[೫]

ಇವತ್ತಿನವರೆಗೂ ಅದು ಸರಿಯಾಗಿ ತಲುಪಿ ಗುರಿಮುಟ್ಟಲು ತಳಸಮುದಾಯಗಳಿಗೆ ಸಾಧ್ಯವಾಗಿಲ್ಲವೆಂದರೆ ಹಿಂದೆ ಇದ್ದ ರಾಜಮಹಾರಾಜರ ಆಳ್ವಿಕೆಯ ಆಡಳಿತ ಕಾಲದಲಿದ್ದಂತೆಯೇ ಪರಿಸ್ಥಿತಿ ಇದೆ. ಅಂದರೆ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ತಂದೆ ನಂತರ ಮಗ, ಮಗನ ನಂತರ, ಮೊಮ್ಮಗ, ಸೊಸೆ, ಹೆಂಡತಿ, ತಂಗಿ, ಅಳಿಯರಿಗೆ ರಾಜಕೀಯ ಅಧಿಕಾರ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟು, ಅಧಿಕಾರಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವ ಪರಿಸ್ಥಿತಿ ಮುಂದುವರಿಯುತ್ತಾ ಸಾಗುತ್ತದೆ. ದೇಶದ್ಯಾಂತ ಇರುವ ರಾಜಕೀಯ ಪಕ್ಷಗಳಲ್ಲಿ, ಸಂವಿಧಾನದ ಆಶಯದಂತೆ ಮೀಸಲಾತಿಯನ್ನು ಬಳಸಿಕೊಂಡು ತಳದಲ್ಲಿರುವಂತವರು ಹಣವಿಲ್ಲದೆ ರಾಜಕರಣ ಮಾಡಲು ಸಾಧ್ಯವಿಲ್ಲದ ಮಟ್ಟಕ್ಕೆ ಪ್ರಸ್ತುತ ದಿನಮಾನಗಳಲ್ಲಿ ಕಾಣಬಹುದು. ತಳ ಸಮುದಾಯಗಳು ಕೊನೆಪಕ್ಷ ಗ್ರಾಮ ಪಂಚಾಯಿತಿ ಸದಸ್ಯರಾಗಬೇಕಾದರೆ ಲಕ್ಷಗಟ್ಟಲೇ ಹಣವಿರಬೇಕು. ಇನ್ನು ಎಂ.ಎಲ್.ಎ. ಹಾಗಬೇಕಾದರೆ ದಿನನಿತ್ಯ ಪತ್ರಿಕೆಗಳಲ್ಲಿ, ಟಿ.ವಿ, ಮಾಧ್ಯಮಗಳಲ್ಲಿ ಬರಬೇಕು ಮತ್ತು ಪ್ರತಿ ಊರಲ್ಲಿ ದೊಡ್ಡ ದೊಡ್ಡ ಬ್ಯಾನರ್‌ಗಳಲ್ಲಿ ಅವರ ಫೋಟೋ ದೊಡ್ಡದಾಗಿ ಕಾಣಬೇಕು. ಹಾಗೂ ವಾರಪೂರ್ತಿ ಒಂದಲ್ಲ ಎರಡು ಸಭೆ ಸಮಾರಂಭಗಳು ಮಾಡಬೇಕು, ಅವರಿಗೆ ಬೇಕಾದ ಹಣ, ಹೆಂಡ ಇತ್ಯಾದಿಗಳನ್ನು ಕೊಡಬೇಕು. ಇವುಗಳನ್ನು ಕೊಡಲು ಕೋಟಿಗಟ್ಟಲೇ ಹಣಬೇಕು. ಯಾರು ಜಾಸ್ತಿ ಹಣ ಖರ್ಚು ಮಾಡುತ್ತಾರೋ, ಅವರಿಗೆ ಅಧಿಕಾರ ಸ್ಥಾನಮಾನ ಲಭಿಸುವ ಸ್ಥಿತಿ ಇದೆ. ಹಾಗಾದರೆ ಹಣ ಖರ್ಚುಮಾಡಲು ಶಕ್ತಿ ಇಲ್ಲದವರು ರಾಜಕೀಯ ಸ್ಥಾನಮಾನಗಳು ಪಡೆಯಲು ಸಾಧ್ಯವಿಲ್ಲವೆ ಎನ್ನುವ ಪ್ರಶ್ನೆ ಹಾಗೆ ಉಳಿದುಕೊಳ್ಳುತ್ತದೆ.[೬]

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೋಡಿದರೆ. ರಾಜಕೀಯ ಎನ್ನುವುದು ಜಾತಿ ಆಧಾರಿತವಾಗಿ ಬೆಳೆದುಕೊಂಡು ಕೊಂಬೆಗಳನ್ನು ಹೊಂದಿಬಿಟ್ಟಿದೆ. ಜನಸಮುದಾಯಗಳು ಮತದಾನ ಮಾಡುವುದಕ್ಕೆ ಮುಂಚೆ, ಅವನು ಯಾವ ಜಾತಿಯವನು, ನಮ್ಮ ಜಾತಿಯವನೇ, ಒಂದು ವೇಳೆ ಅವನು ಗೆದ್ದರೆ ನಮ್ಮ ಜಾತಿಗೆ ಹೊಂದಿಕೊಂಡು ಕೆಲಸಮಾಡುವವನೆ, ನಮ್ಮ ಜಾತಿಯವನು ಬಂದರೆ ಒಳ್ಳೆದು ಎನ್ನುವ ಅಲೋಚನೆಯಲ್ಲಿ ತೊಡಗಿರುತ್ತಾರೆ. ಇದು ಒಂದು ಕ್ವಡೆಯಾದರೆ. ಗೆದ್ದಂತಹವರು ಸಹ, ಜಾತಿ ರಾಜಕರಣ ಮಾಡುವುದನ್ನು ಕಾಣಬಹುದು. ತಮ್ಮ ಜಾತಿಯವರನ್ನು ಮಾತ್ರ ಡ್ರೈವರ್, ಪಿ.ಎ, ಕಂಟ್ರಾಕ್ಟರ್, ಅಧಿಕಾರಿಗಳನ್ನು ಮಾತ್ರ ಇಟ್ಟುಕೊಂಡು ಕೆಲಸ ಕಾರ್ಯಗಳನ್ನು ಮಾಡುವವರು ಇದ್ದಾರೆ. ಆದರೆ ಇಲ್ಲಿ ಒಂದು ವಿಷಯವನ್ನು ಗೆದ್ದಂತಹ ಪ್ರತಿನಿಧಿಗಳು ಮರೆಯಬಾರದು. ಇದನ್ನು ನೆನಪು ಇಟ್ಟುಕೊಂಡು ಕೆಲಸ ಮಾಡಬೇಕು. ಒಂದು ಮೀಸಲಾತಿ ಅಥವಾ ಸಾಮಾನ್ಯ ಕ್ಷೇತ್ರದಲ್ಲಿ ಗೆದ್ದಾಗ, ಅವರಿಗೆ ಅವರ ಸಮುದಾಯದವರು ಮಾತ್ರ ಮತದಾನ

ಮಾಡಿರುವುದಿಲ್ಲ. ಇತರೆ ಸಮುದಾಯಗಳು ಸಹ ಮತದಾನ ಮಾಡಿ ಆಯ್ಕೆ ಮಾಡಿರುತ್ತಾರೆ.[೬] ಆದ್ದರಿಂದ ತಮ್ಮ ಸಮುದಾಯಕ್ಕೆ ಮಾತ್ರ ಸೀಮಿತವಾಗದೆ ಸರ್ವರ ಬಗ್ಗೆಯೂ ಯೋಚಿಸಬೇಕಾಗುತ್ತಾದೆ.

ಇವತ್ತು ಉತ್ತಮವಾದ ರಾಜಕಾರಣಿಗಳು ಸಿಗುವುದು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಯಾರು ಉತ್ತಮರು ಎನ್ನುವ ಗೊಂದಲದಲ್ಲಿದ್ದೇವೆ ನಾವುಗಳು. ಯಾಕೆಂದರೆ ರಾಜಕೀಯದಲ್ಲಿ ಅಪಾರಾಧಿಕರಣಗಳು ಹೆಚ್ಚುತ್ತಿವೆ. ಯಾವುದನ್ನು ಅಪಾರಾಧಿಕರಣವೆನ್ನುಬೇಕು? ಬಹುಹಗರಣದಲ್ಲಿ ಸಿಲುಕಿರುವವರೇ, ತಿಲಕ್‌ಹಗರಣದಲ್ಲಿ ಲಂಚಸ್ವೀಕರಿಸುವವರೆ? ಧನದ ಮೇವು ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗನ್ನು ಸ್ವಹಾಮಾಡಿದ ರಾಜಕರಣಿಗಳೇ? ಕಾರ್ಗಿಲ್ ಯುದ್ದದಲ್ಲಿ ವೀರ ಮರಣ ಹೊಂದಿದವರ ಶವಪೆಟ್ಟಿಗೆಯಲ್ಲಿ ಕಮಿಷನ್ ಪಡೆದವರೇ? ಅತಂತರ ರಾಜಕೀಯ ಸ್ಥಿತಿ ನಿರ್ಮಾಣವಾದಗ ಅನೇಕ ಎಂ.ಪಿ ಅಥವಾ ಎಂ.ಎಲ್.ಎ.ಗಳನ್ನು ಖರೀದಿಸಿ ಓಟು ಪಡೆದವರನ್ನೆ? ಯುರಿಯ ಹಗರಣ, ಬೊಫೊರ್ಸ್‌ಹಗರಣ, ಲಕ್ಕುಬಾಯಿ ಪಾತಕ್ ಹಗರಣ, ಮೇವುಹಗರಣದಲ್ಲಿ ಇತ್ಯಾದಿ, ಹಗರಣದಲ್ಲಿ ಭಾಗಿಯಾಗಿ ಜೈಲಿಗೆ ಹೋಗಿಬಂದ ರಾಜಕರಣಿಗಳನ್ನು ಅಪಾರಾಧಿಗಳೆನ್ನಬೇಕೆ? ಯಾರಿಗೆ ಅಪಾರಾಧಿಗಳನ್ನೆಬೇಕು ಎನ್ನುವ ಗೊಂದಲದಲ್ಲಿದ್ದಾರೆ ಜನಸಮುದಾಯಗಳು. ಅದರಿಂದ ಯಾವುದು ರಾಜಕೀಯ ಎನ್ನುವ ಪ್ರಶ್ನೆಗೆ ಉತ್ತರ ಸಿಗುವುದು ಕಷ್ಟ. ಅನೇಕರು ಅನೇಕ ರೀತಿಯಲ್ಲಿ ಅಲೋಚನೆಗಳನ್ನು ಮಾಡುತ್ತ ರಾಜಕೀಯ ಮಾಡುತ್ತಾರೆ ಎನ್ನುವುದು ತಿಳಿದಿರುವ ಸಂಗತಿ. ಜಾತಿ, ಧರ್ಮ ಆಧಾರಿತವಾಗಿ ನಡೆಯುತ್ತ ಸಾಗುತ್ತದೆ.[೮]

ಅಭಿವೃದ್ಧಿ ಎನ್ನುವುದು ನಿರಂತರ ಪ್ರಕ್ರಿಯೆ. ಇದಕ್ಕೆ ಪ್ರಾರಂಭವಿರುತ್ತೆ ಅಂತ್ಯ ಇರುವುದಿಲ್ಲ. ಮೊದಲು ಇದು ಆರ್ಥಿಕತೆಗೆ ಮಾತ್ರ ಸೀಮಿತವಾಗಿತ್ತು. ಈಗ ಬಹಳ ಬೆಳೆದು ಮುಂದೆ ಹೋಗಿಬಿಟ್ಟಿದೆ. ಇದಕ್ಕೆ ಸ್ಪಷ್ಟವಾದ ಉತ್ತರ ಜನಸಮುದಾಯಕ್ಕೆ ತಿಳಿದಿಲ್ಲ, ಹಲವಾರು ಹಲವು ವಿಧಗಳ ಅರ್ಥದಲ್ಲಿ ಬಳಸುತ್ತ ಇದ್ದರೆ ಅಭಿವೃದ್ದಿಗೆ ಸಮಗ್ರವಾದ ಪರಿಕಲ್ಪನೆ ಇದೆ. ಮೂಲಭೂತವಾಗಿ ಅರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಇರುವ ಪರಿಕಲ್ಪನೆಗಳು ಇವೆ. ಆದರೆ ಇಂದು ಬಳಸುವ ಪ್ರಕ್ರಿಯೆ ಹೇಗಿದೆ ಎಂದರೆ, ಅಭಿವೃದ್ಧಿ ಎನ್ನುವ ಪದವನ್ನು ಬಳಸದೇ ಇರುವವರು ಯಾರು ಇಲ್ಲವೆನ್ನಬಹುದು. ಸಮುದಾಯ, ವ್ಯಕ್ತಿ, ರಾಜಕಾರಣಿಗಳು, ಎಲ್ಲರೂ ಅವರವರ ಕಲ್ಪನೆಗಳಿಗೆ ಅನುಗುಣಾವಾಗಿ ಬಳಸಿಕೊಳ್ಳುತ್ತಿದ್ದಾರೆ. ವ್ಯಕ್ತಿ ವಿಚಾರಕ್ಕೆ ಬಂದರೆ, ಉನ್ನತವಾದ ಸ್ಥಾನಮಾನಗಳನ್ನು ಪಡೆಯಬೇಕು ಎನ್ನುವ ಒಂದು ಸಮೂಹವಾದರೆ, ಕಾರು, ಬಂಗಲೆ ಐಶರಾಮಿ ಜೀವನ ಸಾಗಿಸಬೇಕು ಎನ್ನುವ ಮತ್ತೊಂದು ಗುಂಪಿನ ವಾದ. ಸಮುದಾಯದ ಕಡೆ ಬಂದರೆ ಮೂಲಭೂತವಾಗಿ ಅವರಿಗೆ ಬೇಕಾದ ಚರಂಡಿ, ಶೌಚಾಲಯ, ಕುಡಿಯುವ ನೀರು, ವಸತಿ, ಇತ್ಯಾದಿಗಳು.

ರಾಜಕೀಯ ನಾಯಕರ ಬಗ್ಗೆ ನೋಡುವುದಾದರೆ. ರಾಜಕೀಯ ಎಂದರೇ ಅಭಿವೃದ್ಧಿ. ಆದ್ದರಿಂದ ಅಭಿವೃದ್ಧಿ ಎನ್ನುವ ಪದವನ್ನು ಬಿಟ್ಟು ರಾಜಕೀಯದಲ್ಲಿ ಬದುಕಲು ಸಾಧ್ಯವೆ ಇಲ್ಲವೆನ್ನುವ ಮಟ್ಟಕ್ಕೆ ಬಂದುಬಿಟ್ಟಿದ್ದಾರೆ.[೯] ಪ್ರಚಲಿತ ದಿನಮಾನಗಳಲ್ಲಿ ಅಭಿವೃದ್ಧಿ ರಾಜಕಾರಣ ಯಾವರೀತಿ ಇದೆಯೆಂದರೆ, ಮಾಡಿರುವ ರಸ್ತೆಗಳನ್ನು ಪದೇ ಪದೇ ಮಾಡುವುದು ಅಭಿವೃದ್ಧಿ ಎಂದು ಭಾವಿಸಿಕೊಂಡು ಕೆಲಸ ಮಾಡುವ ರಾಜಕೀಯ ಸಮುದಾಯಗಳು ಇದ್ದಾವೆ. ನಾನು ಒಂದು ಗ್ರಾಮದಲ್ಲಿ ಪ್ರಶ್ನೆ ಮಾಡಿದೆ. ಯಾಕೆ ನೀವು ಮಾಡಿರುವ ರಸ್ತೆಗಳನ್ನು ಪದೇ ಪದೇ ಮಾಡುತ್ತೀರಿ? ಅವರಿಂದ ಬಂದಿದ್ದು, ನಮ್ಮ ಅಧಿಕಾರದ ಅವಧಿಯಲ್ಲಿ ನಮ್ಮ ಮನೆಗಳ ಪಕ್ಕ ಅಥವಾ ವಾರ್ಡ್‌ನಲ್ಲಿ ರಸ್ತೆಗಳನ್ನು ಮಾಡುಸುತ್ತೇವೆ. ಬೇರೆ ವಾರ್ಡಗಳಲ್ಲಿ ಹೋಗಿ ರಸ್ತೆ ಮಾಡಲು ಹೋದರೆ, ಬೇಡ ಇಲ್ಲಿ ಮಾಡಬೇಡಿ ಮುಂದಿನ ವರ್ಷದ ಚುನಾವಣೆಯಲ್ಲಿ ನಾವು ಗೆದ್ದು ಬರುತ್ತೇವೆ. (ಪಂಚಾಯತ್ ಚುನಾವಾಣೆಯಲ್ಲಿ) ಅವಾಗ ನಾವುಗಳು ಎಲ್ಲಿ ರಸ್ತೆಗಳನ್ನು ಮಾಡಿಸಿಕೊಳ್ಳಬೇಕು ಎಂದು ನಿರ್ಧರಿಸುತ್ತೇವೆ ಎನ್ನುತ್ತಾರೆ. ಆದ್ದರಿಂದ ಒಳ ರಾಜಕೀಯದಿಂದ ಕಡಿಮೆ ಸಿಮೆಂಟ್ ಹಾಕಿ ಮಾಡಿರುವ ರಸ್ತೆಗಳು ಚರಂಡಿಗಳು ಬೇಗ ಹಾಳಾಗುತ್ತವೆ. ಅದ್ಧರಿಂದ ಮತ್ತೆ ಮಾಡುವ ಭಾಗ್ಯ ಅವರಿಗೆ ದೊರಕುತ್ತದೆ. ಇದು ಅಭಿವೃದ್ಧಿ ರಾಜಕೀಯವೆಂದು ಭಾವಿಸಿಕೊಂಡಿದ್ದಾರೆ.

ರಾಜಕೀಯ ಪಕ್ಷಗಳ ಅಭಿವೃದ್ಧಿ ಹೇಗಿದೆ ಎಂದರೆ. ಬಂಡವಾಳಶಾಹಿಗಳ ಪರವಾಗಿ ಇದ್ದು, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಯಿದೆಗಳನ್ನು ಜಾರಿ ಮಾಡುತ್ತ ಬಂದಿದ್ದಾರೆ. ಆದ್ದರಿಂದ ನಿಜವಾದ ರಾಜಕೀಯ ಅಭಿವೃದ್ಧಿ ಎಂದರೆ ತಳದಲ್ಲಿರುವಂತವರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಯಿದೆಗಳನ್ನು ಜಾರಿಮಾಡಬೇಕು. ಮತ್ತು ಸಮುದಾಯಗಳು ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣ, ಆರೋಗ್ಯ, ಬಂಡವಾಳ, ಭೂಮಿ ಇಲ್ಲದವರಿಗೆ ಭೂಮಿಯನ್ನು ಸರ್ಕಾರ ಕೊಡಬೇಕು. ಯಾಕೆಂದರೆ ಈ ನಾಲ್ಕರಲ್ಲಿ ಒಂದು ಇಲ್ಲದಿದ್ದರು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಅವರ ಬಳಿ ಶಿಕ್ಷಣ, ಆರೋಗ್ಯ ಇದ್ದರೆ, ಬಂಡವಾಳವಿಲ್ಲ. ಬಂಡವಾಳ ಸ್ವಲ್ಪ ಭೂಮಿ ಇದ್ದರೆ ಆರೋಗ್ಯ ಶಿಕ್ಷಣವಿಲ್ಲ. ಆದ್ದರಿಂದ ಅವರು ಇಂದಿಗೂ ತಳದಲ್ಲಿಯೇ ಇದ್ದು ಖಾಲಿಹೊಟ್ಟೆಯಲ್ಲಿ ಫುಟ್‌ಪಾತ್‌ಗಳಲ್ಲಿ ಮಲಗಿರುವವರು ಸಿಗುತ್ತಾರೆ.[೧೦] ಇದನ್ನು ಬದಲಿಸುವ ಶಕ್ತಿ ಒಬ್ಬ ರಾಜಕರಣಿ ಮನಸ್ಸು ಮಾಡಿದ್ದೇಯಾದರೆ ಇವರಿಗೆ ನ್ಯಾಯ ದೊರಕುತ್ತದೆ ಹಾಗೂ ಅವರಿಗೆ ಸಿಗಬೇಕಾದ ಸ್ಥಾನಮಾನಗಳು ಸಿಗುತ್ತವೆ.

೪.೨ ಗುರುತಿನ ರಾಜಕೀಯ ಬೆಳೆದು ಬಂದ ದಾರಿ

ಗುರುತಿನ ರಾಜಕಾರಣವು ಸಾಮಾಜಿಕ ಸೈದ್ಧಾಂತಿಕತೆ ಮತ್ತು ರಾಜಕೀಯ ನಡಾವಳಿಯೆಡೆಗಿನ ಒಲವು ಆಗಿದೆ. ಹಾಗಾಗಿ ರಾಜಕೀಯ ಪಾತ್ರಗಳ ಬಗೆಹರಿಸುವಿಕೆಯ ಒಂದು ಸುಸಂಗತವಾದ

ವಿಚಾರಗಳ ಗುಚ್ಛಗಳಿಗೆ ಹೊರತಾಗಿದೆ. ತುಳಿತ ಅಥವಾ ದಮನವನ್ನು ಕಿತ್ತುಹಾಕಿ ಗುಂಪುಗಳ ಅಸ್ಮಿತೆಯನ್ನು ಪುನರ್ ವಿನ್ಯಾಸಗೊಳಿಸುವ ರಾಜಕೀಯ ಸಂಸ್ಕೃತಿಯ ಸ್ವಯಂ ಪ್ರತಿಪಾದನೆಯ ಸವಾಲನ್ನು ಸ್ವೀಕರಿಸುವುದು ಅದರ ಪ್ರಮುಖ ಸಂಗತಿಯಾಗಿದೆ. ಎರಡನೆ ಅಲೆಯ ಸ್ತ್ರೀವಾದ ಮತ್ತು ಪುರುಷ ಹಾಗೂ ಮಹಿಳಾ ಸಲಿಂಗಕಾಮಿಗಳ ಆಂದೋಲನದಿಂದ ಜನಾಂಗೀಯ ರಾಷ್ಟ್ರೀಯತೆ, ಬಹುಸಂಸ್ಕೃತಿವಾದ ಮತ್ತು ಮತೀಯ ಮೂಲಭೂತವಾದ ಹೀಗೆ ವಿಭಿನ್ನ ಮತ್ತು ವಿವಿಧ ರೀತಿಯಲ್ಲಿ ಗುರುತು ರಾಜಕಾರಣವು ವ್ಯಕ್ತಗೊಳ್ಳುತ್ತಿದೆ. ಲಿಂಗತ್ವ, ಲೈಂಗಿಕತೆ, ಸಂಸ್ಕೃತಿ, ಜನಾಂಗೀಯ, ಧರ್ಮ ಮತ್ತಿತರ ತತ್ವಗಳಲ್ಲಿ ಗುರುತು ರಾಜಕಾರಣವು ಮರುವಿನ್ಯಾಸ ಪಡೆಯುವ ಸಾಧ್ಯತೆಗಳಿವೆ. ಎಲ್ಲಾ ರೂಪಗಳ ಗುರುತು ರಾಜಕಾರಣವು ಸಾಮಾನ್ಯವಾಗಿ ಎರಡು ಗುಣಲಕ್ಷಣಗಳುಳ್ಳ ನಂಬಿಕೆಯನ್ನು ತೋರಿಸುತ್ತದೆ. ಮೊದಲನೆಯದಾಗಿ ಗುಂಪುಗಳ ಅಂಚೀಕರಣವು ಕಾನೂನಾತ್ಮಕ, ರಾಜಕೀಯ ಅಥವಾ ಸಾಮಾಜಿಕ ಸಂಗತಿಗಳು ಮಾತ್ರವೆಂದು ತಿಳಿಯದೆ ಅದೊಂದು ಸಾಂಸ್ಕೃತಿಕ ಸಂಗತಿಗಳೆಂದು ಪ್ರತಿಪಾದಿಸುತ್ತದೆ. ದಮನಿತ ಗುಂಪುಗಳು ತಮ್ಮನ್ನು ಹೇಗೆ ನೋಡುತ್ತವೆ ಮತ್ತು ಇತರರು ಹೇಗೆ ಪರಿಗಣಿಸುತ್ತಾರೆ ಎಂಬ ಪ್ರಬಲ ಗುಂಪುಗಳ ರೂಢಿಗತ ಮತ್ತು ಮೌಲ್ಯಗಳ ಅಭಿವೃದ್ಧಿಯಲ್ಲಿ ಅವು ಕಾರ್ಯಾಚರಿಸುತ್ತವೆ. ಆದ್ದರಿಂದ ಗುರುತಿನ ಸಾಂಪ್ರದಾಯಿಕ ಭಾವನೆಯು ಒಂದು ಕೀಳರಿಮೆಯ, ನಾಚಿಕೆಗೇಡಿನ ನೆಲೆಯನ್ನು ಉಂಟುಮಾಡಿ, ಅಂಚೀಕೃತ ಗುಂಪುಗಳು ತಮ್ಮ ಅಧೀನತೆಯನ್ನು ಸಾರಲು ನೆರವಾಗುತ್ತದೆ. ಎರಡನೆಯದಾಗಿ ಗುರುತಿನ ಮರು ವಿನ್ಯಾಸ ಮಾಡುವ ಮೂಲಕ ಗುಂಪುಗಳಿಗೆ ತಮ್ಮದೆ ಆದ ಹೆಮ್ಮೆ ಮತ್ತು ಸ್ವಯಂ ಗೌರವವಿದೆ ಎಂಬ ಸವಾಲನ್ನು ಅಧೀನತೆಯು ಒಡ್ಡಬಹುದು. ಉದಾಹರಣೆಗೆ ಕಪ್ಪು ಸುಂದರ, ಸಲಿಂಗಕಾಮಿ ಹೆಮ್ಮೆ, ಇತ್ಯಾದಿ ಒಂದು ಸಕಾರಾತ್ಮಕ ಸಾಮಾಜಿಕ ಗುರುತನ್ನು ಘೋಷಿಸುವ ಮೂಲಕ ಇತರರು ತಮ್ಮ ಗುರುತನ್ನು ನಿರ್ಧರಿಸುವ ಅಧಿಕಾರದಿಂದ ಜನರನ್ನು ಮುಕ್ತಗೊಳಿಸಿ, ಒಂದು ಧಿಕ್ಕರಿಸುವ ಕ್ರಮಕ್ಕೆ ನೆರವಾಗಬಹುದು. ಇದು ಮಾನವೀಯತೆಯನ್ನು ಸಂಕುಚಿತಗೊಳಿಸಿ ಜನರನ್ನು ಗುಂಪುವಿನ ಇರುವಿಕೆಗೆ ದಾರಿ ಮಾಡಿ ವಿಭಜನೆ ಗೊಂದಲ ಮತ್ತು ವೈರುಧ್ಯಗಳನ್ನು ಉಂಟು ಮಾಡಬಹುದೆಂಬ ಟೀಕೆಯಿದೆ.[೧೧]

ಇಪ್ಪತ್ತನೇ ಶತಮಾನದ ಸಂಕ್ಷಿಪ್ತ ರಾಜಕಾರಣವು ಶೀತಲ ಸಮರ ಸಂದರ್ಭದಲ್ಲಿ ವೈಚಾರಿಕ ಹಗೆತನದ ಪ್ರಾಬಲ್ಯದಿಂದ ಕೂಡಿದ್ದು, ಸಾಂಸ್ಕೃತಿಕ ಭಿನ್ನತೆಯ ವಿಷಯಗಳೊಂದಿಗೆ ಅತಿಯಾಗಿ ರಚಿತವಾಗಿರುವಂತೆ ಭಾಸವಾಗುತ್ತಿದೆ. ಪೂರ್ವ ಮತ್ತು ಪಶ್ಚಿಮದ ಸಮತಾವಾದ ಮತ್ತು ಬಂಡವಾಳಶಾಹಿಯ ತಿಕ್ಕಾಟವು ಒಂದು ಮಾದರಿ ಕೈಗಾರಿಕಾ ಸಮಾಜಕ್ಕೆ ಹೊರತಾದ ಸಂಘರ್ಷವಾಗಿದೆ. ಎರಡೂ ಮಾದರಿಗಳು ಸಾಮಾಜಿಕ ಮತ್ತು ಆರ್ಥಿಕ ದುಗುಡಗಳಿಗೆ ಒಂದು ಸಾರ್ವತ್ರಿಕವೆನ್ನಬಹುದಾದ ನೆಲೆಯನ್ನು ಒದಗಿಸಿದವು. ಪ್ರತಿ ಮಾದರಿಗಳು ಒಡೆತನದ

ರಾಜಕಾರಣವನ್ನು ಅವಲಂಭಿಸಿದ್ದು, ಬಂಡವಾಳಶಾಹಿಯು ಖಾಸಗಿ ಆಸ್ತಿ ಮತ್ತು ಸ್ಪರ್ಧಾತ್ಮಕ ಮಾರುಕಟ್ಟೆ ಪರ ನಿಂತರೆ, ಸಮತಾವಾದವು ಸಮಷ್ಠಿಯ ಒಡೆತನ ಮತ್ತು ಕೇಂದ್ರಿತ ಯೋಜನೆಗೆ ಒಲವು ನೀಡಿದವು. ಬಂಡವಾಳಶಾಹಿಯು ಸಮತಾವಾದವನ್ನು ದುರ್ಬಲಗೊಳಿಸಿದರೂ ಅದರ ಜಾಗತಿಕ ಮಟ್ಟದ ಜಯವು ೧೯೮೦ ರಿಂದೀಚೆಗೆ ಗುರುತಿನ ರಾಜಕಾರಣ ಹೆಚ್ಚುತ್ತಿರುವ ಮಹತ್ವದಿಂದಾಗಿ ಸಂಶಯಾಸ್ಪದದಿಂದ ಕೂಡಿದೆ. ಯಾವುದೇ ರೂಪದ ಗುರುತಿನ ರಾಜಕಾರಣಕ್ಕೂ, ಸಾಮಾನ್ಯವಾಗಿ ಮೊದಲನೆಯದಾಗಿ ಉದಾರವಾದಿ ಸಾರ್ವತ್ರಿಕತೆಯನ್ನು ದಮನದ ಮೂಲವೆಂಬ ನಿಲುವು ಹೊಂದಿ, ಅಧೀನ ಗುಂಪು ಮತ್ತು ಜನಗಳನ್ನು ಅಂಚೀಕೃತಗೊಳಿಸಿ ಅನ್ಯೈತಿಕವನ್ನಾಗಿಸುವ ಒಂದು ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯ ರೂಪವಿದೆ. ಯಾಕೆಂದರೆ ಈ ಸಾರ್ವತ್ರಿಕ ಸೋಗಿನ ಹಿಂದೆ ಉದಾರವಾದಿ ಸಂಸ್ಕೃತಿಯ ರಚನೆ ಇದೆ ಮತ್ತು ಪ್ರಬಲ ಗುಂಪುಗಳ ಹಿತಾಸಕ್ತಿಗಳಿವೆ. ಅಂದರೆ ಗಂಡಸರು, ಬಿಳಿಯರು ಮತ್ತು ಶ್ರೀಮಂತರು ಇತ್ಯಾದಿ. ಈ ಅಧೀನ ಗುಂಪು ಮತ್ತು ಜನಗಳು ಕೆಳಮಟ್ಟದ ಸ್ಥಾನ ಹೊಂದಿದ್ದು, ಮೇಲ್ವರ್ಗದವರ ಜೀವನ ಮೌಲ್ಯ ಮತ್ತು ಹಿತಾಸಕ್ತಿಗಳನ್ನು ಉತ್ತೇಜಿಸುವತ್ತ ಮಾಡಲಾಗುತ್ತಿದೆ.[೧೨]

ಆದಾಗ್ಯೂ ಗುರುತು ರಾಜಕಾರಣವು ವಿಮೋಚನೆ ಮತ್ತು ಸಬಲೀಕರಣದ ಮೂಲವೂ ಆಗಿದೆ. ಇದು ಸಾಂಸ್ಕೃತಿಕ ಸ್ವಯಂ ಪ್ರತಿಪಾದನಾ ಪ್ರಕ್ರಿಯೆಯ ಒಂದು ಶುದ್ಧ ಇಲ್ಲವೇ ಸ್ಪಷ್ಟವಾದ ಗುರುತಿನ ನೆಲೆಯನ್ನು ತರುವಂತೆ ಸಾಮಾಜಿಕ ಮತ್ತು ರಾಜಕೀಯ ಉನ್ನತಿಯ ಭರವಸೆಯನ್ನು ನೀಡುತ್ತವೆ. ಗುರುತಿನ ರಾಜಕಾರಣವು ಹಲವು ರೀತಿಯಲ್ಲಿ ಆದರ್ಶದ ಮಾದರಿಯಾಗಿ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಕಪ್ಪು ಭಾವನಾತ್ಮಕ ಚಳುವಳಿಯ ರೂಪದಲ್ಲಿ 'ಮರಳಿ ಆಫ್ರಿಕಾಕ್ಕೆ' ಎಂಬ ಸಂದೇಶದ ಅನುಸಾರ ಕಾರ್ಯಕರ್ತ ಮಾರ್ಕಸ್ ಗಾರ್ವೆಯ ಪ್ರೇರಣೆಯೊಂದಿಗೆ ಮೊಟ್ಟ ಮೊದಲ ಬಾರಿಗೆ ರೂಪುಗೊಂಡಿತು. ೧೯೬೦ ರ ಸುಮಾರಿಗೆ ಕಪ್ಪು ರಾಷ್ಟ್ರೀಯತೆಯ ಸುಧಾರಣಾವಾದಿ ಮತ್ತು ಕ್ರಾಂತಿಕಾರಿ ಚಳವಳಿಯ ಘಟಕದೊಂದಿಗೆ ಹೆಚ್ಚಾಗಿ ರಾಷ್ಟ್ರೀಯ ಪ್ರಾಧಾನ್ಯತೆ ಪಡೆಯಿತು. ರೂಪುಗೊಳ್ಳುತ್ತಿರುವ ಕಪ್ಪು ಚಳವಳಿಯು ಅಹಿಂಸಾ ರೂಪದ ಕಾನೂನು ಉಲ್ಲಂಘನೆಯ ಪ್ರತಿರೋಧವನ್ನು ಕೈಬಿಟ್ಟು ಕಪ್ಪು ಪ್ರತ್ಯೇಕತೆಯ ಬೆಂಬಲದೊಂದಿಗೆ (ಕಪ್ಪು ಪ್ಯಾಂಥರ್ಸ್ ಎಂಬ ೧೯೬೬ ರಲ್ಲಿ ಸಂಘಟನೆ)ಯ ನೇತೃತ್ವದಲ್ಲಿ ದೈಹಿಕ ಒತ್ತಡ ಮತ್ತು ಸಶಸ್ತ್ರರೂಪದ ಚಳುವಳಿಗೆ ಉತ್ತೇಜನೆ ನೀಡಿತು. ಆದಾಗ್ಯೂ ಅಮೇರಿಕ ರಾಜಕಾರಣದಲ್ಲಿ ಇನ್ನೂ ಹೆಚ್ಚಿನ ವಿಶೇಷವೇನೆಂದರೆ ೧೯೩೦ರಲ್ಲಿ ಸ್ಥಾಪನೆಗೊಂಡ ಕಪ್ಪು ಮುಸ್ಲಿಮರು, ಕಪ್ಪು ಅಮೇರಿಕನ್ನರು, ಪ್ರಾಚೀನ ಮುಸ್ಲಿಂ ಬುಡಕಟ್ಟುವಿನ ಪ್ರತ್ಯೇಕವಾದ ಮೂಲದಿಂದ ಬಂದವರೆಂಬ ವಾದವನ್ನು ಮುಂದಿಟ್ಟರು. ಹೀಗೆ ಕಪ್ಪು ರಾಷ್ಟ್ರೀಯತೆಯು ಪ್ರಬಲ ಬಿಳಿ ಸಂಸ್ಕೃತಿಯ ವಿರುದ್ಧ ಪ್ರಜ್ಞೆಯನ್ನು ಮೂಡಿಸಿ ಇತರ ರೂಪದ ಗುರುತು ರಾಜಕಾರಣದಿಂದಲೂ ಸ್ವೀಕೃತಿ ಪಡೆಯಿತು.[೧೩]

ಹಾಗಾದರೆ ಯಾಕೆ ಇಪ್ಪತ್ತನೇ ಶತಮಾನದ ಅಂತಿಮ ದಶಕಗಳಲ್ಲಿ ಗುರುತು ರಾಜಕಾರಣವು ವ್ಯಾಪಕವಾಗಿ ಬೆಳೆಯಿತು. ವಸಾಹತೋತ್ತರವಾದದೊಂದಿಗೆ ಯುರೋಪಿನ ಹಿಂದಿನ ವಸಾಹತುಗಳು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಒಂದು ಸಾಸ್ಕೃತಿಕ ಆಯಾಮವುಳ್ಳ ಪಶ್ಚಿಮೇತರ ಮತ್ತು ಕೆಲವೊಮ್ಮೆ ಪಶ್ಚಿಮದ ವಿರುದ್ಧವಾದ ಗುರುತಿನ ಕಲ್ಪನೆಯನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳಿಗೆ ಕರೆಕೊಟ್ಟಿತು. ಸಮಾಜವಾದ ವೈಫಲ್ಯ ಮತ್ತು ಅಂತಿಮವಾಗಿ ಸಮತಾವಾದದ ಕುಂಠಿತಗೊಳ್ಳುವಿಕೆಯು ಎರಡನೇ ಅಂಶ. ೧೯೭೦ ರಿಂದ ಸಾಮಾಜಿಕವಾಗಿ ವಂಚಿತ ಗುಂಪುಗಳು ಮತ್ತು ಜನರು ರಾಜಕೀಯ ಆಶಯಗಳನ್ನು ಪ್ರತಿಪಾದಿಸಲು ವಿಭಿನ್ನ ರೂಪಗಳಲ್ಲಿ ಸಮಾಜವಾದವು ಒಂದು ಎನ್ನುವ ಸ್ಪಷ್ಟ ಪ್ರವೃತ್ತಿಯನ್ನು ಬೆಳೆಸತೊಡಗಿದರು. ಶೋಷಣೆ ಮತ್ತು ದಮನದ ಟೀಕೆಯನ್ನು ಮುಂದಿಡುತ್ತಾ ಸಾಮಾಜಿಕ ಅಭಿವೃದ್ಧಿ ಮತ್ತು ಸಮಾನತೆಗೆ ಹಪಹಪಿಸುವ ಸಮಾಜವಾದವು ಪ್ರಪಂಚದಾದ್ಯಂತ ದಮನಿತ ಗುಂಪುಗಳಿಗೆ ಒಂದು ಪ್ರಬಲವಾದ ಕರೆಯನ್ನು ನೀಡಿತು. ಮತ್ತು ಯಾವಾಗಲೂ ಅಲ್ಲದಿದ್ದರೂ ಕೆಲವೊಮ್ಮೆ ಅದು ಸೋವಿಯತ್ ಯೂನಿಯನ್ ಪ್ರಭಾವದ ಜೊತೆ ತಳುಕಿಕೊಂಡಿತು. ವಸಾಹತುಗೆ ವಿರುದ್ಧವಾದ ರಾಷ್ಟ್ರೀಯತೆಯನ್ನು ಮುಂದಕ್ಕೆ ತಂದ, ಅಭಿವೃದ್ಧಿ ಹೊಂದುತ್ತಿರುವ ಜಗತ್ತು ಸಮಾಜವಾದಿ ಮೌಲ್ಯಗಳು ಮತ್ತು ಗುಂಪುಗಳನ್ನು ಉತ್ತೇಜಿಸುತ್ತಾ ಕೆಲವೊಮ್ಮೆ ಮಾರ್ಕ್ಸಿಸ್ಟ್ ಲೆನಿನ್ ಸಿದ್ಧಾಂತಗಳನ್ನು ಆವರಿಸಿಕೊಂಡಿತು. ಆದಾಗ್ಯೂ ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನ ಸಮಾಜವಾದಿ ಆಳ್ವಿಕೆಯ ವೈಫಲ್ಯವು ನಿರ್ದಿಷ್ಟವಾಗಿ ಸೋವಿಯತ್ ಮಾದರಿಯ ಕೇಂದ್ರೀಯ ಯೋಜನಾ ವ್ಯವಸ್ಥೆಯು ಬಡತನವನ್ನು ತೊಲಗಿಸಿ ಸಮೃದ್ಧಿಯನ್ನು ತರುವುದು ಒಂದೆಡೆಯಾದರೆ ವಸಾಹತೋತ್ತರ ರಾಷ್ಟ್ರೀಯತೆಯು ಅತಿಯಾಗಿ ಪುನರ್ಮಾದರಿಗೊಂಡು ಆ ಮೌಲ್ಯಗಳು ಮತ್ತು ಗುರುತು ಆಳವಾಗಿ ಮೂಲದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನೆಡೆ ಪಸರಿಸಿತು. ಹೆಚ್ಚುತ್ತಿರುವ ಜನಾಂಗೀಯ ರಾಷ್ಟ್ರೀಯತೆ ಮತ್ತು ಮತೀಯ ಮೂಲಭೂತ ವಾದದ ಮಹತ್ವದಲ್ಲಿ ಇವು ಸ್ಪಷ್ಟವಾಗಿ ವ್ಯಕ್ತಗೊಳ್ಳತೊಡಗಿತು. ಸಮತಾವಾದದ ಅಧಃಪತನವು ಪೂರ್ವ ಯೂರೋಪಿನಲ್ಲಿ ಪ್ರಬಲವಾಗಿ ಇಂಥ ಪ್ರವೃತ್ತಿಗಳಿಗೆ ಕಾರಣವಾಯಿತು. ಸಮತಾವಾದವು ಜನಾಂಗೀಯ ಮತ್ತು ರಾಷ್ಟ್ರೀಯ ವಿಧೇಯತೆಯನ್ನು ಬದಿಗೆ ಸರಿಸಿ ಭೂಗತಗೊಳ್ಳುವಂತೆ ಮಾಡಿತು. ಜನಾಂಗೀಯ ಮತ್ತು ಮತೀಯ ರಾಷ್ಟ್ರೀಯತೆಯು ಸಮತಾವಾದಕ್ಕೆ ವಿರುದ್ಧ ಅಥವಾ ಸೋವಿಯತ್‌ಗೆ ವಿರುದ್ಧವಾದ ಅಭಿವ್ಯಕ್ತಿಗೆ ಸ್ವಾಭಾವಿಕವಾಗಿ ವಾಹನವಾಯಿತು. ಹಾಗೆನೇ ಸಮತಾವಾದದ ಅಧಃಪತನದಿಂದ ಉಂಟಾದ ರಾಜಕೀಯ ಅಸ್ಥಿರತೆ ಮತ್ತು ಆರ್ಥಿಕ ಅನಿಶ್ಚಿತ ಒಂದು ಜೈವಿಕ ನೆಲೆಯ ಸಮಷ್ಟಿಯ ಗುರುತಿನ ರಾಜಕಾರಣದ ರೂಪವನ್ನು ಬೆಳೆಯಲು ಸಿದ್ಧ ವೇದಿಕೆಯಾಯಿತು. ೧೯೯೦ ರ ಯುಗೋಸ್ಲಾವಿಯಾದ ವಿಘಟನೆ ಮೂಲಕ ರಾಷ್ಟ್ರೀಯ ಮತ್ತು ಜನಾಂಗೀಯದ ಗುರುತಿನ ಹೆಚ್ಚುತ್ತಿರುವ ಒತ್ತಡದ ರಾಜಕಾರಣ ಸ್ಪಷ್ಟವಾದ ಪ್ರತಿಪಾದನೆಗೆ ಒತ್ತು ನೀಡಿತು. ಇದರ ಪರಿಣಾಮವಾಗಿ

ಅವ್ಯಾಹತ ಯುದ್ಧಗಳು ನಡೆದು, ಹಿಂದಿನ ಬೋಸ್ನಿಯಾದ ಯುಗೋಸ್ಲಾವ್ ಗಣರಾಜ್ಯವನ್ನು ತೊರೆದು ಸೆರ್ಬ್ ಮತ್ತು ಕ್ರೋಟ್ ಪ್ರದೇಶದ ಪರಿಶುದ್ಧ ಮುಸ್ಲಿಂ ಜನಾಂಗವು ಮೇಲಕ್ಕೆ ಬಂದಿತು.[೧೪]

ಗುರುತಿನ ರಾಜಕಾರಣ ಬೆಳವಣಿಗೆಯನ್ನು ವಿವರಿಸುವ ಮತ್ತೊಂದು ಅಂಶವೆಂದರೆ ಜಾಗತೀಕರಣ. ಅದು ಹೇಗೆಂದರೆ ಜಾಗತೀಕರಣದ ಸಾಂಸ್ಕೃತಿಕ ಆಯಾಮಕ್ಕೆ ಗುರುತಿನ ರಾಜಕಾರಣವು ಒಂದು ಪ್ರತಿರೋಧ ರೂಪವನ್ನಾಗಿ ನೋಡುತ್ತದೆ. ಜಾಗತೀಕರಣವು ಏಕರೂಪ ಪ್ರಕ್ರಿಯೆಗೆ ಒಳಪಟ್ಟು ಒಂದು ಸಂಕುಚಿತವಾದ ಸಾಮಾನ್ಯ ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಒಪ್ಪಲಾಗುತ್ತಿದೆ. ಹೆಚ್ಚುತ್ತಿರುವ ನಗರೀಕರಣ, ದೂರದರ್ಶನ, ಗಣಕಯಂತ್ರ, ಮೊಬೈಲ್ ದೂರವಾಣಿ ಸಾಧನ ಮತ್ತು ಇತರ ವಸ್ತುಗಳಿಂದ ಆವೃತಗೊಂಡ ಸಾಮಾನ್ಯ ತಂತ್ರಜ್ಞಾನ – ಇವನ್ನು ಜಾಗತಿಕ ಸರಕುಗಳು ಎಂದು ಕರೆಯಲಾಗುತ್ತದೆ. ಅನುಭೋಗ್ಯ ಮತ್ತು ಐಹಿಕತೆಯ ಬೆಳವಣಿಗೆ ಮತ್ತು ಅತಿಯಾದ ಸಾಂಸ್ಕೃತಿಕ ಮಿಶ್ರಣದ ರಾಷ್ಟ್ರೀಯ ಸಾಂಸ್ಕೃತಿಕ ಪದ್ಧತಿಗಳ ಬಹು ಸಾಂಸ್ಕೃತೀಕರಣ ಇವೆಲ್ಲಾ ಅದರ ಲಕ್ಷಣಗಳಾಗಿವೆ. ಈ ದಿಶೆಯಲ್ಲಿ ಜಗತ್ತಿನೆಲ್ಲೆಡೆ ಜಾಗತೀರಣವನ್ನು ತಮ್ಮ ಸಂಸ್ಕೃತಿಗೆ ಧಕ್ಕೆ ಅಥವಾ ಬೆದರಿಕೆ ಎಂಬಂತೆ ಕಾಣಲಾಗುತ್ತಿದೆ. ಹಾಗೆಯೇ ಪದ್ಧತಿಯಾಧಾರಿತ ಗುರುತಿನ ರೂಪಗಳು ಸಹ ಒಂದು ಸಂಕೀರ್ಣವಾದ ಪಾಶ್ಚಾತ್ಯಮಯ, ಕೆಲವೊಮ್ಮೆ ಅಮೆರಿಕದ ಪ್ರೇರಣೆಯ ಆಕಾಂಕ್ಷೆ ಮತ್ತು ಮೌಲ್ಯಗಳ ಮ್ಯಾಕ್‌ವರ್ಲ್ಡ್ ಎಂದು ಬೆಂಜಮಿನ್ ಬಾರ್ಬರ್ ಏನು ಕರೆಯುತ್ತಾನೋ ಅದಕ್ಕೆ ಪ್ರತಿರೋಧವಾಗಿ ಸಾಂಪ್ರದಾಯಿಕತೆಗೆ ಮರಳಲು ಆಗದ ರೀತಿಯಲ್ಲಿ ಆವೃತಗೊಂಡಿದೆ. ಸಾಮಾಜಿಕ ಇರುವಿಕೆಯ ಸಾಂಪ್ರದಾಯಿಕ ಪರಿಕಲ್ಪನೆಯು ಪ್ರಶ್ನಾರ್ಹವಲ್ಲದ ಮತ್ತು ಪ್ರಶ್ನಾತೀತ ಬಂಧ ಮತ್ತು ವಿಧೇಯತೆಯಿಂದ ಹೆಚ್ಚಾಗಿ ಹೊರಹೊಮ್ಮಿರುತ್ತದೆ. ಗುರುತು ರಾಜಕಾರಣದಿಂದ ಮತ್ತವು ಆಧುನಿಕವಾಗಿದೆ. ಅಂದರೆ ವ್ಯಕ್ತಿತ್ವದ ಪ್ರಕ್ರಿಯೆಯಿಂದ ವಿನ್ಯಾಸಗೊಂಡು ಬಹಳವಾಗಿ ಅಥವಾ ಕಡಿಮೆ ಮಟ್ಟದಲ್ಲಿ ಸ್ವಯಂ ವ್ಯಾಖ್ಯೆ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಅದು ವ್ಯಕ್ತಿ ತಿಳುವಳಿಕೆ ಪ್ರಕಿಯೆಯು ವಿಸ್ತೃತ ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಒತ್ತಡಗಳು ಗುರುತಿಗೆ ಕಾಣಿಕೆ ನೀಡಿ ಈ ನೆಲೆಯಲ್ಲಿ ಅದು ರಾಜಕೀಯ ಸಾಮರ್ಥ್ಯ ಮತ್ತು ಭಾವನಾತ್ಮಕ ಶಕ್ತಿಯು ನೆಲೆಗೊಳ್ಳುತ್ತದೆ. ಇದು ಯಾಕೆ ಸಾಂಪ್ರದಾಯಿಕ ಸಮಾಜದಲ್ಲಿ ಉಲ್ಬಣವಾಗಿದೆ ಅಂದರೆ ಆಧುನಿಕ ಸಮಾಜದಲ್ಲಿ ಅಥವಾ ಪ್ರಾಚೀನ ಕಲ್ಪನೆಯ ಒಟ್ಟು ಸೇರುವಿಕೆಯೊಂದಿಗೆ ಸಮಾಜದಲ್ಲಿ ಸಂಭವಿಸುತ್ತದೆ ಮತ್ತು ಆಧುನಿಕ ಪ್ರಭಾವಕ್ಕೆ ತುತ್ತಾಗುತ್ತದೆ.[೧೫]

ಜಾತಿಗಳ ಅಸ್ಮಿತೆ ರಾಜಕಾರಣದಲ್ಲಿ ಮಿಲ್ಲರ್ ಹಾಗೂ ನಾಲ್ವಡಿಯವರನ್ನು ಮರೆಯುವಂತಿಲ್ಲ. ಮೀಸಾಲಾತಿಯನ್ನು ಕಲ್ಪಿಸಿಕೊಟ್ಟು, ಈಗ ನೂರು ವರ್ಷ ಕಳೆದುಹೋಗಿದೆ. ಅಂದು ೧೯೧೮ರಲ್ಲಿ ನ್ಯಾಯಮೂರ್ತಿ ಮಿಲ್ಲರ್ ರವರು ೧೯೧೯ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತಾರೆ. ಇದರಲ್ಲಿ

ಇರುವ ಶಿಫಾರಸ್ಸುಗಳು ಕರ್ನಾಟಕದಲ್ಲಿ ಸಾಮಾಜಿಕ ಮತ್ತು ರಾಜಕೀಯದಲ್ಲಿ ಐತಿಹಾಸಿಕವಾದಂತಹ ಬದಲಾವಣೆ ಆಯಿತು. ಇದರಿಂದ ಜಾತಿಗಳು ತಮ್ಮ ಐಡೆಂಟಟಿಯಾಗಿ, ಸಾಂಸ್ಕೃತಿಕ ರಾಜಕರಣ, ಅಧಿಕಾರದ ರಾಜಕರಣ, ಗುರುತಿಸುವುಕೆಯ ರಾಜಕಾರಣದಿಂದ ಅವರ ವೈವಿಧ್ಯಮಯ ಸಾಮಾಜಿಕ ನ್ಯಾಯದ ಪರಿಕಲ್ಪನೆ ಬದಲಾಯಿತು. ಇದರಿಂದ ನಮಗೆ ಅರ್ಥವಾಗುತ್ತದೆ. ಇದು ಸಮುದಾಯಗಳ ಗುರುತಿಸುವಿಕೆಯ ರಾಜಕರಣಗಳು ಎಂದು. ೧೮೮೧ ಮತ್ತು ನಂತರ ನಡೆದ ಜಾತಿಗಣತಿಗಳನ್ನು ಗಮನಿಸಿದಾಗ, ಹೊಸ ಹೊಸ ಜಾತಿಗಳು ಬೆಳಕಿಗೆ ಬಂದಿರುವುದು. ಆದ್ದರಿಂದ ಐಡೆಂಟಟಿ ಮತ್ತು ಗುರುತಿಸುವಿಕೆಯ ರಾಣಕರಣ ಗಟ್ಟಿತನ ಅಡಕವಾಗಿದೆ. ಯಾಕೆಂದರೆ ಸರ್ಕಾರಗಳು ಎಲ್ಲಾ ಜಾತಿಗಳನ್ನು ಶೇಕಡವಾರು ಮೀಸಲಾತಿ ಮೂಲಕ ಗುರುತಿಸುತ್ತಾ ಹೋದವು ಅಷ್ಟೆ. ತೀವ್ರವಾಗಿ ಜಾತಿಗಳು ಐಡೆಂಟಟಿ ರಾಜಕರಣವನ್ನು ಮಾಡಿದವು. ಯಾವ ರೀತಿಯಾದ ಹೊಸ ಜಾತಿಗಳು ಉಗಮ ಹೊಂದಿ ಜಾತಿಪಟ್ಟಿಗೆ ಸೇರ್ಪಡೆಯಾಗುವ ಸಂದರ್ಭದಲ್ಲಿ ಐಡೆಂಟಟಿ ರಾಜಕರಣ ಕಂಡಿದೆ ಎಂದು ತಿಳಿಯಬಹುದು. ಕರ್ನಾಟಕದಲ್ಲಿ ಜಾತಿಗಳ ಐಡೆಂಟಟಿ ಮತ್ತು ಗುರುತಿಸುವಿಕೆ ರಾಜಕರಣದಲ್ಲಿ ಮಿಲ್ಲರ್ ಹಾಗೂ ನಾಲ್ವಡಿಯವರನ್ನು ಜಾತಿಗಳನ್ನು ಗುರುತಿಸುವಿಕೆಯು ಅವರಿಗೆ ಸಲ್ಲುತ್ತದೆ.[೧೬]

೪.೩ ಭೋವಿ ಸಮುದಾಯದ ಸಾಮಾಜಿಕ ಹಿನ್ನಲೆ

ಸಂಸ್ಕೃತಿಯ ಆಚಾರ ವಿಚಾರ ಮರೆಮಾಚುವಿಕೆಯ ಪ್ರಭಾವದಿಂದ ಸಮುದಾಯಗಳನ್ನು ಅಧ್ಯಯನ ಮಾಡಲಿಕ್ಕೆ ಹೊರಟಾಗ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ತಮಗೆ ಸಿಗಬೇಕಾದ ಸ್ಥಾನಮಾನ ಸಿಗದೇ ಇರಬಹುದು. ಇದನ್ನು ಮನದಲ್ಲಿ ಇಟ್ಟುಕೊಂಡು ಅಧ್ಯಯನಕಾರರು ತಮ್ಮ ಸಮುದಾಯಕ್ಕೆ ನ್ಯಾಯ ಕೊಡಿಸುವ ನೆಪದಲ್ಲಿ ಇತರೆ ಸಮುದಾಯಗಲಿಗೆ ನೋವು ಉಂಟುಮಾಡಬಾರದು ಯಾಕೆಂದರೆ ಎಲ್ಲಾ ಸಮುದಾಯಗಳಲ್ಲಿ ಸಮಸ್ಯೆಗಳು ಎದುರಿಸುತ್ತಿರುವವರು ಶೇಕಡ ೭೦ರಷ್ಟು ತಳದಲ್ಲೇ ಇರುವುದು ಕಂಡುಬರುತ್ತದೆ. ಇವರು ಕೃಷಿ ಮತ್ತು ಕೃಷಿಯೇತರ ಕೂಲಿ ಕೆಲಸವನ್ನು ತಮ್ಮ ಊರಿನಲ್ಲಿ ಮಾಡುತ್ತಿದ್ದಾರೆ. ಇಂದು ಪ್ರಕೃತಿಯ ವಿಕೋಪದಿಂದ ಕಾಲ ಬದಲಾಗಿದೆ. ಅನಿವಾರ್ಯವಾಗಿ ತಮ್ಮ ಕಸುಬುಗಳನ್ನು ಬಿಟ್ಟು ಹೊಟ್ಟೆ ಪಾಡಿಗಾಗಿ ಅನಿವಾರ್ಯವಾಗಿ ವಲಸೆ ಹೋಗಬೇಕಾದ ವ್ಯವಸ್ಥೆ ಬಂದು ಬಿಟ್ಟಿದೆ. ಅತಂಹ ಸಮುದಾಯಗಳಲ್ಲಿ ನಮ್ಮ ನಾಡಿನಲ್ಲಿ ವಾಸಿಸುತ್ತಿರುವ ಭೋವಿ ಸಮುದಾಯವು ಒಂದು. ಮಾನವ ಜನಾಂಗದ ಇತಿಹಾಸದಲ್ಲಿಯ ಎಲ್ಲ ಲಕ್ಷಣಗಳನ್ನು ಹೊಂದಿದ ವಡ್ಡ ಜನಾಂಗ ವ್ಯಾದರಂತೆಯೇ ಜೀವನ ನಡೆಸಿ ಕಾಡು ಮೇಡುಗಳಲ್ಲಿ ನೆಲೆಸಿ ಊರೂರು ಚಲಿಸಿ, ವ್ಯಾದ (ಬೇಟೆಗಾರ)ನೇ ವಡ್ಡನಾಗಿರಲು ಸಾಕು ಎನ್ನಲು ಬೇರೆ ಉದಾಹರಣೆ ಬೇಕಿಲ್ಲ. ಇವರು ರಾಜರುಗಳಾಗಿ ಸಾಮಂತ ರಾಜರಾಗಿ ಆಡಳಿತ ನಡೆಸಿರುವುದು ಇತಿಹಾಸ ಪುಟಗಳಿಂದ

ಕಾಣಬಹುದು. ಭೋವಿ ಸಮುದಾಯದ ಜನರು ಕಲ್ಲು, ಬಂಡೆ, ಮಣ್ಣಿನ ಕೆಲಸಗಳನ್ನು ಮಾಡುತ್ತ. ಮಳೆಯನ್ನು ಲೆಕ್ಕಿಸದೆ 'ಬಿಸಿಲು ಮತ್ತು ಬೆಂಕಿ' ಇವೆರಡರ ಮದ್ಯೆ ಬೆಂದು ಬಂಡೆಗಳನ್ನು ಎಬ್ಬಿಸುತ್ತಾ ಜೀವನ ನಡೆಸುವವರು ಆಗಿದ್ದಾರೆ.[೮]

ಭೋವಿ ಸಮುದಾಯದ ಜನರು ಕಟ್ಟಡಗಳನ್ನು ಕಟ್ಟುವುದರಲ್ಲಿ ಬಂಡೆ, ಕಲ್ಲುಗಳನ್ನು ಸೀಳುವುದರಲ್ಲಿ ವಿಶೇಷ ಜ್ಞಾನ ಹೊಂದಿದ್ದಾರೆ ಹಾಗೂ ಬೃಹತ್ತಾದ ಅಣೆಕಟ್ಟುಗಳು, ಕೆರೆ, ಕಾಲುವೆಗಳು, ಗೃಹೋಪಯೋಗಿ ಸಲಕರಣೆಗಳಾದ ಒರಳುಕಲ್ಲು, ಬೀಸುವ ಕಲ್ಲು, ರುಬ್ಬುವಗುಂಡು ಹಾಗೂ ಶಿಲ್ಪಗಳ ಕೆತ್ತನೆಯಂತ ಕೆಲಸಗಳನ್ನು ಮಾಡಿ ಸಮಾಜದ ಹಲವಾರು ಸಮುದಾಯಗಳಿಗೆ ವಿಶೇಷವಾದ ಕೊಡುಗೆಗಳನ್ನು ನೀಡಿದ್ದಾರೆ. ಅವರ ಮೂಲ ನೆಲೆಯಾದ ಒರಿಸ್ಸಾ ಅಥವಾ ಒಡ್ರ ದೇಶದಲ್ಲಿ ಆಡಳಿತ ನಡೆಸಿದ ಭೋವಿ ಸಮುದಾಯದ ರಾಜರುಗಳಲ್ಲಿ, ವಿಜಯನಗರ ಕಾಲದ ಸಮಕಾಲೀನನಾದ ಗಜಪತಿರಾಜು ಗಂಗರ ಸಮಕಾಲೀನನಾದ ಚೋಡಗಂಗ ದೇವ ಮತ್ತು ಪ್ರಾಚೀನ ಕಾಲದಲ್ಲಿ ಭಗೀರಥ ಎಂಬುವರು ಪ್ರಮುಖರಾಗಿದ್ದರು. ಒಡ್ಡರನ್ನು ಭಾರತದ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ತಮಿಳು ನಾಡಿನಲ್ಲಿ ಬೋಯಾರ್ ಎಂದು, ಒರಿಸ್ಸಾ ರಾಜ್ಯದಲ್ಲಿ ಒಡ್ಡೇ ಅಥವಾ ಒಡ್ಡರು ಎಂದು, ಆಂಧ್ರಪ್ರದೇಶದಲ್ಲಿ ಒಡ್ಡೆಲು (ಒಡೆಯರಾಜು) ಎಂದು, ಮಹಾರಾಷ್ಟ್ರ ರಾಜ್ಯದಲ್ಲಿ ಒಡ್ಡರು ಎಂದೂ, ಉತ್ತರ ಪ್ರದೇಶದಲ್ಲಿ 'ಮೆಸ್ತ್ರಿ' ಕರ್ನಾಟಕದಲ್ಲಿ ಭೋವಿ/ವಡ್ಡರು ಎಂದು ಕರೆಯಲಾಗುತ್ತಿದೆ. ಕರ್ನಾಟಕದಲ್ಲಿ ಕೋಲಾರ, ದಾವಣಗೆರೆ ಚಿತ್ರದುರ್ಗ, ಕೊಪ್ಪಳ, ಬಳ್ಳಾರಿ, ರಾಯಚೂರು, ಸಿಂಧನೂರು ಹಾಗೂ ಗುಲ್ಬರ್ಗಾ ಜಿಲ್ಲೆಯಾದ್ಯಂತ ಸುಮಾರು ೧೬ ಲಕ್ಷದಿಂದ ೨೦ ಲಕ್ಷ ಜನಸಂಖ್ಯೆ ಇರುವುದು ಕಂಡು ಬರುತ್ತದೆ. ಅದರಲ್ಲಿ ವಿಶೇಷವಾಗಿ ಶಹಾಬಾದ್ ಪಟ್ಟಣದಲ್ಲಿ ಇವರು ದಟ್ಟವಾಗಿ ಇರುವುದು ಅಧ್ಯಯನಗಳಿಂದ ತಿಳಿದು ಬರುತ್ತದೆ. ಇವರ ಇತಿಹಾಸವನ್ನು ಕೆಣಕಿ ನೋಡಿದರೆ ದೇಶದ್ಯಂತ ಇರುವ ದೇವಾಲಯಗಳನ್ನು ಅಣೆಕಟ್ಟಡಗಳು, ಕಟ್ಟಿದವರು ಇವರು ಮೂಲತ ಒರಿಸ್ಸಾದವರು ಅಲ್ಲಿಂದ ಇವರು ಮಹಾರಾಷ್ಟ್ರ, ತಮಿಳುನಾಡು, ಆಂದ್ರಪ್ರದೇಶ, ಮೂಖಂತರ ಕರ್ನಾಟಕಕ್ಕೆ ಬಂದು ನೆಲಸಿದ್ದಾರೆ. ಈ ಸಮುದಾಯದ ಹೆಚ್ಚಿನ ಜನ ತೆಲುಗನ್ನು ಮಾತನಾಡುತ್ತಾರೆ. ಇವರ ವೃತ್ತಿ ಕಲ್ಲು ಹೊಡಿಯುವುದು, ಕಟ್ಟಡಗಳನ್ನು ಕಟ್ಟುವುದು, ಇತರೆ ಕೂಲಿ ಮಣ್ಣಿನ ಕೆಲಸವನ್ನು ನೆಚ್ಚಿಕೊಂಡು, ದುಡಿಯುತ್ತ ಸ್ವಲ್ಪ ಕಾಲ ಬದಲಾದಂತೆ ಅವರ ಕೆಲಸವನ್ನು ಇತರೆ ಕೆಲವು ಸಮುದಾಯದವರು ಕೆಲಸವನ್ನು ಕಲಿತು ಅವರ ಜೊತೆಯಲ್ಲಿ ವೃತ್ತಿಯಲ್ಲಿ ತೊಡಗಿದರು. ಆದರೆ ಇಂದಿನ ತಂತ್ರಜ್ಞಾನದ ಪ್ರಭಾವದಿಂದ ಆ ಸಮುದಾಯದ ಸ್ಥಿತಿ ಸುಮಾರು ಶೇಕಡ ೬೦ರಷ್ಟು ಬದಲಾಗಿದೆ. ಅವರು ಮಾಡುವ ಕೆಲಸವನ್ನು ಯಂತ್ರಗಳು ಮಾಡುತ್ತವೆ, ಅವರು ಅನಿವಾರ್ಯವಾಗಿ ಇತರೆ ಕೆಲಸ ಹರಸಿ ವಲಸೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ವಲಸೆ ಹೋದಾಗ ಮಾಲೀಕರು

ಅವರಿಂದ ಕೆಲಸಮಾಡಿಸಿಕೊಂಡು, ಅವರ ಮೇಲೆ ದೌರ್ಜನ್ಯ ಎಸಗಿದ ಉದಾಹರಣೆಗಳು ಸಾಕಷ್ಟು ಇದ್ದಾವೆ. ಇಂತಹ ಅಮಾಯಕ ಸಮುದಾಯ ಇವತ್ತು ಶಿಕ್ಷಣವಿಲ್ಲದೆ ಆರ್ಥಿಕವಾಗಿ, ರಾಜಕೀಯವಾಗಿ ಹಿಂದೆ ಇರುವುದನ್ನು ಗಮನಿಸಬಹುದು.[೧೮]

೪.೪ ಭೋವಿ ಸಮುದಾಯದ ಐತಿಹಾಸಿಕ ಬೆಳವಣಿಗೆ

ವಡ್ಡ ಹಾಗೂ ಭೋವಿ ಪದಗಳನ್ನು ಸಮಾನ ಅರ್ಥ ಪಡೆದ ಒಂದೇ ಸಮುದಾಯದ ಹೆಸರು. ಕರ್ನಾಟಕದ ಕೆಲವು ಭಾಗಗಳಲ್ಲಿ ಭೋವಿ ಮತ್ತು ವಡ್ಡರೆಂದೂ ಪ್ರಚಲಿತವಿದೆ. ಆದರೆ ಭೋವಿ ಸಮುದಾಯವನ್ನು ಮೊದಲು ವಡ್ಡ ಅಥಾವ ವಡ್ಡರು ಎಂದು ಕರೆಯುತ್ತಿದ್ದರು, ಮೈಸೂರು ರಾಜ್ಯದ ಭೋವಿ ಸಮುದಾಯದ ಪ್ರಥಮ ಪರಿಷತ್ತು ೧೭ನೇ ಜುಲೈ, ೧೯೪೪ರಲ್ಲಿ ನಡಸಿದರು. ಆ ಪರಿಷತ್ತಿನಲ್ಲಿ ವಡ್ಡರನ್ನು ಭೋವಿಗಳೆಂದು ಕರೆಯಲ್ಪಡಬೇಕೆಂದು ಮಸೂದೆಯನ್ನು ಪಾಸುಮಾಡಿದರು. ೧೯೪೬ರಲ್ಲಿ ಮೈಸೂರು ಸರಕಾರವು ತನ್ನ ಎಲ್ಲ ಪ್ರಕಟಣೆಗಳಲ್ಲಿ ವಡ್ಡರ ಶಬ್ಧದ ಬದಲಾಗಿ, ಭೋವಿ ಎಂದು ಪ್ರಕಟಿಸಲು ಪ್ರಾರಂಭಿಸಿದರು. ಅಂದಿನಿಂದ ಈ ಸಮುದಾಯವನ್ನು ಭೋವಿ ಎಂದು ಕರೆಯುತ್ತಾ ಬಂದರು.[೧೯] ಭೋವಿ ಸಮುದಾಯದಲ್ಲಿ ಕಲ್ಲುವಡ್ಡರು, ಮಣ್ಣುವಡ್ಡರು, ಬಂಡಿವಡ್ಡರು, ಗಿರಣಿವಡ್ಡರು, ಮುಂತಾದ ಹಲವು ಗುಂಪುಗಳಲ್ಲಿ ನೋಡಬಹುದು.

ಮಣ್ಣುವಡ್ಡರು : ಕೆರೆ, ಬಾವಿ, ಹೊಲಗಳಲ್ಲಿಯ ಮಣ್ಣು ತೆಗೆದು, ಕತ್ತೆಗಳ ಮೇಲೆ ಸಾಗಿಸುವುದು, ಒಡ್ಡು ನಿರ್ಮಿಸುವುದು ಇವರ ಕೆಲಸ. ದೃಢಕಾಯದವರಾದ ಇವರು ಬೌದ್ಧಿಕವಾಗಿ ಅಷ್ಟೇನೂ ಚತುರರಲ್ಲ. ಇವರಲ್ಲಿ ಮಂಟ್ಲೊರು, ಬತ್ತಲೋರು, ಸಾತಲೋರು, ಪಂಥಿಬೊಟ್ಸೊರ್ ಎಂಬ ಗೋತ್ರಗಳಿವೆ.

ಬಂಡೀವಡ್ಡರು : ಶಕ್ತಿಶಾಲಿಗಳಾದ ಇವರು ದೊಡ್ಡ ದೊಡ್ಡ ಕಲ್ಲುಗಳನ್ನು ಬಂಡೆಗಲ್ಲುಗಳನ್ನು ಗುಡ್ಡಗಳಿಂದ ತೆಗೆಯುವುದು, ಕೆಲಸದ ಜಾಗಕ್ಕೆ ಸಾಗಿಸುವುದು, ಭೂಮಿಯಲ್ಲಿರುವ ವಿವಿಧ ಬಗೆಯ ಕಲ್ಲುಗಳನ್ನು ತಮಗೆ ಬೇಕಾದ ಕಲ್ಲುಗಳನ್ನು ಚಾಣಾಕ್ಷತನದಿಂದ ಹೊರತೆಗೆಯುವುದರಲ್ಲಿ ಇವರು ಸಿದ್ಧಹಸ್ತರು. ಇವರಲ್ಲಿ ಬಂಡ್ಲಾವೊರ್, ರ್‍ಯಾಫನೋರ, ಕುಂಚಾಪೋರ್, ದ್ಯಾರಂಗಲೋರ್, ಮುದ್ದುಗಲೋರ್, ದಂಡಾಗಲೋರ ಎಂಬ ಗೋತ್ರಗಳಿವೆ.

ಕಲ್ಲು ವಡ್ಡರು : ಇವರಿಗೆ ಕಲ್ಲುಕಟಿಗರು/ಕಲ್ಕುಟಿಗ ಎಂತಲೂ ಕರೆಯುವುದುಂಟು. ಇವರುಗಳಲ್ಲಿ ಆಲುಕುಂಟಿ, ಇರಗಾದಿಂ ಇಡಚೋರ್, ಫಂದಿ ಬೋಟ್ಸೋರ್, ಇತರೆ ಗೋತ್ರಗಳಿವೆ. ಇವರು ವಿಗ್ರಹ ಮೂರ್ತಿಗಳನ್ನು ಕಂಬಗಳನ್ನು, ಕಮಾನುಗಳನ್ನು ಇತರೆ ವಾಸ್ತುಶಿಲ್ಪ ಮೂರ್ತಿ ಶಿಲ್ಪದಂಥ ಕಲ್ಲು ಕೊರೆಯುವ ಕಡಿಯುವ ಕೆಲಸದಲ್ಲಿ ಪರಿಣಿತಾರಾಗಿ, ಇವರಿಗೆ ರೂವಾರಿ ಶಿಲ್ಪಿ ಎಂತಲೂ ಕರೆಯುತ್ತಾರೆ.

ಗಿರಣಿ ವಡ್ಡರು : ಬೀಸುವ ಕಲ್ಲು, ಕಲಬತ್ತು, ಒರಳು, ವಿದ್ಯುತ್ ಹಿಟ್ಟಿನ ಗಿರಣಿಯಲ್ಲಿ ಬಳಸುವ ಬೀಸುಕಲ್ಲುಗಳನ್ನು ನಿರ್ಮಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ, ಪಟ್ಟಣಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ.

ಉಪ್ಪು ಒಡ್ಡರು : ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿ ಕಸಗುಡಿಸುವ ಕಾಯಕದಲ್ಲಿ ತೊಡಗಿ, ಕೆಲಸ ನಿರ್ವಹಿಸುತ್ತಾ ಸಮುದ್ರ ತೀರದಲ್ಲೆಲ್ಲ ಉಪ್ಪನ್ನು ತಯಾರಿಸುವ ವೃತ್ತಿಯಲ್ಲಿ ತೊಡಗಿದ್ದರಿಂದ ಇವರನ್ನು ಈ ಹೆಸರಿನಿಂದ ಕರೆಯುತ್ತಾರೆ. ಭೋವಿ ಸಮುದಾಯದಲ್ಲಿಯೇ ಅತ್ಯಂತ ತಳಮಟ್ಟದಲ್ಲಿ ಇವರು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ.

ಬೈಲು ವಡ್ಡರು : ಬಂಡಿವಡ್ಡರಿಂದ ಬಂಡೆಗಲ್ಲುಗಳನ್ನು ಪಡೆದು, ಅವುಗಳನ್ನು ಒಡೆದು ಬೀಸಕಲ್ಲುಗಳನ್ನು ಕಡಿದು ಹಳ್ಳಿ ಹಳ್ಳಿಗಳಿಗೆ, ಕತ್ತೆಗಳ ಮೇಲೆ ಹೇರಿಕೊಂಡು ಒಯ್ದು, ಮಾರಿ ಜೀವನ ಸಾಗಿಸುತ್ತಾರೆ. ಇದರಿಂದಾಗಿ ಇವರನ್ನು ಬೀಸುಕಲ್ಲು ವಡ್ಡರೆಂದು ಕರೆಯುದುಂಟು. ಬೀಸಕಲ್ಲುಗಳನ್ನು ಮಾರಲು ಒಂದು ಹಳ್ಳಿಗೆ ಹೋದರೆಂದರೆ, ಅಲ್ಲಿ ಹಳ್ಳಿಯ ಬಯಲಿನಲ್ಲಿ ಬಿಡಾರ ಬಿಡುವುದರಿಂದ ಇವರಿಗೆ 'ಬೈಲುವಡ್ಡರೆಂಬ' ಹೆಸರು ರೂಢಿಗತವಾಗಿದೆ. ಕೆಲವೆಡೆ ಬೋಯಾರ ಒಡ್ಡರೆಂದು ಕರೆಯುತ್ತಾರೆ. ಈ ರೀತಿಯಾಗಿ ಇತರೆ ಒಳಪಂಗಡಗಳು ಒಂದು ಸಮುದಾಯವಾಗಿದ್ದು, ಭೋವಿ ಸಮುದಾಯದಲ್ಲಿ ಕಾಲಕ್ರಮೇಣ ಹಲವಾರು ಪಂಗಡಗಳು ಹುಟ್ಟಿಕೊಂಡವು. ಇದಲ್ಲದೆ ತುಡುಗು ವಡ್ಡರು, ಬಿದಿರು ವಡ್ಡರು ಎಂಬ ಅನೇಕ ಪಂಗಡಗಳು ಇವೆ. ಇದನ್ನು ನೋಡಿದರೆ ಸಮುದಾಯದಲ್ಲಿ ಇನ್ನು ಒಳಪಂಗಡಗಳು ಹುಟ್ಟುತ್ತವೆ ಎಂದು ಎನಿಸುತ್ತದೆ.೨೦ ಮೊದಲಲ್ಲಿ ಭೋವಿ ಸಮುದಾಯದ ಪಂಗಡ ಮತ್ತು ಗೋತ್ರಗಳಲ್ಲಿ ಪರಸ್ಪರ ಆಂತರಿಕ ವೈವಾಹಿಕ ವಿವಾಹ ಸಂಬಂಧಗಳು ಏರ್ಪಡುತ್ತಿರಲಿಲ್ಲ, ಇತ್ತಿಚಿನ ದಿನಗಳಲ್ಲಿ ಇದಕ್ಕೆಲ್ಲ ನಿರ್ಬಂಧದಲ್ಲಿ ಸಡಿಲಿಕೆ ಮಾಡಿ, ಎಲ್ಲಾರು ಸಹ ಸಂಬಂಧಗಳನ್ನು ತರುವುದು ಕೊಡುವುದು ಮಾಡುತ್ತಿದ್ದಾರೆ.

೪.೫ ಭೋವಿ ಸಮುದಾಯದ ಸಾಂಸ್ಕೃತಿಕ ಕೊಡುಗೆಗಳು

ಭೋವಿ ಸಮುದಾಯದವರು ಸಾಂಸ್ಕೃತಿಕವಾಗಿ ಭಾರತದ ಇತಿಹಾಸಕ್ಕೆ ಮರೆಯಲಾರದಂತಹ ಕೊಡುಗೆಗಳನ್ನು ನೀಡಿದ್ದಾರೆ. ನಾಡಿನಾದ್ಯಾಂತ ಚಿರಸ್ಮರಣೀಯಾವಾಗಿ ಉಳಿದಿವೆ. ಪುರಾತನ ಕಾಲದಿಂದಲೂ ಸಂಸ್ಕೃತಿಯ ನಿರ್ಮಾಣ ಕಾರ್ಯದಲ್ಲಿ ನಿರತರಾಗಿ ನಾಗರೀಕ ಮತ್ತು ಸಂಸ್ಕೃತಿ ಬೆಳೆಯುವುದಕ್ಕೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಭೋವಿ ಸಮುದಾಯದವರು ಕಲ್ಲು ಒಡೆಯುವುದು, ಮಣ್ಣು ಅಗೆಯುವುದು, ಕೆರೆ ಮತ್ತು ಬಾವಿ ಕಟ್ಟಡಗಳನ್ನು ಕಟ್ಟುವುದು, ಕೋಟೆಗಳನ್ನು ಕಟ್ಟುವುದು, ಸಮುದಾಯದ ಸಾಂಪ್ರದಾಯಿಕ ವೃತ್ತಿಯಾಗಿದೆ. ಭಾರತದಲ್ಲಿ ಹಲವು ಸಂಸ್ಕೃತಿಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಸಾಗಿದರೂ, ಭೋವಿ ಸಮುದಾಯದವರ ತಮ್ಮದೇ ಆದ ಸಂಪ್ರದಾಯ

ನಂಬಿಕೆ, ರೂಢಿಗಳನ್ನು ತಮ್ಮ ಏಕಸ್ವಾಮ್ಯ ವೃತ್ತಿಗಳನ್ನು ಮುಂದುವರಿಸಿಕೊಂಡು ಭೋವಿ ಸಮುದಾಯದ ಸಮಾಜಕ್ಕೆ ಕೆರೆಕಟ್ಟೆ, ಬಾವಿ, ದೇವಸ್ಥಾನ, ಕೋಟೆ ಕೊತ್ತಲಗಳನ್ನು ಸಾವಿರಾರು ವರ್ಷಗಳ ಕಾಲದಿಂದ ಉಳಿದಿರುವಂತಹ ಕೊಡುಗೆಗಳನ್ನು ಕೊಟ್ಟ ಇವರ ಸ್ಥಿತಿ ಸಾಂಸ್ಕೃತಿಕವಾಗಲಿ, ಅಥವಾ ಐತಿಹಾಸಿಕವಾಗಲೀ ತಮ್ಮ ಜೀವನದಲ್ಲಿ ಉತ್ತಮತೆಯನ್ನು ಕಂಡವರಲ್ಲ. ಸಂಸ್ಕೃತಿ ಬೆಳವಣಿಗೆಗೆ ಬದುಕನ್ನು ಬಲಿಕೊಟ್ಟು, ಕಡುಬಡತನದಲ್ಲಿ ಬದುಕುತ್ತಿದ್ದಾರೆ. ಸಮುದಾಯದ ಅಭಿವೃದ್ಧಿ ಹೆಚ್ಚಿನ ಪ್ರಮಾಣದಲ್ಲಿ ಬದಲಾವಣೆಯಾಗಿರುವುದು ಕಂಡುಬಂದಿಲ್ಲ. ಅವರದೇ ಆದ ಹೊಲ, ಮನೆ ಊರು, ಕೇರಿಗಳಲ್ಲಿ ಪ್ರಾಚೀನ ಕಾಲದಿಂದಲೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಉದ್ಯೋಗವನ್ನು ಹುಡಿಕಿಕೊಂಡು ಹೋಗುವ ಸನ್ನಿವೇಶ ಬಂದು, ಅಲೆಮಾರಿ ಜೀವನ ನಡೆಸಿಕೊಂಡು ಬದುಕುತ್ತಾ ಬಂದಿದ್ದಾರೆ. ಭೋವಿ ಸಮುದಾಯದಲ್ಲಿ ಶೇಕಡ ೨% ರಷ್ಟು ಮಾತ್ರ ಸಮುದಾಯದಲ್ಲಿ ಬದಲಾವಣೆಗೊಂಡರೂ, ಶೇಕಡ ಉಳಿದ ೯೮% ಅರ್ಥೀಕವಾಗಿ ದು:ಸ್ಥಿತಿಯಲ್ಲಿಯೇ ಉಳಿದಿದ್ದಾರೆ. ಆದ್ದರಿಂದ ಇವರನ್ನು ಸಮಾಜಿಕ, ಆರ್ಥಿಕ, ರಾಜಕೀಯ ಸ್ಥಾನಮಾನವನ್ನು ತಳದಲ್ಲಿರುವಂತಹವರಿಗೆ ಕಲ್ಪಿಸಿ ಕೊಡಬೇಕಾಗಿದೆ.[೨೧]

ಭೋವಿ ಸಮುದಾಯದವರು ತಮ್ಮ ಶ್ರಮದಾಯಕ ಕೂಲಿ ಕೆಲಸಗಳನ್ನು ಮಾಡುವಾಗ ಅಥವಾ ದೊಡ್ಡ ಕಟ್ಟಡಗಳನ್ನು, ಅಣೆಕಟ್ಟುಗಳನ್ನು ನಿರ್ಮಾಣ ಮಾಡುವಾಗ ಅವರು ಬಲಶಾಲಿಯಾದ, ಭಾರವಾದ ಒರಟು ಕೆಲಸಗಳಲ್ಲಿ ತೊಡಗುತ್ತಿರುವುದರಿಂದ ಅವರಿಗೆ ನೀಡುತ್ತಿದ್ದ ದಿನನಿತ್ಯದ ಕೂಲಿಯನ್ನು "ವಡ್ಡರ ಕೂಲಿ" ಎಂದು ಕರೆಯುತ್ತಿದ್ದರು. ವಡ್ಡರ ಕೂಲಿ ಎಂದು ಗೊತ್ತು ಮಾಡಿ ಸಾಮಾನ್ಯ ವರ್ಗದ ಜನರಿಗಿಂತ ಅವರಿಗೆ ಹೆಚ್ಚು ಹಣವನ್ನು ನೀಡುತ್ತಿದ್ದರು. ಅವರು ಬೇರೆ ಸಮುದಾಯದವರಿಗಿಂತ ಬಹಳ ಶಕ್ತಿಶಾಲಿಯುತವಾಗಿದ್ದು, ಬೇರೆ ಸಮುದಾಯದ ಜನರಿಗಿಂತ ಒಂದು ಪಟ್ಟು ಹೆಚ್ಚು ಕೆಲಸವನ್ನು ಮಾಡುತ್ತಿದ್ದರು. ಅಲ್ಲದೆ ಬಹಳ ಒರಟು ಅಥವಾ ಭಾರವಾದ ಕಲ್ಲು ಮತ್ತು ಮಣ್ಣು ಕೆಲಸಗಳನ್ನು ಭೋವಿ ಸಮದಾಯದವರು ಮಾಡುತ್ತಿದ್ದರು. ಆದ್ದರಿಂದ ಭೋವಿ ಸಮುದಾಯದವರು ಅಚ್ಚುಕಟ್ಟಾಗಿ ಅಣೆಕಟ್ಟು ಕೆಲಸಗಳನ್ನು ಮಾಡುವುದರಿಂದ, ಒಂದು ಭಾಗ ಅಥವಾ ಒಂದು ರೂಪಾಯಿ ಹಣವನ್ನು ಭೇರೆ ಸಮುದಾಯದ ಕೆಲಸಗಾರರಿಗೆ ಕೊಟ್ಟರೆ, ಇವರಿಗೆ ಒಂದೂವರೆ ಭಾಗ ಅಥವಾ ಒಂದೂವರೆ ರೂಪಾಯಿಗಳ್ನು ನಿಗದಿ ಮಾಡುತ್ತಿದ್ದರು. ಬೇರೆಯವರಿಗಿಂತ ಹೆಚ್ಚಾಗಿ ದುಡಿದರೂ, ಅವರು ಆ ಹಣವನ್ನು ಉಳಿಸುತ್ತಿರಲಿಲ್ಲ. ಬದಲಾಗಿ ಬೆಳಗ್ಗೆಯಿಂದ ಸಂಜೆಯವರೆಗೆ ಬಿಸಿಲು, – ಗಾಳಿ, – ಮಳೆಯಲ್ಲಿ ದುಡಿದು ಕೈಕಾಲು ಮತ್ತು ದೇಹವನ್ನು ದಣಿಸಲು ಮತ್ತು ರಾತ್ರಿ ಹಾಯಾಗಿ ನಿದ್ದೆ ಮಾಡಲು ಮದ್ಯಪಾನವನ್ನು ಸೇವಿಸುವುದರ ಮೂಲಕ ಅರ್ಧ ಹಣವನ್ನು ಖರ್ಚು ಮಾಡುತ್ತಿದ್ದರು. ಉಳಿದ ಹಣವನ್ನು ತಮ್ಮ ಕುಟುಂಬದ ನಿರ್ವಹಣೆಗಾಗಿ ಖರ್ಚುಮಾಡಿ ತಮ್ಮಂತೆಯೇ ತಮ್ಮ ಹೆಂಡತಿ ಮಕ್ಕಳನ್ನು ದುಡಿಸಿಕೊಳ್ಳುತ್ತಿದ್ದರು.[೨೨]

ಜಗತ್ತು ಕಂಡ ಅತ್ಯಂತ ಶ್ರಮಜೀವಿಗಳಲ್ಲಿ ಭೋವಿ ಸಮುದಾಯವು ಒಂದಾಗಿದೆ. ಪರಿಶ್ರಮಕ್ಕೆ ಮತ್ತೊಂದು ಹೆಸರೇ ಭೋವಿ ಸಮುದಾಯವಾಗಿದೆ. ಸದಾ ನಿಸರ್ಗದ ಮಡಿಲಲ್ಲಿ ಒಂದಲ್ಲೊಂದು ಕೆಲಸದಲ್ಲಿ ನಿರಂತರವಾಗಿ ತಮ್ಮನ್ನು ತಾವುಗಳು ತೊಡಗಿಸಿಕೊಂಡು ಕ್ರಿಯಾ ಶೀಲತೆಯಿಂದ ಜೀವಿಸುತ್ತ ಬಂದಿರುವ ಇವರು ದಿನದ ಬಹು ಸಮಯವನ್ನು ಕಲ್ಲು ಬಂಡೆಗಳ ಜೊತೆಗೆ ಮೌನಮುರಿದು ಮಾತಾಡುವ ತಮ್ಮ ಪರಂಪರೆಯಲ್ಲಿಯು ಕೋಟೆ ಕಟ್ಟಿದ, ಕಲ್ಲು ಒಡೆದು ಮಂದಿರ ನಿರ್ಮಿಸಿದ, ಅದೇ ಕಲ್ಲಿನ ಜಲ್ಲಿಯಿಂದ ರಸ್ತೆ ಮಾಡಿದ ಇವರು, ಕಲ್ಲು ಬಂಡೆಯನ್ನು ಒಡೆಯುವ ಕುಶಲ ಕರ್ಮಿಗಳಾಗಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ತುಂಬ ಹಿಂದುಳಿದಿರುವ ಸ್ಥಿತಿಯನ್ನು ಕಾಣಬಹುದು. ಭೋವಿ ಸಮುದಾಯವು ಕೆಲವು ಪ್ರದೇಶಗಳಲ್ಲಿ ಊರಿನ ಯಾವುದೋ ಒಂದು ಮೂಲೆಯಲ್ಲಿ ಗುಬ್ಬಚ್ಚಿಯ ಗೂಡಿನಂತಹ ಮನೆಗಳಲ್ಲಿ ವಾಸವಾಗಿದ್ದುಕೊಂಡು, ಸಮಾಜಕ್ಕೆ ಅಪಾರವಾದ ಕೊಡುಗೆ ನೀಡಿದ ಈ ಸಮುದಾಯ ಅನೇಕ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡಿದೆ. ಇದನ್ನೆಲ್ಲ ಕಂಡ ಚಿತ್ರದುರ್ಗದ ಬೃಹನ್ಮಠದ ಡಾ. ಶ್ರೀ ಶಿವಮೂರ್ತಿ ಮುರಾಘಾಶರಣರು ತನ್ಮೂಲಕ ಶೋಷಣೆ ಮುಕ್ತ ಸಮಾಜವನ್ನು ನಿರ್ಮಿಸುವ ಸಲುವಾಗಿ, ಭೋವಿ ಸಮುದಾಯಕ್ಕೊಬ್ಬ ನಡೆದಾಡುವ ಮೂರ್ತಿಯಾದ ಪೂಜ್ಯ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರನ್ನು ಭೋವಿ ಸಮುದಾಯಕ್ಕೆ ಕೊಡುಗೆಯಾಗಿ ನೀಡಿ, ಭೋವಿ ಸಮುದಾಯ ಅಭಿವೃದ್ಧಿಗೋಸ್ಕರ ಶ್ರಮಿಸಲು ಪ್ರೇರೆಪಿಸಿದ್ದಾರೆ. ಜಗದ್ಗುರು ಶ್ರೀ ಇಮ್ಮಡಿ ಶ್ರೀ ಸಿದ್ದರಾಮೇಶ್ವರ ಸ್ವಾಮಿಯವರು ದೇಶಾದ್ಯಂತ ಸಂಚರಿಸಿ, ಶ್ರೀ ಸಿದ್ಧರಾಮೇಶ್ವರ ಸಂದೇಶ ಯಾತ್ರೆ ಮಾಡುತ್ತ, ಜನಜಾಗೃತಿ ಗೊಳಿಸುತ್ತಿದ್ದಾರೆ. ಹಾಗೂ ಸಮುದಾಯದಲ್ಲಿ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞೆಯನ್ನು ಮೂಡಿಸುತ್ತಿದ್ದಾರೆ.[೨೩]

ಭೋವಿ ಸಮುದಾಯವು ಪರಿಶಿಷ್ಟ ಜಾತಿಗಳಲ್ಲಿ ಗುರುತಿಸಲ್ಪಟ್ಟಿದ್ದು ಅಲೆಮಾರಿ ಸಮುದಾಯವಾಗಿದೆ. ಸಮುದಾಯದ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಿದಾಗ, ಸ್ವತಂತ್ರ ಪೂರ್ವಕಾಲದಲ್ಲಿ ಹಾಗೂ ರಾಜ ಮಹಾರಾಜರ ಅಳ್ವಿಕೆಯಲ್ಲಿ ತನ್ನದೇ ಆದ ಸ್ಥಾನ – ಮಾನಗಳೊಂದಿಗೆ ಗುರುತಿಸಿಕೊಂಡಿರುತ್ತಾರೆ. ಕೋಟೆ ಕೊತ್ತಲಗಳನ್ನು ನಿರ್ಮಿಸುವುದು ಇತ್ಯಾದಿ ಶ್ರಮದ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಸ್ವತಂತ್ರದ ನಂತರವೂ ಭೋವಿಗಳು ತಮ್ಮ ಮೂಲ ವೃತ್ತಿಯನ್ನೆ ಮುಂದುವರಿಸಿಕೊಂಡು ಬಂದಿದ್ದಾರೆ. ಗುಡ್ಡಗಾಡು ಪ್ರದೇಶಗಳಲ್ಲಿ ಬಂಡೆ ಕಲ್ಲುಗಳನ್ನು ಸ್ಫೋಟಿಸಿ ಎಬ್ಬಿಸುವುದು, ಸಾಗಿಸುವುದು, ಮನೆಗಳಿಗೆ ತಳಪಾಯ ತೆಗೆಯುವುದು, ಕೆರೆ ಹಾಗೂ ಮನೆಗಳನ್ನು ನಿರ್ಮಿಸುವುದು, ರಸ್ತೆಗಳ ನಿರ್ಮಾಣ ಮಾಡುವುದು, ದಿನನಿತ್ಯದ ವಸ್ತುಗಳಾದ ಬೀಸುವ ಕಲ್ಲು, ಒಳಕಲ್ಲು ಹಾಗೂ ಹಿಂಡಿ ಕಲ್ಲುಗಳನ್ನು ತಯಾರಿಸುವುದು ಮಾರಾಟ ಮಾಡುವುದು, ಮೊದಲಾದ ಕೆಲಸಗಳಲ್ಲಿ ನಿರತರಾಗಿದ್ದರು. ಆದರೆ ಇತ್ತಿಚಿನ ದಿನಗಳಲ್ಲಿ ವಿಜ್ಞಾನ ಹಾಗೂ

ತಂತ್ರಜ್ಞಾನದ ಪ್ರಭಾವದಿಂದ ಹಿಟಾಚಿ, ಕ್ರಶರ್, ಮಿಕ್ಸರ್ ಹಾಗೂ ಗ್ರಾಂಡರಗಳ ಅವಿಷ್ಕಾರದಿಂದಾಗಿ ಇವರ ಮೂಲ ವೃತ್ತಿಗೆ ಕೊಡಲಿ ಪೆಟ್ಟು ಬಿದ್ದಿದೆ. ಹಾಗೂ ವೃತ್ತಿಯನ್ನು ಅರಸುತ್ತಾ ಬದುಕನ್ನು ಸಾಗಿಸಲು ಭೋವಿ ಸಮುದಾಯದವರು ಅಲೆಮಾರಿಗಳಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿರುವುದು ಕಂಡುಬರುತ್ತದೆ.[೨೪] ಭೋವಿ ಸಮುದಾಯದ ಬೆಳವಣಿಗೆಯನ್ನು ಅವಲೋಕಿಸಿದಾಗ ಶೇಕಡಾ ೨೫ ರಿಂದ ೩೦ ರಷ್ಟು ಕುಟುಂಬಗಳು ಅಭಿವೃದ್ಧಿಯ ಕಡೆಗೆ ಚಲಿಸುತ್ತಿವೆ. ಉಳಿದ ಶೇಕಡ ೭೦ ರಷ್ಟು ಭೋವಿ ಸಮುದಾಯಗಳ ಸ್ಥಿತಿ ಕೆಳಮಟ್ಟದಲ್ಲಿದೆ ಎಂದು ವಿವರಿಸುತ್ತಾರೆ.

೪.೬ ಭೋವಿ ಸಮುದಾಯದ ಮಹಿಳೆ ಜಸ್ಮಳ ಹಿನ್ನಲೆ

ಗುಜರಾತ ರಾಜ್ಯವನ್ನು ರಾಜಾ ಜಯಸಿಂಹನು ಆಳುತ್ತಿದ್ದನು. ಭೋವಿ ಸಮುದಾಯದವರು ಕೆರೆಯ ನಿರ್ಮಾಣದ ಕೆಲಸದಲ್ಲಿ ತೊಡಗಿದ್ದರು. ಅದನ್ನು ವೀಕ್ಷಿಸಲು ಜಯಸಿಂಹನು ಪ್ರತಿದಿನ ಬರುತ್ತಿದ್ದನು.

ಜಸ್ಮಾ ಎಂಬ ಭೋವಿ ಸಮುದಾಯದ ಯುವತಿಯು ರಾಜನ ದೃಷ್ಟಿಗೆ ಬಿದ್ದಳು. ಅವಳ ಸೌಂದರ್ಯವನ್ನು ಕಂಡು ಮನಸೋತು, ಜಸ್ಮಾಳನ್ನು ವಿವಾಹವಾಗುವುದಾಗಿ ಭೋವಿ ಸಮುದಾಯದ ಮುಖಂಡರನ್ನು ಕೇಳಿದನು. ಅದಕ್ಕೆ ಮುಖಂಡರು ಸಮ್ಮತಿ ನೀಡಲಿಲ್ಲ. ಸಿಟ್ಟಿಗೆದ್ದ ರಾಜನು, ತನ್ನ ಸೇವಕರಿಂದ ಅವರನ್ನು ಹಿಂಸಿಸಿ ಜಸ್ಮಾಳನ್ನು ಅಪಹರಣ ಮಾಡುವ ಪ್ರಯತ್ನದಲ್ಲಿರುವಾಗ, ವಿಷಯ ತಿಳಿದ ಜಸ್ಮಾಳು ಆತ್ಮಹತ್ಯೆ ಮಾಡಿಕೊಂಡಳು. ಪೂರ್ವದಲ್ಲಿ ರಾಜ ಕಟ್ಟಿಸುತ್ತಿರುವ ಈ ಕೆರೆಗೆ, ನೀರು ಶೇಖರಣೆಯಾಗಬಾರದು, ಇನ್ನು ಮುಂದೆ ಭೋವಿ ಸಮುದಾಯದಲ್ಲಿ ಸೌಂದರ್ಯವತಿ, ಸ್ತ್ರೀ ಜನಿಸಬಾರದೆಂದು ಶಪಿಸಿದಳು. ಅವಳ ಶಾಪದಿಂದ ಪಶ್ಚಾತ್ತಾಪಪಟ್ಟು ರಾಜನು ಅವಳ ನೆನಪಿಗಾಗಿ ಒಂದು ದೇವಾಲಯವನ್ನು ಕಟ್ಟಿಸಿದನು. ನಂತರ ಕೆರೆ ನೀರಿನಿಂದ ತುಂಬಿತು ಎಂಬ ಕಥೆ ಇದೆ. ಜಸ್ಮಾಳ ನೆನಪಿಗಾಗಿ ಬೆಂಗಳೂರು ನಗರದಲ್ಲಿ ೧೯೯೯ರಲ್ಲಿ ಕರ್ನಾಟಕ ರಾಜ್ಯ ಭೋವಿ ಸಂಘದವರು "ಜಸ್ಮಾಭವನ" ವನ್ನು ಕಟ್ಟಿಸಿ, ಅವಳ ಕಲಾಕೃತಿಯನ್ನು ನಿರ್ಮಿಸಿದ್ದಾರೆ.[೨೫]

೪.೭ ಜನಗಣತಿ ೧೮೭೧ರ ವರದಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೧೮೭೧ ರ ಜನಗಣತಿ ವರದಿ ಪ್ರಕಾರ, ಜನಗಣತಿಯಲ್ಲಿ ದಾಖಲೆಯಾದಂತ ಭೋವಿಗಳನ್ನು ಮೊದಲು ೧೮೭೧ ರ ಕಾಲಮಾನದಲ್ಲಿ 'ಒಡ್ಡ' ರೆಂದು, ಕೆರೆ ಅಗಿಯುವವರು, ಭಾವಿ ತೋಡುವವರು, ದೇಶದ ರಸ್ತೆಗಳನ್ನು ನಿರ್ಮಿಸುವವರು ಎಂದು ಹೇಳಲಾಗಿದೆ. ಇವರು ಗುಂಪಾಗಿ ವಾಸಿಸುತ್ತಾರೆ ಇವರು ಶಂಖಾಕೃತಿ ಇಲ್ಲವೆ, ಜೇನುಗೂಡಿನ ಮಾದರಿಯಲ್ಲಿ ತಮ್ಮ ಗುಡಿಸಲುಗಳನ್ನು ಕಟ್ಟಿಕೊಳ್ಳುವರು. ಗುಡಿಸಲಿನ ಬಾಗಿಲು ಸಣ್ಣದಾಗಿರುತ್ತದೆ. ಅವಿಭಕ್ತ ಕುಟುಂಬಗಳಲ್ಲಿ ವಾಸುಮಾಡುತ್ತಿದ್ದರು. ಮತ್ತು ಕುಟುಂಬದ ವರ್ಗದವರೆಲ್ಲ ಸೇರಿ ಗುಂಪುಗುಂಪಾಗಿ ಗುತ್ತಿಗೆಕೆಲಸ

ಮಾಡುತ್ತಾರೆ. ತಮ್ಮ ವೃತ್ತಿ ಆಧಾರಿತವಾಗಿರುವ ಎಲ್ಲಾರು ಸಹ ಕೆಲಸ ಮಾಡುತ್ತಾರೆ. ಸಂಪ್ರದಾಯಿಕವಾಗಿ ಮಹಿಳೆಯರು ಬುಟ್ಟಿಗಳಲ್ಲಿ ಮಣ್ಣನ್ನು ಒಯ್ಯುತ್ತಾರೆ ಮತ್ತು ಬಟ್ಟೆಗಳಲ್ಲಿ ತಮ್ಮ ಚಿಕ್ಕ ಮಕ್ಕಳನ್ನು ಹೊತ್ತುಕೊಂಡು ಹೋಗಿ ತಾವು ಕೆಲಸಮಾಡುವ ಜಾಗದಲ್ಲಿ ಮರಕ್ಕೆ ಬಟ್ಟೆಯನ್ನು ಜೋಳಿಗೆಗಳನ್ನು ಟೊಂಗೆಗಳಿಗೆ ನೇತು ಹಾಕುತ್ತಾರೆ. ಪುರುಷರು ಗುದ್ದಲಿ ಸಲಿಕೆಗಳನ್ನು ಉಪಯೋಗಿಸುತ್ತ, ಪಿಡಬ್ಲ್ಯೂ ಡಿಗಳಲ್ಲಿ ರೇಲ್ವೆಯ ಕೆಲಸ ಕಾರ್ಯ ಮಾಡುತ್ತಾರೆ.[೨೭] ವೈಷ್ಣವ ಸಂಪ್ರದಾಯಗಳಾಗಿದ್ದಾರೆ ಎಂದು ೧೮೭೧ ರ ಜನಗಣತಿ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

೪.೮ ಮೈಸೂರು ಜನಗಣತಿ ೧೮೯೧ರ ವರದಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

೧೮೯೧ ರ ಮೈಸೂರು ಜನಗಣತಿ ವರದಿಯಲ್ಲಿ ಒಡ್ಡರ ಜಾತಿಯು, ಎರಡು ಭಾಗಗಳಲ್ಲಿ ಗುರುತಿಸುತ್ತಾರೆ. ಕಲ್ಲುವಡ್ಡರು ಮತ್ತು ಮಣ್ಣು ವಡ್ಡರು ಎಂದು. ಇವರುಗಳ ಮಧ್ಯೆ ವಿವಾಹ ಸಂಬಂಧಗಳು ನಡೆಯುವುದಿಲ್ಲ. ಮೊದಲನೆಯವರು ಕಲ್ಲು ಒಡೆಯುವುದು, ಕಟ್ಟಡ ಕಟ್ಟುವುದು ಮತ್ತು ಎರಡನೆಯವರು ಕಲ್ಲು ಒಡೆಯುವುದು, ಕಟ್ಟಡ ಕಟ್ಟುವ ಮತ್ತು ಎರಡನೆಯವರಿಗಿಂತ ಸಧೃಡ ದೇಹ ಹೊಂದಿದವರಾಗಿದ್ದರು ಮತ್ತು ಕುಶಲ ಚತುರ ಶಿಲ್ಪಿಗಳಾಗಿದ್ದರಲ್ಲದೇ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಲ್ಲುಗಳನ್ನು ಸಾಗಿಸುವಲ್ಲಿ ಅನಾಗರಿಕ ಪದ್ದತಿಯಲ್ಲಿ ದೊಡ್ಡ ದೊಡ್ಡ ತಾಂತ್ರಿಕ ಉಪಕರಣಗಳನ್ನು ಸಾಗಿಸುತ್ತಾರೆ. ಇವರು ಬಹಳ ಗಟ್ಟಿ ಹಾಗೂ ಶ್ರಮಜೀವಿಗಳಾಗಿದ್ದು, ಸಹಿಷ್ಣು ಜೀವಿಗಳಾಗಿದ್ದಾರೆ. ಕಲ್ಲು ವಡ್ಡರು, ಮಣ್ಣು ವಡ್ಡರಿಗಿಂತ ಶ್ರೇಷ್ಠರೆಂದು ತಿಳಿಸಿದ್ದಾರೆ. ಕಲ್ಲು ವಡ್ಡರಂತೆ ಮಣ್ಣು ವಡ್ಡರು ಕೂಡ ವಲಸೆಗಾರರಾಗಿದ್ದು, ಮುಖ್ಯವಾಗಿ ಅಗಿಯುವ ಒಡ್ಡು ಕಟ್ಟುವ, ದೊಡ್ಡ ಕೆಲಸಗಳ ಕಡೆಗೆ ವಲಸೆಹೋಗುವ ವ್ಯವಸ್ಥೆ ಕಂಡು ಬರುತ್ತದೆ. ಉಳಿದ ಕೂಲಿಕಾರ ವರ್ಗಕ್ಕಿಂತ ಕುಶಲ ಕೆಲಸಗಾರರಾಗಿದ್ದು, ನಿರ್ದಿಷ್ಟಪಡಿಸಿದ ವೇಳೆಗಿಂತ ಮೊದಲೇ ತಮ್ಮ ಕೆಲಸಗಳನ್ನು ಮುಗಿಸುತ್ತಾರೆ[೨೮] ಎಂದು ಅಂದು ಮೈಸೂರು ಸಂಸ್ಥಾನದ ಕಾಲದಲ್ಲಿ ಕೈಗೊಂಡು ಜನಗಣತಿ ವರದಿಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

೪.೯ ಮುಂಬೈ ಕರ್ನಾಟಕ ಗೆಝೆಟೀಯರನಲ್ಲಿ ಭೋವಿ ಸಮುದಾಯದ ಉಲ್ಲೇಖ

ಮುಂಬೈ ಕರ್ನಾಟಕ ಗೆಝೆಟೀಯರಿನಲ್ಲಿ ಭೋವಿ ಸಮುದಾಯವನ್ನು ಉಲ್ಲೇಖಿಸಿದಂತೆ ಒಡ್ಡರೆಂದರೆ ಯಾರು? ಒಡ್ಡರು ಕಪ್ಪು ಬಣ್ಣ, ಎತ್ತರದ ನಿಲವು, ಉದ್ದವಾದ ಮೂಗು, ತೆಳುವಾದ ತುಟಿಗಳು, ಉದ್ದವಾದ ಕುತ್ತಿಗೆ ಉಳ್ಳವರಾಗಿರುತ್ತಾರೆ. ವಡ್ಡರೇಕೆ ವಲಸೆಗಾರರಾದರು? ಇವರು ಮಣ್ಣು ಅಗೆಯುವ ಮತ್ತು ಕಲ್ಲು ಕೊರೆಯುವ ಕೆಲಸದಲ್ಲಿ ಕೌಶಲ್ಯ ಪಡೆದವರಾಗಿದ್ದರು. ಅದಕ್ಕಾಗಿ ಭಾರತದ ಮೂಲೆ ಮೂಲೆಗಳಿಂದ ಆ ಕಾರ್ಯಗಳಿಗಾಗಿ ಆಮಂತ್ರಣಗಳು ಬರತೊಡಗಿದವು. ಬ್ರಿಟೀಷರಿಗಿಂತ ಮುಂಚಿನ ರಾಜಮಹಾರಾಜರು ಭಾರತದ ಎಲ್ಲಾ ಕಡೆಗಳಿಂದ ವಡ್ಡರನ್ನು ಅಮಂತ್ರಿಸಿ ಕರೆಯಿಸಿಕೊಂಡರು. ಕೆರೆ ಕಾಲುವೆ ಅಗಿಯುವರು, ಕೋಟೆ ಕೊತ್ತಳಗಳನ್ನು ಕಟ್ಟುವುದು,

ಅರಮನೆಗಳನ್ನು ಕಟ್ಟುವುದು, ಬಾವಿಗಳನ್ನು ತೋಡುವ ಕೆಲಸದಲ್ಲಿ ತೊಡಗಿರುವುದರಿಂದ ವಡ್ಡರೆಂದು ಗೆಝೆಟೀಯರಿನಲ್ಲಿದೆ.[೨೮] ಒಂದು ಕಡೆ ಕೆಲಸಮುಗಿಸಿದ ಮೇಲೆ ಬೇರೆ ಪ್ರದೇಶಗಳಿಗೆ ಕೆಲಸ ಹುಡುಕಿಕೊಂಡು ವಲಸೆ ಹೋಗುವ ವ್ಯವಸ್ಥೆಯನ್ನು ಪ್ರಸ್ತುತ ದಿನಗಳಲ್ಲಿಯು ಸಹ ಕಾಣಬಹುದು.

೪.೧೦ ಸರ್ ಲೆಸ್ಲೀ ಮಿಲ್ಲರ್ ಸಮಿತಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

ಸರ್ ವೆಸ್ಲೀ ಮಿಲ್ಲರ್ ಸಮಿತಿಯು ೧೯೧೮ ಆಗಸ್ಟ್ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದು, ೧೯೧೯ ಆಗಸ್ಟ್ ತಿಂಗಳಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತದೆ. ಈ ಸಮಿತಿಯಲ್ಲಿ ರಾಜ್ಯದ ಮುಖ್ಯ ನ್ಯಾಯಾದೀಶ ಸರ್. ಲೇಸ್ಲಿ ಮಿಲ್ಲರ್ ಅಧ್ಯಕ್ಷರಾಗಿ, ಎಂ. ಬಸವಯ್ಯ, ಗುಲಾಮ್‌ಅಹಮ್ಮದ್ ಕಲಾಮಿ ಎಂ., ಮುತ್ತಣ್ಣ, ಶ್ರೀ ಕಠೇಶ್ವರ್‌ಅಯ್ಯರ್ ಮತ್ತು ರಂಗೈಯಂಗಾರ್ ಇವರು ಸದಸ್ಯರಾಗಿ ಕೆಲಸ ಮಾಡುತ್ತಾರೆ. ಈ ವರದಿಯಲ್ಲಿ ಬ್ರಾಹ್ಮಣರನ್ನು ಬಿಟ್ಟು, ಉಳಿದ ಎಲ್ಲಾ ಸಮುದಾಯದವರನ್ನು ಹಿಂದುಳಿದ ಜನಾಂಗದವರೆಂದು, ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಂತೆ ಶಿಫಾರಸ್ಸು ಮಾಡುತ್ತದೆ. ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಇದು ೧೯೫೮ ರ ವರೆಗೆ ಅಸ್ತಿತ್ವದಲಿರುತ್ತದೆ. ೧೯೧೧ ರ ಜನಗಣ ವರದಿಯಲ್ಲಿ ಶೇ. ೫ ಕ್ಕಿಂತ ಕಡಿಮೆ ಸಾಕ್ಷರತೆ ಹೊಂದಿದ ಎಲ್ಲ ಸಮುದಾಯಗಳು ಇದರ ವ್ಯಾಪ್ತಿಗೆ ಬರುತ್ತವೆ. ೧೯೧೮ ರ ಸಮುದಾಯದಲ್ಲಿ ಬ್ರಾಹ್ಮಣರು ಶೇಕಡ ೯೪ ರಷ್ಟು ಸರ್ಕಾರದ ಹುದ್ದೆಗಳನ್ನು ಹೊಂದಿದ್ದರು. ಆದ್ದರಿಂದ ಮಿಲ್ಲರ ಸಮಿತಿಯಿಂದ ಬ್ರಾಹ್ಮಣರು ಮಿಲ್ಲರ್ ವರದಿ ಒಪ್ಪಬೇಕೆಂದು ಹಾಗೂ ಅವರು ಹೆಚ್ಚು ಹೆಚ್ಚಾಗಿ ಸ್ವಾತಂತ್ರ್ಯ ವೃತ್ತಿ ಕೈಗೊಂಡು ಜೀವನ ನಡೆಸಬೇಕೆಂದು ಹೇಳಿದಾಗ, ಘರ್ಷಣೆಗೆ ಇಳಿಯದೆ ಒಪ್ಪಿಕೊಂಡರು. ಇದರ ಫಲದಿಂದ ಒಕ್ಕಲಿಗ ಮತ್ತು ಲಿಂಗಾಯಿತ ಸಮುದಾಯಗಳು ಹೆಚ್ಚು ಪ್ರಾತಿನಿಧ್ಯ ಪಡೆದುಕೊಳ್ಳಲು ಸಾಧ್ಯವಾಯಿತು. ಈ ಎರಡು ಸಮುದಾಯಗಳನ್ನು ಎದುರು ಹಾಕಿಕೊಳ್ಳದೆ, ಮೀಸಲಾತಿಯ ಲಾಭ ಪಡೆಯಲು ಪ್ರಯತ್ನ ಪಟ್ಟವುಗಳೆಂದರೆ, ಹಿಂದುಳಿದ ದಲಿತ ಹಾಗೂ ಅಲ್ಪಸಂಖ್ಯಾತ ವರ್ಗಗಳಲ್ಲಿ ಕುರುಬ, ಮಡಿವಾಳ, ಉಪ್ಪಾರ, ದೇವಾಂಗ, ಕುಂಬಾರ, ಪಾಂಚಾಳ, ಕಣಿಯ, ಬೇಡ, ಪಾಳೆಗಾರ, ಭೋವಿ, ಸಂತಾನಿ, ಮುಸ್ಲಿಂ, ಭಾರತೀಯ ಕ್ರೈಸ್ತ ಮತ್ತು ಹಲವು ದಲಿತ ಸಮುದಾಯಗಳು. ಆದ್ದರಿಂದ ದಲಿತರಿಗೆ ಸರ್ಕಾರಿ ನೇಮಕಾತಿಗಳಲ್ಲಿ ಇತರೆ ಹಿಂದುಳಿದ ಸಮುದಾಯಗಳಿಗಿಂತ ಹೆಚ್ಚಿನ ಆದ್ಯತೆ ನೀಡಬೇಕೆಂದು ಮಿಲ್ಲರ್ ಶಿಫಾರಸ್ಸು ಮಾಡುತ್ತಾರೆ.[೨೯] ದಲಿತವರ್ಗದವರಲ್ಲಿ ಅರ್ಹ ಅಭ್ಯರ್ಥಿಗಳೇ ಇರಲಿಲ್ಲ. ದಲಿತನೊಬ್ಬ ಮೊದಲು ಮೆಟ್ರಿಕ್ಯೂಲೇಷನ್ ಪಾಸು ಮಾಡಿದ್ದು, ೧೯೧೮ ರಲ್ಲಿ ಮತ್ತು ಪದವಿ ಪಾಸುಮಾಡಿದ್ದು, ೧೯೨೫ ರಲ್ಲಿ ಎಂಬುವ ವಿಚಾರಗಳನ್ನು ಈ ವರದಿಯಲ್ಲಿ ಚರ್ಚಿಸಿದ್ದಾರೆ.

೪.೧೧ ಓ ಚಿನ್ನಪ್ಪರೆಡ್ಡಿ ಸಮಿತಿಯಲ್ಲಿ ಭೋವಿ ಸಮುದಾಯವನ್ನು ಗುರುತಿಸುವಿಕೆ

ಓ. ಚಿನ್ನಪ್ಪರೆಡ್ಡಿ ಆಯೋಗವಾಗಿ ೧೯೮೮ ರ ಮಾರ್ಚ್‌ನಲ್ಲಿ ಅಸ್ಥಿತ್ವಕ್ಕೆ ಬಂತು. ಇದರ ಉದ್ದೇಶವೆಂದರೆ, ಪರಿಶಿಷ್ಟ ಜಾತಿ ಸಮುದಾಯಗಳನ್ನು ಹೊರತುಪಡಿಸಿ ಉಳಿದ ಸಮುದಾಯಗಳಲ್ಲಿ

ಸಾಮಾಜಿಕವಾಗಿ ಮತ್ತು ಶೈಕ್ಷಣಿಕ ಹಿಂದುಳಿದಿರುವುದನ್ನು ಗುರುತಿಸುವ ಮಾನದಂಡಗಳನ್ನು ಹಾಗೂ ಸಲಹೆ ನೀಡಲು ರಚಿಸುತ್ತಾರೆ. ೮೫ ಸಂಸ್ಥೆಗಳು, ೧೬,೦೦೦ ಶಾಲಾ ಕಾಲೇಜು, ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಘ – ಸಂಸ್ಥೆಗಳು, ಸಾರ್ವಜನಿಕ ಕೈಗಾರಿಕೋದ್ಯಮಗಳು ಇತರೆ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು, ಮೀಸಲಾತಿ ಕುರಿತು ನಡೆದ ಪ್ರಕರಣಗಳನ್ನು ಅಧ್ಯಯನ ಮಾಡಿತು.

ಈ ಅಧ್ಯಯನವನ್ನು ೧೯೯೦ ರ ಏಪ್ರಿಲ್‌ನಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಇದರಲ್ಲಿ ಸಾಮಾಜಿಕ, ಶೈಕ್ಷಣಿವಾಗಿ ಹಿಂದುಳಿದ ಸಮುದಾಯಗಳನ್ನು ಮೂರು ಪ್ರವರ್ಗಗಳಾಗಿ ವಿಂಗಡಿಸಿತು. ಒಂದನೇ ವರ್ಗದಲ್ಲಿ ಪರ್ಯಾಯ ಜಾತಿಗಳ ಸಹಿತ ಒಟ್ಟು ೫೨ ಸಮುದಾಯದಲ್ಲಿ ಎರಡನೇ ಪ್ರವರ್ಗದಲ್ಲಿ ಪರ್ಯಾಯ ಜಾತಿಗಳ ಸಹಿತ ಒಟ್ಟು ೧೪ ಜಾತಿಗಳನ್ನು ಹಾಗೂ ಮೂರನೇ ಪ್ರವರ್ಗದಲ್ಲಿ ಹೆಚ್ಚು ಆದಾಯವಿಲ್ಲದ ಔದ್ಯೋಗಿಕ ಗುಂಪಿನ ಸಮುದಾಯದವರನ್ನು ಗುರುತಿಸಲಾಯಿತು. ಆದ್ದರಿಂದ ಪ್ರವರ್ಗ–೧ ಕ್ಕೆ ಶೇ. ೫, ಪ್ರವರ್ಗ–೨ ಕ್ಕೆ, ಶೇ. ೨೮, ಪ್ರವರ್ಗ–೩ ಕ್ಕೆ, ಶೇ. ೫ ಕ್ಕೆ, ಕೊಟ್ಟು ಮೀಸಲಾತಿ ವಂಚನೆಗಳನ್ನು ತಡೆಯಲು ಶಿಫಾರಸ್ಸಿಗೆ ಕೊಡಲಾಯಿತು. ತಮ್ಮ ವಾಸಸ್ಥಳದಲ್ಲಿ ತಹಶೀಲ್ದಾರರಿಂದ, ಪ್ರಮಾಣಪತ್ರ ಪಡೆದುಕೊಳ್ಳಬೇಕು, ನೇಮಕಾತಿ ಮೀಸಲಾತಿಯನ್ನು ನವೀಕರಿಸುವಾಗ ಹಿಂದುಳಿದ ಸಮುದಾಯಗಳ ಪ್ರತಿಯೊಂದು ಜಾತಿಯ ಅಭಿವೃದ್ಧಿಗಳ ಪರಿಶೀಲನೆಗಾಗಿ ಶಾಶ್ವತ ಸಮಿತಿಯೊಂದನ್ನು ರಚಿಸಬೇಕು. ಶಿಕ್ಷಣ, ನೌಕರಿ ಮತ್ತು ಬಡತನಗಳ ಆಧಾರದ ಮೇಲೆ ಸಮುದಾಯದ ಜನ ಸಂಖ್ಯೆಯನ್ನು ತುಲನಾತ್ಮಕವಾಗಿ ಅಧ್ಯಯನ ನಡೆಸಬೇಕು. ಅಧ್ಯಯನದಲ್ಲಿ ಪ್ರಗತಿ ಕಂಡರೆ, ಹಿಂದುಳಿದ ಪಟ್ಟಿಯಿಂದ ತೆಗೆದುಹಾಕಬೇಕೆಂದು ಶಿಫಾರಸಮಾಡುತ್ತ, ವಯಸ್ಕರ ಶಿಕ್ಷಣ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣಗಳ ಪ್ರಗತಿ ತೃಪ್ತಿಕರವಾಗಿಲ್ಲ ಎಂದು ಸಲಹೆಗಳನ್ನು ನೀಡುತ್ತ, ೧೯೫೯ರ ಮಾರ್ಚ್ ೩೧ರಲ್ಲಿ ಸರ್ಕಾರಿ ನೌಕರಿಗಳಲ್ಲಿದ್ದ ಎಲ್ಲಾ ಸಮುದಾಯಗಳ ಪ್ರಾತಿನಿಧ್ಯದ ವಿವರಗಳನ್ನು ಚರ್ಚಿಸುತ್ತಾರೆ.

ಇದರಲ್ಲಿ ಭೋವಿ ಸಮುದಾಯದ ಜನಸಂಖ್ಯೆ ಅಂದಾಜು ೩,೫೯,೮೦೦ ಜನಸಖ್ಯೆ ಶೇ. ೧.೭೦ ರಷ್ಟುಯಿತ್ತು. ಇದರಲ್ಲಿ ಗೆಜೆಟೆಡ್ ನೌಕರರು ಶೇ. ೬ ರಷ್ಟು, ನಾನ್ ಗೆಜೆಟೆಡ್ ನೌಕರರು ೫೯೭ ಜನ ಇದ್ದರೆ, ೪ ನೇ ದರ್ಜೆ ನೌಕರರು ೪೦೦ ಜನ ಇದ್ದು ೧೯೬೦ ರಲ್ಲಿ ಸಮುದಾಯದಲ್ಲಿ ಒಟ್ಟು, ೯೦೩ ಜನ ಸರ್ಕಾರಿ ನೌಕರಿಯಲ್ಲಿ ಇರುವುದು ತಿಳಿಯುತ್ತದೆ. ಅಂದರೆ ಭೋವಿ ಸಮುದಾಯದಲ್ಲಿ ಸರ್ಕಾರಿ ನೌಕರಿಗಳಲ್ಲಿ ನೇಮಕಗೊಂಡಿದ್ದು, ಒಟ್ಟು ನೌಕರರು ಶೇ. ೦.೬೧ ರಷ್ಟು ಇದ್ದು ಜನಸಂಖ್ಯೆಗೆ ಅನುಗುಣವಾಗಿ ಶೇ. ೧.೦೯ ರಷ್ಟು ಇನ್ನು ನೌಕರಿ ಪಡೆಯಬೇಕಾಗಿತ್ತು ಎಂದು.[೩೦] ಅಂಕಿ–ಸಂಖ್ಯೆಗಳು ಮಾಹಿತಿಯನ್ನು ಚಿನ್ನಪ್ಪರೆಡ್ಡಿ ಆಯೋಗದಲ್ಲಿ ವಿಶ್ಲೇಶಣೆಮಾಡಿ ಗುರುತಿಸಲಾಗಿದೆ.

೪.೧೨ ಭೋವಿ ಸಮುದಾಯದಲ್ಲಿ ಎಂ.ಎಲ್.ಎ./ ಎಂ.ಪಿಗಳಾಗಿ ರಾಜಕೀಯದಲ್ಲಿ ಗುರುತಿಸುಕೊಂಡವರು

'ಮನುಷ್ಯ ಎರಡು ಕಾಲಿನ ರಾಜಕೀಯ ಜಂತು' ಎಂದು ಅರಿಸ್ಟಾಟಲ್ ಎಂದೋ ಹೇಳಿದ್ದ ಒಬ್ಬನೇ ಇದ್ದಾಗ ಚಿಂತನೆ, ಇಬ್ಬರಿದ್ದಾಗ ವಾಗ್ವಾದ, ಮೂವರಿದ್ದಾಗ ರಾಜಕೀಯ ಕುದುರುವುದು ಸಹಜ. ಮಾನವ ಮಾತು ಕಲಿತಾಗಿನಿಂದ ಈ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಪ್ರತಿಯೊಂದು ದೇಶದಲ್ಲಿಯೂ ಅಲ್ಲಲ್ಲಿಯೂ ಪರಿಸರ, ಸಂಪ್ರದಾಯ, ಶಿಕ್ಷಣಕ್ಕನುಗುಣವಾಗಿ ರಾಜಕೀಯ ಚಿಂತನೆ ಮಾಡಲಾಗುತ್ತದೆ. ಸ್ವಾತಂತ್ರ್ಯ ಬಂದ ಮೇಲೆ ಸಂವಿಧಾನದಡಿಯಲ್ಲಿ ಸಮುದಾಯದಿಂದ ರಾಜಕೀಯವನ್ನು ಪ್ರವೇಶಿಸಿದವರೆಂದರೆ, ಕೋಲಾರ ಲೋಕಸಭೆಯಿಂದ ಜಿ.ವೈ.ಕೃಷ್ಣ, ಮತ್ತು ಡಾ.ವಿ.ವೆಂಕಟೇಶರವರು ಆಯ್ಕೆಯಾದರು. ವಿಧಾನ ಪರಿಷತ್ತಿನ ಸದಸ್ಯರಾಗಿ ಮುನಿಸ್ವಾಮಿ, ವಿ.ವಿ.ನಾರಯಣ ಮತ್ತು ಅರವಿಂದ ಲಿಂಬಾವಳಿ. ವಿಧಾನಸಭೆಗೆ ಚಿಕ್ಕೋಡಿ ಕ್ಷೇತ್ರದಿಂದ ಮೊದಲ ಮಹಿಳೆಯಾಗಿ ಶಂಕುತಲ ಚೌಗಲೆ ಮತ್ತು ಬೆಂಗಳೂರುನಿಂದ ನಿರ್ಮಲಾ ವೆಂಕಟೇಶ, ಲಕ್ಕವಳಿಯ ಎಲ್ .ಎಚ್. ತಿಮ್ಮಭೋವಿ, ಹೆಗ್ಗಡ ದೇವನ ಕೋಟೆಯ ಆರ್.ಪೀರಣ್ಣ, ಜಿ. ಬಸವಣ್ಣೆಪ್ಪ ಶಿಕಾರಿಪುರ, ಶಹಬಾದ್ನ ಗೋವಿಂದ ಪಿ ಒಡೆಯರಾಜು. ಶಿಕಾರಿಪುರ ಕೇತ್ರದಿಂದ ಎನ್ ವೀರಪ್ಪ, ಪಾವಗಡ ಕ್ಷೇತ್ರದಿಂದ ತಿಮ್ಮರಾಯಪ್ಪ, ತುಮಕೂರಿನ ಗಂಗಾಭೋವಿ, ಪಾವಗಡದ ನಾಗಪ್ಪ, ಚಿಕ್ಕೋಡಿ ಕ್ಷೇತ್ರದಿಂದ ಬಾಳಸಾಹೇಬ್ ವಡ್ಡರ್, ಬೆಂಗಳೂರಿನ ಡಿ.ಮುನಿಚಿನ್ನಪ್ಪ, ಬಳ್ಳಾರಿಯ ವಿ. ನಾಗಪ್ಪ, ಬೇತಮಂಗಲ ಕ್ಷೇತ್ರದ ವೆಂಕಟೇಶ, ಭರಮಸಾಗರ ಕ್ಷೇತ್ರದ ಚಂದ್ರಪ್ಪ, ಪಾವಗಡ ಕ್ಷೇತ್ರದಿಂದ ವೆಂಕಟರಮಣಪ್ಪ, ಬ್ಯಾಡಗಿ ಕ್ಷೇತ್ರದಿಂದ ಕೆ.ಎಸ್.ಬೇಳಗಿ, ಬೇತಮಂಗಲದ ನಾರಾಯಣಸ್ವಾಮಿ, ಹೆಗ್ಗಡದೇವನ ಕೋಟೆಯ ವೆಂಕಟೇಶ, ಶಾಂತಿನಗರ ಕ್ಷೇತ್ರದ ರಘು, ಶಹಬಾದ್ ಕ್ಷೇತ್ರದ ಸುನೀಲ್ ವಲ್ಲೆ ಪೂರ್, ಬಸವನಗುಡಿ ಕ್ಷೇತ್ರದ ಚಂದ್ರಶೇಖರ ರವರು ಸೇರಿ ಒಟ್ಟು ಕೇವಲ ೨೫ಸದ್ಯಸರು ಆಯ್ಕೆ ಆಗಿ, ರಾಜಕೀಯವಾಗಿ ಗುರುತಿಸಿಕೊಂಡರು.[೫೧] ಆದರೆ ೨೦೦೮ರ ವಿಧಾನಸಭೆ ಚುನಾವಣೆಯಲ್ಲಿ ಅದೃಷ್ಟವಾಶತ್ ಎಲ್ಲಾ ಪಕ್ಷದಿಂದ ಸೇರಿ, ಸುಮಾರು ೧೪ಸದಸ್ಯರು ವಿಧಾನಸಭೆಯನ್ನು ಪ್ರವೇಶ ಮಾಡುತ್ತಾರೆ. ಅದರಲ್ಲಿ ಪ್ರಮುಖರೆಂದರೆ ಚಿತ್ರದುರ್ಗದ ಜಿಲ್ಲೆಯ ಹೊಸದುರ್ಗ ಸಾಮಾನ್ಯ ಕ್ಷೇತ್ರದಿಂದ ಗೂಳಿಹಟ್ಟಿ ಡಿ ಶೇಖರ್, ಹೊಳಲ್ಕೆರೆಯಿಂದ ಚಂದ್ರಪ್ಪನವರು, ಪಾವಗಡದಿಂದ ವೆಂಕಟರಾಮಣಪ್ಪ, ಕನಕಗಿರಿ ಕ್ಷೇತ್ರದಿಂದ ಶಿವರಾಜ ತಂಗಡಗಿ, ಮತ್ತು ೨೦೦೯ರ ಲೋಕಸಬೆ ಚುನಾವಣೆಯಲ್ಲಿ ಚಿತ್ರದುರ್ಗದಿಂದ ಜರ್ನಾಧನಸ್ವಾಮಿರವರು ಗುರುತಿಸಿಕೊಳ್ಳುತ್ತಾರೆ.

ಆದರೆ ನಂತರ ಬಂದ ೨೦೧೩ರ ವಿಧಾನಸಭೆ, ಮತ್ತು ೨೦೧೪ರ ಲೋಕಸಭೆ ಚುನಾವಣೆಯಲ್ಲಿ ಬಹಳಷ್ಟು ಕುಂಠಿತಗೊಳ್ಳುತ್ತದೆ. ವಿಧಾನಸಭೆ ಚುನಾವಣೆಯಲ್ಲಿ ಮಾತ್ರ, (ಶಿವರಾಜ ತಂಗಡಗಿ ಸೇರಿ) ಒಬ್ಬರು ಅಥಾವ ಇಬ್ಬರು ಆಯ್ಕೆಯಾಗಿ ಸಮುದಾಯದ ರಾಜಕೀಯ ಚಿತ್ರಣವು ಬದಲಾಗಿದೆ. ೨೦೧೮ರ ವಿಧಾನ ಸಭೆ ಚುನಾವಣೆಯಲ್ಲಿ ಭೋವಿ ಸಮುದಾಯದ ಪ್ರತಿನಿಧಿಗಳು ಕಾಂಗ್ರೆಸ್‌ನಿಂದ ಮೂರು ಜನ. ಬೆಂಗಳೂರಿನ ಪುಲೀಕೆಶಿ ನಗರದಿಂದ ಅಖಂಡ ಶ್ರೀನಿವಾಸ ಮೂರ್ತಿ, ಪಾವಗಡದಿಂದ ವೆಂಕಟರಮಣಪ್ಪ ಮತ್ತು ಲಿಂಗಸ್ಗೂರಲ್ಲಿ ಬಿಜೆಪಿ,(ಮಾನಪ್ಪ ವಜ್ಜಲ್) ಜೆಡಿಎಸ್,(ಸಿದ್ಧಪ್ಪಬಂಡಿ) ಮತ್ತು ಕಾಂಗ್ರೆಸ್,(ಡಿ.ಎಸ್.ಹುಲಿಗೇರಿ) ಈ ಮೂರು ಪಕ್ಷಗಳಲ್ಲಿ ಭೋವಿ ಸಮುದಾಯದವರನ್ನು ನಿಲ್ಲಿಸಿರುತ್ತಾರೆ. ಅದರಲ್ಲಿ ಕಾಂಗ್ರೆಸ್‌ನಿಂದ ಡಿ.ಎಸ್.ಹುಲಿಗೇರಿಯವರು ಜಯಬೇರಿ ಬಾರಿಸಿರುತ್ತಾರೆ. ಇನ್ನು ಬಿಜೆಪಿಯಿಂದ ನಾಲ್ಕು ಜನ ಜಯಗಳಿಸಿರುತ್ತಾರೆ. ಅದರಲ್ಲಿ ಮಾಜಿ ಉನ್ನತ ಶಿಕ್ಷಣ ಸಚಿವರಾದ ಅರವಿಂದ ಲಿಂಬಾವಳಿ ಬೆಂಗಳೂರಿನ ಮಹಾದೇವಪುರದಿಂದ ಗೆದ್ದರೆ, ಸಿ.ವಿ. ರಾಮನ್ ನಗರದಿಂದ ಎಸ್.ರಘು ಜಯಗಳಿಸಿದರು. ಇನ್ನು ನಮ್ಮ ರಾಜ್ಯದಲ್ಲಿ ಈ ಬಾರಿ ವಿಶೇಷವಾಗಿ ಹೆಸರು ಮಾಡಿರುವಂತಹ ಚಿತ್ರದುರ್ಗ ಜಿಲ್ಲೆಯನ್ನು ಗಮನಿಸಿದರೆ, ಹೊಳಲ್ಕೆರೆ ಕ್ಷೇತ್ರದಲ್ಲಿ ಎಂ. ಚಂದ್ರಪ್ಪನವರು ಗೆದ್ದರೆ, ಹೊಸದುರ್ಗ ಸಾಮಾನ್ಯ ಕ್ಷೇತ್ರದಿಂದ ಮಾಜಿ ಕ್ರೀಡಾ ಸಚಿವ ಗೂಳಿಹಟ್ಟಿ ಡಿ.ಶೇಖರ್‌ರವರು ಜಯಗಳಿಸಿದ್ದಾರೆ. ಕೊಪ್ಪಳದ ಕನಕಗಿರಿಯಲ್ಲಿ ಬಸವರಾಜ್ ದಢೇಸುಗೂರು(ಬಿಜೆಪಿ) ರವರು ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವಂತಹ ಮಾಜಿ ಸಚಿವ ಶಿವರಾಜ್ ತಂಗಡಿಗಿರವರನ್ನು ಸೋಲಿಸಿರುವುದನ್ನು ಗಮನಿಸಬಹುದು. ಆದರೆ ಮೇ೧೨ ೨೦೧೮ರ ವಿಧಾನಸಭೆ ಚುನಾವಣೆಯಲ್ಲಿ ಒಟ್ಟಾರೆಯಾಗಿ ಈ ಭೋವಿ ಸಮುದಾಯದಿಂದ ೧೦ ಜನ ಸ್ಪರ್ಧೆ ಮಾಡಿ ೭ ಜನ ಗೆದ್ದು, ತಮ್ಮ ಸ್ಥಾನವನ್ನು ಗುರುತಿಸಿಕೊಂಡಿರುವುದನ್ನು ನೋಡಬಹುದು. ರಾಜಕೀಯ ಎನ್ನುವುದು ನೀರಿನ ಮೇಲೆ ಇರುವ ಗುಳ್ಳೆಯಂತೆ ಎನ್ನುವ ಮಾತಿನಂತೆ ಯಾವ ಸಮಯದಲ್ಲಿ ಯಾರಿಗೆ ಅದೃಷ್ಟ ಒಲೆದು ಅಧಿಕಾರ ಸಿಗುತ್ತದೆ ಮತ್ತು ದುರದೃಷ್ಟಾವಶತ್ ಯಾರು ಅಧಿಕಾರ ಕಳೆದು ಕೊಳ್ಳುತ್ತಾರೆ, ಎನ್ನುವದನ್ನು ಯಾರಿಂದಲೂ ಹೇಳಲಿಕ್ಕೆ ಬರುವುದಿಲ್ಲವೆಂದು ಸಮುದಾಯದ ರಾಜಕೀಯ ಚಿತ್ರಣವನ್ನು ಗಮನಿಸಿದಾಗ ಗೊತ್ತಾಗುತ್ತದೆ. ಸ್ವಾಂತಂತ್ರ್ಯ ಬಂದಾಗಿನಿಂದ ಹಿಡಿದು, ೩೦೦೩ರ ವರಗೆ ಕೇವಲ ೨೫ ಜನಪ್ರತಿನಿಧಿಗಳು ಮಾತ್ರ ಆಯ್ಕೆಯಾಗಿ ರಾಜಕೀಯವಾಗಿ ಸ್ಥಾನಮಾನ ದೊರಕಿರುವುದಿಲ್ಲ. ಆದರೆ ಅದೃಷ್ಟವಶಾತ್ ೨೦೦೮ ವಿಧಾನಸಭೆ ಚುನಾವಣೆಯಲ್ಲಿ ಸುಮಾರು ೧೪ ಪ್ರತಿನಿಧಿಗಳು ಆಯ್ಕೆಯಾದರು. ನಂತರ ೨೦೧೩ರ ವಿಧಾನಸಭೆ ಚುನಾವಣೆಯಲ್ಲಿ ಕೇವಲ ಒಬ್ಬರು ಆಥವಾ ಇಬ್ಬರು ಆಯ್ಕೆ ಆಗುತ್ತಾರೆ ಮತ್ತು ಇತ್ತಿಚ್ಚಿಗೆ ನಡೆದ ೨೦೧೮ರ ವಿಧಾನಸಭೆ ಚುನಾವಣೆಯಲ್ಲಿ ೧೦ ಸದಸ್ಯರು ಸ್ಪರ್ಧೆಮಾಡಿ ಏಳು ಸದಸ್ಯರು ಆಯ್ಕೆಯಾಗಿರುತ್ತಾರೆ.

ಕೋಷ್ಟಕ ೪.೧ ಭೋವಿ ಸಮುದಾಯದಲ್ಲಿ ಎಂ.ಎಲ್.ಎ./ ಎಂ.ಪಿ ಗಳಾಗಿ ರಾಜ್ಯದ ರಾಜಕೀಯದಲ್ಲಿ ಗುರುತಿಸಿ ಕೊಂಡವರ ವಿವರಗಳು

ಕ್ರ ಸಂ	ಕ್ಷೇತ್ರ	ಹೆಸರು	ವರ್ಷ	ಪಕ್ಷ	ಎಂ.ಎಲ್.ಎ/ಸಿ/ ಎಂ.ಪಿ
೦೧	ಶಿಕಾರಿಪುರ(ಎಸ್.ಸಿ)	ವಿರಪ್ಪ ಎನ್.	೧೯೬೨	ಐ.ಎನ್.ಸಿ	ಎಂ.ಎಲ್.ಎ.
೦೨	ಶಿಕಾರಿಪುರ(ಎಸ್.ಸಿ)	ಬಸವಣ್ಣೆಪ್ಪ ಜಿ	೧೯೬೭	ಸಂ.ಸೋ.ಪಾ.	ಎಂ.ಎಲ್.ಎ.
೦೩	ಹೆಗ್ಗಡದೇವನ ಕೋಟೆ(ಎಸ್.ಸಿ)	ಪೀರಣ್ಣ ಆರ್.	೧೯೭೨	ಎನ್.ಓ.ಸಿ.	ಎಂ.ಎಲ್.ಎ.
೦೪		ಗೋವಿಂದ ಪಿ ವಡೆಯರಾಜ್	೧೯೭೦ –೭೬	ಭಾ.ಜ.ಪಾರ್ಟಿ (ಒ)	ಎಂ.ಎಲ್.ಸಿ.
೦೫	ಪಾವಗಡ (ಎಸ್.ಸಿ)	ನಾಗಪ್ಪ	೧೯೭೮	ಐ.ಎನ್.ಸಿ.(ಐ)	ಎಂ.ಎಲ್.ಎ.
೦೬	ಬೇತಮಂಗಲ(ಎಸ್.ಸಿ)	ವೆಂಕಟೇಶ	೧೯೭೮	ಐ.ಎನ್.ಸಿ.(ಐ)	ಎಂ.ಎಲ್.ಎ.
೦೭	ಬೇತಮಂಗಲ(ಎಸ್.ಸಿ)	ವೆಂಕಟೇಶ	೧೯೮೩	ಐ.ಎನ್.ಸಿ.	ಎಂ.ಎಲ್.ಎ.
೦೮	ಚಿಕ್ಕೋಡಿ(ಎಸ್.ಸಿ)	ಶಂಕುತಲ ಚೌಗಲೆ (ಮೊದಲ ಮಹಿಳೆ)	೧೯೮೫	ಜೆ.ಎನ್.ಪಿ	ಎಂ.ಎಲ್.ಎ.
೦೯	ಪಾವಗಡ(ಎಸ್.ಸಿ)	ವೆಂಕಟರಮಣಪ್ಪ	೧೯೮೯	ಐ.ಎನ್.ಸಿ	ಎಂ.ಎಲ್.ಎ.
೧೦	ಬೇತಮಂಗಲ(ಎಸ್.ಸಿ)	ನಾರಾಯಾಣಸ್ವಾಮಿ	೧೯೮೯	ಜನತಾ ದಳ	ಎಂ.ಎಲ್.ಎ.
೧೧	ಹೆಗ್ಗಡದೇವನ ಕೋಟೆ(ಎಸ್.ಸಿ)	ವೆಂಕಟೇಶ ಎಂ.ಪಿ	೧೯೮೯	ಜೆ.ಎನ್.ಪಿ (ಜೆಡಿ)	ಎಂ.ಎಲ್.ಎ.
೧೨	ಬೇತಮಂಗಲ(ಎಸ್.ಸಿ)	ನಾರಾಯಣಸ್ವಾಮಿ	೧೯೯೪	ಜನತಾ ದಳ	ಎಂ.ಎಲ್.ಎ.
೧೩	ಬ್ಯಾಡಗಿ (ಎಸ್.ಸಿ)	ಬೆಳಗಿ ಕೊಲೊಲೇಪ್ಪ	೧೯೯೪	ಜನತಾ ದಳ	ಎಂ.ಎಲ್.ಎ.
೧೪	ಭರಮಸಾಗರ(ಎಸ್.ಸಿ)	ಚಂದ್ರಪ್ಪ ಎಂ	೧೯೯೪	ಜೆಡಿ	ಎಂ.ಎಲ್.ಎ.
೧೫	ಚಿಕ್ಕೋಡಿ (ಎಸ್.ಸಿ)	ಬಾಳ ಸಾಹೇಬ್ ವಡ್ಡರ್	೧೯೯೪	ಜೆ.ಡಿ	ಎಂ.ಎಲ್.ಎ.
೧೬	ಭರಮಸಾಗರ(ಎಸ್.ಸಿ)	ಚಂದ್ರಪ್ಪ ಎಂ	೧೯೯೯	ಜೆಡಿ(ಯು)	ಎಂ.ಎಲ್.ಎ.
೧೭	ಬೇತಮಂಗಲ(ಎಸ್.ಸಿ)	ವೆಂಕಟೇಶ	೧೯೯೯	ಐ.ಎನ್.ಸಿ	ಎಂ.ಎಲ್.ಎ.
೧೮	ಪಾವಗಡ(ಎಸ್.ಸಿ)	ವೆಂಕಟರಮಣಪ್ಪ	೧೯೯೯	ಐ.ಎನ್.ಸಿ	ಎಂ.ಎಲ್.ಎ.
೧೯	ಬೆಂಗಳೂರು(ಎಸ್.ಸಿ)	ನಿರ್ಮಲ ವೆಂಕಟೇಶ	೨೦೦೧	ಐ.ಎನ್.ಸಿ	ಎಂ.ಎಲ್.ಸಿ.
೨೦	ಪಾವಗಡ(ಎಸ್.ಸಿ)	ತಿಮ್ಮರಾಯಪ್ಪ	೨೦೦೪	ಜೆಡಿ(ಎಸ್)	ಎಂ.ಎಲ್.ಎ.
೨೧	ಹೆಗ್ಗಡದೇವನ ಕೋಟೆ	ವೆಂಕಟೇಶ ಎಂ.ಪಿ	೨೦೦೪	ಜೆಡಿ(ಎಸ್)	ಎಂ.ಎಲ್.ಎ.
೨೨	ಶಾಂತಿನಗರ(ಎಸ್.ಸಿ)	ರಘು	೨೦೦೪	ಭಾ.ಜ.ಪಾ.	ಎಂ.ಎಲ್.ಎ.
೨೩	ಬಸವನಗುಡಿ (ಸಾ)	ಚಂದ್ರಶೇಖರ್ ಕೆ.	೨೦೦೪	ಐ.ಎನ್.ಸಿ	ಎಂ.ಎಲ್.ಎ.
೨೪	ಶಹಬಾದ್ (ಎಸ್.ಸಿ)	ಸುನೀಲ್ ವಲ್ಲೆಪೊರ್	೨೦೦೪	ಭಾ.ಜ.ಪಾ.	ಎಂ.ಎಲ್.ಎ.
೩೫		ಅರವಿಂದ ಲಿಂಬವಳಿ	೨೦೦೪	ಭಾ.ಜ.ಪಾ.	ಎಂ.ಎಲ್.ಸಿ.

೨೬	ಚಿಂಚೋಳಿ(ಎಸ್.ಸಿ)	ಸುನೀಲ್ ವಲ್ಲೆಪೊರ್	೨೦೦೮	ಭಾ.ಜ.ಪಾ.	ಎಂ.ಎಲ್.ಎ.
೨೭	ಪಾವಗಡ (ಎಸ್.ಸಿ)	ವೆಂಕಟರಮಣಪ್ಪ	೨೦೦೮	ಐ.ಎನ್.ಸಿ	ಎಂ.ಎಲ್.ಎ
೨೮	ಕನಕಗಿರಿ(ಎಸ್.ಸಿ)	ಶಿವರಾಜ ತಂಗಡಗಿ	೨೦೦೮	ಐ.ಎನ್.ಡಿ	ಎಂ.ಎಲ್.ಎ
೨೯	ಹೊಳಲ್ಕೆರೆ (ಎಸ್.ಸಿ)	ಚಂದ್ರಪ್ಪ ಎಂ	೨೦೦೮	ಭಾ.ಆ.ಪ	ಎಂ.ಎಲ್.ಎ
೩೦	ಹೊಸದುರ್ಗ(ಸಾ)	ಗೂಳಿಹಟ್ಟಿ ಡಿ ಶೇಖರ್	೨೦೦೮	ಪಕ್ಷೇತರ	ಎಂ.ಎಲ್.ಎ
೩೧	ಕನಕಗಿರಿ(ಎಸ್.ಸಿ)	ಶಿವರಾಜ ತಂಗಡಗಿ	೨೦೧೩	ಐ.ಎನ್.ಸಿ	ಎಂ.ಎಲ್.ಎ
೩೨	ಪುಲೀಕೇಶಿ ನಗರ(ಎಸ್.ಸಿ)	ಅಖಂಡ ಶ್ರೀನಿವಾಸ್ ಮೂರ್ತಿ	೨೦೧೮	ಐ.ಎನ್.ಸಿ	ಎಂ.ಎಲ್.ಎ
೩೯	ಪಾವಗಡ(ಎಸ್.ಸಿ)	ವೆಂಕಟರಮಣಪ್ಪ	೨೦೧೮	ಐ.ಎನ್.ಸಿ	ಎಂ.ಎಲ್.ಎ
೪೦	ಲಿಂಗಸ್ಗೂರು(ಎಸ್.ಸಿ)	ಹುಲಿಗೇರಿ ಡಿ ಎಸ್.	೨೦೧೮	ಐ.ಎನ್.ಸಿ	ಎಂ.ಎಲ್.ಎ
೪೧	ಮಹದೇವಪುರ(ಎಸ್.ಸಿ)	ಅರವಿಂದ ಲಿಂಬವಳಿ	೨೦೧೮	ಭಾ.ಜ.ಪಾ.	ಎಂ.ಎಲ್.ಎ
೪೨	ಸಿ. ವಿ. ರಾಮನ್‌ನಗರ	ರಘು ಎಸ್.	೨೦೧೮	ಭಾ.ಜ.ಪಾ.	ಎಂ.ಎಲ್.ಎ
೪೩	ಹೊಳಲ್ಕೆರೆ (ಎಸ್.ಸಿ)	ಚಂದ್ರಪ್ಪ ಎಂ.	೨೦೧೮	ಭಾ.ಜ.ಪಾ.	ಎಂ.ಎಲ್.ಎ
೪೪	ಹೊಸದುರ್ಗ (ಸಾ)	ಗೂಳಿಹಟ್ಟಿ ಡಿ ಶೇಖರ್	೨೦೧೮	ಭಾ.ಜ.ಪಾ.	ಎಂ.ಎಲ್.ಎ
೪೫	ಕೋಲಾರ(ಎಸ್.ಸಿ)	ಕೃಷ್ಣ ಜಿ. ವೈ.	೧೯೬೭,	ಐ.ಎನ್.ಸಿ	ಎಂ.ಪಿ.
೪೬	ಕೋಲಾರ(ಎಸ್.ಸಿ)	ಕೃಷ್ಣ ಜಿ. ವೈ.	೧೯೭೧,	ಐ.ಎನ್.ಸಿ	ಎಂ.ಪಿ.
೪೭	ಕೋಲಾರ(ಎಸ್.ಸಿ)	ಕೃಷ್ಣ ಜಿ. ವೈ.	೧೯೭೭	ಐ.ಎನ್.ಸಿ	ಎಂ.ಪಿ.
೪೮	ಕೋಲಾರ(ಎಸ್.ಸಿ)	ಕೃಷ್ಣ ಜಿ. ವೈ.	೧೯೮೦	ಐ.ಎನ್.ಸಿ(ಐ)	ಎಂ.ಪಿ.
೪೯	ಕೋಲಾರ(ಎಸ್.ಸಿ)	ಕೃಷ್ಣ ಜಿ. ವೈ.	೧೯೮೪	ಐ.ಎನ್.ಸಿ.(ಐ)	ಎಂ.ಪಿ.
೫೦	ಕೋಲಾರ(ಎಸ್.ಸಿ)	ವೆಂಕಟೇಶ ವಿ.	೧೯೮೪	ಭಾ.ಜ.ಪಾ.	ಎಂ.ಪಿ.
೫೧	ಚಿತ್ರದುರ್ಗ(ಎಸ್.ಸಿ)	ಜನಾರ್ಧನ ಸ್ವಾಮಿ	೨೦೦೯	ಭಾ.ಜ.ಪಾ.	ಎಂ.ಪಿ.
೫೨	ನಾಮಕರಣ	ಸುನೀಲ್ ವಲ್ಲೆಪೊರ್	೨೦೨೦	ಭಾ.ಜ.ಪಾ	ಎಂ.ಎಲ್.ಸಿ.

ಆಧಾರ ಮೂಲ : ಚುನಾವಣೆ ಇಲಾಖೆಯ ಕಛೇರಿ, ಬೆಂಗಳೂರು,೨೦೧೯

೪.೧೪ ಭೋವಿ ಸಮುದಾಯದ ಕಟ್ಟಡ ಕಾರ್ಮಿಕರಿಗೆ ಇಲಾಖೆಯಿಂದ ಇರುವ ಸೌಲಭ್ಯಗಳು

ಕಟ್ಟಡ ಕಾರ್ಮಿಕರ ಕಲ್ಯಾಣ ಇಲಾಖೆಯಿಂದ ಕಟ್ಟಡ ಕಾರ್ಮಿಕರಿಗಾಗಿ ಈ ಕೆಳಕಂಡ ಸೌಲಭ್ಯಗಳು ಇದ್ದರು ಮಾಹಿತಿ ಕೊರತೆಯಿಂದ ನೋಂದಣಿ ಮಾಡದೆ ಇರುವವರು ಸಿಗುತ್ತಾರೆ. ಯಾವುವುವೆಂದರೆ ಒಳರೋಗಿ ವೈದ್ಯಕೀಯ ಧನಸಹಾಯ; ರೂ.೪೦೦/–ರಿಂದ ರೂ.೬,೦೦೦/–ವರೆಗೆ. ಅಪಘಾತ ಪರಿಹಾರ; ಕೆಲಸದಿಂದುಂಟಾದ ಮರಣ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.೩,೦೦.೦೦೦/–ಭಾಗಶಃ, ಶಾಶ್ವತ ದುರ್ಬಲತೆಯಾದಲ್ಲಿ ಅಂಗವಿಕಲತೆಯ ಪ್ರಮಾಣದ ಶೇಕಡಾವಾರು ಆಧಾರದ ಮೇಲೆ ಪರಿಹಾರ. ಪ್ರಮುಖ ವೈದ್ಯಕೀಯ ವೆಚ್ಚ ಧನಸಹಾಯ: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯೂ, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ,

ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂದಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರುತ/ ಡಿಸ್ ಲೊಕೇಶನ್ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆಗಳಿಗೆ ರೂ.೨,೦೦,೦೦೦/-ವರೆಗೆ., (ಸಿ.ಜಿ.ಹೆಚ್.ಎಸ್ ದರಗಳಿಗೆ ಒಳಪಟ್ಟು) ದುರ್ಬಲತೆ ಪಿಂಚಣಿ: ಫಲಾನುಭವಿಗೆ ಖಾಯಿಲೆಗಳಿಂದ ಹಾಗೂ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ. ೧೦೦೦/-ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ೨,೦೦,೦೦೦/- ರವರೆಗೆ ಅನುಗ್ರಹ ರಾಶಿ ಸಹಾಯಧನ. ನೋಂದಾಯಿತರಲ್ಲದ ನಿರ್ಮಾಣ ಕಾರ್ಮಿಕರಿಗೆ ಎಕ್ಸ್‌ಗ್ರೇಷಿಯಾ; ಕಟ್ಟಡ ಕಾಮಗಾರಿ ಸ್ಥಳದಲ್ಲಿ ಅಪಘಾತ ಉಂಟಾಗಿ ಮೃತರಾದಲ್ಲಿ ಅವರ ಕುಟುಂಬಕ್ಕೆ, ರೂ, ೫೦,೦೦೦. ಮತ್ತು ಗಂಭೀರ ಗಾಯಗೊಂಡ ಕಟ್ಟಡ ಕಾರ್ಮಿಕರಿಗೆ ರೂ.೨೦,೦೦೦/- ಅಂತ್ಯಕ್ರಿಯೆ ವೆಚ್ಚ; ರೂ. ೪,೦೦೦/- ಹಾಗೂ ಎಕ್ಸಗ್ರೇಷಿಯಾ ರೂ ೫೦,೦೦೦/-ಧನಸಹಾಯ. ಹೆರಿಗೆ ಸೌಲಭ್ಯ; ಮಹಿಳಾ ಫಲಾನುಭವಿಗೆ ಮೊದಲ ಎರಡು ಹೆರಿಗೆಗಳಿಗೆ ತಲಾ ರೂ. ೧೫,೦೦೦/- ಶೈಕ್ಷಣಿಕ ಧನಸಹಾಯ; ಫಲಾನುಭವಿಯ ಇಬ್ಬರು ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ; ೫, ೬ ಹಾಗೂ ೭ನೇ ತರಗತಿಯಲ್ಲಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ರೂ. ೩,೦೦೦/- ೮ ಹಾಗೂ ೯ನೇ ತರಗತಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ರೂ.೪೦೦೦/- ಎಸ್.ಎಸ್.ಎಲ್.ಸಿ ಓದುತ್ತಿರುವವರಿಗೆ ರೂ.೬.೦೦೦/- ಪ್ರಥಮ ಮತು ದ್ವಿತೀಯ ಪಿ.ಯು.ಸಿ ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ ಕ್ರಮವಾಗಿ ರೂ.೫,೦೦೦/-ಮತ್ತು ರೂ.೮,೦೦೦/- ಐಟಿಐ ಮತ್ತು ಡಿಪ್ಲೋಮಾ ಓದುತ್ತಿರುವವರಿಗೆ ಕ್ರಮವಾಗಿ ರೂ.೫,೦೦೦/ -ಮತ್ತು ರೂ.೬೦೦೦/- ಪದವಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ರೂ. ೫,೦೦೦/- ಸ್ನಾತಕೋತ್ತರ ಪದವಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ರೂ.೫,೦೦೦/- ವೈದ್ಯಕೀಯ/ ಇಂಜಿನಿಯರಿಂಗ್ ಪದವಿ ಓದುತ್ತಿರುವವರಿಗೆ ಸರ್ಕಾರವು ಅರ್ಹತೆಯ ಸ್ಥಾನಕ್ಕೆ ನಿಗಧಿ ಪಡಿಸಿದ ಶುಲ್ಕ ಪಾವತಿ ಮತ್ತು ಪ್ರತಿ ತಿಂಗಳಿಗೆ ರೂ ೨,೦೦೦/- ಗಳ ಹಾಜರಾತಿ ಭತ್ಯೆ. ಪಿಹೆಚ್‌ಡಿ ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ ರೂ.೨೦,೦೦೦/- ಮದುವೆ ಧನಸಹಾಯ; ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ. ೫೦,೦೦೦/- ಉಪಕರಣಗಳ ಖರೀದಿಗೆ ಧನಸಹಾಯ: ರೂ.೫,೦೦೦/-ವರೆಗೆ ಪಿಂಚಣಿ ಯೋಜನೆ: ಮಾಸಿಕ ರೂ. ೧,೦೦೦/- ಮನೆ ಕಟ್ಟುವುದಕ್ಕೆ ಧನಸಹಾಯ. ಸೌಕಾರ್ಯಗಳು ಇದ್ದರೂ ಎಷ್ಟು ಪ್ರಮಾಣದಲ್ಲಿ ಭೋವಿ ಸಮುದಾಯದವರು ಪಡೆದುಕೊಂಡಿದ್ದಾರೆ.೩.೨ ಎಂದು ಮುಂದಿನ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಕೊನೆಯ ಟಿಪ್ಪಣಿಗಳು

೧. ಚಂದ್ರ ಪೂಜಾರಿ ಎಂ., ಅಭಿವೃದ್ಧಿ ಮತ್ತು ರಾಜಕೀಯ, ಪಲ್ಲವ ಪ್ರಕಾಶನ, ಬಳ್ಳಾರಿ ೨೦೧೪.

೨. ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಬೆಂಗಳೂರು, ಮಾರ್ಚ, ೨೦೧೯

೩. ರತಿ, ಅಭಿವೃದ್ಧಿ ಆಯಾಮಗಳು, ಇಂದಣೀಲಮಣಿಂ ಪ್ರಕಾಶನ, ಚಿಕ್ಕೋಡಿ, ೨೦೨೦.

೪. ಅದೇ ಪುಸ್ತಕ ಪು.ಸಂ. ೨೨

೫. ಅದೇ ಪುಸ್ತಕ ಪು.ಸಂ. ೨೩

೬. ಅದೇ ಪುಸ್ತಕ ಪು.ಸಂ. ೨೪

೭. ಅದೇ ಪುಸ್ತಕ ಪು.ಸಂ. ೨೫

೮. ಅದೇ ಪುಸ್ತಕ ಪು.ಸಂ. ೨೬

೯. ಚಂದ್ರ ಪೂಜಾರಿ ಎಂ., ಅಭಿವೃದ್ಧಿ ಪರಿಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೮.

೧೦. ಅದೇ ಪುಸ್ತಕ.

೧೧. ಆಂಡ್ರ್ಯೂ ಹೇಯ್ ವುಡ್, ಗ್ಲೋಬಲ್ ಪಾಲಿಟಿಕ್ಸ್, ಪಾಲ್‌ಗ್ರೇವ್ ಮ್ಯಾಕ್ ಮಿಲನ್, ನ್ಯೂಡೆಲ್ಲಿ, ೨೦೧೪.

೧೨. ಹೊವೆಯ್ದ ಅಬ್ಬಾಸ್, ರಣಜಯ್‌ಕುಮಾರ್, ಪಾಲಿಟಿಕಲ್ ಥಿಯರಿ, ಪಿಯರ್‌ಸನ್, ನ್ಯೂಡೆಲ್ಲಿ, ೨೦೧೨.

೧೩. ಸ್ಟೀವನ್ ಜೆ. ಹೂಡ್, ಪಾಲಿಟಿಕಲ್ ಡೆವಲಪ್‌ಮೆಂಟ್ ಆ್ಯಂಡ್ ಡೆಮೊಕ್ರೇಟಿಕ್ ಥಿಯರಿ, ಪಿ. ಎಚ್ ಐ ಲರ್ನಿಂಗ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, ೨೦೦೯.

೧೪. ರಿಚಾರ್ಡ್ ಎ. ಹೈಗ್ಗೊಟ್, ಪಾಲಿಟಿಕಲ್ ಡೆವಲಪ್‌ಮೆಂಟ್ ಥಿಯರಿ, ಕ್ರೂಮ್ ಹೆಲ್ಮ್, ೧೯೮೩.

೧೫. ರಸ್ಸೆಲ್ಲ್ ಜೆ. ಡಾಲ್ಟನ್, ಹ್ಯಾನ್ಸ್ ಡೇಟರ್ ಕ್ಲಿಂಗ್‌ಮನ್, ಪಾಲಿಟಿಕಲ್ ಬಿಹೇವಿಯರ್, ಆಕ್ಸ್‌ಫರ್ಡ್, ೨೦೦೭.

೧೬. ಮುಜಾಫ್ಫರ್ ಅಸ್ಸಾದಿ ಅಸ್ಮಿತೆ ರಾಜಕಾರಣ ಮತ್ತು ಮೂಲ ಭೂತವಾದ ಕೆಲವು ಚಿಂತನೆಗಳು ಲಡಾಯಿ ಪ್ರಕಾಶನ ಗದಗ ೨೦೧೭.

೧೭. ಭರಮಪ್ಪಾ ನಿಂ.ಭಾವಿ. ಅಂತರ್ವಾಣಿ, ಸಂ.೦೫, ಇಂದಣೀಲಮಣಿಂ ಪ್ರಕಾಶನ ಚಿಕ್ಕೋಡಿ, ಪು ಸಂ. ೦೭, ೨೦೧೯.

೧೮. ಅದೇ ಪುಸ್ತಕ ಪು. ಸಂ.೭ ರಿಂದ ೮.

೧೯. ಬೆಟಗೇರಿ. ವೈ. ವೈ. ಡಾ. ವಡ್ಡರ ಪರಂಪರೆ, ಜೆ. ಬಿ. ಪಬ್ಲಿಕೇಷಣ್, ಶಿವಾನಂದ ರೋಡ, ಗದಗ, ಪು. ಸಂಖ್ಯೆ ೨೩೯, ೧೯೯೯.

೨೦. ನಾಡೋಜ ಡಾ. ಗೀತಾ ನಾಗಭೂಷಣ(ಸಂ), ಅಮೃತ ಕಟಿಕೆ ಒಡ್ಡರು/ಭೋವಿ ಜನಾಂಗ/ ಸಂಸ್ಕೃತಿಕ ಮಹಿಳಾ ಮಾಳಿಕೆ ಸಂಪುಟ-೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. ಸಂಖ್ಯೆ ೧೨೯, ೨೦೧೦.

೨೧. ಸಂಗಳದ. ಎಂ. ಬಿ, ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ಶಶಿ ಪ್ರಕಾಶನ ಗರಗ, ಪು. ಸಂಖ್ಯೆ ೪೧, ೨೦೧೪.

೨೨. ಗಂಗಾಧರಯ್ಯ ಭೋವಿ ಸಮುದಾಯದ ಸಂಸ್ಕೃತಿ ಮತ್ತು ಕೊಡುಗೆಗಳು, ವಿ. ತಿಮ್ಮಪ್ಪನವರು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಪು. ಸಂಖ್ಯೆ ೨೪. ಮತ್ತು ೯೨, ೨೦೦೭.

೨೩. ಮಂಜುನಾಥ ನಾಯಕ ಕೆ. ಚಿತ್ರದುರ್ಗ ಜಿಲ್ಲಾದರ್ಶನ ಪಾರ್ವತಿ ಪ್ರಕಾಶನ ಪಂಡರಹಳ್ಳಿ, ಚಿತ್ರದುರ್ಗ ಜಿಲ್ಲೆ ಪು.ಸಂಖ್ಯೆ ೯೨.

೨೪. ಸಂಗಳದ. ಎಂ. ಬಿ, ಭೋ. ಸ. ಸಾ. ಅ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ಶಶಿ ಪ್ರಕಾಶನ ಗರಗ, ಪು. ಸಂಖ್ಯೆ ೪೧, ೨೦೧೪.

೨೫. ಪವಾರ ಸತೀಶ, ವಡ್ಡರ ಸಮಾಜ ಮತ್ತು ಸಂಸ್ಕೃತಿ, ಕೊಲ್ಲಾಪುರ, ೨೦೦೮.

೨೬. ಬೆಟಗೇರಿ. ವೈ. ವೈ. ಡಾ. ವಡ್ಡರ ಪರಂಪರೆ, ಜೆ. ಬಿ. ಪಬ್ಲಿಕೇಷಣ್, ಶಿವಾನಂದ ರೋಡ, ಗದಗ, ಪು.ಸಂ. ೧೮೨–೧೮೩, ೧೯೯೯.

೨೭. ಅದೇ ಪುಸ್ತಕ ಪು. ಸಂ. ೧೯೦

೨೮. ಅದೇ ಪುಸ್ತಕ ಪು. ಸಂ. ೧೯೪ ರಿಂದ ೧೯೬.

೨೯. ಲಕ್ಷ್ಮಣ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು ಏಕೀಕರಣೋತ್ತರ ಚಳುವಳಿ ಸಂಪುಟ-೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ.೩೨ ರಿಂದ ೩೭, ೧೯೯೯.

೩೦. ಅದೇ ಪುಸ್ತಕ ಪು.ಸಂ. ೫೮೮ ರಿಂದ ೬೩.

೩೧. ಗಂಗಾಧರಯ್ಯ ಭೋವಿ ಸಮುದಾಯದ ಸಂಸ್ಕೃತಿ ಮತ್ತು ಕೊಡುಗೆಗಳು, ವಿ. ತಿಮ್ಮಪ್ಪನವರು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಬೃಹತ್ ಬೆಂಗಳೂರು ಮಹಾನಗರ ಪಾಳಿಕೆ, ಬೆಂಗಳೂರು, ೨೦೦೭.

೩೨. ಸಂದರ್ಶನ : ಚಂಪಾ ಮೇಡಂ ಚಿತ್ರದುರ್ಗದ ಕಾರ್ಮಿಕರ ಕಲ್ಯಾಣ ಇಲಾಖೆ ಅಧಿಕಾರಿ, ೨೨/೧೦/೨೦೧೮.

ಅಧ್ಯಾಯ – ಐದು

ಭೋವಿ ಸಮುದಾಯದ ಗುರುತಿನ ರಾಜಕೀಯ

೫.೧ ಸಾಮಾಜಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

೫.೨ ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

೫.೩ ರಾಜಕೀಯ ಸಂಘಟನೆಗಳಲ್ಲಿ ಭೋವಿ ಸಮುದಾಯ

೫.೪ ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

ಅಧ್ಯಾಯ – ಐದು

ಭೋವಿ ಸಮುದಾಯದ ಗುರುತಿನ ರಾಜಕೀಯ

೫.೧ ಸಾಮಾಜಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

ಭೋವಿ ಸಮುದಾಯದ ರಾಜಕೀಯ ಮತ್ತು ರಾಜಕೀಯೇತರ ಸಂಘಟನೆ ಸಂಸ್ಥೆಗಳಲ್ಲಿ ಎಷ್ಟು ಪ್ರಮಾಣದಲ್ಲಿ ಗುರುತಿಸಿಕೊಂಡಿದ್ದಾರೆ ಎಂದು ಅರ್ಥೈಸಲಾಗುವುದು. ಸಾಮಾಜಿಕವಾಗಿ – ಇರುವ ಎಸ್‌ಡಿಎಮ್‌ಸಿ (ಶಾಲೆ ಉಸ್ತುವರಿ ಸಮಿತಿ), ನೀರಿನ ಸಮಿತಿ, ಆರೋಗ್ಯ ಸಮಿತಿ, ವಸತಿ ಸಮಿತಿ, ನೈರ್ಮಲ್ಯ ಸಮಿತಿ, ಹಾಗೂ ಜಾತಿ ಸಂಘಟನೆಗಳಲ್ಲಿ ಇವರ ಸ್ಥಾನಮಾನ ಹೇಗಿದೆ. ಮತ್ತು ಆರ್ಥಿಕವಾಗಿ – ಜಂಟಿ ಅರಣ್ಯ ಸಮಿತಿ, ಉತ್ಪಾದನಾ ಸಮಿತಿ, ಸ್ವಸಹಾಯ ಸಂಘ, ಮಾರುಕಟ್ಟೆ ಸಮಿತಿ ಮತ್ತು ರಾಜಕೀಯವಾಗಿ – ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಸಾಂಸ್ಕೃತಿಕವಾಗಿ – ಭಜನ ಮಂಡಳಿ, ದೇವಸ್ಥಾನ ಆಡಳಿತ ಮಂಡಳಿ, ಮತ್ತು ಇತರ ಸಂಘಟನೆಗಳಲ್ಲಿ ಭೋವಿ ಸಮುದಾಯದ ಕುಟುಂಬಗಳ ಸದಸ್ಯರಾಗಿ, ಪದಾಧಿಕಾರಿಗಳಾಗಿ ಪಾಲ್ಗೊಂಡಿದ್ದಾರೆ. ಹಾಗೂ ಮೇಲಿನ ಸಂಘ ಸಂಸ್ಥೆಗಳ ಮಾಹಿತಿಯನ್ನು ಬಳಕೆ ಮಾಡಿಕೊಂಡು ರಾಜಕೀಯ ಪ್ರಕ್ರಿಯೆ ಹೇಗೆ ಮುಂದುವರಿಸಿದ್ದಾರೆ ಎನ್ನುವುದನ್ನು ಗುರುತಿಸಲಾಗುವುದು.

ಭೋವಿ ಸಮುದಾಯದಲ್ಲಿ ಹಲವು ಗ್ರಂಥಗಳಲ್ಲಿ ಉಲ್ಲೇಖಿಸಿದಂತೆ ಕಲ್ಲು ಕುಟ್ಟಿಗ, ಬಂಡಿ ವಡ್ಡರು, ಮಣ್ಣು ವಡ್ಡರು ಎಂದು ಮೂರು ಉಪವಿಭಾಗಗಳಾಗಿ ಗುರುತಿಸಿದ್ದಾರೆ. ಹಾಗೂ ಭೋವಿ ಸಮುದಾಯದ ಸಾಮಾಜಿಕ ಸಂಘಟನೆ, ಸಮುದಾಯದ ಧಾರ್ಮಿಕ ಕೇಂದ್ರಗಳು ಮತ್ತು ಸಮುದಾಯದ ಉದ್ಯೋಗಗಳ ಸಾಮಾಜಿಕವಾಗಿ ಮುಂದುವರೆಯಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಇವರ ಕಸುಬುಗಳು ಹಳೆಯ ಪದ್ದತಿಗಳನ್ನು ಹೋಲುತ್ತದೆ.

ಭೋವಿ ಸಮುದಾಯದ ಸಂಘಟನೆಗಳು ಇತರೆ ಸಮುದಾಯಗಳಿಗಿಂತ ತೀರ ಭಿನ್ನರೀತಿಯಲ್ಲಿ ಕಂಡುಬರುತ್ತವೆ. ಭೋವಿ ಸಮುದಾಯ ಏಕಸ್ವಾಮ್ಯ ಮತ್ತು ಒಗ್ಗಟ್ಟಿನಿಂದ ಊರುಗಳ ಪೂರ್ವ, ಪಶ್ಚಿಮ ಹಾಗೂ ಉತ್ತರ ದಿಕ್ಕುಗಳ ಕಡೆ, ವಸತಿ ಸೌಲಭ್ಯಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಸಮುದಾಯದ ವಾಸದ ಮನೆಗಳು ಊರಿನಿಂದ ಸ್ವಲ್ಪ ದೂರದಲ್ಲಿರುತ್ತವೆ. ತಮ್ಮ ಕೇರಿಗಳು ಊರಿಗಿಂತಲೂ ಭಿನ್ನದಾಗಿದ್ದು, ಸ್ವತಂತ್ರವಾಗಿ ಜೀವನ ನಡೆಸುವ ಪದ್ದತಿ ಕಂಡುಬರುತ್ತದೆ. ಯಾಕೆಂದರೆ ತಮ್ಮ ನ್ಯಾಯ ಪಂಚಾಯಿತಿಗಳು ಒಳಿತು ಕೆಡಕುಗಳು ಇತರೆ ಸಮುದಾಯಕ್ಕೆ ತೊಂದರೆ ಆಗಬಾರದು ಎನ್ನುವ ದೃಷ್ಠಿಯಿಂದ ಸ್ವಲ್ಪ ದೂರದಲ್ಲಿ ತಮ್ಮ ವಸತಿಗಳನ್ನು ಕಟ್ಟಿಕೊಂಡಿರುತ್ತಾರೆ. ಅವರ ವಸತಿ ಸ್ಥಳಗಳನ್ನು ವಡ್ರೋಣಿ, ವಡ್ಡೆಗೇರಿ, ವಡ್ಡರಹಟ್ಟಿ, ವಡ್ಡರಕೇರಿ ಎಂದು ಗುರುತಿಸಿಕೊಳ್ಳುವ ಸಂಸ್ಕೃತಿ ರೂಢಿಯಲ್ಲಿದೆ. ಕೇರಿಗೆ ಒಬ್ಬ ಮುಖಂಡ ಇರುತ್ತಾನೆ. ಅವನಿಗೆ ಬೈಡು, ಎಂದು ಕರೆಯುವರು. ಧಾರ್ಮಿಕ ಕೇಂದ್ರಗಳು ರಾಯಚೂರಿನ ಕನಕರಾಯ, ಸೋಲ್ಲಾಪುರದಲ್ಲಿ ಸಿದ್ಧರಾಮ, ಪಾಂಡರಪುರದಲ್ಲಿ ವಿಠೋಬಾ, ಮಹಾಬಲೇಶ್ವರ, ಗೋಕರ್ಣ, ಮಹಾದೇವ, ಮಾರುತಿ, ನರಸೋಬಾ, ನಾಗಮ್ಮ, ಯಲ್ಲಮ್ಮ, ಆಂಧ್ರದಲ್ಲಿ ಬಾಲನಾಗಮ್ಮ ಎಂಬ ಧಾರ್ಮಿಕ ಕುಲದೇವರುಗಳಿದ್ದು, ಸ್ತ್ರೀದೇವರುಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಸಮುದಾಯದ ಉದ್ಯೋಗದ ಹಿನ್ನೆಲೆ ಅನುವಂಶಿಕವಾಗಿ ಬೆಳೆದುಬಂದು, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಎಂದು ನಿರ್ಮಿತವಾಗಿದೆ. ೧೮೬೧ ರಲ್ಲಿ ೪೬೮ ಜನ ಕಲ್ಲು ಒಡೆಯುವರು, ೪೫೨೯ ಜನ ಕಟ್ಟಡ ಕಟ್ಟುವವರು ಇದ್ದರು ಎಂದು ಶ್ರೀ ಹಯವದನರಾವ ಅವರು ಭೋವಿ ಸಮುದಾಯದ ಮೂಲ ಉದ್ಯೋಗದ ಸ್ಪಷ್ಟಚಿತ್ರಣವಿದೆ. ಎಂದು ಉಲ್ಲೇಖಿಸುತ್ತಾ. ಭಾರತದೇಶದಲ್ಲಿ ಕನ್ನಂಬಾಡಿ, ಕೋಹಿನಾ, ನಾಗಾರ್ಜುನ ಸಾಗರ, ವಿಧಾನಸೌಧ, ಉಸ್ಮಾನಿಯಾ ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಕಲ್ಬುರ್ಗಿ ಶರಣಬಸವೇಶ್ವರ ದೇವಾಲಯ, ಶ್ರವಣಬೆಳಗೋಳದ ಗೊಮ್ಮಟ, ಬೇಲೂರಿನ ಚೆನ್ನಕೇಶವ ದೇವಾಲಯ, ಒಂದೇ ಕಲ್ಲಿನ ಗಣಪತಿ, ಮೈಸೂರಿನ ನಂದಿ, ಸೋಮನಾಥಪುರದ ದೇವಾಲಯ ಕೆಲಸಗಳೆಲ್ಲ ಹೊಟ್ಟೆಪಾಡಿಗಾಗಿ, ಭೋವಿ ಸಮುದಾಯದವರು ಕೆಲಸಕಾರ್ಯಗಳನ್ನು ಮಾಡಿದ್ದಾರೆ. ವಿಜ್ಞಾನಿ ಯುಗಕ್ಕಿಂತಲೂ ಮುಂಚೆ ದೊಡ್ಡ ಕಲ್ಲುಗಳನ್ನು ಹೇಗೆ ಹೊಡೆಯಬೇಕೆಂದು ತಂತ್ರಜ್ಞಾನವನ್ನು ಕಲೆತವರು ಮೊದಲು ಭೋವಿ ಸಮುದಾಯದವರೆಂದು ಗುರುತಿಸುತ್ತಾರೆ.

ಸಾಮಾಜಿಕ ಸಂಘಟನೆಗಳಾದ – ಎಸ್‌ಡಿಎಂಸಿ ನೀರಿನ ಸಮಿತಿ, ಆರೋಗ್ಯ ಸಮಿತಿ, ವಸತಿ ಸಮಿತಿ, ನೈರ್ಮಲ್ಯ ಸಮಿತಿ, ಮತ್ತು ಜಾತಿ ಸಂಘಟನೆಗಳಲ್ಲಿ ಸದಸ್ಯರಾಗಿ, ಪದಾಧಿಕಾರಿಗಳಾಗಿ, ಪಾಲಗೊಂಡಿದ್ದಾರೆ. ಮತ್ತು ಮಾಹಿತಿಯನ್ನು ಯಾವ ಪ್ರಮಾಣದಲ್ಲಿ ಬಳಕೆ ಮಾಡಿಕೊಂಡು, ರಾಜಕೀಯ ಪ್ರಕಿಯೆ ಮುಂದುವರಿಸಿದ್ದಾರೆ. ಎನ್ನುವುದನ್ನು ಕೆಳಕಂಡಂತೆ ವಿಶ್ಲೇಷಿಸಲಾಗಿದೆ. ಮೊದಲನೆಯದಾಗಿ ಎಸ್‌ಡಿಎಮ್‌ಸಿ(ಶಾಲಾ ಉಸ್ತುವರಿ ಸಮಿತಿ) ಬಗ್ಗೆ ಸಮುದಾಯದವರಿಗೆ

ಹೊಳಲ್ಕೆರೆ ತಾಲ್ಲೂಕಿನಲ್ಲಿ ೩೪ ಕುಟುಂಬಗಳಿಗೆ ಮತ್ತು ಮೊಳಕಾಲ್ಮೂರು ತಾಲ್ಲೂಕಿನಲ್ಲಿ ೬೭ ಕುಟುಂಬಗಳು ಸೇರಿ ಒಟ್ಟು, ೧೦೧ ಕುಟುಂಬಗಳಿಗೆ ಅಂದರೆ ಶೇಕಡ ೫೦.೫ (೧೦೧), ಕುಟುಂಬಗಳಿಗೆ ಎಸ್‌ಡಿಎಮ್‌ಸಿ ಬಗ್ಗೆ ತಿಳುವಳಿಕೆ ಇದೆ. ಉಳಿದ ಶೇಕಡ ೪೯.೫ (೯೯) ಕುಟುಂಬಗಳಿಗೆ ಇದರ ಬಗ್ಗೆ ಅರಿವು ಇಲ್ಲದೇ ಇರುವುದು ತಿಳಿಯುತ್ತದೆ. ಶೇಕಡ ೫೦.೫ ಕುಟುಂಬಗಳಿಗೂ ಇದರ ಕೆಲಸ ಮತ್ತು ಜವಾಬ್ದಾರಿ ಏನೆಂದರೆ. ಶೇಕಡ ೨೮ (೫೬) ಶಾಲಾ ಉಸ್ತುವಾರಿ ಸಮಿತಿ ಇದ್ದು ಶಾಲೆಯಲ್ಲಿ ಸದಸ್ಯರಾಗಿ ಆಯ್ಕೆಯಾಗಿ, ಅಲ್ಲಿನ ಕಾಮಾಗಾರಿಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವುದು ಎಂದರೆ, ಶೇಕಡ ೨೨.೫ (೪೫) ಶಾಲಾ ಅಭಿವೃದ್ಧಿ ಸಮಿತಿ ಇದು ಸರ್ಕಾರದಲ್ಲಿ ಆದ ಬದಲಾವಣೆಗಳು ನಿಯಮಗಳನ್ನು ಗಮನಿಸಿ, ಹೊಸ ಕಾಯಿದೆಗಳನ್ನು ಅಳವಡಿಸಿಕೊಳ್ಳುವಂತೆ ಶಿಕ್ಷಕರಿಗೆ ಮನವರಿಕೆ ಮಾಡಿಕೊಡುತ್ತಾ, ಕೆಲಸ ಮಾಡುವುದು. ಹಿಂದೆ ಮತ್ತು ಪ್ರಸ್ತುತ ದಿನಗಳಲ್ಲಿ ಭೋವಿ ಸಮುದಾಯದವರು ಶೇಕಡ ೩೦.೫ (೬೧) ಸದಸ್ಯತ್ವ ಮತ್ತು ಪದಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಉಳಿದ ಶೇಕಡ ೬೯.೫ (೧೩೯) ಕುಟುಂಬಗಳು ಯಾವುದೇ ಅಧಿಕಾರ ಸ್ಥಾನಮಾನವನ್ನು ಪಡೆದಿಲ್ಲ. ಅಧಿಕಾರ ಪಡೆದವರ ವಿವರವನ್ನು ಕೆಳಕಂಡಂತೆ ಗಮನಿಸಬಹುದು.

ಭೋವಿ ಸಮುದಾಯದವರು ಅಧಿಕಾರ ಪಡೆದವರಲ್ಲಿ, ಶೇಕಡ ೧೦ (೨೦) ಹಿಂದೆ ನಾಮ ನಿರ್ದೇಶಿತ ಸದಸ್ಯರಾಗಿ, ಮತ್ತು ಹಾಲಿ ಶೇಕಡ ೨.೫೫ (೫), ಸ್ಥಳೀಯ ಶಿಕ್ಷಣಾಸಕ್ತಿ ಯುವಕ/ಯುವತಿ/ಸ್ವಸಹಾಯ ಸಂಘದ ಪ್ರತಿನಿಧಿಯಾಗಿ, ಹಿಂದೆ ಶೇಕಡ ೪ (೮) ಹಾಲಿ ಶೇಕಡ ೧.೫ (೩), ನಾಗರಿಕ ಸೌಕರ್ಯ ಸಮಿತಿಯ ಸದಸ್ಯರಾಗಿ, ಹಿಂದೆ ಶೇಕಡ ೫.೫ (೧೧) ಹಾಲಿ ಶೇಕಡ ೧.೫ (೩)ರಷ್ಟು, ಸ್ಥಾನಮಾನ ಪಡೆದವರು ಶೇಕಡ ೭೪.೫ ಯಾವುದೇ ರೀತಿಯ ಅಧಿಕಾರ ಸ್ಥಾನಮಾನ ಪಡೆದಿಲ್ಲದಿರುವ ಕುಟುಂಬಗಳು ಸಿಗುತ್ತವೆ. ಮತ್ತು ಇತರೆ ಸಾಮಾಜಿಕ ಸಂಘಟನೆಗಳಾದ ನೀರಿನ ಸಮಿತಿ, ಆರೋಗ್ಯ ಸಮಿತಿ, ನೈರ್ಮಲ್ಯ ಸಮಿತಿ, ಮತ್ತು ಜಾತಿ ಸಂಘಟನೆಗಳಲ್ಲಿ ಶೇಕಡ ೪೧% (೮೨) ರಷ್ಟು ಪ್ರಾತಿನಿಧ್ಯವನ್ನು ಪಡೆದಿದ್ದಾರೆ ಉಳಿದ ಶೇಕಡ ೫೯ (೧೧೮) ಕುಟುಂಬಗಳು ಯಾವುದೆ ಸ್ಥಾನಮಾನ ಪಡೆದಿಲ್ಲದಿರುವುದನ್ನು ಕೆಳಗಿನ ಭಾಗದಲ್ಲಿ ವಿವರಿಸಲಾಗಿದೆ. ಸಾಮಾಜಿಕ ಸಂಘಟನೆಯಲ್ಲಿ ಸಮುದಾಯದವರು ಪ್ರಾತಿನಿಧ್ಯ ಪಡೆದ ಶೇಕಡ ೪೧ ಕುಟುಂಬಗಳಲ್ಲಿ ನೀರಿನ ಸಮಿತಿಯ ಸದಸ್ಯರಾಗಿ, ಹಿಂದೆ ಶೇಕಡ ೧೦.೫ (೨೧) ಹಾಲಿ ಶೇಕಡ ೩, (೬) ಆರೋಗ್ಯ ಸಮಿತಿ ಸದಸ್ಯರಾಗಿ ಹಿಂದೆ ಯಾರು ಪ್ರಾತಿನಿಧ್ಯ ಪಡೆದಿರಲಿಲ್ಲ. ಹಾಲಿ ಶೇಕಡ ೧, (೨) ಮಾತ್ರ ಇದೆ. ವಸತಿ ಸಮಿತಿಯಲ್ಲಿ ಹಿಂದೆ ಶೇಕಡ ೧.೫ (೩) ಹಾಲಿ ಶೇಕಡ ೨.೫, (೫) ನೈರ್ಮಲ್ಯ ಸಮಿತಿಯಲ್ಲಿ ಹಿಂದೆ ಶೇಕಡ ೨ (೪) ಹಾಲಿ ಶೇಕಡ ೦.೫ (೧) ಮತ್ತು ಜಾತಿ ಸಂಘಟನೆಗಳಲ್ಲಿ ಹಿಂದೆ ಶೇಕಡ ೧೫ (೩೦) ಪ್ರಸ್ತುತ ಶೇಕಡ ೪.೫ (೯) ರಷ್ಟು ಪ್ರಾತಿನಿಧ್ಯ ಪಡೆದಿದ್ದಾರೆ.

೫.೨ ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

ಆರ್ಥಿಕ ಸಂಘಟನೆಗಳಾದ – ಜಂಟಿ ಅರಣ್ಯ ಸಮಿತಿ, ಉತ್ಪಾದನಾ ಸಮಿತಿ, ಮಾರುಕಟ್ಟೆ ಸಮಿತಿ, ಮತ್ತು ಸ್ವಸಹಾಯ ಸಂಘಟನೆಗಳಲ್ಲಿ ಭೋವಿ ಸಮುದಾಯದವರು ಸದಸ್ಯರಾಗಿ, ಪದಾಧಿಕಾರಿಗಳಾಗಿ ಪಾಲ್ಗೊಂಡಿದ್ದಾರೆ. ಮತ್ತು ಅವರು ಮಾಹಿತಿಯನ್ನು ಯಾವ ರೀತಿಯಲ್ಲಿ ಬಳಕೆ ಮಾಡಿಕೊಂಡು ರಾಜಕೀಯ ಅರಿವನ್ನು ಪಡೆದುಕೊಂಡು ತಮ್ಮ ಪ್ರಕ್ರಿಯೆಯನ್ನು ಮುಂದುವರಿಸಿದ್ದಾರೆ ಎನ್ನುವ ವಿವರಗಳನ್ನು ನೋಡುವುದಾದರೆ.

ಶೇಕಡ ೨೩ (೪೬) ಕುಟುಂಬಗಳಿಗೆ ಆರ್ಥಿಕತೆಯನ್ನು ವೃದ್ಧಿಸುವಲ್ಲಿ ಕೆಲವು ಸಂಘಟನೆಗಳು ನೆರವಾಗಿವೆ. ಶೇಕಡ ೭೭ (೧೬೪) ಕುಟುಂಬಗಳಿಗೆ ಯಾವುದೆ ಸಂಘಟನೆಗಳು ತಮ್ಮ ಪರವಾಗಿಲ್ಲದಿರುವುದನ್ನು ಗಮನಿಸಬಹುದಾಗಿದೆ. ಸೌಲಭ್ಯ ಪಡೆದ ಶೇಕಡ ೨೩ ಕುಟುಂಬಗಳನ್ನು ವಿಂಗಡಿಸಿದಾಗ, ಶೇಕಡ ೧೪.೫ (೨೯) ಸ್ವಸಹಾಯ ಗುಂಪುಗಳಿಂದ, ಶೇಕಡ ೮.೫ (೧೭) ಭೋವಿ ಸಮುದಾಯದ ಯುವಕ/ ಯುವತಿಯರ ಸಂಘಟನೆಗಳಿಂದ ಅವರ ಹಣದ ಅವಶ್ಯಕತೆಗಳನ್ನು ಸಾಲ ಸೌಲಭ್ಯಗಳನ್ನು ಪಡೆಯುವುದರ ಮೂಲಕ ತಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳುತ್ತಾರೆ ಮತ್ತು ಸಂಘಟನೆಗಳ ಮಾಹಿತಿ ವಿವರಗಳನ್ನು ಮಾಪನ ಮಾಡಿದಾಗ, ಜಂಟಿ ಅರಣ್ಯ ಸಮಿತಿ ಬಗ್ಗೆ ಶೇಕಡ ೪ (೮) ಕುಟುಂಬಗಳಿಗೆ ಮಾಹಿತಿ ಇದೆ, ಶೇಕಡ ೧೬ (೩೨) ಕುಟುಂಬಗಳಿಗೆ ಯಾವುದೇ ರೀತಿಯ ಮಾಹಿತಿ ಇಲ್ಲ. ಉತ್ಪಾದನಾ ಸಮಿತಿ ಬಗ್ಗೆ ಶೇಕಡ ೧೨ (೨೪) ಕುಟುಂಬಗಳಿಗೆ ಮಾಹಿತಿ ಇದೆ. ಶೇಕಡ ೧೨ (೨೪) ಕುಟುಂಬಗಳಿಗೆ ಮಾಹಿತಿ ಇಲ್ಲ. ಸ್ವಸಹಾಯ ಸಂಘಗಳ ಬಗ್ಗೆ ಶೇಕಡ ೩೭ (೭೪) ಕುಟುಂಬಗಳಿಗೆ ಮಾಹಿತಿ ಇದೆ ಮತ್ತು ಮಾರುಕಟ್ಟೆ ಸಮಿತಿ ಬಗ್ಗೆ ಶೇಕಡ ೬ (೧೨)ಕುಟುಂಬಗಳಿಗೆ ಮಾತ್ರ ಮಾಹಿತಿ ಇರುವುದು ಕಂಡುಬರುತ್ತದೆ.

ಜಂಟಿ ಅರಣ್ಯ ಸಮಿತಿಯಲ್ಲಿ ಅಧ್ಯಕ್ಷರಾಗಿ ಹಿಂದೆ ಶೇಕಡ ೨ (೪) ಹಾಲಿ ೧.೫ (೩) ಉಪಾಧ್ಯಕ್ಷರಾಗಿ ಹಿಂದೆ ಶೇಕಡ ೨.೫ (೫) ಹಾಲಿ ೧ (೨) ಸದಸ್ಯರಾಗಿ ಹಿಂದೆ ಶೇಕಡ ೪ (೮) ಹಾಲಿ ಶೇಕಡ ೯ (೧೮) ಇದ್ದಾರೆ ಉತ್ಪದನಾ ಸಮಿತಿಯಲ್ಲಿ ಅಧ್ಯಕ್ಷರಾಗಿ ಹಿಂದೆ ಶೇಕಡ ೨ (೪) ಹಾಲಿ ಶೇಕಡ ೦.೫ (೧) ಉಪಾಧ್ಯಕ್ಷರಾಗಿ ಹಿಂದೆ ಶೇಕಡ ೩ (೬) ಪ್ರಸ್ತುತ ಯಾರು ಸಹ ಉಪಾಧ್ಯಕ್ಷರಾಗಿ ಮುಂದುವರೆಯುತ್ತಿರುವುದು ಎಲ್ಲಿಯು ಕಂಡುಬಂದಿಲ್ಲ. ಸದಸ್ಯರಾಗಿ ಹಿಂದೆ ಶೇಕಡ ೧೪% (೨೮) ಹಾಲಿ ಶೇಕಡ ೬ (೧೨) ಸ್ವಸಹಾಯ ಸಂಘದ ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷರಾಗಿ ಹಿಂದೆ ಆಗಲಿ ಪ್ರಸ್ತುತವಾಗಿ ಯಾರು ಸಹ ಇಲ್ಲದಿರುವುದು ತಿಳಿಯುತ್ತದೆ. ಆದರೆ ಸದಸ್ಯರಾಗಿ ಹಿಂದೆ ಶೇಕಡ ೧೫.೫ (೩೧) ಹಾಲಿ ಶೇಕಡ ೨೧.೫ (೪೩) ರಷ್ಟು ಇರುವುದನ್ನು ನೋಡಬಹುದು. ಕೊನೆಯದಾಗಿ ಮಾರುಕಟ್ಟೆ ಸಮಿತಿಯಲ್ಲಿ ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷರಾಗಿಯು ಯಾರು ಸಹ ಇಲ್ಲ. ಆದರೆ ಸದಸ್ಯರಾಗಿ ಹಿಂದೆ ೬ (೧೨) ಇದ್ದು ಪ್ರಸ್ತುತ ಮಾತ್ರ ಯಾರು ಸಹ ಇಲ್ಲದೆ ಇರುವುದು ತಿಳಿಯುತ್ತದೆ.

ಕೋಷ್ಟಕ – ೫.೧ ಸಾಮಾಜಿಕ ಮತ್ತು ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದವರ ಆಸಕ್ತಿಯ ವಿವರಗಳು

ಕ್ರಸಂ	ಸಾಮಾಜಿಕ ಮತ್ತು ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದವರ ಆಸಕ್ತಿಯ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಗ್ರಾಮಗಳು				ಒಟ್ಟು	ಮೊಳಕಾಲ್ಮೂರು ತಾಲ್ಲೂಕಿನ ಗ್ರಾಮಗಳು				ಒಟ್ಟು	ಕುಟುಂಬಗಳು	ಶೇಕಡ
		ಬೋರೆನ ಹಳ್ಳಿ	ರಾಮೇನ ಹಳ್ಳಿ	ಕಣವಿ ಜೋಗಹಳ್ಳಿ	ಮಾರುತಿಹಳ್ಳಿ		ಸಿದ್ದಯ್ಯನ ಕೋಟೆ	ಆಯಂತಿ ನಗರ	ಚಿಕ್ಕೇರಹಳ್ಳಿ	ನಾಗಸಮುದ್ರ			
೧	ಎಸ್.ಡಿ.ಎಮ್.ಸಿ	೦	೨	೦	೧	೨	೨	೨	೨	೦	೬	೮	೪
೨	ನೀರಿನ ಸಮಿತಿ	೦	೨	೧	೦	೩	೩	೩	೨	೧	೯	೧೨	೬
೩	ಆರ್ಯೋಗ್ಯ ಸಮಿತಿ	೦	೨	೨	೧	೫	೨	೨	೩	೧	೮	೧೩	೬.೫
೪	ವಸತಿ ಸಮಿತಿ	೧	೨	೧	೦	೪	೩	೨	೩	೧	೯	೧೩	೬.೫
೫	ನೈರ್ಮಲ್ಯ ಸಮಿತಿ	೧	೦	೧	೦	೨	೦	೦	೦	೧	೧	೩	೧.೫
೬	ಜಾತಿ ಸಂಘಟನೆ	೧	೧	೪	೩	೯	೨	೩	೨	೧	೮	೧೭	೮.೫
೭	ಜಂಟಿ ಅರಣ್ಯ ಸಮಿತಿ	೦	೦	೦	೦	೦	೦	೦	೦	೦	೦	೦	೦
೮	ಉತ್ಪಾದನಾ ಸಮಿತಿ	೧	೧	೫	೧	೮	೩	೪	೫	೫	೧೭	೨೫	೧೨.೫
೯	ಸ್ವ ಸಹಾಯ ಸಂಘ	೨೧	೧೫	೧೦	೨೦	೬೬	೧೦	೯	೮	೧೫	೪೨	೧೦೮	೫೪
೧೦	ಮಾರುಕಟ್ಟೆ ಸಮಿತಿ	೦	೦	೦	೦	೦	೦	೦	೦	೦	೦	೦	೦
		೨೫	೨೫	೨೫	೨೫	೧೦೦	೨೫	೨೫	೨೫	೨೫	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರ ಕಾರ್ಯ ಆಧಾರಿತ, ೨೦೧೯ಕೋಷ್ಟಕ ೫.೧ರಲ್ಲಿ ಉಲ್ಲೇಖ ಮಾಡಿರುವಂತೆ ಸಾಮಾಜಿಕ ಮತ್ತು ಆರ್ಥಿಕವಾಗಿ ಇರುವ ಸಂಘಟನೆಗಳಲ್ಲಿ ಭೋವಿ ಸಮುದಾಯದವರು ಆಸಕ್ತಿಯಿಂದ ಬಳಕೆ ಮಾಡಿಕೊಂಡಿರುವ ವಿವರಗಳು ಈ ರೀತಿ ಇವೆ. ಸಾಮಾಜಿಕವಾಗಿ ಎಸ್.ಡಿ.ಎಂ.ಸಿಯಲ್ಲಿ ಶೇಕಡ ೪ (೮) ನೀರಿನ ಸಮಿತಿ ಶೇಕಡ ೬ (೧೨) ಆರೋಗ್ಯ ಸಮಿತಿ ೬.೫ (೧೩) ವಸತಿ ಸಮಿತಿ ಶೇಕಡ ೬.೫೫ (೧೩) ನೈರ್ಮಲ್ಯ ಸಮಿತಿ ಶೇಕಡ ೧.೫ (೩) ಮತ್ತು ಜಾತಿ ಸಂಘಟನೆಯಲ್ಲಿ ಶೇಕಡ ೮.೫ (೧೭) ಆರ್ಥಿಕವಾಗಿ– ಜಂಟಿ ಅರಣ್ಯ ಸಮಿತಿಯಲ್ಲಿ ಶೂನ್ಯ ಯಾರು ಇಲ್ಲ. ಉತ್ಪಾದನಾ ಸಮಿತಿಯಲ್ಲಿ ಶೇಕಡ ೧೨.೫ (೨೫) ಮಾರುಕಟ್ಟೆ ಸಮಿತಿಯಲ್ಲಿಯು ಸಹ ಸಮುದಾಯಕ್ಕೆ ಯಾವುದೇ ರೀತಿಯ ಆಸಕ್ತಿ ಇಲ್ಲ. ಆದರೆ ಸ್ವಸಹಾಯ ಸಂಘಟನೆಯಲ್ಲಿ ಶೇಕಡ ೫೪ (೧೦೮) ಕುಟುಂಬಗಳಿಗೆ ಆಸಕ್ತಿ ಇದ್ದು, ಮೇಲಿನ ಎಲ್ಲಾ ಸಂಘಟನೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿದೆ. ಯಾಕೆಂದರೆ ಶೇಕಡ ೨೧ (೪೨) ಸ್ವಸಹಾಯ ಸಂಘದಿಂದ ಹಣದ ಉಳಿತಾಯ ಮಾಡಬಹುದು. ಶೇಕಡ ೩೩ (೬೬) ರಷ್ಟು ಜನತೆಗೆ ಕಷ್ಟಕಾಲದಲ್ಲಿ ಹಣದ ಸಮಸ್ಯೆ ಎದುರಾದಾಗ ಸಾಲದ ರೂಪದಲ್ಲಿ ಸದುಪಯೋಗ ಪಡಿಸಿಕೊಳ್ಳಬಹುದು ಕಡಿಮೆ ಬಡ್ಡಿಯಲ್ಲಿ ಮತ್ತು ಸಂಘಟನೆಗಳ ಬಗ್ಗೆ ಮಾಹಿತಿಯನ್ನು ಶೇಕಡ ೮೫ (೧೭೦) ಕುಟುಂಬಗಳು ಸ್ನೇಹಿತರು, ಪತ್ರಿಕೆಗಳು, ಟಿವಿ ಮಾಧ್ಯಮಗಳಿಂದ ಮಾಹಿತಿಯನ್ನು ಪಡೆದರೆ ಶೇಕಡ ೧೫ (೩೦) ಕುಟುಂಬಗಳು ತಮ್ಮ ಸಂಬಂಧಿಕರಿಂದ ಸದಸ್ಯತ್ವ ಮತ್ತು ಸಬ್ಸಿಡಿ ರೂಪದಲ್ಲಿ ಸಾಲ ಪಡೆಯುವ ವಿವರಗಳನ್ನು ತಿಳಿದುಕೊಳ್ಳುತ್ತಾರೆ.

ಸಂಘಟನೆಗಳಿಂದ ಸಮುದಾಯದ ಜನತೆಗೆ ಏನು ಲಾಭವೆಂದರೆ ಶೇಕಡ ೩೪ (೬೮) ಕುಟುಂಬಗಳಿಗೆ ಸಮಸ್ಯೆಗಳ ಬಗ್ಗೆ ಚರ್ಚಿಸಬಹುದು. ಶೇಕಡ ೩೦.೫ (೬೧) ತೊಂದರೆಗಳು ಉಂಟಾದಾಗ ಸಂಘದ ಸದಸ್ಯರು ಮತ್ತು ಪದಾಧಿಕಾರಿಗಳು ನೆರವಿಗೆ ಬಂದು ಹೋರಾಟದ ಮೂಲಕ ನ್ಯಾಯ ಕೊಡಿಸುತ್ತಾರೆ. ಶೇಕಡ ೩೫.೫ (೭೧) ಕುಟುಂಬಗಳಿಗೆ ಸಂಘಟನೆಗಳಿಂದ ಸದಸ್ಯತ್ವ ಪಡೆದರೆ ಸರ್ಕಾರದಿಂದ ಸಬ್ಸಿಡಿ ರೂಪದಲ್ಲಿ ಸಾಲ ಸೌಲಭ್ಯವನ್ನು ಪಡೆಯಲು ಅನುಕೂಲವಾಗುತ್ತದೆ. ಆದರೆ ಸಂಘಟನೆಗಳ ಉಪಯೋಗವನ್ನು ಶೇಕಡ ೩೩.೫ (೬೭) ಕುಟುಂಬಗಳು ಆಯಾ ಸಂದರ್ಭ ನೋಡಿ ಶೇಕಡ ೨೭ (೫೪) ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಸಂದರ್ಭ ಬಂದಾಗ, ಸದಸ್ಯರೊಂದಿಗೆ ಚರ್ಚಿಸುತ್ತಾರೆ. ಹೋರಾಟ ಮಾಡುವ ಮನೋಭಾವವನ್ನು ಬೆಳಸಿಕೊಳ್ಳುವುದು ಶೇಕಡ ೩೯.೫ (೭೯) ಸರ್ಕಾರಿ ಸೌಲಭ್ಯಗಳನ್ನು ಸರಿಯಾದ ಸಮಯಕ್ಕೆ ಪಡೆಯಲು ಆಗದೆ ಇದ್ದಾಗ, ಸಂಘಟನೆಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಿಕೊಂಡು ಲಾಭ ಪಡೆಯುತ್ತಾರೆ.

ಭೋವಿ ಸಮುದಾಯದ ಸಂಘಟನೆಗಳಿಗೆ ಸ್ಥಳೀಯ ರಾಜಕೀಯ ನಾಯಕರ ಸಂಪರ್ಕ ಮತ್ತು ಬೆಂಬಲದ ವಿವರಗಳನ್ನು ನೋಡುವುದಾದರೆ. ಶೇಕಡ ೨೩.೫ (೪೭) ಉತ್ತಮವಾಗಿ, ಶೇಕಡ ೨೩ (೪೬) ಸಾಧಾರಣ, ಶೇಕಡ ೩೬ (೭೨) ಪರವಾಗಿಲ್ಲ ಸ್ವಲ್ಪ ಮಟ್ಟದಲ್ಲಿ ಕೈ ಜೋಡಿಸಿ ಬೆಂಬಲ ವ್ಯಕ್ತಪಡಿಸಿ ಸಂಪರ್ಕದಲ್ಲಿ ಇದ್ದಾರೆ. ಶೇಕಡ ೧೭.೫ (೩೫) ರಷ್ಟು ಕುಟುಂಬಗಳಿಗೆ ಯಾವ ರಾಜಕೀಯ ವ್ಯಕ್ತಿಯ ಬೆಂಬಲವಿಲ್ಲ. ಸ್ಥಳಿಯ ರಾಜಕೀಯ ವ್ಯಕ್ತಿಯಿಂದ ಎಂ.ಎಲ್.ಎ ಮತ್ತು ಎಂ.ಪಿ. ಗಳಿಂದ ಸಮುದಾಯಕ್ಕೆ ಶೇಕಡ ೩೧ (೬೨) ಚಿಕ್ಕಪುಟ್ಟ ಸೌಲಭ್ಯಗಳು ನೆರವು ದೊರಕಿದೆ ಉಳಿದ ಶೇಕಡ ೬೯ (೧೩೮) ಕುಟುಂಬಗಳಿಗೆ ಯಾವುದೇ ನೆರವು ದೊರಕಿಲ್ಲ. ಶೇಕಡ ೩೧ ದೊರಕಿದ ಸೌಲಭ್ಯಗಳೆಂದರೆ, ಶೇಕಡ ೨೫ (೫೦) ಕುಟುಂಬಗಳಿಗೆ ರಸ್ತೆ, ವಸತಿ, ದೇವಸ್ಥಾನ ನಿರ್ಮಾಣ, ಮಾಡಿದರೆ ಸಮುದಾಯದ ಅಭಿವೃದ್ಧಿಗಾಗಿ ದೇವಸ್ಥಾನ ಕಟ್ಟಡಗಳನ್ನು ನಿರ್ಮಾಣ ಮಾಡಲು ಶೇಕಡ ೬ (೧೨) ನಾಗಸಮುದ್ರ ಗ್ರಾಮದ ಸಮುದಾಯದ ಕೆರಿಗೆ ಆರ್ಥಿಕ ಸಹಾಯವನ್ನು ಒದಗಿಸಿಕೊಟ್ಟಿದ್ದಾರೆ.

೫.೩ ರಾಜಕೀಯ ಸಂಘಟನೆಗಳಲ್ಲಿ ಭೋವಿ ಸಮುದಾಯ

ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಹಾಗೂ ವಿಧಾನಸಭೆ, ಲೋಕಸಭೆ ಇತರೆ ರಾಜಕೀಯ ಮತ್ತು ರಾಜಕೀಯೇತರ ಸಂಘಟನೆಗಳಲ್ಲಿ ಭೋವಿ ಸಮುದಾಯದವರು ಸದಸ್ಯ, ಪದಾಧಿಕಾರಿಗಳಾಗಿ ಪಾಲ್ಗೊಗೊಂಡಿದ್ದಾರೆ ಮತ್ತು ಎಷ್ಟು ಪ್ರಮಾಣದಲ್ಲಿ ಮಾಹಿತಿಯ ಅರಿವನ್ನು ಬಳಕೆ ಮಾಡಿಕೊಂಡು ರಾಜಕೀಯ ಲಾಭವನ್ನು ಪಡೆದು ತಮ್ಮ ಪ್ರಕ್ರಿಯೆಯನ್ನು ಮುಂದುವರಿಸಿದ್ದಾರೆ ಎನ್ನುವುದು ಈ ಭಾಗದಲ್ಲಿ ಚರ್ಚಿಸಲಾಗುವುದು. ಮೊದಲನೆಯದಾಗಿ ಸಮುದಾಯದ ಜನತೆ ಯಾವ ರಾಜಕೀಯ ಪಕ್ಷಗಳ ಪರ ಬೆಂಬಲ ಸೂಚಿಸುತ್ತಾರೆ ಎನ್ನುವುದು ಕೆಳಗಿನ ಕೊಷ್ಟಕದ ಮೂಲಕ ತಿಳಿಯಬಹುದು.

ಕೋಷ್ಟಕ – ೫.೨ ಭೋವಿ ಸಮುದಾಯದವರು ಬೆಂಬಲಿಸುವ ರಾಜಕೀಯ ಪಕ್ಷದ ವಿವರಗಳು

ಕ್ರಸಂ	ಭೋವಿ ಸಮುದಾಯದವರು ಬೆಂಬಲಿಸುವ ರಾಜಕೀಯ ಪಕ್ಷದ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಗ್ರಾಮಗಳು				ಒಟ್ಟು	ಮೊಳಕಾಲ್ಮೂರು ತಾಲ್ಲೂಕಿನ ಗ್ರಾಮಗಳು				ಒಟ್ಟು	ಕುಟುಂಬಗಳು	ಶೇಕಡ
		ಬೋರೆನಹಳ್ಳಿ	ರಾಮೇನಹಳ್ಳಿ	ಕಣಿವೆ ಜೋಗಿಹಳ್ಳಿ	ಮಾರುತಿಹಳ್ಳಿ		ಸಿದ್ದಯ್ಯನಕೋಟೆ	ಜಯಂತಿ ನಗರ	ಚಿಕ್ಕೇರಹಳ್ಳಿ	ನಾಗಸಮುದ್ರ			
೧	ಕಾಂಗ್ರೆಸ್	೨	೨	೦	೦	೪	೫	೨	೭	೭	೨೧	೨೫	೧೨.೫
೨	ಬಿಜೆಪಿ	೨೩	೨೧	೨೫	೨೫	೯೪	೨೦	೨೩	೧೮	೧೮	೭೯	೧೩	೮೬.೫
೩	ವ್ಯಕ್ತಿ ನೋಡಿ	೦	೨	೦	೦	೨	೦	೦	೦	೦	೦	೨	೧
	ಒಟ್ಟು	೨೫	೨೫	೨೫	೨೫	೧೦೦	೨೫	೨೫	೨೫	೨೫	೧೦೦	೨೦೦	೧೦೦
	ಭೋವಿ ಸಮುದಾಯದವರ ಕುಟುಂಬಗಳು ನಿರ್ಧಿಷ್ಟ ರಾಜಕೀಯ ಪಕ್ಷವನ್ನು ಯಾಕೆ ಬೆಂಬಲಿಸುವರೆಂದರೆ												
೧	ಅದು ಕೆಲಸ ಮಾಡುತ್ತದೆ	೦	೧	೦	೦	೧	೧೦	೧೪	೧೧	೧೨	೪೭	೪೮	೨೪
೨	ಸಾಂಪ್ರದಾಯಿಕವಾಗಿ	೧೮	೧೫	೧೫	೧೫	೬೩	೧೦	೯	೭	೬	೩೨	೯೫	೪೭.೫
೩	ಜಾತಿಹಿನ್ನೆಲೆ	೫	೫	೧೦	೧೦	೩೦	೦	೦	೦	೦	೦	೩೦	೧೫
	ಒಟ್ಟು	೨೩	೨೧	೨೫	೨೫	೯೪	೨೦	೨೩	೧೮	೧೮	೭೯	೧೩	೮೬.೫

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ ೨೦೧೯.

ಕೋಷ್ಟಕ ೫.೨ ರಲ್ಲಿರುವಂತೆ ಭೋವಿ ಸಮುದಾಯದವರು ಕ್ಷೇತ್ರಕಾರ್ಯದಿಂದ ಬಂದಂತಹ ಮಾಹಿತಿ ಪ್ರಕಾರ ೨೦೦೮ರ ವಿಧಾನಸಭೆ ಚುನಾವಣೆಯ ಫಲಿತಾಂಶದಿಂದ ಪ್ರಸ್ತುತ ದಿನಗಳವರೆಗೆ ಶೇಕಡ ೧೨.೫ (೨೫) ಕಾಂಗ್ರೆಸ್, ಶೇಕಡ ೮೬.೫ (೧೭೩) ಬಿಜೆಪಿ, ಶೇಕಡ ೧ (೨) ಇತರೆ ವ್ಯಕ್ತಿಯನ್ನು ನೋಡಿ ಮತ ಹಾಕುತ್ತಾರೆ ಎಂದು ಅಧ್ಯಯನದಿಂದ ತಿಳಿಯುತ್ತದೆ. ಆದರೆ ಈ ಫಲಿತವನ್ನು ಗಮನಿಸಿ ಅವಲೋಕನ ಮಾಡಿ, ಹತ್ತು ವರ್ಷಗಳಿಂದ ಹಿಡಿದು ಹದಿನೈದು ವರ್ಷಗಳ ಹಿಂದೆ ಶೇಕಡ ೮೯ ರಷ್ಟು ಕಾಂಗ್ರೆಸ್ ಪಕ್ಷವನ್ನು ಮತ್ತು ಉಳಿದ ಶೇಕಡ ೧೧ ಬಿಜೆಪಿ ಪಕ್ಷವನ್ನು ಬೆಂಬಲಿಸುತ್ತಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ. ಪ್ರಸ್ತುತ ದಿನಗಳಲ್ಲಿ ಯಾಕೆ ನಿರ್ದಿಷ್ಟ ಪಕ್ಷವನ್ನು ಬೆಂಬಲಿಸುತ್ತಾರೆ ಎಂದರೆ. ಶೇಕಡ ೨೪ (೪೮) ಅದು ಕೆಲಸ ಮಾಡುತ್ತದೆ ಮತ್ತು ಸಮುದಾಯದ ಜನತೆಗೆ ರಾಜಕೀಯದಲ್ಲಿ ಭಾಗವಹಿಸಿ ಅಧಿಕಾರ ಸ್ಥಾನಮಾನ ಪಡೆಯಲು ಅವಕಾಶ ಮಾಡಿಕೊಡುತ್ತದೆ. ಶೇಕಡ ೪೭ (೯೫) ಸಾಂಪ್ರಾದಾಯಿಕವಾಗಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷವನ್ನು ಬೆಂಬಲಿಸುತ್ತಾರೆ. ನಮಗೆ ಮುಂದಿನ ದಿನಗಳಲ್ಲಿ ಆ ಪಕ್ಷದಲ್ಲಿ ಅವಕಾಶಗಳು ಸಿಗಬಹುದು ಎನ್ನುವ ನಿರೀಕ್ಷೆಯಲ್ಲಿ ಅವರಂತೆ ಉಳಿದವರು ಸಹ ಬೆಂಬಲಿಸುತ್ತ ನಡೆಯುತ್ತಾರೆ. ಶೇಕಡ ೧೫ (೩೦) ಹೊಳಲ್ಕೆರೆ ತಾಲ್ಲೂಕಿನ ಜನತೆ ತಮ್ಮ ಸಮುದಾಯದ ಎಂ.ಎಲ್.ಎ ಪಕ್ಷದಲ್ಲಿರುವುದರಿಂದ ಜಾತಿ ಹಿನ್ನಲೆ ದೃಷ್ಟಿಯಿಂದ ೧೫-೨೦ ವರ್ಷಗಳಿಂದ ಅವರ ಪರವಾಗಿ ಕೆಲಸ ಮಾಡುತ್ತ ಬಂದಿದ್ದಾರೆ.

ಅಭಿವೃದ್ಧಿ ದೃಷ್ಟಿಯಿಂದ ಮೇಲಿನ ಪಕ್ಷಗಳಲ್ಲಿ ಅಧಿಕಾರಕ್ಕೆ ಬಂದರೆ, ತಳದಲ್ಲಿರುವ ಸಮುದಾಯಗಳಿಗೆ ಒಳಿತಾಗುತ್ತದೆ ಎಂದರೆ? ಶೇಕಡ ೧೩.೫ (೨೭) ಕಾಂಗ್ರೆಸ್, ಶೇಕಡ ೮೫.೫ (೧೭೧) ಬಿಜೆಪಿ ಎಂದರೆ ಉಳಿದ ಶೇಕಡ ೧ (೨) ಕುಟುಂಬಗಳು ಯಾರು ಬಂದರೇನು ಬಿಟ್ಟರೇನು ಬಿಸಿಲು ಮಳೆಯಲ್ಲಿ ಕಲ್ಲು ಹೊಡೆಯುವುದು ನಮಗೆ ನಮ್ಮ ಮಕ್ಕಳಿಗೆ ತಪ್ಪಿದಲ್ಲ ಮತ್ತು ಅವರು ನಮ್ಮನ್ನ ಅಭಿವೃದ್ಧಿ ಮಾಡುವುದು ಕನಸಿನ ಮಾತು ಎಂದು ಉತ್ತರಿಸುತ್ತಾರೆ. ಸಮುದಾಯದ ಕುಟುಂಬದ ಸದಸ್ಯರು ಚುನಾವಣಾ ಪ್ರಚಾರದಲ್ಲಿ ಶೇಕಡ ೪೩.೫ (೮೭) ಭಾಗವಹಿಸುತ್ತಾರೆ. ಶೇಕಡ ೫೬.೫% (೧೧೩) ಕುಟುಂಬಗಳು ಯಾವುದೇ ರಾಜಕೀಯ ಪಕ್ಷಗಳ ಪರವಾಗಿ ಹೋಗಿ ಪ್ರಚಾರ ಮಾಡುವುದಿಲ್ಲ. ಆದರೆ ಮತದಾನ ಮಾತ್ರ ಎಲ್ಲರು ಮಾಡುತ್ತಾರೆ. ಶೇಕಡ ೪೩.೫ ರಷ್ಟು ಪಕ್ಷದ ಕಾರ್ಯಕರ್ತರಾಗಿ ಕೆಲಸ ಮಾಡುತ್ತಾರೆ. ಅದರಲ್ಲಿ ಶೇಕಡ ೨೬.೫ (೫೩) ಪುರುಷರು ಭಾಗವಹಿಸಿ ಪ್ರಚಾರದಲ್ಲಿ ತೊಡಗಿದರೆ, ಶೇಕಡ ೧೦ (೨೦) ಮಹಿಳೆಯರು, ಉಳಿದ ಶೇಕಡ ೭ (೧೪) ಪುರುಷರು ಮತ್ತು ಮಹಿಳೆ ಸೇರಿದಂತೆ, ಇತರೆ ಸದಸ್ಯರೆಲ್ಲ ಸೇರಿ ಪ್ರಚಾರ ಮಾಡುತ್ತ ಇರುವುದು ಕಂಡುಬರುತ್ತದೆ. ನಾನು ಕ್ಷೇತ್ರಕಾರ್ಯ ಮಾಡುವ ಸಮಯದಲ್ಲಿ

೨೦೧೮ರ ವಿಧಾನಸಭೆ ಮತ್ತು ೨೦೧೯ರ ಲೋಕಸಭೆ ಚುನಾವಣೆಗಳು ಸಮೀಪ ಇರುವ ಕಾರಣದಿಂದ ಚುನಾವಣೆ ಆಯೋಗ ಮತದಾರರ ಪಟ್ಟಿಯನ್ನು ಪರಿಷ್ಕರಿಸಿ ವಯಸ್ಕರಿಗೆಲ್ಲ ಮತದಾನದ ನೋಂದಣಿ ಕಾರ್ಯ ಮಾಡಿರುವುದರಿಂದ, ಸ್ಥಳಿಯ ಸಂಸ್ಥೆಗಳ ಚುನಾವಣೆಯಿಂದ ಹಿಡಿದು ವಿಧಾನಸಭೆ, ಲೋಕಸಭೆ ಮತ್ತು ಇತರ ಎಲ್ಲಾ ಚುನಾವಣೆಗಳಲ್ಲಿ ನಾವು ತಪ್ಪದೆ ಮತದಾನ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ. ಮತ್ತು ಚುನಾಹಿತರಾದ ಸದಸ್ಯರ ಬಗ್ಗೆ ಸಮುದಾಯದ ಜನತೆಗೆ ಎಷ್ಟು ಪ್ರಮಾಣದಲ್ಲಿ ಮಾಹಿತಿ ಇದೆ ಎನ್ನುವುದು ಕೆಳಕಂಡ ಕೋಷ್ಟಕದಿಂದ ತಿಳಿಯಬಹುದಾಗಿದೆ.

ಕೋಷ್ಟಕ – ೫.೩ ಚುನಾಯಿತರಾದ ಸದಸ್ಯರ ಬಗ್ಗೆ ಭೋವಿ ಸಮುದಾಯದ ಕುಟುಂಬಗಳಿಗೆ ಇರುವ ಅರಿವು

ಕ್ರಸಂ	ಚುನಾಯಿತರಾದ ಸದಸ್ಯರ ಬಗ್ಗೆ ಭೋವಿ ಸಮುದಾಯದ ಕುಟುಂಬಗಳಿಗೆ ಇರುವ ಅರಿವು		ಹೊಳಲ್ಕೆರೆ ತಾಲ್ಲೂಕಿನ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಗ್ರಾಮ ಪಂಚಾಯತಿ ಸದಸ್ಯರು	ಗೊತ್ತಿದೆ	೧೦೦	೧೦೦	೨೦೦	೧೦೦
		ಗೊತ್ತಿಲ್ಲ	೦	೦	೦	೦
೨	ತಾಲ್ಲೂಕು ಪಂಚಾಯತಿ ಸದಸ್ಯರು	ಗೊತ್ತಿದೆ	೨೮	೬೭	೯೫	೪೭.೫
		ಗೊತ್ತಿಲ್ಲ	೭೨	೩೩	೧೦೫	೫೨.೫
೩	ಜಿಲ್ಲಾ ಪಂಚಾಯತಿ ಸದಸ್ಯರು	ಗೊತ್ತಿದೆ	೧೧	೮೬	೯೭	೪೮.೫
		ಗೊತ್ತಿಲ್ಲ	೫೯	೧೪	೭೩	೩೬.೫
೪	ಎಂಎಲ್.ಎ/ಎಂ.ಪಿ	ಗೊತ್ತಿದೆ	೧೦೦	೯೦	೧೯೦	೯೫
		ಗೊತ್ತಿಲ್ಲ	೦	೧೦	೧೦	೫

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೫.೩ ರಲ್ಲಿರುವಂತೆ ಸ್ಥಳಿಯ ಸಂಸ್ಥೆಗಳಿಂದ ಹಿಡಿದು ಎಂಎಲ್ಎ ಮತ್ತು ಎಂಪಿಯಾಗಿ ಆಯ್ಕೆಯಾದವರು ಯಾರೆಂದು ನಿಮಗೆ ಗೊತ್ತಿದೆಯೇ? ಎನ್ನುವ ಪ್ರಶ್ನೆಗೆ ಕೆಳಕಂಡಂತೆ ಉತ್ತರಿಸುತ್ತಾರೆ. ಶೇಕಡ ೧೦೦ (೨೦೦) ಕುಟುಂಬಗಳಿಗೆ ಸ್ಥಳಿಯ ಸಂಸ್ಥೆಗಳಲ್ಲಿ ಒಂದಾದ ಗ್ರಾಮಪಂಚಾಯತಿಗೆ ತಮ್ಮ ವಾರ್ಡ/ಗ್ರಾಮದಿಂದ ಆಯ್ಕೆಯಾದವರ ಬಗ್ಗೆ ಮಾಹಿತಿ ಮತ್ತು ಅರಿವು ಇದೆ. ಆದರೆ ತಾಲ್ಲೂಕು ಪಂಚಾಯಿತಿಗೆ ಆಯ್ಕೆಯಾದವರ ಬಗ್ಗೆ ಶೇಕಡ ೪೭.೫ (೯೫) ಕುಟುಂಬಗಳಿಗೆ ಮಾಹಿತಿ ಮತ್ತು ಅರಿವು ಇದೆ. ಶೇಕಡ ೫೨.೨ (೧೦೫) ಕುಟುಂಬಗಳಿಗೆ ಗೊತ್ತಿರುವುದಿಲ್ಲ. ಅದೇ ರೀತಿ ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾದವರ ಬಗ್ಗೆ ಅರಿವು ಮತ್ತು

ಮಾಹಿತಿ ಶೇಕಡ ೪೮.೫ (೯೭) ಕುಟುಂಬಗಳಿಗೆ ಗೊತ್ತಿದ್ದರೆ, ಶೇಕಡ ೩೬. (೭೩) ಕುಟುಂಬಗಳಿಗೆ ಗೊತ್ತಿರುವುದಿಲ್ಲ ಮತ್ತು ವಿಧಾನಸಭೆ ಮತ್ತು ಲೋಕಸಭೆಗೆ ಆಯ್ಕೆಯಾದ ಎಂಎಲ್ಎ ಮತ್ತು ಎಂಪಿ ಯಾರೆಂದು ಶೇಕಡ ೯೫ (೧೯೦) ಕುಟುಂಬಗಳಿಗೆ ಗೊತ್ತಿದೆ. ಉಳಿದ ಶೇಕಡ ೫ (೧೦) ಕುಟುಂಬಗಳಿಗೆ ತಮ್ಮ ಕ್ಷೇತ್ರದ ಎಂಎಲ್ಎ ಮತ್ತು ಎಂಪಿ ಯಾರೆಂದು ತಿಳಿದಿರುವುದಿಲ್ಲ. ಮೇಲಿನ ಚುನಾಹಿತ ಸಂಸ್ಥೆಗಳಿಗೆ ಆಯ್ಕೆಯಾದ ಜನಪ್ರತಿನಿಧಿಗಳು ಸಮುದಾಯದ ಸಂಪರ್ಕಕ್ಕೆ ಶೇಕಡ ೮೫.೫ (೧೭೧) ದೊರಕಿದರೆ ಶೇಕಡ ೧೪.೫ (೨೯) ಕುಟುಂಬಗಳಿಗೆ ಯಾವುದೇ ರೀತಿಯ ಸಂಪರ್ಕದಲ್ಲಿರುವುದಿಲ್ಲ. ಚುನಾಯಿತನಾದ ನಂತರ, ಜನಪ್ರತಿನಿಧಿಗಳು ವಾರ್ಡ/ಕ್ಷೇತ್ರಕ್ಕೆ ಶೇಕಡ ೭೭.೫ (೧೫೫) ಕುಟುಂಬಗಳು ಭೇಟಿ ನೀಡಿದ್ದಾರೆ. ಎಂದರೆ ಶೇಕಡ ೨೨.೫ (೪೫) ಕುಟುಂಬಗಳು ಯಾವುದೇ ರೀತಿಯ ನೆಪದಲ್ಲಿ ನಮ್ಮ ವಾರ್ಡಗೆ ಆಗಲಿ ಅಥವಾ ಊರಿಗೆ ಆಗಲಿ ಬಂದಿಲ್ಲ ಎನ್ನುತ್ತಾರೆ. ಆದರೆ ಉಳಿದ ಶೇಕಡ ೭೭.೫ ಬೇಟಿ ನೀಡಿದ್ದಾರೆ ಯಾವ ಸಮಯದಲ್ಲಿ ಎಂದರೆ – ಶೇಕಡ ೬ (೧೨) ದಿನ, ಶೇಕಡ ೩೬ (೭೨) ವಾರಕ್ಕೊಮ್ಮೆ ಶೇಕಡ ೧೮.೫ (೩೭) ತಿಂಗಳಿಗೊಮ್ಮೆ, ಶೇಕಡ ೯ (೧೮) ವರ್ಷಕ್ಕೆ ಒಂದರಿಂದ ಎರಡು ಬಾರಿ, ಶೇಕಡ ೬.೫ (೧೩) ಚುನಾವಣೆ ಸಮೀಪಿಸಿದಾಗ ಮಾತ್ರ ಹಾಗೆ ಬಂದು ಹೀಗೆ ಹೋಗಿಬಿಡುತ್ತಾರೆ. ಶೇಕಡ ೧ (೨) ಆಯ್ಕೆಯಾದ ನಂತರದಿಂದ ಪ್ರಸ್ತುತದ ವರೆಗೂ ಯಾರು ಒಮ್ಮೆಯು ಬಂದಿಲ್ಲ ಎನ್ನುವ ಮಾಹಿತಿ ತಿಳಿದುಬರುತ್ತದೆ.

ಜನಪ್ರತಿನಿಧಿಗಳು ಗೆದ್ದ ನಂತರ, ಮಾಡಿದ ಕೆಲಸಗಳು ಶೇಕಡ ೨೫.೫ (೫೧) ರಸ್ತೆ, ಶೇಕಡ ೨೦ (೪೦)ವಸತಿ, ಶೇಕಡ ೧೦.೫ (೨೧)ದೇವಸ್ಥಾನಗಳ ನಿರ್ಮಾಣ, ಶೇಕಡ ೭ (೧೪) ಚರಂಡಿ ಮತ್ತು ನೈರ್ಮಲ್ಯ, ಶೇಕಡ ೬.೫ (೧೩) ಶಾಲೆಕಟ್ಟಡ ಮತ್ತು ಕಂಪೋಂಡ್ ನಿರ್ಮಾಣ, ಶೇಕಡ ೭.೫ (೧೫) ಸಮುದಾಯಗಳ ಅಭಿವೃದ್ಧಿ, ಶೇಕಡ ೩೫(೬) ಸಬ್ಸಿಡಿ ರೂಪದಲ್ಲಿ ಸಾಲ ಸೌಲಭ್ಯ ಕಡಿಮೆ ಬಡ್ಡಿಯಲ್ಲಿ, ಉಳಿದ ಶೇಕಡ ೧೮ (೩೬) ಕುಟುಂಬಗಳಿಗೆ ಯಾವುದೇ ಚುನಾಯಿತರಾದ ಸದಸ್ಯರು ಕೆಲಸಕಾರ್ಯಗಳನ್ನು ಮಾಡಿಸದೇ ಇರುವುದು ತಿಳಿಯುತ್ತದೆ. ಭೋವಿ ಸಮುದಾಯದ ಕುಟುಂಬಗಳು ಹಿಂದೆ ಮತ್ತು ಹಾಲಿ ಸೇರಿ ಗ್ರಾಮ, ತಾಲ್ಲೂಕು, ಮತ್ತು ಜಿಲ್ಲಾ ಪಂಚಾಯಿತಿಗೆ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಹಾಗೂ ಸದಸ್ಯರಾದವರ ಪ್ರಮಾಣ ಶೇಕಡ ೨೬ (೫೨)ರಷ್ಟು, ಆದರೆ ಉಳಿದ ಶೇಕಡ ೭೪ (೧೪೮) ಕುಟುಂಬಗಳು ಮೇಲಿನ ಸ್ಥಳಿಯ ಸಂಸ್ಥೆಗಳಲ್ಲಿ ಯಾವುದೇ ರೀತಿಯ ಅಧಿಕಾರ ಪಡೆದಿಲ್ಲದಿರುವುದು ಕೆಳಕಂಡ ಕೋಷ್ಟಕದಿಂದ ತಿಳಿಯಬಹುದು.

ಕೋಷ್ಟಕ ೫.೪ ಸ್ಥಳಿಯ ಸಂಸ್ಥೆಗಳಲ್ಲಿ ಭೋವಿ ಸಮುದಾಯದವರು ಅಧಿಕಾರ ಪಡೆದ ವಿವರಗಳು

ಕ್ರಸಂ	ಸ್ಥಳೀಯ ಸಂಸ್ಥೆಗಳಲ್ಲಿ ಭೋವಿ ಸಮುದಾಯದವರು ಅಧಿಕಾರ ಪಡೆದ ವಿವರಗಳು			ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಒಟ್ಟು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಒಟ್ಟು	ಕುಟುಂಬಗಳು	ಶೇಕಡ
				ಬೋರನಹಳ್ಳಿ	ರಾಮೇನಹಳ್ಳಿ	ಕಣಿವೆ ಜೋಗಿಹಳ್ಳಿ	ಮಾರುತಿಹಳ್ಳಿ		ಸಿದ್ದಯ್ಯನಕೋಟೆ	ಜಯಂತಿ ನಗರ	ಚಿಕ್ಕೇರಹಳ್ಳಿ	ನಾಗಸಮುದ್ರ			
೧	ಗ್ರಾಮ ಪಂಚಾಯಿತಿ	ಅಧ್ಯಕ್ಷರು	ಹಿಂದೆ	೧	೧	೧	೦	೩	೨	೦	೧	೨	೫	೮	೪
			ಹಾಲಿ	೦	೦	೦	೦	೦	೦	೧	೦	೧	೨	೨	೧
		ಉಪಾಧ್ಯಕ್ಷರು	ಹಿಂದೆ	೦	೦	೦	೦	೦	೧	೧	೧	೧	೪	೪	೨
			ಹಾಲಿ	೧	೦	೩	೦	೪	೦	೦	೦	೦	೦	೪	೨
		ಸದಸ್ಯರು	ಹಿಂದೆ	೩	೫	೧	೦	೯	೩	೨	೩	೪	೧೨	೨೧	೧೦.೫
			ಹಾಲಿ	೦	೦	೦	೦	೦	೧	೧	೨	೨	೬	೬	೩
೨	ತಾಲ್ಲೂಕು ಪಂಚಾಯಿತಿ	ಅಧ್ಯಕ್ಷರು	ಹಿಂದೆ	೦	೦	೦	೦	೦	೨	೦	೦	೦	೨	೨	೧
			ಹಾಲಿ	೦	೦	೦	೦	೦	೦	೦	೦	೦	೦	೦	೦
		ಸದಸ್ಯರು	ಹಿಂದೆ	೧	೨	೦	೦	೩	೦	೦	೦	೦	೧	೪	೨
			ಹಾಲಿ	೦	೦	೦	೦	೦	೦	೦	೧	೦	೧	೧	೦.೫
೩	ಜಿಲ್ಲಾ ಪಂಚಾಯಿತಿ	ಅ./ ಉ./ಸ.	ಹಿಂದೆ	೦	೦	೦	೦	೦	೦	೦	೧	೦	೦	೦	೦
			ಹಾಲಿ	೦	೦	೦	೦	೦	೦	೦	೦	೦	೦	೦	೦
	ಒಟ್ಟು			೬	೮	೫	೦	೧೯	೯	೫	೯	೧೦	೩೩	೫೨	೨೬

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.ಕೋಷ್ಟಕ ೫.೪ ರಲ್ಲಿ ಉಲ್ಲೇಖವಾದಂತೆ. ಸ್ಥಳಿಯ ಸಂಸ್ಥೆಗಳಲ್ಲಿ ಶೇಕಡ ೨೬ ಅಧಿಕಾರ ಸ್ಥಾನಮಾನ ಪಡೆದವರಲ್ಲಿ

ಗ್ರಾಮಪಂಚಾಯತಿ ಅಧ್ಯಕ್ಷರಾಗಿ ಹಿಂದೆ ಶೇಕಡ ೪(೮) ಹಾಲಿ ಶೇಕಡ ೧ (೨) ಉಪಾಧ್ಯಕ್ಷರಾಗಿ ಹಿಂದೆ ಶೇಕಡ ೨ (೪) ಹಾಳಿ ಶೇಕಡ ೨(೪)ಇದ್ದಾರೆ. ಸದಸ್ಯರಾಗಿ ಹಿಂದೆ ಶೇಕಡ ೧೦.೫(೨೧) ಹಾಲಿ ಶೇಕಡ ೩(೬) ರಷ್ಟು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿ ಹಿಂದೆ ಶೇಕಡ ೧(೨) ಇದ್ದರೆ ಪ್ರಸ್ತುತ ಯಾರು ಇಲ್ಲ, ಹಾಗೂ ಉಪಾಧ್ಯಕ್ಷರಾಗಿ ಹಿಂದೆ ಮತ್ತು ಹಾಲಿ ಯಾರು ಆಗಿಲ್ಲದಿರುವುದನ್ನು ನೋಡಬಹುದು. ಸದಸ್ಯರಾಗಿ ಹಿಂದೆ ಶೇಕಡ ೨ (೪) ಪ್ರಸ್ತುತ ೦.೫ (೧) ಪ್ರತಿನಿಧಿಗಳು ಇದ್ದಾರೆ. ಜಿಲ್ಲಾಪಂಚಾಯಿತಿ ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷರಾಗಿ ಹಾಗೂ ಸದಸ್ಯರಾಗಿ ಹಿಂದೆ ಮತ್ತು ಹಾಲಿ ಯಾರು ಸಹ ಗುರುತಿಸಿಕೊಂಡಿಲ್ಲದಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. ಸಮುದಾಯದ ಕುಟುಂಬಗಳು ಮತದಾನದ ಹಕ್ಕುನ್ನು ಪಡೆದವರ ವಿವರಗಳನ್ನು ಸಂಖ್ಯೆಗಳ ರೂಪದಲ್ಲಿ, ತಮ್ಮ ಮನೆಗಳಲ್ಲಿ ಒಂದು ಮತ ಇರುವ ಕುಟುಂಬಗಳು, ಶೇಕಡ ೧ (೨) ಶೇಕಡ ೩೨ (೬೪) ಎರಡು ಮತ, ಶೇಕಡ ೧೮.೫ (೩೭) ಮೂರು ಮತ, ಶೇಕಡ ೨೮ (೫೬) ನಾಲ್ಕುಮತ, ೧೩.೫ (೨೭) ಐದುಮತ, ಶೇಕಡ ೫ (೧೦) ಆರುಮತ ಇರುವವರು ಇದ್ದರೆ ಕೊನೆಯದಾಗಿ ಏಳು ಮತ ಇರುವ ಕುಟುಂಬಗಳು ಶೇಕಡ ೨ (೪) ಇದ್ದು. ಭೋವಿ ಸಮುದಾಯದ ಮನೆಗಳಲ್ಲಿ ಶೇಕಡ ೩೨ ರಷ್ಟು ಎರಡು ಮತಗಳು ಇರುವ ವಿಭಕ್ತ ಕುಟುಂಬಗಳೇ ಹೆಚ್ಚಾಗಿರುವುದು ತಿಳಿಯುತ್ತದೆ.

೧೮ ವರ್ಷದ ಮೇಲ್ಪಟ್ಟವರು ಮತದಾನದ ಹಕ್ಕು ನೋಂದಣಿ ಮಾಡಿಸದೇ ಇರುವರು ಯಾರು ಇಲ್ಲ. ಎಲ್ಲರೂ ಸಹ ನೋಂದಣಿ ಮಾಡಿಸಿ, ತಮ್ಮ ಹಕ್ಕನ್ನು ಚಲಾಹಿಸಿದ್ದಾರೆ. ಭೋವಿ ಸಮುದಾಯದವರ ಪ್ರಸ್ತುತ ತಾವುಗಳು ವಾಸಮಾಡುತ್ತಿರುವ ಹಳ್ಳಿಗಳಲ್ಲಿ, ಎಷ್ಟು ವರ್ಷಗಳಿಂದ ವಾಸವಿದ್ದಾರೆ ಎನ್ನುವ ಮಾಹಿತಿಯನ್ನು ಸಂಗ್ರಹಿಸಿದಾಗ, ಅವರಿಂದ ಬಂದ ಉತ್ತರ ಬೋರೆನಹಳ್ಳಿ, ರಾಮೇನಹಳ್ಳಿ, ಕಣವಿಜೋಗಹಳ್ಳಿ, ಮಾರುತಿಹಳ್ಳಿ, ಮತ್ತು ಸಿದ್ದಯ್ಯನಕೋಟೆ, ಜಯಂತಿನಗರ, ಚಿಕ್ಕೇರಹಳ್ಳಿ, ಹಾಗೂ ನಾಗಸಮುದ್ರ ಹಳ್ಳಿಗಳಲ್ಲಿ ಸೇರಿ ಒಟ್ಟು ಶೇಕಡ ೩ (೬) ಐದುವರ್ಷ, ಶೇಕಡ ೨೧.೫ (೪೩) ಹತ್ತು ವರ್ಷ, ಶೇಕಡ ೧೫.೫ (೩೧) ಇಪ್ಪತ್ತು ವರ್ಷದಿಂದ ವಾಸಮಾಡುತ್ತಿದ್ದಾರೆ. ಶೇಕಡ ೬೦ (೧೨೦) ಕುಟುಂಬಗಳು ಹುಟ್ಟಿನಿಂದ ತಮ್ಮ ಹಳ್ಳಿಗಳಲ್ಲಿಯೇ ವಾಸಮಾಡುತ್ತ ತಮ್ಮ ಹಳ್ಳಿಗಳಲ್ಲಿ ಕೆಲಸದ ಬೇಡಿಕೆ ಕಮ್ಮಿಯಾದಾಗ ವಾರ ಅಥಾವ ತಿಂಗಳು, ಪಟ್ಟಣಕ್ಕೆ ಕೆಲಸ ಹರಸಿ ವಲಸೆ ಹೋಗಿ ಬರುತ್ತಾರೆ. ಆದರೆ ಮುಖ್ಯವಾಗಿ ಮಾರುತಿಹಳ್ಳಿಯಲ್ಲಿ ವಾಸಮಾಡುತ್ತ ಇರುವ ೨೫ ಕುಟುಂಬಗಳನ್ನು ಅಧ್ಯಯನ ಮಾಡಿದಾಗ ತಿಳಿದ ವಿಷಯವೇನೆಂದರೆ ಹತ್ತು ವರ್ಷಗಳಿಂದ ಅರಣ್ಯಾ ಪ್ರದೇಶದ ಸರ್ಕಾರಿ ಗೋಮಾಳದಲ್ಲಿ ವಾಸಮಾಡುತ್ತಿದ್ದಾರೆ. ಇದ್ದರೆ ಇವರಿಗೆ ಮುಖ್ಯವಾಗಿ ಬೇಕಾದ ಮೂಲಭೂತ ಸೌಲಭ್ಯಗಳೇ ಮರಿಚಿಕೆಯಾಗಿರುವುದನ್ನು ಕೆಳಗಿನ ಕೊಷ್ಟಕದ ಮೂಲಕ ತಿಳಿಯಬಹುದು.

ಕೋಷ್ಟಕ ೫.೫ ಪಂಚಾಯಿತಿ ಮಟ್ಟದಲ್ಲಿ ಭೋವಿ ಸಮುದಾಯದವರು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳ ವಿವರಗಳು

ಕ್ರ.ಸಂ	ಪಂಚಾಯಿತಿ ಮಟ್ಟದಲ್ಲಿ ಭೋವಿ ಸಮುದಾಯದವರು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬ ಗಳು	ಶೇಕಡ
೧	ಶಿಕ್ಷಣ	೫	೧೯	೨೪	೧೨
೨	ವಸತಿ	೧೬	೧೫	೩೧	೧೫.೫
೩	ರಸ್ತೆ	೮	೨೩	೩೧	೧೫.೫
೪	ಕುಡಿಯುವ ನೀರು	೨೩	೧೭	೪೦	೨೦
೫	ನೈರ್ಮಲ್ಯ	೧೧	೧೩	೨೪	೧೨
೬	ಆರ್‍ೋಗ್ಯ	೧೦	೧೦	೨೦	೧೦
೭	ಎಲ್ಲಾವು	೨೭	೩	೩೦	೧೫
	ಒಟ್ಟು	೧೦೦	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೫.೫ ರಲ್ಲಿರುವಂತೆ ತಮ್ಮ ಪಂಚಾಯಿತಿಗಳಲ್ಲಿ ಸಮುದಾಯದವರು ಮೂಲಭೂತವಾಗಿ ಬೇಕಾಗಿರುವ, ಮೇಲಿನ ಸಮಸ್ಯೆಗಳಲ್ಲಿ ಶಿಕ್ಷಣ, ಶೇಕಡ ೧೨ (೨೪), ಶೇಕಡ ೧೫.೫ (೩೧) ವಸತಿ, ಶೇಕಡ ೧೫.೫ (೩೧) ರಸ್ತೆ, ಶೇಕಡ ೨೦ (೪೦) ಕುಡಿಯುವ ನೀರು, ಶೇಕಡ ೧೨ (೨೪) ನೈರ್ಮಲ್ಯದ ಸಮಸ್ಯೆ ಇದ್ದರೆ, ಆರೋಗ್ಯದ ಸಮಸ್ಯೆಗಳನ್ನು ಶೇಕಡ ೧೦ (೨೦) ರಷ್ಟು ಎದುರಿಸಿದರೆ, ಮೇಲಿನ ಎಲ್ಲಾ ಸಮಸ್ಯೆಗಳನ್ನು ಶೇಕಡ ೧೫ (೩೦) ಕುಟುಂಬಗಳು ಎದುರಿಸುತ್ತಿರುವುದು ತಿಳಿಯುತ್ತದೆ. ಮೇಲೆ ಇರುವಂತಹ ಎಲ್ಲಾ ಸಮಸ್ಯೆಗಳನ್ನು ಮಾರುತಿಹಳ್ಳಿಯ ಕುಟುಂಬಗಳು ಎದುರಿಸುತ್ತ ಇರುವುದು ತಿಳಿಯುತ್ತದೆ. ಆದ್ದರಿಂದ ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತೇವೆ ಎನ್ನುತ್ತಾರೆ. ಯಾಕೆಂದರೆ ಇದಕ್ಕೆಲ್ಲ ಪರಿಹಾರ ಕಂಡುಕೊಳ್ಳಬೇಕಾದರೆ ಚುನಾವಣೆಗೆ ನಿಲ್ಲಬೇಕು. ಆದ್ದರಿಂದ ಮುಂದೆ ಬರುವ ಸ್ಥಳೀಯ ಸಂಸ್ಥೆಗಳ ಚನಾವಣೆಯಲ್ಲಿ ಶೇಕಡ ೫೨.೫ (೧೦೫) ಕುಟುಂಬಗಳು ಅವಕಾಶ ಸಿಕ್ಕರೆ, ಚುನಾವಣೆಗೆ ಸ್ಪರ್ಧಿಸುತ್ತೇವೆ ಎನ್ನುತ್ತಾರೆ. ಉಳಿದ ಶೇಕಡ ೪೭.೫ ಕುಟುಂಬಗಳು ನಮಗೆ ಹೊಟ್ಟೆಗೆ ಬಟ್ಟೆಗೆ ಸಿಕ್ಕರೆ ಸಾಕು ಯಾವ ಚುನಾವಣೆ ಸಹವಾಸ ನಮಗೆ ಬೇಡ ಎಂದು ಉತ್ತರಿಸುತ್ತಾರೆ. ಚುನಾವಣೆಗೆ ಸ್ಪರ್ಧಿಸುವ ಶೇಕಡ ೫೨.೫ರಷ್ಟು ಕುಟುಂಬಗಳು ಯಾವ ಚುನಾವಣೆಯಲ್ಲಿ ಸ್ಪರ್ಧೆಮಾಡಲು ಇಚ್ಛಿಸಿದ್ದಾರೆ ಎನ್ನುವುದು ಕೆಳಕಂಡ ಕೊಷ್ಟಕವನ್ನು ಗಮನಿಸಬಹುದು.

ಕೋಷ್ಟಕ ೫.೬ ಭೋವಿ ಸಮುದಾಯದವರು ಮುಂದಿನ ಚುನಾವಣೆಗಳಲ್ಲಿ ಸ್ಪರ್ಧೆ ಮಾಡುವ ವಿವರಗಳು

ಕ್ರಸಂ	ಭೋವಿ ಸಮುದಾಯದವರು ಮುಂದಿನ ಚುನಾವಣೆಗಳಲ್ಲಿ ಸ್ಪರ್ಧೆ ಮಾಡುವ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬ ಗಳು	ಶೇಕಡ
೧	ಗ್ರಾಮ ಪಂಚಾಯಿತಿ	೨೮	೪೭	೭೫	೩೭.೫
೨	ತಾಲ್ಲೂಕು ಪಂಚಾಯಿತಿ	೯	೧೧	೨೦	೧೦
೩	ಜಿಲ್ಲಾ ಪಂಚಾಯಿತಿ	೩	೭	೧೦	೫
೪	ವಿಧಾನಸಭೆ	೦	೦	೦	೦
೫	ಲೋಕಸಭೆ	೦	೦	೦	೦
೬	ಇತರೆ	೦	೦	೦	೦
	ಒಟ್ಟು	೪೦	೬೫	೧೦೫	೫೨.೫

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೫.೬ ರಲ್ಲಿರುವಂತೆ ಭೋವಿ ಸಮುದಾಯದವರು ಮುಂದೆ ಬರುವ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಶೇಕಡ ೩೭.೫ (೭೫) ಕುಟುಂಬಗಳು ಅವಕಾಶ ದೊರಕಿದರೆ, ಚುನಾವಣೆಗೆ ಸ್ಪರ್ಧೆಮಾಡುತ್ತಾರೆ. ಮತ್ತು ತಾಲ್ಲೂಕು ಪಂಚಾಯಿತಿಗೆ ಶೇಕಡ ೧೦ (೨೦), ಉಳಿದ ಶೇಕಡ ೫ (೧೦) ಕುಟುಂಬಗಳು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧೆಮಾಡಬೇಕೆಂದುಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ಜೊತೆಗೆ ಅಧ್ಯಯನ ಕೈಗೊಂಡ ಹಳ್ಳಿಗಳಲ್ಲಿ ಸ್ಥಳಿಯ ಸಂಸ್ಥೆಗಳ ಕಡೆ ಒತ್ತು ಇರುವಷ್ಟು ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಬೇಕೆಂದು ಇದ್ದೇನೆ. ಎಂದು ಯಾರು ಸಹ ಒಲವು ತೋರಿಸುವುದಿಲ್ಲ. ಯಾಕೆಂದರೆ ಅಷ್ಟೊಂದು ಶಕ್ತಿ ನಮಗೆ ಇಲ್ಲವೆಂದು ವ್ಯಕ್ತಪಡಿಸುತ್ತಾರೆ.

ಮೇಲೆ ವಿವರಿಸಿದಂತೆ ಶೇಕಡ ೭(೧೪) ಕಾಂಗ್ರೆಸ್ ಪಕ್ಷದಿಂದ, ಶೇಕಡ ೪೪ (೮೯) ಬಿಜೆಪಿ, ಪಕ್ಷದಿಂದ ಮುಂದಿನ ದಿನಗಳಲ್ಲಿ ಸ್ಪರ್ಧೆಮಾಡುತ್ತೇವೆ ಎಂದು ಉತ್ತರಿಸುತ್ತಾರೆ. ಉಳಿದ ಶೇಕಡ ೧ (೨) ಇತರೆ ಯಾವುದೆ ಪಕ್ಷಗಳು ಬೆಂಬಲ ಕೊಟ್ಟರೆ ಸಾಕು, ನಾವು ಕಣದಲ್ಲಿರುತ್ತೇವೆ. ಶೇಕಡ ೪೪.೫ ರಷ್ಟು ಜನತೆ ನಿರ್ದಿಷ್ಟ ಪಕ್ಷಕ್ಕೆ ಯಾಕೆ ಬೆಂಬಲ ಕೊಡುತ್ತಾರೆ ಎಂದು ಮಾಪನ ಮಾಡಿದಾಗ, ಶೇಕಡ ೨೯ (೫೮) ಸಮುದಾಯದ ಹೆಚ್ಚಿನ ಜನ ಬೆಂಬಲಕೊಡುವ ಪಕ್ಷ, ಮತ್ತು ಹೊಳಲ್ಕೆರೆ ತಾಲ್ಲೂಕಿನ ಗ್ರಾಮಗಳಲ್ಲಿ ಶೇಕಡ ೧೨.೫ (೨೫) ಪಕ್ಷದಲ್ಲಿ ತಮ್ಮ ಸಮುದಾಯದ ಶಾಸಕರಾದ ಚಂದ್ರಪ್ಪನವರು ಇರುವ ಕಾರಣ, ಆ ಪಕ್ಷದ ಪರವಾಗಿ ಕೆಲಸ ಮಾಡುತ್ತಾರೆ. ಉಳಿದ ಶೇಕಡ ೩ (೬) ಸಾಂಪ್ರದಾಯಿಕವಾಗಿ ಪಕ್ಷದಲ್ಲಿ ಜಾವಾಬ್ದಾರಿ ಸ್ಥಾನ ಮಾನಗಳು

ಕೊಡುತ್ತಾರೆ ಮತ್ತು ಶೇಕಡ ೫೧(೧೦೨) ಇಂದು ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ಗೆಲ್ಲಬೇಕಾದರೆ ಅನುಭವ ಬೇಕು. ಶೇಕಡ ೪೯ (೯೮) ಯಾವುದೇ ರೀತಿಯ ಅನುಭವದ ಸಹಾಯವಿಲ್ಲದೆ ಗೆದ್ದವರು ಇದ್ದಾರೆ. ಗೆದ್ದನಂತರ ಅನುಭವ ತಾನಾಗಿಯೇ ಬರುತ್ತದೆ. ಶೇಕಡ ೫೧ ಅನುಭವ ಬೇಕೆಂದವರು ಕೆಳಕಂಡತೆ ಕಾರಣಗಳನ್ನು ಕೊಡುತ್ತಾರೆ. ಶೇಕಡ ೨೩.೫ (೪೭) ಅನುಭವ ಬೇಕೆ ಬೇಕು. ಅನುಭವವಿಲ್ಲದೆ ಹೋದರೆ ಮೋಸ ಹೋಗುತ್ತೇವೆ. ಅಷ್ಟು ಸುಲಭವಲ್ಲ ರಾಜಕೀಯ ಮಾಡುವುದೆಂದರೆ, ಶೇಕಡ ೨೧.೫ (೪೩) ಅಭಿವೃದ್ಧಿ ಕಾಮಗಾರಿಗಳು ಮಾಡಬೇಕಾದರೆ ಅನುಭವ ಇಲ್ಲದೆ ಇದ್ದರೆ ಪೂರಕ ಚಟುವಟಿಕೆಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಶೇಕಡ ೬ (೧೨) ಅಭಿವೃದ್ಧಿ ಕೆಲಸ ಮತ್ತು ಮೂಲಭೂತವಾಗಿ ಅವರಿಗೆ ಬೇಕಾದ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯ ಇತ್ಯಾದಿ ಕೆಲಸಗಳಿಗೆ ಬೇಕಾದ ಅಯ್ಯವಯವನ್ನು ಒದಗಿಸಲು ಅನುದಾನ ತರಲು ಆಗುವುದಿಲ್ಲ.

ಚುನಾವಣೆಯಲ್ಲಿ ಗೆಲ್ಲಬೇಕಾದರೆ ಅನುಭವ ಅವಶ್ಯಕತೆ ಇಲ್ಲವೆನ್ನುವರು ಕೆಳಕಂಡ ಕಾರಣಗಳನ್ನು ನೀಡಿದ್ದಾರೆ. ಶೇಕಡ ೨೫.೫ (೫೧) ಗೆದ್ದನಂತರ ಅನುಭವ ಅದೇ ಬರುತ್ತದೆ. ಶೇಕಡ ೧೮ (೩೬) ಹಿಂದೆ ಮತ್ತು ಪ್ರಸ್ತುತ ಚುನಾವಣೆಯಲ್ಲಿ ಆಯ್ಕೆಯಾದ ಕೆಲವು ಪ್ರತಿನಿಧಿಗಳು, ಅನುಭವವಿಲ್ಲದೆ ಅಧಿಕಾರ ಸ್ಥಾನಮಾನ ಪಡೆದಿರುವುದು ನಿತ್ಯ ಗಮನಿಸುತ್ತ ಇದ್ದೇವೆ. ಎಂದರೆ ಶೇಕಡ ೫.೫ (೧೧) ಕುಟುಂಬಗಳು ಹೇಳುತ್ತವೆ. ಹಿಂದೆ ಚುನಾವಣೆ ಗೆಲ್ಲಬೇಕಾದರೆ ಹಣಬಲ ಮತ್ತು ಜಾತಿ ಬಲವಿದ್ದರೆ ಸುಲಭವಾಗಿ ಗೆದ್ದು, ಅಧಿಕಾರ ಪಡೆಯಬಹುದು. ರಾಜಕೀಯಕ್ಕೆ ತರಬೇತಿ ಶೇಕಡ ೩೨ (೬೪) ಕುಟುಂಬಗಳಿಗೆ ಅವಶ್ಯಕತೆ ಇದ್ದರೆ, ಶೇಕಡ ೬೮ (೧೩೬) ಕುಟುಂಬಗಳಿಗೆ ಯಾವುದೇ ತರಬೇತಿ ಬೇಕಾಗಿಲ್ಲ ಅಧಿಕಾರ ಒಂದೇ ಸಿಕ್ಕರೆ ತರಬೇತಿ ಇಲ್ಲದೆ ಕಾರ್ಯನಿರ್ವಹಿಸಬಹುದು ಎಂದು ವಿವರಿಸುತ್ತಾರೆ. ಶೇಕಡ ೩೨ ಕುಟುಂಬಗಳು ತರಬೇತಿ ಬೇಕು ಎಂದು ಕಾರಣಗಳನ್ನು ಕೊಡುತ್ತಾರೆ. ಶೇಕಡ ೧೧.೫ (೨೩) ತರಬೇತಿ ಪಡೆದರೆ ತಪ್ಪುಗಳು ಕಡಿಮೆ ಆಗುತ್ತವೆ, ಅಭಿವೃದ್ಧಿ ಕೆಲಸಗಳನ್ನು ಮಾಡಬಹುದು.

ಶೇಕಡ ೧೦ (೨೦) ಜನರ ಅವಶ್ಯಕತೆಗಳನ್ನು ಪೂರೈಸಬೇಕಾದರೆ ತರಬೇತಿ ಅತ್ಯಂತ ಅವಶ್ಯಕತೆ. ಪ್ರಸ್ತುತ ದಿನಗಳಲ್ಲಿ ಶೇಕಡ ೧೦.೫ (೨೧) ತರಬೇತಿ ಪಡೆಯುವುದರಿಂದ ತಳದಲ್ಲಿರುವ ಸಮುದಾಯಗಳ ಅವಶ್ಯಕತೆಗಳನ್ನು ತಿಳಿದು ಅಭಿವೃದ್ಧಿ ಮಾಡಬಹುದು. ಶೇಕಡ ೬೮ ಕುಟುಂಬಗಳು ರಾಜಕೀಯಕ್ಕೆ ತರಬೇತಿ ಅವಶ್ಯಕತೆ ಇಲ್ಲವೆನ್ನುತ್ತಾರೆ. ಯಾಕೆಂದರೆ ಕಾರಣಗಳು ಈ ರೀತಿ ಇವೆ. ಶೇಕಡ ೨೬.೫ (೪೭) ನಮ್ಮ ಬುದ್ಧಿಮಟ್ಟಕ್ಕೆ ಅನುಗುಣವಾಗಿ ಹೊಂದಿಕೊಂಡು ರಾಜಕೀಯದಲ್ಲಿ ಮುಂದುವರಿಯಬಹುದು. ಶೇಕಡ ೧೩ (೨೬) ವಂಶಪಾರಂಪರಿಕವಾಗಿ ಒಬ್ಬರಿಂದ ಮತ್ತೊಬ್ಬರು ನೋಡಿ ಕಲಿಯುವುದು. ಶೇಕಡ ೨೮.೫ ಸ್ನೇಹಿತರ ಸಲಹೆಗಳನ್ನು ತೆಗೆದುಕೊಂಡು ಸಮಯಕ್ಕೆ ಅನುಗುಣವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಶಕ್ತಿ ಪಡೆದು ಕಾರ್ಯನಿರ್ವಹಿಸಬಹುದು.

ರಾಜಕೀಯಕ್ಕೆ ಶಿಕ್ಷಣ ಶೇಕಡ ೫೩ (೧೦೬) ಬೇಕು, ಶೇಕಡ ೪೭ (೯೪) ಶಿಕ್ಷಣ ಅವಶ್ಯಕತೆ ಇಲ್ಲ. ಶೇಕಡ ೫೩ ರಾಜಕೀಯಕ್ಕೆ ಶಿಕ್ಷಣ ಬೇಕು ಎನ್ನುತ್ತಾರೆ. ಯಾಕೆಂದರೆ ಶೇಕಡ ೧೨.೫ ಶಿಕ್ಷಣವಿದ್ದರೆ ಸಮಸ್ಯೆಗಳಿಗೆ ನಾವೇ ಪರಿಹಾರ ಕಂಡುಕೊಳ್ಳಬಹುದು. ಶೇಕಡ ೧೫ (೩೦) ಬರವಣಿಗೆ ಬರಿಯಲು ಮತ್ತು ಓದಲು ಗೊತ್ತಿದ್ದರೆ, ಅಧ್ಯಯನ ಮೂಲಕ ಸುಲಭವಾಗಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಶೇಕಡ ೧೭ (೩೪) ಶಿಕ್ಷಣವಿಲ್ಲದೆ ರಾಜಕೀಯ ಕೆಲಸಗಳನ್ನು ಮಾಡಲು ಹೋದಾಗ ಸಮಸ್ಯೆಗಳು ತಲೆದೂರಿದಾಗ ಪರಿಹಾರಕ್ಕೆ ಮತ್ತೊಬ್ಬರ ಬಳಿ ಸಲಹೆಗಳನ್ನು ಪಡೆದುಕೊಳ್ಳುವಷ್ಟರಲ್ಲಿ ಅಧಿಕಾರ ಕೈ ಜಾರಿ ಹೋಗುತ್ತದೆ. ಶೇಕಡ ೫೨ ರಾಜಕೀಯಕ್ಕೆ ಶಿಕ್ಷಣ ಅವಶ್ಯಕತೆ ಇಲ್ಲವೆನ್ನುತ್ತಾರೆ. ಯಾಕೆಂದರೆ ಶೇಕಡ ೨೨.೫ (೪೫) ಶಿಕ್ಷಣ ಇಲ್ಲದೆ ಅನಕ್ಷರಸ್ಥರೆ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರ ಪಡೆದು ಅಳ್ವಿಕೆ ಮಾಡಿದ ಉತ್ತಮ ಉದಾಹರಣೆಗಳು ಇವೆ. ಶೇಕಡ ೨೯.೫ ಅಕ್ಷರಸ್ಥರಿಗಿಂತ ಅನಕ್ಷರಸ್ಥರೆ ಹೆಚ್ಚು ರಾಜಕೀಯದಲ್ಲಿದ್ದಾರೆ ಎನ್ನುತ್ತಾರೆ.

೪.೪. ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ

ಸಾಂಸ್ಕೃತಿಕ ರಾಜಕಾರಣ ತಳ ಸಮುದಾಯಗಳ ಬಳಿ ಇಲ್ಲ ಅದು ಮೇಲ್ವರ್ಗದ ಪರವಾಗಿದೆ. ಯಾಕೆಂದರೆ ಬಡವರ ದೇವರು ಅವರ ಮನೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಸಾಂಸ್ಕೃತಿಕ ರಾಜಕೀಯ ಇಂದು ವ್ಯಕ್ತಿ/ಸಮುದಾಯಗಳು ಏನನ್ನು ಓದಬೇಕು, ನೋಡಬೇಕು, ಕೇಳಬೇಕು ಎನ್ನುವುದು ಸಾಂಸ್ಕೃತಿಕ ರಾಜಕೀಯದ ವ್ಯಾಪ್ತಿಗೆ ಬರುತ್ತದೆ. ನಮ್ಮ ಶಾಲೆಗಳು, ಸಾರ್ವಜನಿಕ ಕಛೇರಿಗಳು, ಸಾರ್ವಜನಿಕ ಸಭೆ, ಸಮಾರಂಭಗಳು ಬಹುತೇಕ ಸಂದರ್ಭದಲ್ಲಿ ನಾವೇನು ತಿನ್ನಬೇಕು, ಕುಡಿಯಬೇಕು, ಪೂಜಿಸಬೇಕು ಎನ್ನುವುದರ ಬಗ್ಗೆ ನೇರ ಮತ್ತು ಪರೋಕ್ಷ ತೀರ್ಮಾನಗಳನ್ನು ನೀಡುತ್ತಿವೆ. ಗೋಡೆಗಳಲ್ಲಿ, ಸಾರ್ವಜನಿಕ ಕಛೇರಿ ಗೋಡೆಗಳಲ್ಲಿ, ಎಲ್ಲಾ ಬಡಜನರ ದೇವರ ಪೋಟೋಗಳಿಲ್ಲ. ಬಡಜನರ ದೇವರು ಅವರ ಮನೆಗಳಿಗೆ ಸೀಮಿತ, ಹೆಚ್ಚೆಂದರೆ ಅವರ ಓಣಿಗಳಿಗೆ ಸೀಮಿತ. ತಳವರ್ಗದ ದೇವರು ಸಹ ಒಬ್ಬಂಟಿಗ. ಅವರ ಕಸುಬು, ಭಾಷೆ ಎಲ್ಲವು ಕೆಳಗಿನ ಸ್ಥಾನದಲ್ಲಿರುವಾಗ ಅವರು ಮೇಲೇರುವುದು ಹೇಗೆ? ಇದು ಸಾಂಸ್ಕೃತಿಕ ರಾಜಕೀಯದ ಅಡಿಪಾಯ. ಯಾವುದೇ ವ್ಯಕ್ತಿ ಸಮುದಾಯವನ್ನು ಬಲ ಪ್ರಯೋಗದಿಂದ ಹೆಚ್ಚು ಸಮಯ ತಮ್ಮ ಆದ್ಯತೆಗೆ ಅನುಗುಣವಾಗಿ ವರ್ತಿಸುವಂತೆ ಮಾಡುವುದು ಕಷ್ಟ ಹಾಗೂ ಸಾಹಿತ್ಯದಲ್ಲಿ ರಾಜಕೀಯ ಬೇಡ ಅಥವಾ ದೇವರ ವಿಷಯಲ್ಲಿ ರಾಜಕೀಯ ಬೇಡ. ಕುಟುಂಬ ಸಮುದಾಯವೊಂದರ ಬದುಕಿನಲ್ಲಿ ಇದಿಷ್ಟು ಸಂಸ್ಕೃತಿ, ಇದಿಷ್ಟು ಸಮಾಜ, ಇದಿಷ್ಟು ಅರ್ಥಿಕ, ಇದಿಷ್ಟು ರಾಜಕೀಯವೆಂದಿಲ್ಲ ಒಂದಕ್ಕೊಂದು ಸಂಬಂಧವಿದೆ. ಒಂದರಲ್ಲಿ ಆಗುವ ಬದಲಾವಣೆ ಮತ್ತೊಂದರಲ್ಲಿ ಬದಲಾವಣೆಗೆ ಅವಕಾಶ ಮಾಡಿಕೊಡುತ್ತದೆ. ಎಂದು ಸಾಂಸ್ಕೃತಿಕ ರಾಜಕರಣದ ವಿವಿಧ ಒಳ ಪರಿಭಾಷೆಗಳನ್ನು ಬಿಡಿಸಿದ್ದಾರೆ.

ಸಾಂಸ್ಕೃತಿಕವಾಗಿ ಇರುವ ಸಂಘಟನೆಗಳಾದ ಭಜನಾ ಮಂಡಳಿ ಮತ್ತು ದೇವಸ್ಥಾನ ಆಡಳಿತ ಮಂಡಳಿಗಳಲ್ಲಿ ಭೋವಿ ಸಮುದಾಯದವರು ಸದಸ್ಯರು, ಪದಾಧೀಕಾರಿಗಳಾಗಿ, ಪಾಲ್ಗೊಂಡು

ಮಾಹಿತಿಯನ್ನು ಪಡೆದು ಬಳಕೆ ಮಾಡಿಕೊಂಡು ರಾಜಕೀಯಕ್ಕೆ ಪ್ರವೇಶಪಡೆದು ತಮ್ಮ ಪ್ರಕ್ರಿಯೆ ಮುಂದುವರಿಸಿದ್ದಾರೆ ಎನ್ನುವುದು ಈ ಭಾಗದಲ್ಲಿ ವಿಶ್ಲೇಷಿಸಲಾಗುವುದು. ಭೋವಿ ಸಮುದಾಯಕ್ಕೆ ಸಾಂಸ್ಕೃತಿಕವಾಗಿ ಇರುವ ಸಂಘಟನೆಗಳ ಬಗ್ಗೆ ಶೇಕಡ ೩೫.೫ (೭೧) ಕುಟುಂಬಗಳಿಗೆ ಮಾಹಿತಿ ಇದೆ. ಶೇಕಡ ೬೪.೫ (೧೨೯) ಕುಟುಂಬಗಳಿಗೆ ಸಂಘಟನೆಗಳ ಬಗ್ಗೆ ಅರಿವು ಇರುವುದಿಲ್ಲ. ಸಂಘಟನೆಗಳ ವಿಚಾರಧಾರೆಗಳ ಮಾಹಿತಿಯನ್ನು ಪಡೆದ ಕುಟುಂಬಗಳ ವಿವರ ಕೆಳಕಂಡ ಕೊಷ್ಟಕದ ಮೂಲಕ ತಿಳಿಯಬಹುದು.

ಕೋಷ್ಟಕ ೫.೭ ಭೋವಿ ಸಮುದಾಯದವರು ಸಾಂಸ್ಕೃತಿಕ ಸಂಘಟನೆಗಳಲ್ಲಿ ಭಾಗವಹಿಸುಕೆಯ ವಿವರಗಳು

ಕ್ರಸಂ	ಭೋವಿ ಸಮುದಾಯದವರು ಸಾಂಸ್ಕೃತಿಕ ಸಂಘಟನೆಗಳಲ್ಲಿ ಭಾಗವಹಿಸುಕೆಯ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಭೋವಿ ಅಭಿವೃದ್ಧಿ ಕಟ್ಟಡ ಕಾರ್ಮಿಕರ ಸಂಘ	೨	೬	೮	೪
೨	ತಿರುಪತಿ ತಿಮ್ಮಪ್ಪ ಸಂಘ	೮	೨೭	೩೫	೧೭.೫
೩	ಪೆದ್ದಮ್ಮ ದೇವಿ ಸಂಘ	೫	೧೮	೨೩	೧೧.೫
೪	ಅಂಗಳ ದೇವರ ಸಂಘ	೦	೫	೫	೨.೫
	ಒಟ್ಟು	**೧೫**	**೫೬**	**೭೧**	**೩೫.೫**

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೫.೭ ರಲ್ಲಿ ಉಲ್ಲೇಖ ಮಾಡಿರುವಂತೆ ಭೋವಿ ಸಮುದಾಯದವರು ಸಾಂಸ್ಕೃತಿಕವಾಗಿ ತಮಗೆ ತಾವೇ ಮಾಡಿಕೊಂಡ ಭೋವಿ ಅಭಿವೃದ್ಧಿ ಕಾರ್ಮಿಕರ ಸಂಘ, ತಿರುಪತಿ ತಿಮ್ಮಪ್ಪ ಯುವಕರ/ ಯುವತಿಯರ ಸಂಘ ಪೆದ್ದಮ್ಮ ದೇವಿ ಸಂಘ, ಅಂಗಳದೇವರ ಸಂಘ ಎಂದು ವಿವರಿಸುತ್ತಾರೆ. ಎಷ್ಟು ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಗುರುತಿಸಿದ್ದಾರೆ. ಭೋವಿ ಅಭಿವೃದ್ಧಿ ಕಟ್ಟಡ ಕಾರ್ಮಿಕರ ಸಂಘ ಶೇಕಡ ೧೭.೫ (೩೫), ತಿರುಪತಿ ತಿಮ್ಮಪ್ಪ ಯುವಕ/ ಯುವತಿಯರ ಸಂಘ ೧೧.೫ (೨೩), ಪೆದ್ದಮ್ಮ ದೇವಿಸಂಘ ಶೇಕಡ ೨.೫ (೫) ರಷ್ಟು ಸಂಘಟನೆಗಳಲ್ಲಿ ಎಲ್ಲಾ ಗ್ರಾಮಗಳಲ್ಲಿ ಇದ್ದಾರೆ. ಶೇಕಡ ೨.೫ (೫) ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನಕೋಟೆ ಗ್ರಾಮದಲ್ಲಿ ಅಂಗಳ ದೇವರ ಸಂಘಟನೆಯನ್ನು ಮಾಡಿಕೊಂಡಿದ್ದಾರೆ. ಈ ಸಂಘಟನೆ ವಿಶೇಷವೆಂದರೆ, ವರ್ಷಕ್ಕೆ ಒಮ್ಮೆ ಜನವರಿ ತಿಂಗಳಲ್ಲಿ ಮಂಗಳವಾರದ ದಿನದಂದು ಸಭೆಸೇರಿ ಜಾತ್ರೆಮಾಡಿದ ನಂತರ, ಉಳಿದ ಹಣವನ್ನು ಶೇಖರಣೆ ಮಾಡಿ, ಆ ಹಣವನ್ನು ಅವಶ್ಯಕತೆ ಇರುವವರಿಗೆ ಕಡಿಮೆ ಬಡ್ಡಿ ದರದಲ್ಲಿ ಮುಂಚಿತವಾಗಿ ಬಡ್ಡಿಯನ್ನು ಮುರಿದುಕೊಂಡು (ಉದಾ ೧೦೦೦೦ ಸಾವಿರ ರೂಪಾಯಿಗಳನ್ನು ಸಾಲಪಡೆಯುವಾಗ ಇದರಲ್ಲಿ ೧೦೦ ನೂರು ರೂಪಾಯಿಗಳನ್ನು ಮುಂಚಿತವಾಗಿ ಕಡಿತಗೊಳಿಸಿ ೯೦೦ ಕೊಡುತ್ತಾರೆ ವರ್ಷದ ನಂತರ ಅಂದರೆ

ಮುಂದಿನ ಜನವರಿ ಮಂಗಳವಾರ ಅಂಗಳ ಜಾತ್ರೆಗೆ ೧೦೦೦ ಸಾವಿರ ರೂಪಾಯಿಗಳನ್ನು ಪಾವತಿಸಬೇಕು) ಸಾಲ ಕೊಡುವುದು. ಸಾಂಪ್ರದಾಯಿಕವಾಗಿ ಹಿಂದಿರುಗಿಸಲು ಬೆಳೆದುಕೊಂಡು ಬಂದಿದೆ. ಗ್ರಾಮದಲ್ಲಿ ಮತ್ತು ಸಂಘಟನೆಯಲ್ಲಿ ಸಾಲ ಪಡೆಯಬೇಕಾದರೆ ಕೆಲವು ನಿಯಮಗಳಿವೆ. ತಮ್ಮ ಕುಲ ಬಾಂದವರಾಗಿರಬೇಕು ಅಥಾವ ಸಂಬಂಧಿಕರಾಗಿರಬೇಕು ಇಲ್ಲವೆ ತಮ್ಮ ಊರಿನಲ್ಲಿ ಮದುವೆ ಆಗಿರಬೇಕು ಅಥಾವ ಹಿಂದಿನಿಂದಲು ಸದಸ್ಯತ್ವ ಪಡೆದ ಸಮುದಾಯದ ಪ್ರತಿನಿಧಿ ಅಥಾವ ಸಮುದಾಯದ ಪ್ರತಿನಿಧಿ ಮಕ್ಕಳಾಗಿರಬೇಕು. ಮತ್ತು ಮುಖ್ಯವಾಗಿ ಭಜನಾ ಮಂಡಳಿ, ದೇವಸ್ಥಾನದ ಆಡಳಿತ ಸಮಿತಿಯಲ್ಲಿ ಸಮುದಾಯದ ಅಧಿಕಾರ ಸ್ಥಾನ ಮಾನಗಳನ್ನು ಕೆಳಕಂಡ ಕೊಷ್ಟಕ ಮೂಲಕ ಗಮನಿಸಬಹುದು.

ಕೋಷ್ಟಕ ೫.೮ ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ ಸ್ಥಾನಮಾನ ಪಡೆದ ವಿವರಗಳು

ಕ್ರಸಂ	ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯ ಸ್ಥಾನಮಾನ ಪಡೆದ ವಿವರಗಳು			ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಭಜನಾ ಮಂಡಳಿ ಸಮಿತಿ	ಅಧ್ಯಕ್ಷರು	ಹಿಂದೆ	೪	೦	೪	೨
		ಸದಸ್ಯರು	ಹಿಂದೆ	೧೬	೧೮	೩೪	೧೭
			ಹಾಲಿ	೨	೩	೫	೨.೫
೨	ದೇವಸ್ಥಾನ ಆಡಳಿತ ಸಮಿತಿ	ಅಧ್ಯಕ್ಷರು	ಹಿಂದೆ	೨	೨	೪	೨
			ಹಾಲಿ	೦	೧	೧	೦.೫
		ಉಪಾಧ್ಯಕ್ಷರು	ಹಿಂದೆ	೧	೦	೧	೦.೫
			ಹಾಲಿ	೦	೦	೦	೦
		ಸದಸ್ಯರು	ಹಿಂದೆ	೧೮	೨೫	೪೩	೨೧.೫
			ಹಾಲಿ	೪	೪೪	೪೮	೨೪
	ಒಟ್ಟು			೪೭	೯೩	೧೪೦	೭೦

ಮಾಹಿತಿ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೫.೮ ರಲ್ಲಿ ಉಲ್ಲೇಖ ಮಾಡಿರುವಂತೆ, ಭೋವಿ ಸಮುದಾಯದ ಸಾಂಸ್ಕೃತಿಕ ಸಂಘಟನೆಗಳಲ್ಲಿ ಅಧಿಕಾರ ಸ್ಥಾನಮಾನಗಳು ಮೇಲಿನ ಕೋಷ್ಟಕದಲ್ಲಿರುವಂತೆ, ಭಜನಾ ಮಂಡಳಿ ಸಮಿತಿಯಲ್ಲಿ ಅಧ್ಯಕ್ಷರಾಗಿ ಹಿಂದೆ ಶೇಕಡ ೨ (೪), ಪ್ರಸ್ತುತದಲ್ಲಿ ಸಮುದಾಯದ ಪ್ರತಿನಿಧಿ ಅಧ್ಯಕ್ಷರಾಗಿ ಯಾರು ಮುಂದುವರೆದಿಲ್ಲ. ಉಪಾಧ್ಯಕ್ಷರಾಗಿ ಹಿಂದೆಯೂ ಯಾರು ಆಗಿರಲಿಲ್ಲ. ಪ್ರಸ್ತುತದಲ್ಲಿಯೂ ಇಲ್ಲ. ಸದಸ್ಯರಾಗಿ ಹಿಂದೆ ಶೇಕಡ ೧೭ (೩೪) ಶೇಕಡ ೨.೫ (೫) ಇದ್ದರೆ, ದೇವಸ್ಥಾನ ಆಡಳಿತ ಮಂಡಳಿ ಸಮಿತಿಯಲ್ಲಿ ಅಧ್ಯಕ್ಷರಾಗಿ, ಹಿಂದೆ ಶೇಕಡ ೨ (೪), ಪ್ರಸ್ತುತ ಶೇಕಡ ೦.೫ (೧), ಉಪಾಧ್ಯಕ್ಷರಾಗಿ, ಹಿಂದೆ ಶೇಕಡ ೦.೫ (೧), ಪ್ರಸ್ತುತದಲ್ಲಿ ಯಾರು ಪಡೆದಿಲ್ಲ, ಮತ್ತು ಕೊನೆಯದಾಗಿ ಸದಸ್ಯರಾಗಿ, ಹಿಂದೆ ಶೇಕಡ ೨೧.೫ (೪೩), ಪ್ರಸ್ತುತ ಶೇಕಡ ೨೪ (೪೮), ರಷ್ಟು ಸೇರಿ ಒಟ್ಟು ಶೇಕಡ ೭೦ (೧೪೦) ಕುಟುಂಬಗಳಲ್ಲಿ ಹಿಂದೆ ಮತ್ತು ಪ್ರಸ್ತುತ ದಿನಗಳಲ್ಲಿ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಸದಸ್ಯರಾಗಿ ಗುರುತಿಸಿಕೊಂಡಿದ್ದಾರೆ.

ಮೇಲಿನ ಸಂಘಟನೆಗಳಿಂದ ಸಮುದಾಯದ ಜನ ಸಮೂಹಕ್ಕೆ ಶೇಕಡ ೧೯.೫ (೩೯) ರಷ್ಟು ಉಪಯೋಗ ಮಾಡಿಕೊಂಡಿದ್ದಾರೆ. ಉಳಿದ ಶೇಕಡ ೮೦.೫ (೧೬೧) ಕುಟುಂಬಗಳು ಯಾವುದೇ ರೀತಿಯ ಉಪಯೋಗವಾಗಿಲ್ಲದಿರುವುದು ತಿಳಿಯುತ್ತದೆ. ಶೇಕಡ ೧೯.೫ ಉಪಯೋಗ ಮಾಡಿಕೊಂಡವರ ವಿವರಗಳನ್ನು ವಿಶ್ಲೇಷಿಸಿದಾಗ, ತಳದಲ್ಲಿರುವ ಸಮುದಾಯಗಳಿಗೆ ಶೇಕಡ ೧೩ (೨೬) ಲೋಕಸಭೆ ಮತ್ತು ವಿಧಾನಸಭೆ ಸದಸ್ಯರ ಅನುದಾನದಿಂದ ಸಮುದಾಯಗಳ ಕೇರಿಗಳಿಗೆ ರಸ್ತೆ, ವಸತಿ ವ್ಯವಸ್ಥೆಯನ್ನು ಮೇಲಿನ ಸಾಂಸ್ಕೃತಿಕವಾಗಿರುವ ಭಜನಾ ಮಂಡಳಿ ಮತ್ತು ದೇವಸ್ಥಾನ ಆಡಳಿತ ಸಮಿತಿಗಳಿಗೆ ಅನುದಾನ ಕೊಡುವ ಮೂಲಕ ಕೆಲಸ ಮಾಡಿದ್ದಾರೆ. ಶೇಕಡ ೬.೫ (೧೩) ಕುಟುಂಬಗಳಿಗೆ ಆಡಳಿತ ಮಂಡಳಿ ಮೂಲಕ, ಯುವಕ/ಯುವತಿ ಸಂಘಟನೆಗಳಿಗೆ ಸಬ್ಸಿಡಿ ಮೂಲಕ ಸಾಲ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಮತ್ತು ಭಜನ ಮಂಡಳಿ ಸಮಿತಿ ಮತ್ತು ದೇವಸ್ಥಾನ ಆಡಳಿತ ಸಮಿತಿಗಳಿಗೆ ಸರ್ಕಾರದಿಂದ ಶೇಕಡ ೧೬ (೩೨) ನೆರವು ದೊರಕಿದರೆ, ಉಳಿದ ಶೇಕಡ ೮೪ (೧೬೮) ಕುಟುಂಬಗಳಿಗೆ ಮೇಲಿನ ಸಾಂಸ್ಕೃತಿಕ ಸಂಘಟನೆಗಳಿಂದ ಯಾವುದೇ ನೆರವು ತಲುಪಿಲ್ಲ.

ಶೇಕಡ ೧೬ ನೆರವು ದೊರಕಿದವರಲ್ಲಿ ಶೇಕಡ ೧೫.೫ (೩೧) ದೇವಸ್ಥಾನದ ಗುಡಿಗೋಪುರಗಳನ್ನು ಕಟ್ಟಿಕೊಳ್ಳಲು ಅನುದಾನವನ್ನು ವಿಧಾನಸಭೆ ಮತ್ತು ಲೋಕಸಭೆಗೆ ಆಯ್ಕೆಯಾದ ಜನಪ್ರತಿನಿಧಿಗಳು ಒದಗಿಸಿಕೊಟ್ಟಿದ್ದಾರೆ. ಉಳಿದ ಶೇಕಡ ೦.೫ (೧) ಭೋವಿ ಸಮುದಾಯದ

ಕುಟುಂಬಳಿಗೆ ಗಾರೆಕೆಲಸ ಮತ್ತು ಕಲ್ಲುಹೊಡೆಯಲು ಬೇಕಾದ ಸಲಕರಣೆಗಳನ್ನು ಕೊಂಡುಕೊಳ್ಳಲು ಕಾರ್ಮಿಕ ಇಲಾಖೆಯ ಮಾಹಿತಿಯನ್ನು ಸಂಘಟನೆಗಳು ಪಡೆದುಕೊಂಡು ಆರ್ಥಿಕ ಧನ ಸಹಾಯ ಪಡೆಯಲು ಅವಕಾಶಮಾಡಿಕೊಟ್ಟು ತಮ್ಮ ಕುಲ ಕಸುಬುಗಳನ್ನು ಮುಂದುವರಿಸಲು ಸಾಧ್ಯವಾಗಿದೆ. ಒಟ್ಟು ಶೇಕಡ ೧೬ ಸೌಲಭ್ಯಗಳು ರಾಜಕೀಯ ವ್ಯಕ್ತಿಗಳಿಂದ ಪಡೆದಿದ್ದಾರೆ ಯಾವ ರಾಜಕೀಯ ವ್ಯಕ್ತಿಯೆಂದು ನೋಡಿದಾಗ ಶೇಕಡ ೧೪ (೨೮) ಎಂ.ಎಲ್.ಎ ಅನುದಾನ, ಶೇಕಡ ೨ (೪) ಸ್ಥಳಿಯ ಸಂಸ್ಥೆಗಳಿಗೆ ಆಯ್ಕೆಯಾದ ಜನಪ್ರತಿನಿಧಿಗಳಿಂದ ಪಡೆದರೆ ಲೋಕಸಭೆಗೆ ಆಯ್ಕೆಯಾದ ಸದಸ್ಯರಿಂದ ಯಾವುದೇ ಸೌಲಭ್ಯಗಳನ್ನು ಪಡೆದಿಲ್ಲದಿರುವುದು ಅಧ್ಯಯನದಿಂದ ತಿಳಿಯುತ್ತದೆ.

ಅಧ್ಯಾಯ – ಆರು

ಭೋವಿ ಸಮುದಾಯದ ಅಭಿವೃದ್ಧಿ ಮಾಪನ

೬.೧ ಸಾಮಾಜಿಕ ಅಭಿವೃದ್ಧಿಯಲ್ಲಿ ಭೋವಿ ಸಮುದಾಯ

- ೬.೧.೧. ಶಿಕ್ಷಣ
- ೬.೧.೨. ಆರೋಗ್ಯ
- ೬.೧.೩. ವಸತಿ
- ೬.೧.೪. ನೈರ್ಮಲ್ಯ
- ೬.೧.೫. ಕುಡಿಯುವ ನೀರು
- ೬.೧.೬. ಜಾತಿ ಸ್ಥಾನಮಾನ
- ೬.೧.೭. ಲಿಂಗ ಸಮಾನತೆ

೬.೨. ಆರ್ಥಿಕ ಅಭಿವೃದ್ಧಿಯಲ್ಲಿ ಭೋವಿ ಸಮುದಾಯ

- ೬.೨.೧. ಉದ್ಯೋಗ
- ೬.೨.೨. ಆದಾಯ
- ೬.೨.೩. ಭೂ ಹಿಡುವಳಿ
- ೬.೨.೪. ಆದಾಯದ ಮೂಲ
- ೬.೨.೫. ಚರಾ ಮತ್ತು ಸ್ಥಿರಾ ಆಸ್ತಿ ವಿವರಗಳು

ಅಧ್ಯಾಯ – ಆರು

ಭೋವಿ ಸಮುದಾಯದ ಅಭಿವೃದ್ಧಿ ಮಾಪನ

೬.೧ ಸಾಮಾಜಿಕ ಅಭಿವೃದ್ಧಿಯಲ್ಲಿ ಭೋವಿ ಸಮುದಾಯ

ಮೊದಲನೆಯದಾಗಿ ಭೋವಿ ಸಮುದಾಯದ ಸಾಮಾನ್ಯ ಮತ್ತು ವೈಯಕ್ತಿಕ ಮಾಹಿತಿ ವಿವರಗಳನ್ನು ನೋಡುವುದಾದರೆ, ಅಧ್ಯಯನ ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯಂತೆ ಹೊಳಲ್ಕೆರೆ ತಾಲ್ಲೂಕಿನ ಬೋರೆನಹಳ್ಳಿ, ರಾಮೇನಹಳ್ಳಿ, ಕಣವಿಜೋಗಹಳ್ಳಿ, ಮತ್ತು ಮಾರುತಿಹಳ್ಳಿ ಹಾಗೂ ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನಕೋಟೆ, ಜಯಂತಿನಗರ, ಚಿಕ್ಕೇರಹಳ್ಳಿ, ಮತ್ತು ನಾಗಸಮುದ್ರ ಗ್ರಾಮಗಳಿಂದ ತಲಾ ೨೫ ರಂತೆ ಒಟ್ಟು ೨೦೦ ಕುಟುಂಬಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ಅಧ್ಯಯನಕ್ಕೆ ಒಳಪಟ್ಟವರ ವಿವರಗಳನ್ನು ಕೆಳಕಂಡ ಕೋಷ್ಟಕಗಳ ಮೂಲಕ ವಿಶ್ಲೇಷಿಸಲಾಗಿದೆ.

ಕೋಷ್ಟಕ – ೬.೧ ಅಧ್ಯಯನಕ್ಕಾಗಿ ಭೋವಿ ಸಮುದಾಯದವರ ಕುಟುಂಬಗಳಿಂದ ಮಾಹಿತಿ ಕೊಟ್ಟವರ ವಿವರಗಳು

ಕ್ರ.ಸಂ.	ಅಧ್ಯಯನಕ್ಕಾಗಿ ಭೋವಿ ಸಮುದಾಯದವರ ಕುಟುಂಬಗಳಿಂದ ಮಾಹಿತಿ ಕೊಟ್ಟವರ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಗಂಡು	೫೭	೮೧	೧೩೮	೬೯
೨	ಹೆಣ್ಣು	೪೩	೧೯	೬೨	೩೧
	ಒಟ್ಟು	೧೦೦	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರ ಕಾರ್ಯ ಆಧಾರಿತ, ೨೦೧೯.

ಕೋಷ್ಟಕ – ೬.೧ ರಲ್ಲಿ ಇರುವಂತೆ ಒಟ್ಟು ಪ್ರತಿ ಗ್ರಾಮ ಪಂಚಾಯಿತಿಯಿಂದ ೨೫ ಕುಟುಂಬಗಳಂತೆ, ತಾಲ್ಲೂಕಿನಿಂದ ನಾಲ್ಕು ಗ್ರಾಮಗಳಿಂದ ೧೦೦ ಮಾಹಿತಿದಾರರಂತೆ ಹೊಳಲ್ಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕಿನಿಂದ ತಲಾ ೧೦೦ ಕುಟುಂಬಗಳಂತೆ ೨೦೦ ಕುಟುಂಬಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು. ಅದರಲ್ಲಿ ಶೇಕಡ ೬೯ (೧೩೮) ಗಂಡು, ಶೇಕಡ ೩೧ (೬೨) ಮಹಿಳೆ ಮಾಹಿತಿದಾರರಿಂದ ಮಾಹಿತಿ ಪಡೆಯಲಾಯಿತು. ಕುಟುಂಬಗಳಲ್ಲಿ ವಾಸ ಮಾಡುವ ಇತರೆ ಸದಸ್ಯರ ವಿವರಗಳನ್ನು ನೋಡುವುದಾದರೆ, ೨ ರಿಂದ ೪ ಜನಸಂಖ್ಯೆ ಇರುವ ಕುಟುಂಬಗಳು ಶೇಕಡ ೫೨ (೧೦೪), ೫ ರಿಂದ ೭ ಜನ ಇರುವವರು ಶೇಕಡ ೪೫ (೯೦), ಮತ್ತು ೮ ಕ್ಕಿಂತ ಹೆಚ್ಚು ಇರುವ ಕುಟುಂಬಗಳು ಶೇಕಡ ೩ (೬) ಇರುವುದು ತಿಳಿಯುತ್ತದೆ.

ಕೋಷ್ಟಕ–೬.೨ ಮಾಹಿತಿಯನ್ನು ಕೊಟ್ಟ ಭೋವಿ ಸಮುದಾಯದವರ ಕುಟುಂಬಗಳ ವಯಸ್ಸಿನ ವಿವರಗಳು

ಕ್ರ.ಸಂ	ಮಾಹಿತಿಯನ್ನು ಕೊಟ್ಟ ಭೋವಿ ಸಮುದಾಯದವರ ಕುಟುಂಬಗಳ ವಯಸ್ಸಿನ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಸಂಖ್ಯೆ	ಶೇಕಡ
೧	೧ ರಿಂದ ೬ ವಯಸ್ಸಿನವರು	೨೧	೨೫	೪೬	೫.೦೯
೨	೭ ರಿಂದ ೧೪ ವರ್ಷದವರು	೫೬	೫೭	೧೧೩	೧೨.೫೨
೩	೧೫ ರಿಂದ ೨೧ ವರ್ಷದವರು	೬೪	೭೭	೧೪೧	೧೫.೬೩
೪	೨೨ ರಿಂದ ೪೫ ವರ್ಷದವರು	೨೧೯	೨೨೪	೪೪೩	೪೯.೧೧
೫	೪೫ ರಿಂದ ೬೦ ವರ್ಷದವರು	೭೪	೫೭	೧೩೧	೧೪.೫೨
೬	೬೦ ವರ್ಷ ಮೇಲ್ಪಟ್ಟವರು	೧೪	೧೪	೨೮	೩.೧೦
	ಒಟ್ಟು	**೪೪೮**	**೪೫೪**	**೯೦೨**	**೧೦೦**

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೨ ರಂತೆ ೧ ರಿಂದ ೬ ವಯಸ್ಸಿನ ಮಕ್ಕಳು ಶೇಕಡ ೫.೦೯ (೪೬), ೭ ರಿಂದ ೧೪ ವರ್ಷದ ಮಕ್ಕಳು ಶೇಕಡ ೧೨.೫೨ (೧೧೩), ೧೫ ರಿಂದ ೨೧ ವರ್ಷದ ವಯಸ್ಕರು ಶೇಕಡ ೧೫.೬೫ (೧೪೧), ೨೨ ವರ್ಷದಿಂದ ೪೫ ವರ್ಷದ ಯುವಕರು ಶೇಕಡ ೪೯.೧೧ (೪೪೩) ಇದ್ದು, ಸಮುದಾಯದಲ್ಲಿ ಯುವ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿರುವುದು ತಿಳಿಯುತ್ತದೆ. ಮತ್ತು ೪೫ ರಿಂದ ೬೦ ವರ್ಷದ ಒಳಗಿನವರು ಶೇಕಡ ೧೪.೫೨ (೧೩೧), ಮತ್ತು ೬೦ ವರ್ಷ ಮೇಲ್ಪಟ್ಟವರು ಶೇಕಡ ೩.೧೦ (೨೮) ಇದ್ದು, ಒಟ್ಟು ಹೊಳಲ್ಕೆರೆ ತಾಲ್ಲೂಕಿನಿಂದ ೪೪೮, ಮತ್ತು ಮೊಳಕಾಲ್ಮೂರು ತಾಲ್ಲೂಕಿನಿಂದ ೪೫೪ ಸೇರಿ ೧೦೦ (೯೦೨) ಜನಸಂಖ್ಯೆಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಕೋಷ್ಟಕ–೬.೩ ಭೋವಿ ಸಮುದಾಯದ ಕುಟುಂಬಗಳ ವೈವಾಹಿಕ ಸ್ಥಾನಮಾನದ ವಿವರಗಳು

ಕ್ರ.ಸಂ	ಭೋವಿ ಸಮುದಾಂಯದ ಕುಟುಂಬಗಳ ವೈವಾಹಿಕ ಸ್ಥಾನಮಾನದ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಸಂಖ್ಯೆ	ಶೇಕಡ
೧	ವಿವಾಹಿತ ಪುರುಷರು	೧೧೭	೧೦೬	೨೨೩	೨೪.೭೨
೨	ವಿವಾಹಿತ ಮಹಿಳೆಯರು	೧೨೧	೧೨೧	೨೪೨	೨೬.೮೨
೩	ಅವಿವಾಹಿತ ಪುರುಷರು	೧೧೦	೧೩೫	೨೪೪	೨೭.೦೫
೪	ಅವಿವಾಹಿತ ಮಹಿಳೆಯರು	೭೪	೭೭	೧೫೧	೧೬.೨೪
೫	ವಿಧವೆ	೨೨	೧೪	೩೭	೦೪.೧೦
೬	ವಿಧುರ	೪	೧	೫	೦೦.೫೫
	ಒಟ್ಟು	**೪೪೮**	**೪೫೪**	**೯೦೨**	**೧೦೦**

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ – ೬.೩ ರಲ್ಲಿರುವಂತೆ ಸಮುದಾಯದ ಕುಟುಂಬಗಳ ವೈವಾಹಿಕ ಸ್ಥಾನಮಾನದ ವಿವರಗಳನ್ನು ನೋಡುವುದಾದರೆ. ವಿವಾಹಿತರಾದ ಪುರುಷರು ಶೇಕಡ ೨೪.೭೨ (೨೨೩), ವಿವಾಹಿತ ಮಹಿಳೆಯರು ಶೇಕಡ ೨೬.೮೨ (೨೪೨), ಅವಿವಾಹಿತರ (ಪುರುಷರು) ಶೇಕಡ ೨೭.೦೫ (೨೪೪), ಅವಿವಾಹಿತ (ಮಹಳೆಯರು) ಶೇಕಡ ೧೬,೨೪ (೧೫೧) ಇದ್ದರೆ, ವಿಧವೆಯರು ಶೇಕಡ ೪.೧೦ (೩೭), ವಿಧುರ ಪುರುಷರು ಶೇಕಡ ೦.೫೫ (೫)ರಷ್ಟು. ಒಟ್ಟಾರೆಯಾಗಿ ಭೋವಿ ಸಮುದಾಯವನ್ನು ಅವಲೋಕನ ಮಾಡಿ ನೋಡಿದರೆ. ಮಹಿಳೆಯರಿಗೆ ಬೇಗ ಮದುವೆ ಮಾಡುತ್ತಾರೆ. ಮತ್ತು ಪುರುಷರು ಕುಡಿತದ ಚಟಕ್ಕೆ ಬಿದ್ದು, ದಿನನಿತ್ಯ ದುಡಿದ ಹಣವನ್ನೆಲ್ಲ ಖರ್ಚು ಮಾಡಿ ಆರೋಗ್ಯದ ತೊಂದರೆಗಳಿಂದ ೫೫ ರಿಂದ ೬೦ ವರ್ಷದ ಒಳಗೆ ಮರಣ ಹೊಂದಿದ ಶೇಕಡ ೪.೧೦ ಪ್ರಕರಣಗಳು ಇರುವುದು ದುರಂತವಾದ ಸಂಗತಿ.

ಭೋವಿ ಸಮುದಾಯ ಅಭಿವೃದ್ಧಿ ಹೊಂದಾಬೇಕಾದರೆ ಮೂಲಭೂತವಾಗಿ ಬೇಕಾಗಿರುವ ಸೌಲಭ್ಯಗಳು ಎಷ್ಟರ ಮಟ್ಟದಲ್ಲಿ ದೊರಕಿದ್ದಾವೆ ಎನ್ನುವುದನ್ನು ಈ ಐದನೆ ಅಧ್ಯಾಯದಲ್ಲಿ ಮಾಪನಮಾಡಲಾಗುವುದು. ಅದರಲ್ಲಿ ಮುಖ್ಯವಾಗಿ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಬಂಧಿಸಿದಂತೆ ಪರಿಭಾಷೆಗಳನ್ನು ಇಟ್ಟುಕೊಂಡು ವಿವರಿಸಲಾಗುವುದು. ಮೊದಲನೆ ಭಾಗದಲ್ಲಿ ಸಾಮಾಜಿಕ ಅಭಿವೃದ್ಧಿಗೆ ಸಬಂಧಿಸಿದಂತೆ ಸಮುದಾಯ ಅಭಿವೃದ್ಧಿ ಹೊಂದಾಬೇಕಾದರೆ

ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಮತ್ತು ಸಮುದಾಯದ ಸಾಮಾಜಿಕ ಸ್ಥಾನಮಾನ ಹಾಗೂ ಲಿಂಗ ಸಮಾನತೆ ಹೇಗಿದೆ ಎಂದು ಮತ್ತು ಎರಡನೆ ಭಾಗದಲ್ಲಿ ಆರ್ಥಿಕ ಅಭಿವೃದ್ಧಿಗೆ ಸಬಂಧಿಸಿದಂತೆ ಸಮುದಾಯ ವೃತ್ತಿ ಆಧಾರಿತವಾಗಿ ಉದ್ಯೋಗ, ವಾರ್ಷಿಕ ಆದಾಯ, ಭೂ ಹಿಡುವಳಿ ಮತ್ತು ಇತರೆ ಆದಾಯದ ಮೂಲಗಳು ಹಾಗೂ ಚರಾ ಮತ್ತು ಸ್ಥಿರಾ ಆಸ್ಥಿಗಳು ಎಷ್ಟು ಪ್ರಮಾಣದಲ್ಲಿ ಪಡೆದಿದ್ದಾರೆ. ಎನ್ನುವ ಸಂಗತಿಗಳ ವಿವರಗಳನ್ನು ಮಾಪನ ಮಾಡಿ ವಿಶ್ಲೇಷಿಸಲಾಗಿದೆ.

೬.೧.೧ ಶಿಕ್ಷಣ

ಸಾಮಾಜಿಕವಾಗಿ ಸಮುದಾಯ ಅಭಿವೃದ್ಧಿ ಹೊಂದಾಬೇಕಾದರೆ ಶಿಕ್ಷಣ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದ ಸಮುದಾಯದ ಕುಟುಂಬಗಳಲ್ಲಿ ಶಿಕ್ಷಣ ಪಡೆದವರ ವಿವರಗಳನ್ನು ನೋಡುವುದಾದರೆ. ಪ್ರಾಥಮಿಕ ಶಿಕ್ಷಣ ಪಡೆದವರು ಶೇಕಡ ೨೬.೭೧ (೨೪೧), ಪ್ರೌಢ ಶಿಕ್ಷಣ ಪಡೆದವರು ಶೇಕಡ ೧೭.೧೮ (೧೫೫), ಪದವಿ ಪೂರ್ವ ಶಿಕ್ಷಣ ಶೇಕಡ. ೧೧.೯೭ (೧೦೮), ಪದವಿ ಶಿಕ್ಷಣ ಶೇಕಡ ೬.೫೪ (೫೯), ಮತ್ತು ಸ್ನಾತಕೋತ್ತರ ಪದವಿ ಪಡೆದವರು ಶೇಕಡ ೨.೨೧ (೨೦), ಡಿಪ್ಲೋಮ ಪದವಿ ಶೇಕಡ ೧.೮೮ (೧೭), ಇತರೆ ಶಿಕ್ಷಣ ಪಡೆದವರು ಶೇಕಡ (೨) ೦.೨೨ ರಷ್ಟು ಇದ್ದಾರೆ. ಶಿಕ್ಷಣ ಪಡೆಯದೆ ಇರುವ ಅನಕ್ಷರಸ್ಥ (ಪುರುಷರು) ಶೇಕಡ ೧೨.೭೪ (೧೧೫), ಅನಕ್ಷರಸ್ಥೆ (ಮಹಿಳೆಯರು) ಶೇಕಡ ೧೬.೦೭ (೧೪೫), ಸಮುದಾಯದಲ್ಲಿ ಇರುವುದು ತಿಳಿಯುತ್ತದೆ. ಮತ್ತು ಶಿಶುವಿಹಾರಕ್ಕೆ(ಅಂಗನವಾಡಿ) ಹೋಗುವ ಮಕ್ಕಳು ಶೇಕಡ ೪.೪೩ (೪೦) ಇರುವುದು ಕಂಡು ಬರುತ್ತದೆ. ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನಕೋಟೆ, ಜಯಂತಿನಗರ, ಚಿಕ್ಕೇರಹಳ್ಳಿ, ನಾಗಸಮುದ್ರ ಮತ್ತು ಹೊಳಲ್ಕೆರೆ ತಾಲ್ಲೂಕಿನ ಬೋರೆನಹಳ್ಳಿ, ರಾಮೇನಹಳ್ಳಿ, ಕಣವಿಜೋಗಹಳ್ಳಿ, ಹಾಗೂ ಮಾರುತಹಳ್ಳಿಗಳ ಗ್ರಾಮವಾರು ಶಿಕ್ಷಣವನ್ನು ಹೊಲಿಕೆ ಮಾಡಿ ಕೆಳಕಂಡ ಕೋಷ್ಟಕದ ಮೂಲಕ ವಿವರಿಸಲಾಗಿದೆ.

ಕೋಷ್ಟಕ ೬.೪ ಭೋವಿ ಸಮುದಾಯದ ಕುಟುಂಬಗಳಲ್ಲಿ ಅನಕ್ಷರಸ್ಥ ಮತ್ತು ಶಿಕ್ಷಣ ಪಡೆದವರ ವಿವರಗಳು

ಕ್ರ.ಸಂ	ಭೋವಿ ಸಮುದಾಯದ ಕುಟುಂಬಗಳಲ್ಲಿ ಅನಕ್ಷರಸ್ಥ ಮತ್ತು ಶಿಕ್ಷಣ ಪಡೆದವರ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಕುಟುಂಬಗಳು	ಶೇಕಡ
		ಬೋರೆನಹಳ್ಳಿ	ರಾಮೇನಹಳ್ಳಿ	ಕಣಿವೆ ಜೋಗಹಳ್ಳಿ	ಮಾರುತಿಹಳ್ಳಿ	ಸಿದ್ದಯ್ಯನಕೋಟೆ	ಜಯತಿ ನಗರ	ಚಿಕ್ಕೇರಹಳ್ಳಿ	ನಾಗಸಮುದ್ರ		
೧	ಅನಕ್ಷರಸ್ಥ ಪುರುಷರು	೨೫	೧೬	೨೦	೧೨	೧೫	೮	೮	೧೧	೧೧೫	೧೨.೭೪
೨	ಅನಕ್ಷರಸ್ಥ ಮಹಿಳೆಯರು	೨೨	೧೯	೨೬	೨೨	೧೭	೧೪	೧೨	೧೩	೧೪೫	೧೬.೦೭
೩	ಶಿಶುವಿಹಾರ	೫	೧೨	೮	೦	೦	೭	೨	೬	೪೦	೪.೪೩
೪	ಪ್ರಾಥಮಿಕ ಶಿಕ್ಷಣ	೧೮	೨೪	೨೨	೨೯	೨೦	೪೮	೩೫	೪೫	೨೪೧	೨೬.೭೧
೫	ಪ್ರೌಢ ಶಿಕ್ಷಣ	೧೨	೧೧	೧೬	೩೦	೨೦	೨೦	೨೦	೨೬	೧೫೫	೧೭.೧೮
೬	ಪದವಿ ಪೂರ್ವ ಶಿಕ್ಷಣ	೧೧	೧೪	೧೫	೧೧	೨೦	೬	೨೧	೧೦	೧೦೮	೧೧.೯೭
೭	ಪದವಿ	೮	೮	೧೨	೫	೧೫	೩	೩	೫	೫೯	೬.೫೪
೮	ಸ್ನಾತಕೋತ್ತರ ಪದವಿ	೧	೪	೨	೧	೫	೨	೩	೨	೨೦	೨.೨೧
೯	ಡಿಪ್ಲೋಮ	೨	೩	೨	೦	೨	೪	೨	೨	೧೭	೧.೮೮
೧೦	ಇತರೆ	೦	೦	೦	೦	೦	೦	೨	೦	೨	೦.೨೨
		೧೦೪	೧೧೧	೧೨೩	೧೧೦	೧೧೪	೧೧೨	೧೦೮	೧೨೦	೯೦೨	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯

.ಕೋಷ್ಟಕ ೬.೪ ರಲ್ಲಿ ಉಲ್ಲೇಖ ಮಾಡಿರುವಂತೆ ಭೋವಿ ಸಮುದಾಯದ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಟ್ಟ, ಕುಟುಂಬಗಳಲ್ಲಿ ಶೇಕಡ ೧೨.೭೪ (೧೧೫) ಕುಟುಂಬಗಳಲ್ಲಿ ಅನಕ್ಷರಸ್ಥ ಪುರುಷರು ಇದ್ದಾರೆ. ಅತಿಹೆಚ್ಚು ಶೇಕಡ ೨೫ ಕುಟುಂಬಗಳಲ್ಲಿ ಅನಕ್ಷರಸ್ಥ ಪುರುಷರು ಬೋರೆನಹಳ್ಳಿ ಗ್ರಾಮದಲ್ಲಿ ಇದ್ದಾರೆ. ನಂತರ ಕ್ರಮವಾಗಿ ಕಣವಿಜೋಗಹಳ್ಳಿಯಲ್ಲಿ ೨೦, ರಾಮೇನಹಳ್ಳಿಯಲ್ಲಿ ೧೬, ಸಿದ್ದಯ್ಯನಕೋಟೆಯಲ್ಲಿ ೧೫, ಮಾರುತಿಹಳ್ಳಿಯಲ್ಲಿ ೧೨, ನಾಗಸಮುದ್ರದಲ್ಲಿ ೧೧, ಜಯಂತಿನಗರದಲ್ಲಿ ಮತ್ತು ಚಿಕ್ಕೇರಹಳ್ಳಿಯಲ್ಲಿ ೮ ಕುಟುಂಬಗಳಲ್ಲಿ ಅನಕ್ಷರಸ್ಥ ಪುರುಷರು ಇದ್ದಾರೆ. ಅನಕ್ಷರಸ್ಥ ಮಹಿಳೆಯರ ಬಗ್ಗೆ ನೋಡುವುದಾರೆ ಜಿಲ್ಲೆಯಲ್ಲಿ ಶೇಕಡ ೧೬.೦೭ (೧೪೫) ಇದ್ದು, ಪುರುಷರಿಗಂತ ಮಹಿಳೆಯರೆ ಸಮುದಾಯದಲ್ಲಿ ಶಿಕ್ಷಣದಿಂದ ವಂಚಿತರಾಗಿರುವುದು ಕಂಡುಬರುತ್ತದೆ. ಕಣವಿಜೋಗಹಳ್ಳಿಯಲ್ಲಿ ಅತಿಹೆಚ್ಚು ೨೬ ಕುಟುಂಬಗಳಲ್ಲಿ ಅನಕ್ಷರಸ್ಥ ಮಹಿಳೆಯರು ಇದ್ದಾರೆ. ಕಡಿಮೆ ಸಂಖ್ಯೆಯಲ್ಲಿಯೆಂದರೆ ಚಿಕ್ಕೇರಹಳ್ಳಿ ೧೨ ಕುಟುಂಬಗಳಲ್ಲಿ ಇರುವುದು ತಿಳಿಯುತ್ತದೆ. ಶಿಶುವಿಹಾರಕ್ಕೆ (ಅಂಗನವಾಡಿ) ಹೋಗುವ ಮಕ್ಕಳ ಪ್ರಮಾಣ ಶೇಕಡ ೪.೪೩ (೪೦) ಅತಿಹೆಚ್ಚು ರಾಮೇನಹಳ್ಳಿಯಲ್ಲಿ ೧೨ ಕುಟುಂಬಗಳಲ್ಲಿ ನಂತರ, ಕಣವಿಜೋಗಹಳ್ಳಿಯೆಲ್ಲ ೮ ಕುಟುಂಬಗಳಲ್ಲಿ ಅಂಗನವಾಡಿಗೆ ಹೋಗುವ ಮಕ್ಕಳಿದ್ದಾರೆ. ಚಿಕ್ಕೇರಹಳ್ಳಿ ಅತಿಕಡಿಮೆ ೨ ಕುಟುಂಬಗಳಲ್ಲಿ ಮಾತ್ರ ಅಂಗನವಾಡಿಗೆ ಹೋಗುತ್ತಾರೆ. ಉಳಿದವರನ್ನು ಕಾನ್ವೆಂಟ್‌ಗೆ ಕಳಿಸುತ್ತಾರೆ. ಆದರೆ ಮಾರುತಿಹಳ್ಳಿ, ಮತ್ತು ಸಿದ್ದಯ್ಯನಕೋಟೆಯಲ್ಲಿ ಅಂಗನವಾಡಿಗೆ ಹೋಗುವ ಮಕ್ಕಳು ಅಧ್ಯಯನದಿಂದ ಕಂಡುಬಂದಿಲ್ಲ.

ಪ್ರಾಥಮಿಕ ಶಿಕ್ಷಣ ಪಡೆದವರು ಶೇಕಡ ೨೬.೭೧ (೨೪೧) ಕುಟಂಬಗಳಲ್ಲಿ ಇದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರು, ಮೊಳಕಾಲ್ಮೂರು ತಾಲ್ಲೂಕಿನ ಜಯಂತಿನಗರದಲ್ಲಿ ೪೮ ಜನ ನಂತರ ನಾಗಸಮುದ್ರದಲ್ಲಿ ೪೫, ಚಿಕ್ಕೇರಹಳ್ಳಿಯಲ್ಲಿ ೩೫ ಜನ ಇದ್ದಾರೆ. ಅತಿ ಕಡಿಮೆ ೧೮ಜನ ಮಾತ್ರ ಪ್ರಾಥಮಿಕ ಶಿಕ್ಷಣ ಪಡೆದವರು ಬೋರೆನಹಳ್ಳಿ ಗ್ರಾಮಗಳಲ್ಲಿ ಇದ್ದಾರೆ. ಪ್ರೌಢ ಶಿಕ್ಷಣ ಪಡೆದವರು ಒಟ್ಟು ಶೇಕಡ ೧೭.೧೮ (೧೫೫) ಕುಟುಂಬಗಳಲ್ಲಿ ಇದ್ದಾರೆ. ಅತಿಹೆಚ್ಚು ಅಂದರೆ ಮಾರುತಿಹಳ್ಳಿಯಲ್ಲಿ ೩೦, ನಂತರ ನಾಗಸಮುದ್ರ ೨೬, ಮೂರನೇ ಸ್ಥಾನದಲ್ಲಿ ಚಿಕ್ಕೇರಹಳ್ಳಿ, ಜಯಂತಿನಗರ ಮತ್ತು ಸಿದ್ದಯ್ಯನಕೋಟೆ ಸೇರಿ ತಲ ೨೦ ರಂತೆ ಮೂರು ಗ್ರಾಮಗಳು, ರಾಮೇನಹಳ್ಳಿಯಲ್ಲಿ ೧೧ ಇದ್ದು, ಕೊನೆಸ್ಥಾನವನ್ನು ಪಡೆದಿದೆ. ಪದವಿ ಪೂರ್ವ ಶಿಕ್ಷಣವನ್ನು ಶೇಕಡ ೧೧ ೯೭ (೧೦೮) ಇದೆ. ಇದರಲ್ಲಿ ಅತಿಹೆಚ್ಚು ಚಿಕ್ಕೇರಹಳ್ಳಿ ೨೧, ನಂತರ ಸಿದ್ದಯ್ಯನಕೋಟೆ ೨೦, ಮೂರನೇ ಸ್ಥಾನದಲ್ಲಿ ಕಣವಿಜೋಗಹಳ್ಳಿ ೧೫, ಇದ್ದಾರೆ. ಕೊನೆಸ್ಥಾನದಲ್ಲಿ ಜಯಂತಿನಗರದಲ್ಲಿ ಕೇವಲ ೬ ಜನ ಮಾತ್ರ ಪಿಯುಸಿ ಶಿಕ್ಷಣವನ್ನು ಪಡೆದಿದ್ದಾರೆ. ಪದವಿ ಶಿಕ್ಷಣವನ್ನು ಶೇಕಡ ೬.೫೪ (೫೯) ಇದ್ದರೆ ಅದರಲ್ಲಿ ಸಿದ್ಯಯನಕೋಟೆ ಗ್ರಾಮದಲ್ಲಿ ೧೫, ನಂತರ ಕಣವಿಜೋಗಹಳ್ಳಿ ೧೨, ಮೂರನೆ ಸ್ಥಾನದಲ್ಲಿ ಬೋರೆನಹಳ್ಳಿ ಮತ್ತು ರಾಮೇನಹಳ್ಳಿ ತಲಾ ೮ ಜನ ಪದವಿ ಶಿಕ್ಷಣ

ಪಡೆದ ಗ್ರಾಮಗಳಾಗಿವೆ. ಕೊನೆಸ್ಥಾನವನ್ನು ತಲಾ ೩ ರಂತೆ ಜಯಂತಿನಗರ ಮತ್ತು ಚಿಕ್ಕೇರಹಳ್ಳಿ ಗ್ರಾಮಗಳು ಪಡೆದು ಕೊಂಡಿವೆ. ಸ್ನಾತಕೊತ್ತರ ಪದವಿ ಶೇಕಡ ೨.೨೧ (೨೦) ಜನ ಮಾತ್ರ ಇದ್ದಾರೆ. ಅದರಲ್ಲಿ ಮೊದಲನೆ ಸ್ಥಾನವನ್ನು ಸಿದ್ದಯ್ಯನಕೋಟೆ ೫, ನಂತರ ರಾಮೇನಹಳಿಯಲ್ಲಿ ೪, ಮೂರನೇ ಸ್ಥಾನವನ್ನು ಚಿಕ್ಕೇರಹಳ್ಳಿ ಅಲಂಕರಿಸಿದರೆ, ಕೊನೆಸ್ಥಾನವನ್ನು ತಲಾ ೧ರಂತೆ ಬೋರೆನಹಳ್ಳಿ ಮತ್ತು ಮಾರುತಿಹಳ್ಳಿ ಗ್ರಾಮಗಳು ಪಡೆದುಕೊಂಡಿವೆ. ಡಿಪ್ಲೋಮ ಪದವಿ ಪಡೆದವರು ಸಮುದಾಯದಲ್ಲಿ ಶೇಕಡ .೧.೮೮ (೧೭) ಇದ್ದು ಜಯಂತಿನಗರದಲ್ಲಿ ೪, ರಾಮೇನಹಳ್ಳಿ ೩, ಇದ್ದಾರೆ. ಮಾರುತಿಹಳ್ಳಿಯಲ್ಲಿ ಯಾರು ಸಹ ಡಿಪ್ಲೋಮ ಪದವಿ ಪಡೆದವರು ಇಲ್ಲ. ಉಳಿದ ೫ ಗ್ರಾಮಗಳಲ್ಲಿ ತಲಾ ೨ರಂತೆ ಕೊನೆಸ್ಥಾನದಲ್ಲಿದ್ದಾರೆ. ಮತ್ತು ಶೇಕಡ ೦.೨೨ ಇತರೆ ಶಿಕ್ಷಣವನ್ನು ಪಡೆದವರಲ್ಲಿ ಚಿಕ್ಕೇರಹಳ್ಳಿಯಲ್ಲಿ ೨, ಮಾತ್ರ ಕಂಡು ಬರುತ್ತದೆ. ಶಿಕ್ಷಣ ಪಡೆದ ಸಮುದಾಯದ ಜನತೆ ಸರ್ಕಾರಿ ನೌಕರಿ ಪಡೆದವರು ಎಷ್ಟು ಜನ ಇದ್ದಾರೆ ಎಂದು ಕೆಳಕಂಡ ಕೋಷ್ಟಕವನ್ನು ಗಮನಿಸಬಹುದು.

ಕೋಷ್ಟಕ ೬.೫ ಭೋವಿ ಸಮುದಾಯದ ಕುಟುಂಬಗಳಲ್ಲಿ ಶಿಕ್ಷಣ ಪಡೆದು ಉದ್ಯೋಗದಲ್ಲಿರುವರ ವಿವರಗಳು

ಕ್ರ.ಸಂ	ಭೋವಿ ಸಮುದಾಯದ ಕುಟುಂಬಗಳಲ್ಲಿ ಶಿಕ್ಷಣ ಪಡೆದು ಉದ್ಯೋಗದಲ್ಲಿರುವರ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಪೋಲಿಸ ಇಲಾಖೆ	೧	೦	೧	೦.೫
೨	ಅಂಗನವಾಡಿ ಸಹಾಯಕಿ	೨	೧	೩	೧.೫
೩	ವಾರ್ಡನ್	೧	೦	೧	೦.೫
೪	ಇತರೆ ಡಿ ಗ್ರೂಪ್	೨	೧	೩	೧.೫
	ಒಟ್ಟು	**೬**	**೨**	**೮**	**೪**

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೫ ರಲ್ಲಿ ಉಲ್ಲೇಖ ಮಾಡಿರುವಂತೆ, ಸರ್ಕಾರಿ ನೌಕರಿಯಲ್ಲಿರುವ ಭೋವಿ ಸಮುದಾಯದವರು ಒಟ್ಟು ಶೇಕಡ ೪ ಇದ್ದಾರೆ. ಯಾವ ನೌಕರಿ ಎಂದು ನೋಡಿದಾಗ ಶೇಕಡ ೦.೫ (೧) ಪೋಲಿಸ್ ಕಾನ್ಸ್ಟೇಬಲ್, ಶೇ. ೧.೫ (೩) ಅಂಗನವಾಡಿ ಸಹಾಯಕಿಯರಾಗಿ ತಮ್ಮ ಗ್ರಾಮಗಳಲ್ಲಿಯೇ ಊರಿನ ಮುಖಂಡರ ರಾಜಕೀಯ ಪ್ರಭಾವದಿಂದ ಹುದ್ದೆಯನ್ನು ಗಿಟ್ಟಿಸಿಕೊಂಡಿದ್ದಾರೆ. ಶೇಕಡ ೦.೫ (೧) ರಷ್ಟು ಕುಟುಂಬಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ೨೦೧೬ನೇ ಸಾಲಿನಲ್ಲಿ, ವಾರ್ಡನ್ ಹುದ್ದೆಗಳನ್ನು ಪಡೆದುಕೊಂಡಿದ್ದಾರೆ. ಮತ್ತು ಇತರೆ ಚಿಕ್ಕ

ಪುಟ್ಟ ಡಿ ಗ್ರೂಪ್ ಹುದ್ದೆಗಳಲ್ಲಿ ಗುತ್ತಿಗೆಗೆ ಪ್ರಾಥಮಿಕ ಶಾಲೆಗಳಲ್ಲಿ ಅಡುಗೆ ಸಹಾಯಕಿಯರಾಗಿ, ಶೇಕಡ ೧.೫ (೩) ಇದ್ದು, ಭೋವಿ ಸಮುದಾಯದ ಕುಟುಂಬಗಳು ಪೋಲಿಸ್ ಕಾನ್‌ಸ್ಟೇಬಲ್, ಅಂಗನವಾಡಿ, ವಾರ್ಡನ್ ಮತ್ತು ಇತರೆ ಡಿ ಗ್ರೂಪ್ ಹುದ್ದೆಗಳು ಸೇರಿ ಒಟ್ಟು ಶೇಕಡ ೪ (೮) ಕುಟುಂಬಗಳಲ್ಲಿ ಮಾತ್ರ ಸರ್ಕಾರಿ ನೌಕರಿಯನ್ನು ಪಡೆದು, ಉಳಿದ ಶೇಕಡ ೯೬ ಕುಟುಂಬಗಳು ಹೊಲದಲ್ಲಿ ಮತ್ತು ಪಟ್ಟಣಗಳಿಗೆ ವಲಸೆಹೋಗಿ ಕೆಲಸ ನಿರ್ವಹಿಸಿ ಮಾಲೀಕರ ಕಿರುಕುಳಕ್ಕೆ ಒಳಗಾಗಿ ಹೋದ, ದಾರಿಗೆ ಸುಂಕವಿಲ್ಲದಂತೆ ಬರಿಗೈಯಲ್ಲಿ ತಮ್ಮ ಹಳ್ಳಿಗಳಿಗೆ ಬಂದಿರುವುದು ಸಾಕಷ್ಟು ಉದಾಹರಣೆಗಳು ನಡೆದಿದ್ದಾವೆ. ಅವುಗಳನ್ನು ಮುಂದಿನ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಸಮುದಾಯ ಬದಲಾವಣೆ ಹೊಂದಬೇಕಾದರೆ ಶಿಕ್ಷಣ ಅತ್ಯಂತ ಅವಶ್ಯಕತೆ ಇದೆ. ಎಂದು ಶೇಕಡ ೮೨.೫ (೧೬೫) ಕುಟುಂಬಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಉಳಿದ ಶೇಕಡ ೧೭.೫ (೩೫) ಕುಟುಂಬಗಳು ಶಿಕ್ಷಣ ಪಡೆದರೇನು ಬಿಟ್ಟರೇನು ಏನು ಉಪಯೋಗವಿಲ್ಲ. ನಮ್ಮ ಬಾಳು ಇಷ್ಟೇ ಸಾಯೋವರೆಗು 'ಬಿಸಿಲು ಬಂಡೆ ಬೆಂಕಿ' ಜೊತೆಯಲ್ಲಿ ಕೆಲಸ ಮಾಡಬೇಕು. ಇದು ಬಿಟ್ಟರೆ ಬೇರೆಮಾರ್ಗ ಗೊತ್ತಿಲ್ಲ, ನಮಗೆ ಪೂರ್ವಜರ ಕಾಲದಿಂದಲೂ ನಾವು ದೇವಾಲಯಗಳನ್ನು, ಅಣೆಕಟ್ಟುಡಗಳು, ಶಿಲ್ಪಕಲೆಗಳನ್ನು ನಿರ್ಮಾಣ ಮಾಡುತ್ತಾ ಬಂದವರು ನಾವು, ಶಿಕ್ಷಣ ಪಡೆದು ನಮ್ಮಂತೆ ನಮ್ಮ ಮಕ್ಕಳು ಸಹ ನಮ್ಮ ವೃತ್ತಿಯನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಶಿಕ್ಷಣ ಪಡೆದರೆ ತಮ್ಮ ಕುಟುಂಬಗಳ ಪರಿಸ್ಥಿತಿ ಬದಲಾಗುತ್ತವೆ ಎಂದು ಶೇ. ೮೨.೫ ಅಭಿಪ್ರಾಯವನ್ನು ಸಕರಾತ್ಮಕವಾಗಿ ವ್ಯಕ್ತಪಡಿಸಿದ ವಿಷಯಗಳನ್ನು ವಿಶ್ಲೇಷಿಸಿದಾಗ, ಶೇಕಡ ೬೪ (೧೨೮) ಕುಟುಂಬಗಳು ಅನಾದಿಕಾಲದಿಂದಲೂ ಕಲ್ಲು ಮಣ್ಣಿನ ಕೆಲಸ ಮಾಡುತ್ತ ಇದ್ದಾರೆ. ಯಾಕೆಂದರೆ ಸರಿಯಾದ ಮಾಹಿತಿಯ ಕೊರತೆಯಿಂದ ಸರ್ಕಾರಗಳು ತಮಗೆ ಒದಗಿಸಿ ಕೊಟ್ಟು ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡಬೇಕಾಗಿದೆ. ಯಾಕೆಂದರೆ ಶೇಕಡ ೧೮.೫ (೩೭) ಕುಟುಂಬಗಳು ಪ್ರಸ್ತುತ ದಿನಮಾನಗಳಲ್ಲಿಯೂ ಸಹ ಚಿಕ್ಕವಯಸ್ಸಿನಲ್ಲಿಯೇ ಕುಡಿತದಂತ ದುಷ್ಟ ಚಟಗಳಿಗೆ ಬಲಿಯಾಗಿ ಅಲ್ಲಿ, ಇಲ್ಲಿ ಕೂಲಿ ಕೆಲಸ ಹುಡಿಕಿಕೊಂಡು ಹೋಗಿ ದುಡಿದ ಹಣವನ್ನೆಲ್ಲ ಮಧ್ಯಪಾನ ಮತ್ತು ದೂಮಪಾನ ದಂತಹ ಚಟುವಟಿಕೆಗಳಿಗೆ ಬಲಿಯಾಗಿ ಖರ್ಚು ಮಾಡುತ್ತ ಶಾಲೆಕಡೆ ಮುಖಮಾಡದೆ ತಿರುಗುತ್ತಾರೆ. ಎಂದು ಶೇಕಡ ೧೭.೫ (೩೫) ನಕರಾತ್ಮಕವಾಗಿ ಉತ್ತರಿಸುತ್ತಾರೆ. ಶೇಕಡ ೯.೫ (೧೯) ಕುಟುಂಬಗಳು ಹಿಂದಿನಿಂದಲೂ ಸಾಂಪ್ರಾದಾಯಿಕವಾಗಿ ಗುಡಿ ಗುಂಡಾರಗಳನ್ನು ಕಟ್ಟುತ್ತ, ಬಂದವರು ನಾವು. ನಮ್ಮ ಕುಲ ಕಸಬು ನಮ್ಮ ಕೈಯಲ್ಲಿದೆ. ಅಷ್ಟು ಸಾಕು ನಮಗೆ ನಾವು ಬದುಕಿಕೊಳ್ಳುತ್ತೇವೆ. ಹಳ್ಳಿ ಇಂದ ದಿಲ್ಲಿಯವರೆಗು ಸಹ ಹೋಗುತ್ತೇವೆ. ಕೆಲಸ ಕಲಿತ್ತಿದ್ದೇವೆ. ಆಸರೆಯಾಗಿ, ಶೇಕಡ ೮ (೧೬) ರಟ್ಟೆಯಲ್ಲಿ ಶಕ್ತಿ ಇರೋವರೆಗೂ ಕೂಲಿ

ಕೆಲಸ ಮಾಡಿ ಜೀವನ ನಡೆಸುತ್ತೇವೆ. ಶಿಕ್ಷಣ ಪಡೆದು ಕೆಲಸ ಸಿಗದೇ ಇನ್ನೊಬ್ಬರ ಬಳಿ ಹೋಗಿ ಅಲೆದಾಡುವುದು ನಮಗೆ ಇಷ್ಟವಿಲ್ಲವೆಂದು ಉತ್ತರಿಸುತ್ತಾರೆ.

ಭೋವಿ ಸಮುದಾಯದ ಸಂಬಂಧಿಕರು ತಮ್ಮ ಊರಿನವರು ಚಿಕ್ಕಪುಟ್ಟ ಸರ್ಕಾರಿ ನೌಕರಿ ಪಡೆದಿದ್ದು, ಪಟ್ಟಣಗಳಲ್ಲಿ ಇದ್ದಾರೆ. ನಮಗೆ ಆಗಲಿ ನಮ್ಮ ಊರಿಗಾಗಿ ಯಾವುದೇ ರೀತಿಯ ಸಹಾಯ ಮಾಡಿಲ್ಲ. ನಾವು ಕೇಳುವುದಿಲ್ಲ. ತಮ್ಮ ದುಡಿಮೆ ತಮಗೆ ಸಾಕು ಎನ್ನುತ್ತಾರೆ. ಯಾಕೆಂದರೆ ಅವರದ್ದು ಏನು ಕಷ್ಟವಿರುತ್ತದೆಯೋ ನಮಗೇನು ಗೊತ್ತು. ನಾವು ಅವರನ್ನು ಕೇಳುವುದಕ್ಕೇ ಸಹ ಹೋಗುವುದಿಲ್ಲ. ಯಾಕೆಂದರೆ ಶೇಕಡ ೨೭.೫ (೫೫) ಸಾಲ ಸೂಲ ಮಾಡಿ ಕಷ್ಟಬಿದ್ದು ಕೆಲಸಕ್ಕೆ ಸೇರಿಕೊಂಡಿದ್ದಾರೆ. ಅದನ್ನು ತಿರಿಸಿದರೆ ಸಾಕು ನಮಗೇನು ಕೊಡುವುದು ಬೇಡ. ಅವರ ಕುಟುಂಬಗಳನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗಲಿ. ಎಂದರೆ, ಶೇಕಡ ೫೯.೫ (೧೧೯) ಕಡಿಮೆ ದರ್ಜೆಯ ಹುದ್ದೆಯಲ್ಲಿರುವವರವರಿಂದ ಬರುವ ಸಂಬಳ ತಮ್ಮ ಹೆಂಡತಿ ಮಕ್ಕಳಿಗೆ, ಮನೆಬಾಡಿಗೆಗೆ ಸರಿ ಹೋಗುತ್ತದೆ. ಅವರು ಚನ್ನಾಗಿರಲಿ ಸಾಕು ನಮ್ಮ ಊರಿನವರು ಎಂದು ಹೇಳಿಕೊಳ್ಳುವುದಕ್ಕೆ ಹೆಸರು ಇರಲಿ, ನಮಗೆ ಎನ್ನುತ್ತಾರೆ. ಶೇಕಡ ೧೩ (೨೬) ಕುಟುಂಬಗಳು ಹೀಗೆ ಹೇಳುತ್ತವೆ. ಸಮುದಾಯದಲ್ಲಿ ದೊಡ್ಡ ಕೆಲಸದಲ್ಲಿ ಯಾರು ಇಲ್ಲ. ಪೋಲಿಸ್, ಅಂಗನವಾಡಿ ಸಹಾಯಕಿ ಮತ್ತು ಶಾಲೆಯಲ್ಲಿ ಅಡುಗೆ ಸಹಾಯಕಿಯಾಗಿ ಮತ್ತು ಇತರೆ ಡಿ ಗ್ರೂಪ್ ಕೆಲಸದಲ್ಲಿದ್ದಾರೆ. ಬರುವ ಸಂಬಳ ಅವರಿಗೆ ಸರಿಹೋಗುವುದಿಲ್ಲ. ಊರಿಗೆ ಮತ್ತು ಸಮುದಾಯದ ಅಭಿವೃದ್ಧಿ ಮಾಡಲು ಹೇಗೆ ಸಾಧ್ಯ? ಎನ್ನುವ ಮಾತುಗಳನ್ನು ಆಡುತ್ತಾರೆ.

೬.೧.೨ ಆರೋಗ್ಯ

ಭೋವಿ ಸಮುದಾಯದ ಕುಟುಂಬಗಳ ಆರೋಗ್ಯದ ವಿಚಾರಧಾರೆಗಳನ್ನು ತಿಳಿಯಲು ಹೋದಾಗ, ಶೇಕಡ ೧೧.೫ (೨೩) ಕುಟುಂಬಗಳಿಗೆ ಆರೋಗ್ಯದ ಸಮಸ್ಯೆಗಳು ಇರುವುದು ದೃಢಪಟ್ಟಿದೆ. ಶೇಕಡ ೮೮.೫ (೧೭೭) ಕುಟುಂಬಗಳಿಗೆ ಯಾವುದೇ ರೀತಿಯ ಖಾಯಿಲೆಗಳು ಇಲ್ಲ. ಯಾಕೆಂದರೆ ಶ್ರಮ ಜೀವಿಗಳು ಸಮುದಾಯದಲ್ಲಿದ್ದರೆ, ದಿನನಿತ್ಯ ಕಲ್ಲು ಬಂಡೆಗಳ ಜೊತೆ ಯುದ್ದ ಮಾಡುತ್ತ ಇರುತ್ತಾರೆ. ಅವರ ಬಳಿ ಯಾವುದೇ ವಿಧವಾದ ಖಾಯಿಲೆಗಳು ಸುಳಿಯುವುದಿಲ್ಲ ಎನ್ನುತ್ತಾರೆ. ಶೇಕಡ ೧೧.೫ ಕುಟುಂಬಗಳಿಗೆ ಮಾತ್ರ ಖಾಯಿಲೆಗಳಿಂದ ಬಳಲಿ ಚೇತರಿಸಿಕೊಂಡಿದ್ದಾರೆ. ಯಾವ ಖಾಯಿಲೆಗಳು ಎಂದು ನೋಡಿದಾಗ, ಏನು ಮಾಡುವುದು ನಮ್ಮ ಗ್ರಹಚಾರ ಇವುಗಳು ನಮಗೆ ಬರಬೇಕಾ ಎಂದು ಉಚ್ಚಾರಿಸುತ್ತ ಉತ್ತರಿಸುತ್ತಾರೆ.

ಕೋಷ್ಟಕ ೬.೬ ಭೋವಿ ಸಮುದಾಯದವರಿಗೆ ಕಾಡುವ ಕಾಯಿಲೆಗಳ ವಿವರಗಳು

ಕ್ರಸಂ	ಭೋವಿ ಸಮುದಾಯದವರಿಗೆ ಕಾಡುವ ಕಾಯಿಲೆಗಳ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಚಿಕ್ಕ ಪುಟ್ಟ ಜ್ವರ ಕೆಮ್ಮು ನೆಗಡಿ	೪	೬	೧೦	೫
೨	ಚರ್ಮ ಕಾಯಿಲೆಗಳು	೦	೧	೧	೦.೫
೩	ಅಂಗವಿಕಲತೆ	೧	೧	೨	೧
೪	ವಿಪರೀತ ಕೈ ಕಾಲು ನೋವು	೦	೭	೭	೩.೫
೫	ಕರುಳಿನ ಶಸ್ತ್ರ ಚಿಕಿತ್ಸೆ	೦	೧	೧	೦.೫
೬	ಮೂಳೆ ಶಸ್ತ್ರ ಚಿಕಿತ್ಸೆ	೦	೧	೧	೦.೫
೭	ಪೌಷ್ಠಿಕಾಂಶದ ಕೊರತೆ	೧	೦	೧	೦.೫
	ಒಟ್ಟು	೬	೧೭	೨೩	೧೧.೫

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ,೨೦೧೯.

ಕೋಷ್ಟಕ ೬.೬ ರಲ್ಲಿ ಉಲ್ಲೇಖ ಮಾಡಿರುವಂತೆ, ಶೇಕಡ ೫ (೧೦) ಕುಟುಂಬಗಳಿಗೆ ಚಿಕ್ಕ ಪುಟ್ಟ ಜ್ವರ, ಕೆಮ್ಮು, ಸರ್ವೆಸಾಮಾನ್ಯವಾಗಿ ಬರುತ್ತವೆ. ಅವುಗಳೆಲ್ಲವುಗಳಿಗೆ ಯಾವುದೇ ರೀತಿಯ ಭಯಪಡುವುದಿಲ್ಲ. ಅವರು ಅಸ್ಪತ್ರೆಕಡೆ ಮುಖನೂ ಮಾಡಲ್ಲ. ಅವುಗಳಂತೆ ಅವು ಬಿಟ್ಟುಹೋಗಬೇಕು ಎನ್ನುವ ನಂಬಿಕೆ ಇಂದ ಬದುಕುತ್ತ ಇದ್ದಾರೆ. ಶೇಕಡ ೦.೫ ಚರ್ಮದ ಖಾಯಿಲೆಗಳಿಂದ ೫ವರ್ಷದ ಮಕ್ಕಳಿಗೆ ಮತ್ತು ೪೫ ವರ್ಷದ ಮೇಲಿನವರು ಇದರೊಂದಿಗೆ ೫ ಮತ್ತು ೧೦ ವರ್ಷಗಳಿಂದ ನರಳುತ್ತಿದ್ದಾರೆ. ಗುಣಮುಖವಾಗದೆ, ಶೇಕಡ ೧ (೨) ಅಂಗವಿಕಲತೆ ಇರುವುದರಿಂದ ೧೫ ವರ್ಷದ ಮಕ್ಕಳು ತಮ್ಮ ಶಾಲೆಗಳಲ್ಲಿ ಸ್ನೆಹಿತರು ಅಂಗವಿಕಲ ಎಂದು ಗೇಲಿ ಮಾಡುವುದರಿಂದ, ಶಾಲೆಗಳಕಡೆ ಮುಖ ಮಾಡದೆ ತಮ್ಮ ತಂದೆ ತಾಯಿಗಳೊಂದಿಗೆ ಪಟ್ಟಣಗಳ ಕಡೆ ವಲಸೆ ಹೋಗುತ್ತಾರೆ. ಶೇಕಡ ೩.೫ ಕುಟುಂಬಗಳು ೪೫ ವರ್ಷದ ನಂತರ ವಿಪರೀತ ಕೈಕಾಲು ನೋವುಗಳಿಂದ ಬಳಲುತ್ತಾರೆ. ಅದರಲ್ಲಿ ಕಲ್ಲು ಹೊಡೆಯುವ ಕೆಲಸಗಾರರು ಹದಿಹರೆಯದ ವಯಸ್ಸಿನಲ್ಲಿರುವಾಗ, ಹಣದ ಆಸೆಗಾಗಿ ೫೦೦ ರಿಂದ ೧೦೦೦, ಮತ್ತು ೧೫೦೦ ಸಾವಿರ ಕಲ್ಲುಗಳನ್ನು ದಿನಕ್ಕೆ ಹೊಡೆಯುತ್ತಾರೆ. ಅದು ಮುಪ್ಪು ವಯಸ್ಸಿನಲ್ಲಿ ಅದರ ನೋವುಗಳು ಕಾಣಿಸಿಕೊಂಡಿವೆ ಎಂದು ಉತ್ತರಿಸುತ್ತಾರೆ.

ಶೇಕಡ ೦.೫ (೧) ಕರುಳಿನ ಶಸ್ತ್ರ ಚಿಕಿತ್ಸೆಗೆ ಎರಡು ಕುಟುಂಬಗಳಲ್ಲಿ ೨ವರ್ಷದ ಒಳಗಿನ ಮಕ್ಕಳು ಸಿಗುತ್ತವೆ. ಶೇಕಡ ೦.೫ (೧) ಮೂಳೆ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಕಲ್ಲು ಮಣ್ಣಿನ ಕೆಲಸ

ತಮ್ಮಿಂದ ಆಗದೆ ತಮ್ಮ ಮಕ್ಕಳನ್ನು ಶಾಲೆ ಕಾಲೇಜುಗಳನ್ನು ಬಿಡಿಸಿ, ಕಾರ್ಖಾನೆ ಅಥವಾ ಕೂಲಿ ಕೆಲಸಕ್ಕೆ ಪಟ್ಟಣಗಳಿಗೆ ಕಳಿಸಿರುವ ಜೀವನ ನಡೆಸುತ್ತಿರುವ ಪ್ರಸಂಗಗಳು ಕಂಡುಬರುತ್ತವೆ. ಶೇಕಡ ೦.೫ ೯೧) ಪೌಷ್ಠಿಕಾಂಶದ ಕೊರತೆಯಿಂದ ಗರ್ಭಿಣಿಯರು ಮರಣ ಹೊಂದಿದ ಪ್ರಸಂಗ ತಿಳಿಯುತ್ತದೆ. ಕಣವಿಜೋಗಹಳ್ಳಿಯಲ್ಲಿ ಕಂಡುಬರುತ್ತದೆ. ತಾಯಿಯನ್ನು ಕಳಕೊಂಡು ೨ ಮಕ್ಕಳು ಜೊತೆಯಲ್ಲಿ ವಯಸ್ಸಾಗಿರುವ ತಂದೆ, ಕಡು ಬಡತನದಿಂದ ಆ ಕುಟುಂಬ ದೇವಸ್ಥಾನದಲ್ಲಿ ವಾಸಮಾಡುತ್ತ ಇರುತ್ತಾರೆ. ಮೊದಲನೆ ಹೆರಿಗೆ ಸಂದರ್ಭದಲ್ಲಿ ಮಹಿಳೆಗೆ ವೈದ್ಯರು ಸಲಹೆಗಳನ್ನು ನೀಡಿರುತ್ತಾರೆ. ಮುಂದಿನ ದಿನಗಳಲ್ಲಿ ನೀನು ಗರ್ಭಧರಿಸಬೇಡ ಶಸ್ತ್ರಚಿಕಿತ್ಸೆ ಮಾಡಿಸಿಕೋ ನಿನಗೆ ಕಬ್ಬಿಣ ಅಂಶದ ಕೊರತೆ ಇರುವುದರಿಂದ. ರಕ್ತ ಬಹಳ ಕಡಿಮೆ ಇದೆ. ಪೌಷ್ಟಿಕಾಂಶದ ಊಟ ಸೇವಿಸುತ್ತ, ಆರೋಗ್ಯದ ಕಡೆ ಗಮನಹರಿಸಬೇಕಿದೆ. ಜಾಗ್ರತೆ ಇಂದ ಇರು ಎಂದು ಸಲಹೆಗಳನ್ನು ಕೊಟ್ಟಿರುತ್ತಾರೆ.

ಅವರ ಯಾವ ಸಲಹೆ ಸೂಚನೆಗಳನ್ನು ಪಾಲನೆ ಮಾಡದೆ, ಒಂದು ವರ್ಷದ ನಂತರ ಪುನಃ ಗರ್ಭಧರಿಸಿ ಹೆಣ್ಣು ಮಗುವಿಗೆ ಜನ್ಮ ನೀಡಿ ಮರಣ ಹೊಂದುತ್ತಾಳೆ. ತದ ನಂತರ ಆ ಹೆಣ್ಣು ಮಗುವಿನ ಜೊತೆಯಲ್ಲಿ ೨ ವರ್ಷದ ಗಂಡು ಮಗು ಮತ್ತು ಅವರ ತಂದೆ (ಗರ್ಭಿಣಿ ಗಂಡ) ಬೀದಿಯಲ್ಲಿ ವಾಸ ಮಾಡುತ್ತ ಇರುತ್ತಾರೆ. ಅವರ ಸ್ಥಿತಿಯನ್ನು ನೋಡಲಾರದೆ ಆ ಕೇರಿಯ ಕುಟುಂಬಗಳು ಮುಂದೆ ಬಂದು ದಿನನಿತ್ಯ ಒಂದೊಂದು ಮನೆಯಲ್ಲಿ ಒಂದು ದಿನ ಊಟೋಪಚಾರ ನೋಡಿಕೊಳ್ಳುತ್ತ ಇರುತ್ತಾರೆ. ನಾನು ಕ್ಷೇತ್ರ ಕಾರ್ಯವನ್ನು ೨೦೧೯ ಜನವರಿ ತಿಂಗಳಲ್ಲಿ ಗ್ರಾಮಕ್ಕೆ ಭೇಟಿ ನೀಡಿದಾಗ, ಗಂಡು ಮಗುವಿನ ವಯಸ್ಸು ೮ ವರ್ಷ ಹೆಣ್ಣು ಮಗುವಿನ ವಯಸ್ಸು ೭ ವರ್ಷಗಾಗಿರುತ್ತದೆ. ಒಂದು ಒಪ್ಪತ್ತಿಗೆ ಊಟ ಸಿಗುವುದು ಕಷ್ಟ. ಶಾಲೆಗೆ ಹೋಗುವುದು ಕನಸ್ಸಿನ ಮಾತು. ಇವರಿಗೆ ಮುಖ್ಯವಾದ ಸಂಗತಿ ಏನೆಂದರೆ, ೭ ವರ್ಷದ ಹೆಣ್ಣು ಮಗು ತಮ್ಮ ಕೇರಿಯ ಸಂಬಂಧಿಕರ ಮನೆಗಳಿಗೆ ಹೋಗಿ ಆಹಾರವನ್ನು ಸಂಗ್ರಹಿಸಿಕೊಂಡು ಬಂದು. ತನ್ನ ಅಣ್ಣ ಮತ್ತು ತಂದೆಗೆ ಊಟ ಮಾಡಿಸುವ ಚಿತ್ರಣ ಕರಳು ಚುಚ್ಚುವಂತೆ ಕಂಡುಬರುತ್ತದೆ. ಮೇಲಿನ ಖಾಯಿಲೆಗಳ ಪರಿಹಾರಕ್ಕೆ ಸಮುದಾಯದ ಕುಟುಂಬಗಳು ಶೇಕಡ ೭. (೧೪) ಸರಕಾರಿ ಅಸ್ಪತ್ರೆ, ಶೇಕಡ ೪ (೮) ಕುಟುಂಬಗಳು ಖಾಸಗಿ ಅಸ್ಪತ್ರೆಗಳಿಗೆ ಮತ್ತು ಶೇಕಡ ೦.೫ (೧) ವಿಪರೀತ ಕೈ ಕಾಲುಗಳ ನೋವುಗಳಿಂದ ಬಳಲುವ ಕುಟುಂಬಗಳು ಸರಕಾರಿ ಮತ್ತು ಖಾಸಗಿ ಅಸ್ಪತ್ರೆಗಳ ಕಡೆ ಒಮ್ಮೆಯೂ ಮುಖ ಮಾಡದೆ ನಾಟಿ ವೈದ್ಯರಿಂದ ಚಿಕತ್ಸೆ ಪಡೆದುಕೊಳ್ಳುತ್ತಾರೆ. ಮತ್ತು ಮೇಲಿನ ಕಾಯಿಲೆಗಳಿಗೆ ಭೋವಿ ಸಮುದಾಯದವರು ಖರ್ಚುಮಾಡಿದ ಹಣದ ವಿವರಗಳನ್ನು ಕೆಳಕಂಡತೆ ನೋಡಬಹುದು.

ಕೋಷ್ಟಕ ೬.೭ ಕಾಯಿಲೆಗಳಿಗಾಗಿ ಭೋವಿ ಸಮುದಾಯದವರು ವಾರ್ಷಿಕ ಔಷಧಿಗಾಗಿ ಖರ್ಚುಮಾಡಿದ ಹಣದ ವಿವರಗಳು

ಕ್ರ ಸಂ	ಕಾಯಿಲೆಗಳಿಗಾಗಿ ಭೋವಿ ಸಮುದಾಯದವರು ವಾರ್ಷಿಕ ಔಷಧಿಗಾಗಿ ಖರ್ಚುಮಾಡಿದ ಹಣದ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	೩ ರಿಂದ ೫ ಸಾವಿರ	೨	೮	೧೦	೫
೨	೫ ರಿಂದ ಹತ್ತು ಸಾವಿರ	೩	೪	೭	೩.೫
೨	೧೫ ರಿಂದ ೨೦ ಸಾವಿರ	೦	೩	೩	೧.೫
೩	೨೫ ರಿಂದ ೫೦ ಸಾವಿರ	೦	೧	೧	೦.೫
೪	೬೦ ಸಾವಿರಕ್ಕಿಂತ ಹೆಚ್ಚು	೦	೧	೧	೦.೫
೫	ಉಚಿತ	೧	೦	೧	೦.೫
	ಒಟ್ಟು	೬	೧೭	೨೩	೧೧.೫

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಮೇಲಿನ ೬.೭ರ ಕೋಷ್ಟಕವನ್ನು ಗಮನಿಸಿದಾಗ, ಸಮುದಾಯದವರು ತಮ್ಮ ಆರೋಗ್ಯಕ್ಕಾಗಿ ಸರ್ಕಾರಿ, ಖಾಸಗಿ ಮತ್ತು ನಾಟಿ ವೈದ್ಯರಿಂದ ಚಿಕಿತ್ಸೆ ಪಡೆಯಲು ಖರ್ಚು ಮಾಡಿದ ವಿವರಗಳನ್ನು ವಿಶ್ಲೇಷಿಸಿದಾಗ, ಮೂರು ಸಾವಿರದಿಂದ ಐದುಸಾವಿರ ರೂಪಾಯಿಗಳು ಖರ್ಚುಮಾಡಿದರು. ಶೇಕಡ ೫ (೧೦), ೫೦೦೦ ಸಾವಿರದಿಂದ ೧೦,೦೦೦ಸಾವಿರ ಖರ್ಚು ಮಾಡಿದ ಕುಟುಂಬಗಳು ಶೇಕಡ ೩.೫ (೭), ೧೫.೦೦೦ದಿಂದ ೨೦.೦೦೦ ಸಾವಿರ ರೂಪಾಯಿಗಳು, ಶೇಕಡ ೧.೫ (೩), ೨೫.೦೦೦ ದಿಂದ ೫೦,೦೦೦ ಸಾವಿರ ಶೇಕಡ ೦.೫ (೧), ೬೦.೦೦೦ ಸಾವಿರಕ್ಕಿಂತ ಹೆಚ್ಚು ಶೇಕಡ ೦.೫ (೧), ಖರ್ಚುಮಾಡಿ ತಮ್ಮ ಆರೋಗ್ಯವನ್ನು ಸುಧಾರಿಸಿಕೊಂಡರೆ, ಶೇಕಡ ೦.೫ (೧) ಕುಟುಂಬಗಳು ಸರಕಾರಿ ಅಸ್ಪತ್ರೆಗಳಲ್ಲಿ ಚಿಕ್ಕ ಪುಟ್ಟ ಜ್ವರ, ಕೆಮ್ಮುಗೆ ಉಚಿತ ಚಿಕಿತ್ಸೆ ಪಡೆದಿರುವುದು ತಿಳಿಯುತ್ತದೆ. ಆರೋಗ್ಯಕ್ಕಾಗಿ ಸರಕಾರದ ಯೋಜನೆಗಳು ಭೋವಿ ಸಮುದಾಯಕ್ಕೆ ಎಷ್ಟು ಪ್ರಮಾಣದಲ್ಲಿ ತಿಳಿದಿದೆ ಎಂದು ನೋಡಿದಾಗ, ಶೇಕಡ ೨೭ (೫೪) ಕುಟುಂಬಗಳಿಗೆ ಮಾತ್ರ ಯೋಜನೆಗಳ ಅರಿವು ಮತ್ತು ಮಾಹಿತಿ ಇದೆ. ಶೇಕಡ ೭೩ (೧೪೬) ಕುಟುಂಬಗಳಿಗೆ ಆರೋಗ್ಯಕ್ಕಾಗಿ ಇರುವ ಯೋಜನೆಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದು ವಿವರಿಸುತ್ತಾರೆ. ಶೇಕಡ ೨೭ ಕುಟುಂಬಗಳಿಗೆ ಯೋಜನೆಗಳ ಬಗ್ಗೆ ಮಾಹಿತ ಇರುವುದು ತಿಳಿಯುತ್ತದೆ. ಆ ಯೋಜನೆಗಳು ಯಾವುವು ಎಂದು ಕೇಳಿದಾಗ, ಶೇಕಡ ೭ (೧೪) ಯಶಸ್ವಿನಿ ಕಾರ್ಡ್, ಇದು

ಗ್ರಾಮದಲ್ಲಿರುವ ಸಹಕಾರಿ ಬ್ಯಾಂಕ್‌ಗಳಲ್ಲಿ ಇದನ್ನು ಮಾಡಿಕೊಡುತ್ತಾರೆ ಎನ್ನುತ್ತಾರೆ. ಶೇಕಡ ೪ (೮) ಭೀಮಾಕಾರ್ಡ್ ಬಗ್ಗೆ ಮಾಹಿತಿ ಇದೆ. ಇದನ್ನು ಎನ್.ಜಿ.ಓ. ಗಳು ಕ್ಯಾಂಪ್ ಹಾಕಿ ಗ್ರಾಮಪಂಚಾಯಿತಿಗಳಲ್ಲಿ ಮಾಡಿಕೊಡುತ್ತಾರೆ. ಶೇಕಡ ೨.೫ (೫) ಆರೋಗ್ಯ ಕಾರ್ಡ್ ಬಗ್ಗೆ ಮಾಹಿತಿ ಹೇಳುತ್ತಾರೆ. ಇದು ಹೊಸದಾಗಿ ಮೋದಿಯವರು ಜಾರಿಗೆ ತಂದು ಮನೆಗಳಿಗೆ ಅಂಚೆ ಮುಖಾಂತರ ಕಳಿಸಿದ್ದಾರೆ. ಉಳಿದ ಶೇಕಡ ೧೩.೫ (೨೭) ಬಿಪಿಎಲ್ ಕಾರ್ಡ್ ಬಗ್ಗೆ ಮಾಹಿತಿ ಪಡೆದುಕೊಂಡಿರುವುದು ತಿಳಿಸುತ್ತಾರೆ.

ಮೇಲಿನ ಸೌಲಭ್ಯಗಳಲ್ಲಿ ಲಾಭ ಪಡೆದವರು ಶೇಕಡ ೪.೫ (೯) ಯಶಸ್ವಿನಿ ಕಾರ್ಡ್‌ಮೂಲಕ ಮಣಿಪಾಲ್ ಮತ್ತು ಇತರೆ ಹೈಟೆಕ್ ಅಸ್ಪತ್ರೆಗಳಲ್ಲಿ ಇದರ ಉಪಯೋಗವನ್ನು ಪಡೆದುಕೊಂಡರೆ, ಶೇಕಡ ೧೩.೫ (೨೭) ಕುಟುಂಬಗಳು ಚಿಕ್ಕಪುಟ್ಟ ಖಾಯಿಲೆಗಳಿಗೆ ಮತ್ತು ಮುಖ್ಯವಾಗಿ ಗರ್ಭಿಣಿಯರಿಗೆ ಚಿಕಿತ್ಸೆ ಕೊಡಿಸುವುದರಿಂದ ಹಿಡಿದು, ಹೆರಿಗೆ ಆಗುವವರೆಗೂ ಇದರ ಬಳಕೆ ಆಗಿದೆ. ಆದರೆ ಮೇಲಿನ ಸರ್ಕಾರಿ ಯೋಜನೆಗಳನ್ನು ಪಡೆದುಕೊಳ್ಳುವಲ್ಲಿ ಎದುರಿಸುವ ಸಮಸ್ಯೆಗಳೆಂದರೆ, ಶೇಕಡ ೩೩.೫ (೬೭) ಕುಟುಂಬಗಳಿಗೆ ಅವರು ಅಳವಡಿಸಿರುವ ವಿಧಾನಗಳು ಕ್ಲಿಷ್ಟಕರ ಮತ್ತು ನಿಧಾನಗತಿಯಲ್ಲಿ ತಲುಪುತ್ತವೆ. ಶೇಕಡ ೩೮.೫ (೭೭) ಕುಟುಂಬಗಳಿಗೆ ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಾರೆ ಮತ್ತು ಪದೇ ಪದೆ ತಿರುಗಾಡಿಸುತ್ತಾರೆ. ಆದ್ದರಿಂದ ಸರ್ಕಾರದಿಂದ ಬರುವ ಆರೋಗ್ಯ ಸವಲತ್ತುಗಳು ಸಮುದಾಯದ ಶೇಕಡ ೭ (೧೪) ಕುಟುಂಬಗಳಿಗೆ ಉಪಯೋಗವಾದರೆ ಶೇಕಡ ೯೩ (೧೮೬) ಕುಟುಂಬಗಳಿಗೆ ಯಾವುದೇ ಆರೋಗ್ಯದ ಖರ್ಚುಗಳನ್ನು ಸರ್ಕಾರ ವೆಚ್ಚ ಮಾಡುವುದಿಲ್ಲ, ಆದ್ದರಿಂದ ಅವರು ಶೇಕಡ ೫೯ (೧೧೮) ಕುಟುಂಬಗಳು ಸ್ವಂತ ತಮ್ಮ ಬಳಿ ಅಲ್ಪ ಸ್ವಲ್ಪ ಮಕ್ಕಳ ಮದುವೆಗೆ ಮತ್ತು ಶಿಕ್ಷಣಕ್ಕಾಗಿ ಕೂಡಿ ಇಟ್ಟಿರುವ ಹಣವನ್ನು ಖರ್ಚುಮಾಡಿದರೆ, ಶೇಕಡ ೩೪ (೬೮) ಕುಟುಂಬಗಳು ಊರಿನ ಸ್ನೇಹಿತರ ಬಳಿ ೨ ರೂಪಾಯಿಗಳಿಂದ ೧೦ ರೂಪಾಯಿಗಳವರೆಗೆ ಅನಿವಾರ್ಯವಾಗಿ ಬಡ್ಡಿಗೆ ಸಾಲ ಮಾಡಬೇಕಾಗುತ್ತದೆ.

೬.೧.೩. ವಸತಿ

ಭೋವಿ ಸಮುದಾಯದವರು ವಾಸ ಮಾಡುವ ಮನೆಗಳ ಅವಲೋಕನ ಮಾಡಿ ನೋಡಿದಾಗ ಆರ್.ಸಿ.ಸಿ, ಮಾಳಿಗೆ ಮನೆ, ಮಂಗಳೂರು ಹೆಂಚು, ಸರ್ಕಾರಿ, ಅರೆ ಸರ್ಕಾರಿ, ಗುಡಿಸಲು, ಮತ್ತು ಬಾಡಿಗೆ ಮನೆಗಳಲ್ಲಿ ವಾಸಮಾಡುವುದು ಕಂಡು ಬರುತ್ತದೆ. ಎಷ್ಟು ಪ್ರಮಾಣದಲ್ಲಿ ವಾಸಮಾಡುತ್ತಾರೆ ಎನ್ನುವ ವಿವರಗಳನ್ನು ಕೆಳಕಂಡ ಕೋಷ್ಟಕದ ಮೂಲಕ ತಿಳಿಯಬಹುದು.

ಕೋಷ್ಟಕ ೬.೮ ಭೋವಿ ಸಮುದಾಯದವರ ಕುಟುಂಬಳು ವಾಸಿಸುವ ಮನೆಗಳ ಸ್ವರೂಪದ ವಿವರಗಳು

ಕ್ರಸಂ	ಭೋವಿ ಸಮುದಾಯದವರ ಕುಟುಂಬಳು ವಾಸಿಸುವ ಮನೆಗಳ ಸ್ವರೂಪದ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಆರ್.ಸಿ.ಸಿ	೪	೫	೯	೪.೫
೨	ಮಾಳಿಗೆ ಮನೆ	೨೮	೫೭	೮೫	೪೨.೫
೩	ಮಂಗಳೂರು ಹೆಂಚು	೧೬	೪	೨೦	೧೦
೪	ಸರ್ಕಾರಿ	೨೦	೨೪	೪೪	೨೨
೫	ಅರೆ ಸರ್ಕಾರಿ	೦	೦	೦	೦
೬	ಗುಡಿಸಲು	೨೭	೦	೨೭	೧೩.೫
೭	ಬಾಡಿಗೆ	೫	೧೦	೧೫	೭.೫
	ಒಟ್ಟು	೧೦೦	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

೬.೮ ಕೋಷ್ಟಕದಲ್ಲಿರುವಂತೆ ಶೇಕಡ ೪.೫ (೯) ಕುಟುಂಬಗಳಿಗೆ ಆರ್.ಸಿ.ಸಿ. ಮನೆಗಳು, ಶೇಕಡ ೪೨.೫ (೮೫) ಕುಟುಂಬಗಳಿಗೆ ಮಾಳಿಗೆ ಮನೆಗಳು, ಶೇಕಡ ೧೦ (೨೦) ಕುಟುಂಬಗಳಿಗೆ ಮಂಗಳೂರು ಹೆಂಚು, ಶೇಕಡ ೨೨ (೪೪) ಕುಟುಂಬಗಳಿಗೆ ಸರ್ಕಾರದ ಯೋಜನೆಗಳಾದ ಅಂಬೇಡ್ಕರ್, ಇಂದಿರಾ, ಬಸವ ಮತ್ತು ಇತರೆ ಯೋಜನೆಗಳಿಂದ ಜನತಾ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರ ಆರ್ಥಿಕ ಧನ ಸಹಾಯ ಮಾಡಿರುವುದರಿಂದ, ಸಮುದಾಯದಲ್ಲಿರುವ ಕಡು ಬಡವರಿಗೆ ಅನುಕೂಲವಾಗಿದೆ. ಮತ್ತು ಅರೆ ಸರ್ಕಾರಿ ಯೋಜನೆಯ ಸಹಾಯವನ್ನು ಯಾರು ಸಹ ಪಡೆದುಕೊಂಡಿಲ್ಲ. ಶೇಕಡ ೧೩.೫(೨೭) ಕುಟುಂಬಗಳು ಗುಡಿಸಲಲ್ಲಿ ವಾಸಮಾಡುವುದು ಕಂಡುಬರುತ್ತದೆ. ತೌಲನಿಕವಾಗಿ ನೋಡಿದಾಗ, ರಾಮೇನಹಳ್ಳಿಯಲ್ಲಿ ಒಂದು ಕುಟುಂಬ, ಕಣವಿ ಜೋಗಿಹಳ್ಳಿಯಲ್ಲಿ ಒಂದು ಕುಟುಂಬ, ಹಾಗೂ ಮಾರುತಿಹಳ್ಳಿಯಲ್ಲಿ ೨೫ ಕುಟುಂಬಗಳು ಸರ್ಕಾರಿ ಕೊಟ್ಟ ಗೋಮಳದಲ್ಲಿ ಚಿಕ್ಕ ಚಿಕ್ಕ ಗುಡಿಸಲುಗಳನ್ನು ಹಾಕಿಕೊಂಡು ಅರಣ್ಯದಲ್ಲಿ ೧೨ ವರ್ಷಗಳಿಂದ ವಾಸಮಾಡುತ್ತ ಇದ್ದಾರೆ. ಇವರ ಮನೆಗಳಿಗೆ ರಸ್ತೆ, ಚರಂಡಿ, ಬೀದಿದೀಪಾ, ನಳಾ, ವಿದ್ಯುತ್ ಇತರೆ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳು ಮಾರುತಿಹಳ್ಳಿ ಕುಟುಂಬಗಳಿಗೆ ಮರೀಚಿಕೆಯಾಗಿದೆ. ಉಳಿದ ಶೇಕಡ ೭.೫(೧೫) ಕುಟುಂಬಗಳು ಜನರ ಬಾಡಿಗೆ ಮನೆಗಳಲ್ಲಿ ವಾಸಮಾಡುತ್ತ ಇದ್ದಾರೆ. ಹೊಳಲ್ಕೆರೆ ತಾಲ್ಲೂಕಿನ ಬೋರೆನಹಳ್ಳಿ ೨, ರಾಮೇನ ಹಳ್ಳಿ ೧, ಕಣವಿಜೋಗಿಹಳ್ಳಿ ೩, ಸೇರಿ ಒಟ್ಟು ೫ ಕುಟುಂಬಗಳು, ಹಾಗೂ ಮೊಳಕಾಲ್ಮೂರು ತಾಲ್ಲೂಕಿನ ಸಿದ್ಧಯ್ಯನ ಕೋಟೆ ೨, ಜಯಂತಿನಗರ ೩, ಚಿಕ್ಕೇರಹಳ್ಳಿ ೨, ಮತ್ತು ನಾಗಸಮುದ್ರ ೩, ಸೇರಿ ಒಟ್ಟು ೧೦ ಕುಟುಂಬಗಳು ಮನೆಯಿಲ್ಲದೆ ಬಾಡಿಗೆ ಮನೆಯಲ್ಲಿ

ವಾಸಮಾಡುತ್ತಿದ್ದಾರೆ. ಹೊಳಲ್ಕೆರೆ ತಾಲ್ಲೂಕಿಗಿಂತ ಮೊಳಕಾಲ್ಮೂರು ತಾಲ್ಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಾಡಿಗೆ ಮನೆಯಲ್ಲಿದ್ದಾರೆ. ಹೊಳಲ್ಕೇರೆ ತಾಲ್ಲೂಕಿನ ಗ್ರಾಮಗಳಲ್ಲಿ ಗುಡಿಸಲು ಮನೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದು ತಿಳಿಯುತ್ತದೆ.

೬.೧.೪ ನೈರ್ಮಲ್ಯ

ಸುತ್ತಮುತ್ತಲಿನ ಪರಿಸರ ಸ್ವಚ್ಚವಾಗಿರಬೇಕಾದರೆ, ಪ್ರತಿ ಮನೆಗಳಲ್ಲಿ ಶೌಚಾಲಯ ಇರಬೇಕಾಗುತ್ತದೆ. ಸಮುದಾಯದ ಕುಟುಂಬಗಳು ಎಷ್ಟು ಪ್ರಮಾಣಲ್ಲಿ ಶೌಚಾಲಯಗಳನ್ನು ಹೊಂದಿದೆ. ಎಂದರೇ ಶೇಕಡ ೩೬(೧೨೬) ಕುಟುಂಬಗಳಿಗೆ ಸರಕಾರ ಮತ್ತು ಸ್ವಂತ ಬಂಡವಾಳದಿಂದ ಕಟ್ಟಿಕೊಂಡಿದ್ದಾರೆ. ಶೇಕಡ ೩೭(೭೪) ಕುಟುಬಂಗಳಿಗೆ ಶೌಚಾಲಯಗಳು ಇರುವುದಿಲ್ಲ.

ಕೋಷ್ಟಕ ೬.೯ ಭೋವಿ ಸಮುದಾಯದವರು ದಿನನತ್ಯ ಬಳಕೆ ಮಾಡುವ ಶೌಚಾಲಯಗಳ ಸ್ಥಿತಿ ಹೇಗಿದೆ ಎನ್ನುವ ವಿವರಗಳು

ಕ್ರಸಂ	ಭೋವಿ ಸಮುದಾಯದವರು ದಿನನಿತ್ಯ ಬಳಕೆ ಮಾಡುವ ಶೌಚಾಲಯಗಳ ಸ್ಥಿತಿ ಹೇಗಿದೆ ಎನ್ನುವ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಮನೆಯ ಒಳಗೆ	೩೨	೨೬	೫೮	೨೯
೨	ಮನೆತಾಗಿ	೬	೩೯	೪೫	೨೨.೫
೩	ಹೊರಗಡೆ	೯	೧೪	೨೩	೧೧.೫
	ಒಟ್ಟು	೪೭	೭೯	೧೨೬	೬೩
	ಶೌಚಾಲಯ (ಇಲ್ಲದಿದ್ದರೆ)				
೧	ಸಮುದಾಯ ಶೌಚಾಲಯ	೬	೧೦	೧೬	೮
೨	ಹೊಲಕ್ಕೆ	೪೭	೧೧	೫೮	೨೯
	ಒಟ್ಟು	**೫೩**	**೨೧**	**೭೪**	**೩೭**

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೯ ರಲ್ಲಿರುವಂತೆ ಶೇಕಡ ೬೩ ಕುಟುಂಬಗಳಿಗೆ ಶೌಚಾಲಯಗಳು ಇರುವುದರಲ್ಲಿ ಶೇಕಡ ೨೯(೫೮) ಮನೆ ಒಳಗೆ ಶೇಕಡ ೨೨.೫(೪೫) ಮನೆತಾಗಿ ಇದ್ದಾವೆ. ಶೇಕಡ ೧೧.೫(೨೩) ಕುಟುಂಬಗಳಿಗೆ ಮನೆಯಿಂದ ಸ್ವಲ್ಪ ದೂರ, ಅಂದರೆ ಮನೆಯ ಅಂಗಳ ಮತ್ತು ರಸ್ತೆಯ ಪಕ್ಕದಲ್ಲಿ ಸ್ವಲ್ಪ ಜಾಗದಲ್ಲಿ ನಿರ್ಮಾಣ ಮಾಡಿಕೊಂಡಿದ್ದಾರೆ. ತಮ್ಮ ಸ್ವಂತ ಕುಲ ಕಸುಬು ಕಲಿತಿರುವುದರಿಂದ ಕಾರ್ಮಿಕರಾಗಿ ತಮ್ಮ ಕೆಲಸವನ್ನು ತಾವೇ ಮಾಡಿಕೊಂಡಿದ್ದಾರೆ. ಶೇಕಡ ೩೭ ಕುಟುಂಬಗಳಿಗೆ ಶೌಚಾಲಯದ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಇವರಲ್ಲಿ ಶೇಕಡ ೮(೧೬) ಊರಿನಿಂದ ಹೊರಗಡೆ ಇರುವ ಕೆರೆದಂಡೆ, ಸಮುದಾಯ ಶೌಚಾಲಯಗಳನ್ನು ಬಳಸಿದರೆ, ಶೇಕಡ ೨೯(೫೮) ಊರಿನಿಂದ ಕೆಳಭಾಗಕ್ಕೆ ಇರುವ ಹೊಲ ಮತ್ತು ಗದ್ದೆಗಳಿಗೆ ಹೋಗುವುದು ತಿಳಿದುಬರುತ್ತದೆ. ಮತ್ತು ಶೇಕಡ ೭೬.೫(೧೫೩) ಕುಟುಂಬಗಳಿಗೆ ಸ್ನಾನದ ಗೃಹದ ವ್ಯವಸ್ಥೆ ಇದ್ದರೆ, ಶೇಕಡ

೨೩.೫(೪೭) ಕುಟುಂಬಗಳಿಗೆ ಸ್ನಾನಕ್ಕೆ ಊರಿನ ಪಕ್ಕದ ಹೊಲಗಳಿಗೆ ಅಥವಾ ಸಂಬಂಧಿಕರ ಮನೆಗಳಿಗೆ ಹೋಗಿ ಸ್ನಾನ ಮಾಡಿಕೊಂಡು ಬರಬೇಕಾಗುತ್ತದೆ. ಯಾಕೆಂದರೆ ಅನಿವಾರ್ಯವಾಗಿ ಸಮುದಾಯದ ಸಾಕಷ್ಟು ಕುಟುಂಬಗಳ ವಾಸಮಾಡುವ ಮನೆಗಳಲ್ಲಿ ಒಂದು ಅಡುಗೆ ಕೋಣೆ, ಇನ್ನೋಂದು ಹೊರಂಡ ಮಾತ್ರ ಇರುತ್ತದೆ. ಜಾಗದ ಸಮಸ್ಯೆ ಮತ್ತು ಆರ್ಥಿಕ ಕೊರತೆಯಿಂದ ಶೇಕಡ ೭೬.೫(೨೫) ಕುಟುಂಬಗಳಲ್ಲಿ ಶೇಕಡ ೩೯(೭೮) ಮನೆ ಒಳಗೆ, ಶೇಕಡ ೨೩.೫(೪೭) ಮನೆಯ ಪಕ್ಕದಲ್ಲಿ ಶೇಕಡ ೧೨.೫(೨೫) ಮನೆಯಿಂದ ಹೊರಗೆ ಇವೆ. ಶೇಕಡ ೧.೫(೩) ಕುಟುಂಬಗಳು ಬೇರೆಯವರ ಮನೆಗಳಿಗೆ ಹೋಗಿ ಸ್ನಾನ ಮಾಡಿಕೊಂಡು ಬರುತ್ತಾರೆ.

೬.೧.೫ ಕುಡಿಯುವ ನೀರು

ಕುಡಿಯುವ ನೀರಿನ ಗುಣಮಟ್ಟದ ವಿಷಯಕ್ಕೆ ಬಂದರೆ, ಅತ್ಯುತ್ತಮವಾದ ನೀರು ಯಾವ ಗ್ರಾಮದಲ್ಲಿಯು ಇಲ್ಲ. ಶೇಕಡ ೫೫.೫(೧೧೧) ಉತ್ತಮ, ಶೇಕಡ ೩೨.೫(೬೫) ತೃಪ್ತಿಕರವಾಗಿದ್ದರೆ. ಶೇಕಡ ೧೨(೨೪) ಕುಟುಂಬಗಳಿಗೆ ಶೋಚನೀಯ ಪರಿಸ್ಥಿತಿ ಇರುವುದು ಅಧ್ಯಯನದಿಂದ ತಿಳಿದುಬಂದಿದೆ.

ಕೋಷ್ಟಕ ೬.೧೦ ಭೋವಿ ಸಮುದಾಯದವರು ಬಳಕೆ ಮಾಡುವ ಮತ್ತು ಕುಡಿಯುವ ನೀರಿನ ಗುಣಮಟ್ಟ ಮತ್ತು ನೀರಿನ ಜಾಗಕ್ಕೆ ಇರುವ ಅತಂರದ ವಿವರಗಳು

ಕ್ರಸಂ	ಭೋವಿ ಸಮುದಾಯದವರು ಬಳಕೆ ಮಾಡುವ ಮತ್ತು ಕುಡಿಯುವ ನೀರಿನ ಗುಣಮಟ್ಟ ಮತ್ತು ನೀರಿನ ಜಾಗಕ್ಕೆ ಇರುವ ಅತಂರದ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
ಭೋವಿ ಸಮುದಾಯದವರು ಕುಡಿಯುವ ನೀರಿನ ಗುಣಮಟ್ಟ ಹೇಗಿದೆ					
೧	ಅತ್ಯುತ್ತಮ	೦	೦	೦	೦
೨	ಉತ್ತಮ	೬೦	೫೧	೧೧೧	೫೫.೫
೩	ತೃಪ್ತಿಕರ	೨೫	೪೦	೬೫	೩೨.೫
೪	ಶೋಚನೀಯ	೧೫	೯	೨೪	೧೨
	ಒಟ್ಟು	೧೦೦	೧೦೦	೨೦೦	೧೦೦
ಭೋವಿ ಸಮುದಾಯದವರು ಬಳಕೆ ಮಾಡುವ ಕುಡಿಯುವ ನೀರಿನ ಜಾಗಕ್ಕೆ ಮನೆಯಿಂದ ಎಷ್ಟು ದೂರದಲ್ಲಿದೆ					
೧	೨೦ಮೀ. ದಿಂದ ೫೦ಮೀ. ಒಳಗೆ	೨೭	೪೫	೭೨	೩೬
೨	೧೦೦ಮೀ. ದಿಂದ ೨೦೦ಮೀ	೧೩	೧೧	೨೪	೧೨
೩	ಅರ್ಧ ಕೀಲೋ.ಮೀ ನಿಂದ ಒಂದು ಕಿಲೋ.ಮೀ	೨೦	೦	೨೦	೧೦
೪	ಮನೆ ಒಳಗೆ	೧೭	೧೫	೩೨	೧೬
೫	ಮನೆತಾಗಿ	೨೩	೨೯	೫೨	೨೬
	ಒಟ್ಟು	೧೦೦	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೧೦ ರಲ್ಲಿದಂತೆ ಸಮುದಾಯದ ಕುಟುಂಬಗಳ ಮನೆಗಳಿಂದ ಕುಡಿಯುವ ನೀರಿನ ಜಾಗಕ್ಕೆ ಶೇಕಡ ೩೬(೭೨) ಕುಟುಂಬಗಳಿಗೆ ೨೦ ಮೀ ರಿಂದ ೫ ಮೀ ಒಳಗೆ ನೀರು ಸಿಗುತ್ತದೆ. ಶೇಕಡ ೧೨(೨೪) ೧೦೦ ಮೀ ದಿಂದ ೨೦೦ ಮೀ, ಶೇಕಡ ೧೦(೨೦) ಕುಟುಂಬಗಳು ಹೊಳಲ್ಕೆರೆ ತಾಲ್ಲೂಕಿನ ಮಾರುತಿಹಳ್ಳಿ ಗ್ರಾಮದ ಕುಟುಂಬಗಳು ಅರ್ಧ ಕಿ.ಮೀ, ನಿಂದ ಒಂದು ಕಿ.ಮೀ ದೂರಕ್ಕೆ ಹೋಗಿ ಕುಡಿಯುವ ನೀರು ತರಬೇಕಾಗುತ್ತದೆ. ಶೇಕಡ ೧೬(೩೨) ಕುಟುಂಬಗಳಿಗೆ ಮನೆ ಒಳಗೆ ಇದ್ದರೆ, ಶೇಕಡ ೨೬(೫೨) ಕುಟುಂಬಗಳಿಗೆ ಮನೆತಾಗಿಯಿದೆ. ಶೇಕಡ ೭೪(೧೪೮) ಕುಟುಂಬಗಳಿಗೆ ತಮ್ಮ ದಿನ ನಿತ್ಯ ಬಳಕೆಗೆ ಬೇಕಾದಷ್ಟು ನೀರು ಪೂರೈಕೆ ಆಗುತ್ತದೆ. ಆದರೆ ಶೇಕಡ ೨೬(೫೨) ಕುಟುಂಬಗಳಿಗೆ ಕುಡಿಯುವುದಕ್ಕೆ ಬೇಕಾದ ನೀರು ಸಿಗುವುದು ಕಷ್ಟವಾಗಿದೆ. ಶೇಕಡ ೮೫.೫(೧೭೧) ಕುಟುಂಬಗಳಿಗೆ ಬೇಸಿಗೆ ಕಾಲದಲ್ಲಿ ಅತೀ ಹೆಚ್ಚು ನೀರಿನ ಸಮಸ್ಯೆ ಎದುರಿಸುತ್ತಾರೆ. ಆದರೆ ಶೇಕಡ ೧೪.೫(೨೯), ಕುಟುಂಬಗಳು ಮಳೆಗಾಲದಲ್ಲಿಯೂ ಸಹ ನೀರಿನ ಕೊರತೆ ಇರುವುದು ಮಾರುತಿಹಳ್ಳಿ ೨೫, ಕಣವಿಜೋಗಿಹಳ್ಳಿ ೨, ರಾಮೇನಹಳ್ಳಿ ೧ ಮತ್ತು ಜಯಂತಿ ನಗರದಲ್ಲಿ ಒಂದು ಕುಟುಂಬ ಸಮಸ್ಯೆ ಎದುರಿಸುತ್ತಿರುವುದು ಕಂಡುಬರುತ್ತದೆ. ಆ ಸಂದರ್ಭದಲ್ಲಿ ಸಮುದಾಯದವರು ನೀರಿನ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳುತ್ತಾರೆ? ಎಂದರೇ ಶೇಕಡ ೮೭(೧೭೪) ಕುಟುಂಬಗಳು ಊರಿನ ಪಕ್ಕದಲ್ಲಿರುವ ತೋಟಗಳಿಗೆ/ಹೊಲಕ್ಕೆ ಹೋದರೆ, ಶೇಕಡ ೭.೫(೧೫) ಟ್ಯಾಂಕರ್ ಮೂಲಕ ತಂದರೆ, ಶೇಕಡ ೫.೫(೧೧) ಕುಟುಂಬಗಳು ೨ ರಿಂದ ೩ ಕಿ. ಮೀ ದೂರದಲ್ಲಿರುವ ಇತರೆ ಗ್ರಾಮಗಳಿಗೆ ಹೋಗಿ ನೀರು ತರುತ್ತಾರೆ.

೬.೧.೬ ಜಾತಿ ಸ್ಥಾನಮಾನ

ಭೋವಿ ಸಮುದಾಯಗಳ ಕುಟುಂಬಗಳ ಸ್ವರೂಪ ಹಿಂದಿಗಿಂತಲೂ ಶೇ ೨.೫(೫) ಪ್ರಮಾಣ ಬದಲಾಗುತ್ತಿದ್ದು ಶಿಕ್ಷಣ, ರಾಜಕೀಯ ಇತರೆ ಕ್ಷೇತ್ರಗಳಲ್ಲಿ ಅವಕಾಶ ಪಡೆದರೆ, ಶೇ ೯೭.೫(೧೯೫) ಕುಟುಂಬಗಳ ಸ್ವರೂಪ ಬದಲಾಗಿಲ್ಲ. ಹಿಂದೆ ಕಲ್ಲು ಮಣ್ಣಿನ ಕೆಲಸ ಮಾಡುತ್ತ ಇದ್ದರು. ಪ್ರಸ್ತುತದಲ್ಲಿಯು ಅದೇ ಕೆಲಸ ಆಸರೆಯಾಗಿದೆ. ಬೇರೆ ಮಾರ್ಗ ತಿಳಿದಿಲ್ಲ.

ಕೋಷ್ಟಕ ೬.೧೧ ಭೋವಿ ಸಮುದಾಯದ ಕುಟುಂಬಗಳ ಸ್ವರೂಪ ಬದಲಾವಣೆಯಾಗಲು ಮತ್ತು ಬದಲಾವಣೆ ಹೊಂದದೆ ಇರಲು ಕಾರಣವಾದ ಅಂಶಗಳ ವಿವರಗಳು

ಕ್ರಸಂ	ಭೋವಿ ಸಮುದಾಯದ ಕುಟುಂಬಗಳ ಸ್ವರೂಪ ಬದಲಾವಣೆಯಾಗಲು ಮತ್ತು ಬದಲಾವಣೆ ಹೊಂದದೆ ಇರಲು ಕಾರಣವಾದ ಅಂಶಗಳ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
	ಹೌದಾದರೆ	೩	೨	೫	೨.೫
೧	ಇತ್ತೀಚ್ಚಿನ ದಿನಗಳಲ್ಲಿ ಇತರೆ ದುಡಿಮೆ ಮಾಡುತ್ತಾರೆ	೨	೧	೩	೧.೫
೨	ನಗರಗಳ ಕಡೆ ಹೋಗಿ ಜೀವಿಸುತ್ತಿದ್ದರೆ	೧	೧	೨	೧
	ಇಲ್ಲವಾದರೆ	೯೭	೯೮	೧೯೫	೯೭.೫
೧	ಕಟ್ಟಡ/ಕಲ್ಲುಹೊಡಿಯುವುದೆ ನಮ್ಮ ವೃತ್ತಿ	೫೩	೬೭	೧೨೦	೬೦
೨	ಕೂಲಿ ಕೆಲಸವೇ ಆಸರೆ ಬೇರೆ ಮಾರ್ಗವಿಲ್ಲ	೪೪	೨೧	೬೫	೩೨.೫
	ಒಟ್ಟು	೧೦೦	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಮೇಲಿನ ೬.೧೧ ಕೋಷ್ಟಕವನ್ನು ಗಮನಿಸಿದಾಗ, ಶೇಕಡ ೨.೫ ಕುಟುಂಬಗಳ ಸ್ವರೂಪ ಯಾಕೆ ಬದಲಾಗಿದೆ ಎಂದರೆ, ಶೇಕಡ ೧.೫(೩) ಕುಟುಂಬಗಳು ತಮ್ಮ ಸಾಂಪ್ರದಾಯಿಕ ವೃತ್ತಿ ಬಿಟ್ಟು ಇತರೆ ದುಡಿಮೆಗಳಲ್ಲಿ ತೊಡಗಿದ್ದಾರೆ. ಶೇ ೧.(೨) ನಗರಗಳ ಕಡೆ ವಲಸೆ ಹೋಗಿ ಉದ್ಯೋಗ ಮಾಡುತ್ತಾರೆ. ಆದರೆ ಶೇಕಡ ೯೭.೫ ಕುಟುಂಬಗಳ ಪರಿಸ್ಥಿತಿ ಹಾಗೆಯೇ ಇದೆ. ಯಾಕೆಂದರೆ ಶೇಕಡ ೬೦ (೧೨೦) ಕುಟುಂಬಗಳು ಹಿಂದಿನಿಂದಲು ಪ್ರಸ್ತುತವರೆಗೆ ಕಟ್ಟಡಗಳನ್ನು ಕಟ್ಟುವುದು, ಕಲ್ಲು ಬಂಡೆಗಳನ್ನು ಹೊಡೆಯುವುದು ಅವರ ವೃತ್ತಿಯಾದರೆ ಶೇಕಡ ೩೨.೫(೬೫) ಕುಟುಂಬಗಳು ಕೂಲಿ ಕೆಲಸವನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಯಾಕೆಂದರೆ ೬೫ ಕುಟುಂಬಗಳಿಗೆ ಕಲ್ಲು ಹೊಡೆಯುವುದು ಮತ್ತು ಕಟ್ಟಡಗಳನ್ನು ಕಟ್ಟಲು ಅವರಿಗೆ ಬರುವುದಿಲ್ಲ. ತಮ್ಮ ಹಳ್ಳಿ ಮತ್ತು ಪಕ್ಕದ ಹಳ್ಳಿಗಳಿಗೆ ಹೋಲಿಕೆ ಮಾಡಿ ನೋಡಿದಾಗ, ತಳದಲ್ಲಿರುವ ಸಮುದಾಯಗಳಲ್ಲಿ ಭೋವಿ ಸಮುದಾಯ ಒಂದು ಶೇಕಡ ೯೯.೫(೧೯೯) ಎಂದರೆ ಶೇಕಡ ೦.೫(೧) ಸ್ವಲ್ಪ ಮಟ್ಟದಲ್ಲಿ ಅಭಿವೃದ್ಧಿ ಹೊಂದುತ್ತಾ, ಕೆಲವು ಸ್ಥಾನಮಾನಗಳು ಮೊದಲಿಗಿಂತ ಉತ್ತಮವಾಗಿ ದೊರಕುತ್ತವೆ. ಇತರೆ ಜಾತಿಗಳಂತೆ ಬೇರೆ ಬೇರೆ ಕೆಲಸಗಳ ಕಡೆ ಮುಖ ಮಾಡಿರುವಂತೆ ಭೋವಿ ಸಮುದಾಯವು ಸಹ ಇತರೆ ವೃತ್ತಿಗಳನ್ನು ಮಾಡುತ್ತ ಇರುವುದು ಇತ್ತಿಚ್ಚಿನ ದಿನಗಳಲ್ಲಿ ಬೆಳಕಿಗೆ ಬಂದಿರುವುದು ತಿಳಿಯುತ್ತದೆ. ಆದರೆ ಭೋವಿ ಸಮುದಾಯವನ್ನು ಅವಲೋಕನ ಮಾಡಿದಾಗ ಶೇಕಡ ೪೪(೮೮) ಕುಟುಂಬಗಳು ಕುಲಕಸಬನ್ನು ನೆಚ್ಚಿಕೊಂಡು ಬದುಕುತ್ತಿದ್ದಾರೆ.

ಶೇಕಡ ೪೦(೮೦) ಕೂಲಿ ಕೆಲಸ ಹರಿಸಿ ನಗರಗಳಿಗೆ ವಲಸೆ ಹೋಗುವ ಪರಿಸ್ಥಿತಿಯಿದೆ. ಇದು ಮೊದಲು ಹಾಗೆ ಇರಲಿಲ್ಲ. ಮಳೆ ಬೆಳೆ ಸರಿಯಾದ ಸಮಯಕ್ಕೆ ಬರುತ್ತಿತ್ತು. ತಮ್ಮ ತಮ್ಮ

ಊರಿನಲ್ಲಿ ಕೆಲಸ ಸಿಗುತ್ತಿತ್ತು. ಶೇಕಡ ೧೧.೫ (೨೩) ಕುಟುಂಬಗಳಿಗೆ ಕೃಷಿ ಮಾಡುವ ಎಂದರೆ ಭೂಮಿ ಇಲ್ಲ, ಶೇಕಡ ೪(೮) ಕುಟುಂಬಗಳಿಗೆ ಒಂದು ಎಕರೆ ಭೂಮಿ ಇದೆ. ಆದರೆ ನೀರು ಇಲ್ಲದಿರುವುದು ತಿಳಿಯುತ್ತದೆ. ಬಯಲು ಸೀಮೆಯಲ್ಲಿ ವಾಸಮಾಡುವುದರಿಂದ ಮಳೆಯೇ ಆಸರೆಯಾದರೆ, ಕೆಲವರು ಬೋರ್‌ವೆಲ್ ಹಾಕಿಸಿಕೊಂಡು ಸ್ವಲ್ಪ ದಿನಗಳ ನಂತರ ನಿಂತು ಹೋಗಿರುವ ವಿಚಾರಗಳನ್ನು ವ್ಯಕ್ತ ಪಡಿಸುತ್ತಾರೆ. ಸಮುದಾಯ ಹಿಂದುಳಿಯಲು ತಮ್ಮಲ್ಲಿರುವ ಮೂಢನಂಬಿಕೆ, ಆಚಾರ, ಸಾಂಪ್ರದಾಯ, ರೂಡಿಗಳು ಕಾರಣವಾಗಿದ್ದರೆ, ಕುಟುಂಬಗಳ ಮೇಲೆ ಯಾವ ರೀತಿ ತಮ್ಮಲ್ಲಿ ಪರಿಣಾಮ ಬೀರಿದೆ ಎಂದು ಕೆಳಗಿನ ಕೋಷ್ಟಕದ ಮೂಲಕ ತಿಳಿಯಬಹುದು.

ಕೋಷ್ಟಕ ೬.೧೨ ಭೋವಿ ಸಮದಾಯದ ಕುಟುಂಬಗಳು ಹಿಂದುಳಿದಿರುವುದಕ್ಕೆ ಕಾರಣವಾದ ಅಂಶಗಳ ವಿವರಗಳು

ಕ್ರಸಂ	ಭೋವಿ ಸಮದಾಯದ ಕುಟುಂಬಗಳು ಹಿಂದುಳಿದಿರುವುದಕ್ಕೆ ಕಾರಣವಾದ ಅಂಶಗಳ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಮೂಢನಂಬಿಕೆಗಳು	೧೪	೨೪	೩೮	೧೯
೨	ಸಣ್ಣತನ	೧೬	೨೩	೪೦	೨೦
೩	ಆಂತರಿಕ ವಿಘಟನೆ	೫೫	೩೯	೯೪	೪೭
೪	ದುಡಿಮೆ ಇಲ್ಲದೆ ಇರುವುದು	೮	೬	೧೪	೭
೫	ವಲಸೆ ಹೋಗಿ ಬರಿಗೈಯಲ್ಲಿ ಮನೆಗೆ ಬರುವುದು	೬	೮	೧೪	೭
	ಒಟ್ಟು	೧೦೦	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೧೨ ರಲ್ಲಿ ಇರುವಂತೆ ಸಮುದಾಯ ಹಿಂದುಳಿಯಲು ಶೇಕಡ ೧೯(೩೮) ತಮ್ಮಲ್ಲಿರುವ ಮೂಢ ನಂಬಿಕೆಗಳು, ಶೇಕಡ ೨೦(೪೦) ಸಣ್ಣತನ ತಮ್ಮವರನ್ನು ಕಂಡು ತಾವೇ ಅಸೂಯೆ ಪಡುವುದು, ಶೇಕಡ ೪೭(೯೪) ಸಮುದಾಯದಲ್ಲಿ ಇರುವ ಒಳ ಜಗಳ ಆಂತರಿಕ ವಿಘಟನೆ, ಶೇಕಡ ೭(೧೪) ಕುಟುಂಬಗಳಿಗೆ ಯಾವುದೇ ರೀತಿಯ ದುಡಿಮೆ ಇಲ್ಲದೇ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ನಂಬಿಕೊಂಡು ಬದುಕುತ್ತ ಇರುವುದು.

ಶೇಕಡ ೭(೧೪) ಕುಟುಂಬಗಳು ಮೊಳಕಾಲ್ಮೂರು ತಾಲ್ಲೂಕಿನ ಸಿದ್ಧಯ್ಯನಕೋಟೆ ಮತ್ತು ನಾಗಸಮುದ್ರ ಗ್ರಾಮದ ೧೪ ಕುಟುಂಬಗಳು ಕೆಲಸ ಹುಡಿಕಿಕೊಂಡು ವಲಸೆ ಹೋಗಿ, ಎರಡರಿಂದ ಮೂರು ತಿಂಗಳು ಕಾಲ ಕೆಲಸ ಮಾಡಿ ಹೋದ ದಾರಿಗೆ ಸುಂಕವಿಲ್ಲದಂತೆ ಮರಳಿ ಬಂದಿರುವ ಘಟನೆ ಬೆಳಕಿಗೆ ಬರುತ್ತದೆ. ಕುತೂಹಲದಿಂದ ೧೪ ಕುಟುಂಬಗಳು ಸಂದರ್ಶನ ಮಾಡಿದಾಗ, ವಿಷಯವನ್ನು ಈ ಕೆಳಕಂಡಂತೆ ವಿವರಿಸುತ್ತಾ ಹೋಗುತ್ತಾರೆ. ೨೦೧೬ ನೇ ಸಾಲಿನಲ್ಲಿ ಮೊಳಕಾಲ್ಮುರು ತಾಲ್ಲೂಕಿನಲ್ಲಿ ಬರಗಾಲ ಶುರುವಾಗುತ್ತದೆ. ಸಮುದಾಯದವರಿಗೆ ಕಟ್ಟಡ ನಿರ್ಮಾಣ ಮಾಡುವ ಕೆಲಸ ಬಿಟ್ಟು ಬೇರೆ ಕೆಲಸ ಮಾಡುವ ಮಾರ್ಗ ಗೊತ್ತಿಲ್ಲ. ಆದ್ದರಿಂದ ಒಬ್ಬರ ನಾಯಕತ್ವದಲ್ಲಿ (ಮೇಸ್ತ್ರೀ) ತುಮಕೂರಿನ ಗುಬ್ಬಿ ತಾಲ್ಲೂಕಿನಿಂದ ೧೦ ಕಿ. ಮೀ. ದೂರದಲ್ಲಿ ಹೊಸದಾಗಿ ನಿರ್ಮಾಣಮಾಡುವ ಗ್ಯಾಸ್ ಕಂಪನಿಗೆ ತಡೆಗೋಡೆಯನ್ನು ಕಟ್ಟಲು ಹೋಗುತ್ತಾರೆ.

ಕಟ್ಟಡ ನಿರ್ಮಾಣ ಮಾಡುವ ಜಾಗ ಹೇಗಿದೆ ಎಂದರೆ, ಪಿರಮಿಡ್‌ನ ರೂಪದಲ್ಲಿದೆ. ೩೦ ರಿಂದ ೪೦ ಅಡಿಗಳ ಎತ್ತರ ಕಟ್ಟಡವನ್ನು ಮಾಲೀಕ(ಬಂಡವಾಳಗಾರ) ಕಟ್ಟಿಸಲು ತಿರ್ಮಾನಮಾಡಿ, ಇವರಿಂದ ಕೆಲಸ ಮಾಡಿಸಿಕೊಳ್ಳುತ್ತಾನೆ. ವಾರಕ್ಕೆ ಒಮ್ಮೆಯಾದರು ಇವರಿಗೆ ಸಂಬಳ ಕೊಡದೇ, ರೇಷನ್ ಬೇಕಾದಷ್ಟು ಮತ್ತು ಊರಿನಿಂದ ಹೆಚ್ಚಿನ ಕಾರ್ಮಿಕರನ್ನು ಕೆಲಸಕ್ಕೆ ಕರೆ ತರಲು ಬೇಕಾದಷ್ಟು ಹಣವನ್ನು ಕೊಡುತ್ತ, ಮೂರು ತಿಂಗಳುಗಳ ಕಾಲ ಹಾಗೇ ಮುಂದೂಡುತ್ತಾನೆ. ಕಟ್ಟಡ ಶೇಕಡ ೫೦ ರಷ್ಟು ಮುಗಿಯುತ್ತದೆ. ವೃತ್ತಕಾರವಾಗಿ ಇರುವ ಪಿರಮಿಡ್‌ನ ಸ್ಥಳವನ್ನು ಸಮತಟ್ಟು ಮಾಡಲು ಮರಳನ್ನು ಆಕುತ್ತ ಜೆ.ಸಿ.ಬಿಗಳಿಂದ ಒತ್ತಡ ಆಕಿರುವುದರಿಂದ ತಡೆಗೋಡೆ ಒತ್ತಡವನ್ನು ತಡೆದುಕೊಳ್ಳದೇ ಬಿದ್ದು ಹೋಗುತ್ತದೆ.

ಇದನ್ನು ಗಮನಿಸಿದ ಶೇಕಡ ೬೦ ಕಾರ್ಮಿಕರು ಅಲ್ಲಿಂದ ಜಾಗ ಖಾಲಿಮಾಡಿ, ಊರಿನ ಕಡೆ ಮುಖ ಮಾಡುತ್ತಾರೆ. ಯಾಕೆಂದರೆ ಮಾಲೀಕ ಬಂಡವಾಳ ಶಾಹಿ ನಮ್ಮನ್ನು ಸುಮ್ಮನೆ

ಬಿಡವುದಿಲ್ಲವೆಂದು ಮೆಸ್ತ್ರೀಗೆ ಹೇಳಿ ಹೋಗಿಬಿಡುತ್ತಾರೆ. ವಿಷಯ ಗೊತ್ತಾದ ನಂತರ; ಮಾಲೀಕ ಬಂದು ಉಳಿದ ಶೇಕಡ ೪೦ ಕುಟುಂಬಗಳನ್ನು ಅಲ್ಲೆ ತಡೆಹಿಡಿಯುತ್ತಾನೆ. ಸಂಬಳ ಕೊಡದೇ ಇದನ್ನು ಗಮನಿಸಿದ ಇತರೆ ಕಾರ್ಮಿಕರು ರಾತ್ರೋ ರಾತ್ರಿ ಜಾಗ ಖಾಲಿ ಮಾಡುತ್ತಾರೆ. ಆದ್ದರಿಂದ ಏನು ದಾರಿ ತೋಚದೆ ಮೇಸ್ತ್ರೀಯ ಕುಟುಂಬ ಭಯ ಭೀತರಾಗಿ ತನ್ನ ಕುಟುಂಬ ಸಮೇತ ತುಮಕೂರು ಪಟ್ಟಣಕ್ಕೆ ಬಂದು ಪ್ರಾಥಮಿಕ ಶಾಲೆಯಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತ, ಮಾನಸಿಕ ಒತ್ತಡಕ್ಕೆ ಒಳಗಾಗಿ ಬೀಡುತ್ತಾರೆ. ಬೇರೆ ದಾರಿ ತೋಚುವುದಿಲ್ಲ. ಯಾಕೆಂದರೆ ಮೊಳಕಾಲ್ಮೂರು ತಾಲ್ಲೂಕಿನ ಗ್ರಾಮಗಳ ತಮ್ಮ ಗ್ರಾಮಗಳಿಗೆ ಸೇರಿಕೊಂಡು ದೂರಾವಾಣಿ ಮೂಲಕ ಮೇಸ್ತ್ರೀಗೆ ಕರೆ ಮಾಡಿ, ಮೂರು ತಿಂಗಳ ಸಂಬಳ ನಮ್ಮದು ಇಸ್ಕಂಡು ಬನ್ನಿ ಎಂದು ತಮ್ಮ ಸಮುದಾಯದ ಬಡಪಾಯಿ ಮೇಸ್ತ್ರೀಯ ಮೇಲೆ ಒತ್ತಡ ಒಂದು ಕಡೆಯಾದರೆ, ಬಿದ್ದುಹೋಗಿರುವ ಕಟ್ಟಡವನ್ನು ಕಟ್ಟಿಕೊಡಿ ಎಂದು ಮಾಲೀಕನ ದೌರ್ಜನ್ಯದ ಸಂಗತಿ ಒಂದು ಕಡೆ. ಇವರುಗಳ ಮಧ್ಯೆ ಬಲಿಯಾದವನು ಮುಂದಾಳತ್ವ ವಹಿಸಿಕೊಂಡ, ಕೆಲಸಕ್ಕೆ ಕರೆಕೊಂಡು ಹೋದಾವ ಮೇಸ್ತ್ರಿ. ಸ್ಥಿತಿ ಹೇಗಿತ್ತು ಎಂದರೆ ಸಾವು ಒಂದೇ ಇದಕ್ಕೆ ಪರಿಹಾರ ಎನ್ನುವ ಮಟ್ಟಕ್ಕೆ ಹೋಗಿಬಿಡುತ್ತದೆ ಎನ್ನುವ ವಿಷಯಗಳನ್ನು ವ್ಯಕ್ತಪಡಿಸುತ್ತಾರೆ. ಇಂತಹ ಅನೇಕ ತಿಂಗಳು ಸಮುದಾಯದಲ್ಲಿ ವಲಸೆ ಹೋದಾಗ ಎದುರಿಸುತ್ತಿರುವ ಘಟನೆಗಳು ಕಂಡುಬರುತ್ತವೆ.

೬.೧.೭ ಲಿಂಗ ಸಮಾನತೆ

ಶೇಕಡ ೬೬.೫(೧೩೩) ಕುಟುಂಬಗಳ ಮನೆಯ ಜವಾಬ್ದಾರಿಗಳನ್ನು ಮಹಿಳೆಯರು ತೆಗೆದುಕೊಂಡು ಕೂಲಿ ಕೆಲಸಮಾಡುತ್ತಾರೆ. ಉಳಿದ ಶೇಕಡ ೩೩.೫(೬೭) ಕುಟುಂಬಗಳ ಜವಾಬ್ದಾರಿಗಳು ಮಾತ್ರ ಪುರುಷರು ನಿರ್ವಹಿಸುತ್ತಾರೆ. ಯಾಕೆಂದರೆ ಕಾರಣಗಳನ್ನು ಕೆಳಕಂಡಂತೆ ನೋಡಬಹುದು

ಕೋಷ್ಟಕ ೬.೧೩ ಭೋವಿ ಸಮುದಾಯದಲ್ಲಿ ಮಹಿಳೆಯರು ತಮ್ಮ ಕುಟುಂಬಗಳ ಜವಾಬ್ದಾರಿಯನ್ನು ತೆಗೆದುಕೊಂಡು ಕುಟುಂಬದ ಮುಖ್ಯಸ್ಥರಾಗಿ ನಿರ್ವಹಿಸಿದ ವಿವರಗಳು

ಕ್ರ.ಸಂ	ಭೋವಿ ಸಮುದಾಯದಲ್ಲಿ ಮಹಿಳೆಯರು ತಮ್ಮ ಕುಟುಂಬಗಳ ಜವಾಬ್ದಾರಿಯನ್ನು ತೆಗೆದುಕೊಂಡು ಕುಟುಂಬದ ಮುಖ್ಯಸ್ಥರಾಗಿ ನಿರ್ವಹಿಸುವ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಒಟ್ಟು ಕುಟುಂಬಗಳು	ಶೇಕಡ
		ಬೋರೆನಹಳ್ಳಿ	ರಾಮೇನಹಳ್ಳಿ	ಕಣಿವಿ ಜೋಗಹಳ್ಳಿ	ಮಾರುತಿಹಳ್ಳಿ	ಸಿದ್ದಯ್ಯನಕೋಟೆ	ಜಯಂತಿ ನಗರ	ಚಿಕ್ಕೇರಹಳ್ಳಿ	ನಾಗಸಮುದ್ರ		
ಅ	**ಹೌದಾದರೆ, ಹೇಗೆ**	೨೦	೧೮	೨೧	೨೪	೯	೧೫	೧೨	೧೪	೧೩೩	೬೬.೫
೧	ನಮ್ಮ ಮನೆಯಲ್ಲಿ ಹೆಣ್ಣು ಸಹ ದುಡಿಯುತ್ತಾಳೆ	೧೪	೧೧	೧೮	೨೦	೧೨	೮	೯	೫	೮೭	೪೩.೫
೨	ಗಂಡು ಮಕ್ಕಳು ಕುಡಿತದ ಚಟಕ್ಕೆ ಬಿದ್ದು ತಿರುಗುವುದರಿಂದ	೪	೪	೨	೨	೨	೨	೩	೨	೨೧	೧೦.೫
೩	ಗಂಡು ದುಡಿದ ಹಣವೆಲ್ಲ ವೈಯಕ್ತಿಕ ಕೆಲಸಗಳಿಗೆ ದುರುಪಯೋಗ ಪಡಿಸಿಕೊಳ್ಳುವುದರಿಂದ	೨	೩	೧	೨	೧	೨	೨	೨	೧೫	೭.೫
ಆ	**ಇಲ್ಲವಾದರೆ, ಏಕಿಲ್ಲ**	೫	೭	೪	೧	೧೬	೧೦	೧೩	೧೧	೬೭	೩೩.೫
೧	ನಮಗೆ ಬರುವ ಸ್ವಲ್ಪ ಆದಾಯವನ್ನೇ ಅವಶ್ಯಕತೆಗೆ ಅನುಗುಣವಾಗಿ ಬಳಸುವುದರಿಂದ ಸಂಸಾರವನ್ನು ನಡೆಸುತ್ತೇನೆ	೩	೫	೨	೧	೬	೭	೬	೧೧	೪೧	೨೦.೫
೨	ನಮ್ಮ ಮನೆಯಲ್ಲಿ ಹೆಣ್ಣು ಕೆಲಸಕ್ಕೆ ಹೋಗುವುದಿಲ್ಲ ಮತ್ತು ವ್ಯವಹಾರದ ತಿಳುವಳಿಕೆ ಗೊತ್ತಿಲ್ಲ	೨	೨	೨	೦	೪	೬	೫	೫	೨೬	೧೩
	ಒಟ್ಟು	೨೫	೨೫	೨೫	೨೫	೨೫	೨೫	೨೫	೨೫	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೧೩ ರಲ್ಲಿರುವಂತೆ ಭೋವಿ ಸಮುದಾಯದ ಕುಟುಂಬಗಳಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ದುಡಿಮೆಯಲ್ಲಿ ತೊಡಗಿ, ಸಂಸಾರದ ಜವಾಬ್ದಾರಿಗಳನ್ನು ಒತ್ತುಕೊಂಡಿರುವ ಶೇಕಡ ೬೬.೫(೧೩೩) ಕುಟುಂಬಗಳು ಸಿಗುತ್ತವೆ. ಯಾಕೆಂದರೆ ಶೇಕಡ ೪೩.೫(೮೭) ಕುಟುಂಬಗಳಲ್ಲಿ ತಮ್ಮ ಮನೆಗಳಲ್ಲಿ ಪುರುಷನಿಗಿಂತ ಹೆಚ್ಚಿನ ದಿನಗಳು ಮಹಿಳೆಯರು ದುಡಿಯುತ್ತಾರೆ. ಪುರುಷರು ಒಂದು ದಿನ ಕೆಲಸ ಮಾಡಿ ಉಳಿದ ದಿನಗಳನ್ನು ಕಾಲ ಕಳೆಯುತ್ತಾರೆ. ಶೇಕಡ ೧೦.೫(೨೧) ಗಂಡು ಮಕ್ಕಳು ಕುಡಿತದ ಚಟಕ್ಕೆ ಬಿದ್ದು, ತಿರುಗುವುದರಿಂದ ಅನಿವಾರ್ಯವಾಗಿ ಮಹಿಳೆ ಸಂಸಾರದ ಜವಾಬ್ದಾರಿಯನ್ನು ನಿಭಾಯಿಸಲೇಬೇಕಾಗುತ್ತದೆ. ಶೇಕಡ ೭.೫(೧೫) ಗಂಡು ದುಡಿದ ಹಣವೆಲ್ಲ ತನ್ನ ವೈಯಕ್ತಿಕ ಕೆಲಸಗಳಿಗೆ ದುರುಪಯೋಗಪಡಿಸಿಕೊಂಡು ತನ್ನ ಕುಟುಂಬಗಳನ್ನು ಮರೆತು ಹೋಗಿರುತ್ತಾರೆ. ಆದ್ದರಿಂದ ಸಮುದಾಯದಲ್ಲಿ ಪುರುಷನಿಗಿಂತ ಮಹಿಳೆಯರೇ ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸುತ್ತ ಇದ್ದರು ಎಂದು ತಿಳಿಯುತ್ತದೆ. ಶೇಕಡ ೩೩.೫(೬೭) ಪುರುಷರು ಕುಟುಂಬದ ತಿರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಯಾಕೆಂದರೆ ಶೇಕಡ ೨೦.೫(೧೪) ನಮಗೆ ಬರುವ ಸ್ವಲ್ಪ ಆದಾಯವನ್ನೇ ಅವಶ್ಯಕತೆಗೆ ಅನುಗುಣವಾಗಿ ಬಳಸುತ್ತಾರೆ. ಮತ್ತು ಸಂಸಾರವನ್ನು ನಡೆಸುವ ಹೊಣೆಗಾರಿಕೆ ತಮ್ಮಗೆ ಬಂದುಬಿಡುತ್ತದೆ. ಶೇಕಡ ೧೩(೨೬) ತಮ್ಮ ಮನೆಯಲ್ಲಿಯೂ ಪುರುಷರೇ ಕೆಲಸಕ್ಕೆ ಹೋಗಬೇಕು. ಮಹಿಳೆಯರನ್ನು ಕೆಲಸಕ್ಕೆ ಕಳಿಸುವುದಿಲ್ಲ ಮತ್ತು ವ್ಯವಹಾರ ಜವಾಬ್ದಾರಿ ಅವರಿಗೆ ಕೊಡುವುದಿಲ್ಲ. ತಾವೇ ಎಷ್ಟೇ ಕಷ್ಟ ಬಂದರು ನಿಭಾಯಿಸುತ್ತಾರೆ.

ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣವನ್ನು ಗಮನಿಸಿದರೆ, ಶೇಕಡ ೯೦(೧೮೦) ಕುಟುಂಬಗಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ. ಶೇಕಡ ೧೦ (೨೦) ಕುಟುಂಬಗಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸುತ್ತಿಲ್ಲ. ಹೊಳಲ್ಕೆರೆ ತಾಲ್ಲೂಕಿನ ಮಾರುತಿಹಳ್ಳಿ ೧೯ ಕಣವಿ ಜೋಗಹಳ್ಳಿ ಒಂದು ಕುಟುಂಬ ಯಾಕೆ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲವೆಂದರೆ, ಕಣವಿ ಜೋಗಹಳ್ಳಿ ಒಂದು ಕುಟುಂಬದಲ್ಲಿ ಪೋಷಕರ ಕೊರತೆಯಿಂದ ತನ್ನ ತಾಯಿಯನ್ನು ಕಳಕೊಂಡು ಅನಾಥವಾಗಿದ್ದರಿಂದ, ಉಳಿದ ೧೯ ಕುಟುಂಬಗಳ ಕಾರಣಗಳನ್ನು ಕೇಳಕಂಡತೆ ಹೇಳುತ್ತಾರೆ. ಶೇಕಡ ೨(೪) ಶಾಲೆ ದೂರ ಪಕ್ಕದ ಊರಲ್ಲಿ ಇದೆ. ಸಾರಿಗೆ ವ್ಯವಸ್ಥೆ ಮತ್ತು ಇತರೆ ಮೂಲಭೂತ ಸೌಕರ್ಯಗಳು ಇಲ್ಲದಿರುವುದರಿಂದ, ಶೇಕಡ ೧.೫(೩) ಕುಟುಂಬಗಳು ನಾವು ಅರಣ್ಯದ ಅಂಚಿನಲ್ಲಿ ವಾಸಮಾಡುವುದರಿಂದ, ಬೇರೆ ಊರಿಗೆ ಶಾಲೆಗೆ ಹೋಗಿ ನಡೆದುಕೊಂಡು ಬರುವ ಪುಂಡರ ಗುಂಪುಗಳು ಏನಾದರು ಅನಾಹುತ ಮಾಡುತ್ತಾರೆ. ಎನ್ನುವ ಭಯ. ಶೇಕಡ ೦.೫(೧) ಒಂದು ಕುಟುಂಬ ೮ ವರ್ಷದ ಮಗು ಮೇಲೆ ಹೇಳಿರುವಂತೆ ಕಣವಿಜೋಗಿಹಳ್ಳಿಯಲ್ಲಿರುವ ಅಕ್ಕಪಕ್ಕದ ಮನೆಯವರು ಸಹಾಯ ಮಾಡಿ, ಬೆಳೆಸಿ ದೊಡ್ಡವಳನ್ನಾಗಿ ಮಾಡಿದ್ದಾರೆ. ಕಡು ಬಡತನ ಹೊಟ್ಟೆಗೆ ಬದುಕುವುದು ಕಷ್ಟ ಶಾಲೆಗೆ ಇನ್ನೆಲ್ಲಿ ಹೋಗುವುದು ಎಂಬ ಉತ್ತರ ಬರುತ್ತದೆ.

೬.೨. ಆರ್ಥಿಕ ಅಭಿವೃದ್ಧಿಯಲ್ಲಿ ಭೋವಿ ಸಮುದಾಯ

ಸಮುದಾಯ ಆರ್ಥಿಕವಾಗಿ ಅಭಿವೃದ್ಧಿ ಆಗಬೇಕಾದರೆ ಉದ್ಯೋಗ, ಆದಾಯ, ಭೂಹಿಡುವಳಿ, ಮತ್ತು ಅವರ ಆದಾಯದ ಇತರೆ ಮೂಲಗಳು ಹಾಗೂ ಚರಾ ಮತ್ತು ಸ್ಥಿರಾ ಆಸ್ತಿ ವಿವರಗಳು ಮುಖ್ಯ ಪಾತ್ರವಹಿಸುತ್ತವೆ.

೬.೨.೧. ಉದ್ಯೋಗ

ಭೋವಿ ಸಮುದಾಯ ಕುಟುಂಬಗಳ ಯಾವ ಯಾವ ದುಡಿಮೆಗಳಲ್ಲಿ ತೊಡಗಿದ್ದಾರೆ.? ಸದಸ್ಯರು ಆ ದುಡಿಮೆಯಿಂದ ಅವರಿಗೆ ಬಂದ ಸಂಬಳ ಸರ್ಕಾರ ಯೋಜನೆಗಳಿಂದ ಅವರ ದುಡಿಮೆ ಆಧಾರ ನೆರವು ಬಗ್ಗೆ ಈ ಭಾಗದಲ್ಲಿ ಚರ್ಚಿಸಲಾಗುವುದು. ಮೊದಲನೆಯದಾಗಿ ಸಮುದಾಯದ ಮನೆಯಲ್ಲಿನ ಸದಸ್ಯರು ಈಗ ಯಾವ ದುಡಿಮೆಯಲ್ಲಿ ತೊಡಗಿದ್ದಾರೆ ಎನ್ನುವುದು ಕೆಳಕಂಡ ಕೋಷ್ಟಕದ ಮೂಲಕ ತಿಳಿಯಬಹುದು.

ಕೋಷ್ಟಕ ೬.೧೪ ಭೋವಿ ಸಮುದಾಯದ ಕುಟುಂಗಳ ಸದಸ್ಯರು ತೊಡಗಿರುವ ದುಡಿಮೆಗಳ ವಿವರಗಳು

ಕ್ರಸಂ	ಭೋವಿ ಸಮುದಾಯದ ಕುಟುಂಗಳ ಸದಸ್ಯರು ತೊಡಗಿರುವ ದುಡಿಮೆಗಳ ವಿವರಗಳು		ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
			ಬೋರೇನಹಳ್ಳಿ	ಶಿವೇನಹಳ್ಳಿ	ಕೆಣವಿ ಜೋಗಿಹಳ್ಳಿ	ಮಾರುತಿಹಳ್ಳಿ		ಬಿದ್ದಂಕ್ಯಾಕೋಟೆ	ಜಯಂತಿ ನಗರ	ಚಿಕ್ಕೇರಹಳ್ಳಿ	ನಾಗಸಮುದ್ರ			
೧	ಗಾರೆ ಕೆಲಸ		೬	೨	೩	೦	೧೧	೧೦	೮	೫	೩೦	೫೩	೬೪	೭.೯೯
೨	ಕಲ್ಲು ಹೊಡಿಯುವುದು		೦	೦	೦	೦	೦	೧೦	೫	೧೦	೭	೩೨	೩೨	೩.೫೪
೩	ಕೂಲಿ	ಗಂಡು	೨೨	೧೭	೨೮	೩೦	೯೭	೯	೨೫	೭	೮	೪೯	೧೪೬	೧೬.೧೮
		ಹೆಣ್ಣು	೨೧	೨೧	೩೨	೩೦	೧೦೪	೧೨	೨೭	೧೪	೧೪	೬೭	೧೭೧	೧೮.೯೫
೪	ವ್ಯವಸಾಯ		೧೧	೮	೩	೧	೨೩	೪	೨	೫	೦	೧೧	೩೪	೩.೭೬
೫	ಸರ್ಕಾರಿ ಕೆಲಸ		೧	೧	೦	೨	೪	೦	೧	೦	೦	೧	೫	೦.೫೫
೬	ಖಾಸಗೀ ಕೆಲಸ		೦	೦	೦	೦	೦	೧	೦	೫	೧	೭	೭	೦.೭೭
೭	ವ್ಯವಹಾರ		೨	೦	೦	೦	೨	೪	೦	೩	೨	೯	೧೧	೧.೨೧
೮	ಗುತ್ತಿಗೆದಾರರು		೦	೦	೦	೦	೦	೨	೦	೦	೨	೪	೪	೦.೪೪
೯	ಡ್ರೈವಿಂಗ್		೧	೩	೦	೦	೪	೧	೧	೦	೨	೪	೮	೦.೮೮
೧೦	ಪೇಂಟಿಂಗ್		೦	೩	೦	೦	೩	೦	೦	೦	೦	೦	೩	೦.೩೩
೧೧	ಟೈಲರಿಂಗ್		೦	೩	೦	೦	೩	೧	೦	೦	೨	೩	೬	೦.೬೬
೧೨	ವ್ಯಾಪಾರ		೦	೦	೦	೦	೦	೨	೦	೨	೨	೬	೬	೦.೬೬
೧೩	ಗೃಹಿಣಿಯರು		೮	೧೦	೧೭	೪	೩೯	೧೧	೬	೧೮	೧೧	೪೬	೮೫	೯.೪೨
೧೪	ನಿರುದ್ಯೋಗಿಗಳು		೧೩	೧೭	೧೦	೧೪	೫೪	೧೪	೨	೧೩	೬	೩೫	೮೯	೯.೮೬
೧೫	ವಿದ್ಯಾರ್ಥಿಗಳು		೧೨	೨೧	೧೨	೧೩	೫೮	೧೪	೧೮	೧೫	೧೪	೬೧	೧೧೯	೧೩.೧೯
೧೬	ವಿದ್ಯಾರ್ಥಿನಿಯರು		೭	೫	೧೮	೫	೩೫	೧೮	೧೭	೧೧	೧೩	೫೯	೯೪	೧೦.೪೨
೧೭	ಶಾಲೆ ಬಿಟ್ಟ ಮಕ್ಕಳು	ಗಂ	೦	೦	೦	೫	೫	೧	೦	೦	೪	೫	೧೦	೧.೧೦
		ಹೆ	೦	೦	೦	೬	೬	೦	೦	೦	೨	೨	೮	೦.೮೮
	ಒಟ್ಟು		೧೦೪	೧೧೧	೧೨೩	೧೧೦	೪೪೮	೧೧೪	೧೧೨	೧೦೮	೧೨೦	೪೫೪	೯೦೨	೧೦೦

ಮಾಹಿತಿಯ ಮೂಲ: ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೧೪ ರಲ್ಲಿ ಉಲ್ಲೇಖ ಮಾಡಿರುವಂತೆ, ಶೇಕಡ ೭.೦೯(೬೪) ಗಾರೆ ಕೆಲಸವೇ ಆಸರೇ. ಇವರಿಗೆ ತಮ್ಮ ವೃತ್ತಿ ಬಿಟ್ಟರೆ ಬೇರೆ ದುಡಿಮೆಯ ಮಾರ್ಗ ತಿಳಿದಿಲ್ಲ. ಸುಗ್ಗಿ ಕಾಲ ಮುಗಿದ ನಂತರ ಸ್ವಲ್ಪ ದುಡಿಮೆ ಇರುತ್ತದೆ. ಯಾಕೆಂದರೆ ಹಳ್ಳಿಗಳಲ್ಲಿ ಬೆಳೆ ಕೈಗೆ ಬಂದಾಗ ಕಟ್ಟಡಗಳನ್ನು ಕಟ್ಟಿಸುತ್ತಾರೆ. ಮತ್ತು ಸ್ಥಳಿಯ ಸಂಸ್ಥೆಗಳ ಚುನಾವಣೆಗಳಿಂದ ವಿಧಾನಸಭೆಗಳು ಹಾಗೂ ಲೋಕಸಭೆ ಚುನಾವಣೆಗಳು ಸಮೀಪ ಬಂದಾಗ, ನಿಂತು ಹೋಗಿರುವ ಕಾಮಗಾರಿಗಳು ಪುನರ್ ಚಾಲನೆ ಮಾಡುವುದರಿಂದ, ಸಮುದಾಯದವರಿಗೆ ಕೆಲಸ ಸಿಗುತ್ತದೆ. ಮತ್ತು ಶೇಕಡ ೩.೫೪(೩೨) ಕುಟುಂಬಗಳು ಕಲ್ಲು ಹೊಡೆಯುವ ವೃತ್ತಿಯನ್ನು ಅವಲಂಬಿಸಿದ್ದಾರೆ. ಕಲ್ಲು ಹೊಡೆಯುವವರು ಸಿದ್ಧಯ್ಯನ ಕೋಟೆ ೧೦, ಜಯಂತಿನಗರ ೫, ಚಿಕ್ಕೇರಹಳ್ಳಿ ೧೦, ಮತ್ತು ನಾಗಸಮುದ್ರದಲ್ಲಿ ೭ ಕುಟುಂಬಗಳು ಮಾತ್ರ ಕಲ್ಲು ಮತ್ತು ಬಂಡೆಗಳನ್ನು ಹೊಡೆಯುವ ಕೆಲಸ ಮಾಡುತ್ತಾರೆ. ಹೊಳಲ್ಕೆರೆ ತಾಲ್ಲೂಕಿನ ಗ್ರಾಮಗಳಲ್ಲಿ ಯಾರು ಸಹ ಕಲ್ಲು ಹೊಡೆಯುವ ಕೆಲಸ ಮಾಡುತ್ತಿಲ್ಲ. ಕೂಲಿ ಕೆಲಸ ಮಾಡುವರನ್ನು ನೋಡುವುದಾದರೆ, ಶೇಕಡ ೩೫.೧೩(೩೧೭) ರಷ್ಟು ಪುರುಷ ಮತ್ತು ಮಹಿಳೆಯರನ್ನು ಒಳಗೊಂಡಂತೆ ಕೆಲಸ ನಿರ್ವಹಿಸುತ್ತಾರೆ. ಪುರುಷರು ಮತ್ತು ಮಹಿಳೆಯರನ್ನು ವಿಂಗಡಿಸಿ ನೋಡಿದಾಗ, ಪುರುಷರು ಶೇಕಡ ೧೮.೯೫(೧೭೧), ಅಂದರೆ ಪುರುಷರಿಗಿಂತ ಶೇಕಡ ೨.೭೭ ರಷ್ಟು ಮಹಿಳೆಯರೇ ಜಾಸ್ತಿ ಕೂಲಿ ಕೆಲಸ ಮಾಡುತ್ತಾರೆ.

ಹೊಳಲ್ಕೆರೆ ತಾಲ್ಲೂಕಿನ ಗ್ರಾಮಗಳಲ್ಲಿ ಪುರುಷರು ೯೭, ಮಹಿಳೆಯರು ೧೦೪, ಜನ ಕೆಲಸ ಮಾಡುವವರು ಇದ್ದಾರೆ. ಮೊಳಕಾಲ್ಮುರು ತಾಲ್ಲೂಕಿನ ಗ್ರಾಮಗಳಿಂದ ಪುರುಷರು ೪೯, ಮಹಿಳೆಯರು ೬೭ ಜನ ಇರುವುದು ತಿಳಿಯುತ್ತದೆ. ಶೇಕಡ ೩.೭೬(೩೪) ಕುಟುಂಬಗಳು ಭೋವಿ ಸಮುದಾಯದಲ್ಲಿ ವ್ಯವಸಾಯವನ್ನು ಮಾಡುತ್ತಾರೆ. ಹೊಳಲ್ಕೆರೆ ತಾಲ್ಲೂಕಿನ ಗ್ರಾಮಗಳಲ್ಲಿ ೨೩ ಕುಟುಂಬಗಳು ಮತ್ತು ಮೊಳಕಾಲ್ಮುರು ತಾಲೂಕಿನ ೧೧ ಕುಟುಂಬಗಳು ವ್ಯವಸಾಯವನ್ನು ನಂಬಿಕೊಂಡು ಬದುಕು ಸಾಗಿಸುತ್ತಾ ಇದ್ದಾರೆ. ಸಮುದಾಯದಲ್ಲಿ ಸರ್ಕಾರಿ ಕೆಲಸ ಮಾಡುವರ ವಿವರಗಳನ್ನು ನೋಡಿದಾಗ, ಬಹಳ ಕಡಿಮೆ ಸಂಖ್ಯೆಯಲ್ಲಿ ಸಿಗುತ್ತಾರೆ. ಅಧ್ಯಯನಕ್ಕೊಳಪಟ್ಟ ಎಂಟು ಗ್ರಾಮಗಳಿಂದ, ಶೇ.೦.೫೫(೫) ಐದು ಜನ ಮಾತ್ರ ಪೋಲೀಸ್ ಕಾನಸ್ಟೇಬಲ್, ವಾರ್ಡನ್, ಅಂಗನವಾಡಿ ಸಹಾಯಕ ಮತ್ತು ಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಅಡುಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು ತಿಳಿಯುತ್ತದೆ. ಮೇಲೆ ಇರುವ ಐದು ಜನರಲ್ಲಿ, ನಾಲ್ಕು ಜನ ಹೊಳಲ್ಕೆರೆ ತಾಲೂಕಿನ ವ್ಯಾಪ್ತಿಗೆ ಬಂದರೆ. ಒಬ್ಬರು ಮಾತ್ರ ಮೊಳಕಾಲ್ಮುರು ತಾಲ್ಲೂಕು ವ್ಯಾಪ್ತಿಗೆ ಬರುತ್ತಾರೆ. ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಸಮುದಾಯದಲ್ಲಿ ಶೇಕಡ ೦.೭೭(೭) ಕುಟುಂಬಗಳಲ್ಲಿ ಕೆಲಸ ಮಾಡುತ್ತಾರೆ. ಮತ್ತು ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಹೊಳಲ್ಕೆರೆ ತಾಲೂಕಿನ ಗ್ರಾಮಗಳಲ್ಲಿ ಬರುವ ಸಮುದಯದ ಜನತೆ ಯಾವುದೇ ತರಹದ ಖಾಸಗಿ ಸಂಸ್ಥೆಗಳಲ್ಲಿ ಅವರು

ಕೆಲಸ ಮಾಡುತ್ತಿರುವುದು ಕಂಡುಬಂದಿಲ್ಲ. ಮೊಳಕಾಲ್ಮೂರು ತಾಲೂಕಿನ ಹಳ್ಳಿಗಳಲ್ಲಿ ಮಾತ್ರ ಖಾಸಗಿ ಕೆಲಸವನ್ನು ಅವಲಂಬಿಸಿದ್ದಾರೆ.

ಶೇಕಡ ೧.೨೧(೧೧) ಕುಟುಂಬಗಳು ಚಿಕ್ಕ ಪುಟ್ಟ ಚಿಲ್ಲರೆ ವ್ಯವಹಾರ ನಡೆಸುತ್ತಾರೆ. ಹೊಳಲ್ಕೆರೆ ತಾಲ್ಲೂಕಿನ ಬೋರೆನಹಳ್ಳಿಯಲ್ಲಿ ೨, ಮೊಳಕಾಲ್ಮುರು ತಾಲ್ಲೂಕಿನ ಸಿದ್ಧಯ್ಯನಕೋಟೆ ೪, ಚಿಕ್ಕೇರಹಳ್ಳಿ ೩ ಮತ್ತು ನಾಗಸಮುದ್ರದಲ್ಲಿ ೨, ಕುಟುಂಬಗಳು ವ್ಯವಹಾರದಲ್ಲಿ ತೊಡಗಿದ್ದಾರೆ. ಶೇಕಡ ೦.೪೪(೪) ಕುಟುಂಬಗಳು ಹಿಂದೆ ಸ್ಥಳಿಯ ಸಂಸ್ಥೆಗಳಿಂದ ಅಧಿಕಾರ ಪಡೆದು ಅಧಿಕಾರ ಅವಧಿ ಮುಗಿದ ನಂತರ, ಗುತ್ತಿಗೆದಾರರಿಗೆ ಕೆಲಸ ಮಾಡುತ್ತ ಮುಂದುವರಿಯುತ್ತಾರೆ. ಶೇಕಡ ೦.೮೮(೮) ಕುಟುಂಬಗಳಲ್ಲಿ ಬಾಡಿಗೆ ಅಟೋ, ಟ್ರ್ಯಾಕ್ಸ್, ಡ್ರೈವರ್ ಶೇಕಡ .೦.೩೩ ಪೇಟಿಂಗ್, ಶೇಕಡ ೦.೬೬(೬) ಟೈಲರಿಂಗ್ ಮಾಡಿದರೆ, ಶೇಕಡ ೦.೬೬(೬) ಕುಟುಂಬಗಳು ಮೊಳಕಾಲ್ಮುರು ತಾಲ್ಲೂಕಿನ ಸಿದ್ಧಯ್ಯನಕೋಟೆ ೨, ಚಿಕ್ಕೇರಹಳ್ಳಿ ೨, ನಾಗಸಮುದ್ರ ೨, ಸೇರಿ ಒಟ್ಟು ೬ ಕುಟುಂಬಗಳು ತರಕಾರಿ ವ್ಯಾಪಾರ ಮಾಡುತ್ತಾರೆ. ಸಮುದಾಯದಲ್ಲಿ ಶೇಕಡ ೯.೪೨(೮೫) ಕುಟುಂಬಗಳು ತಮ್ಮ ಮನೆಯ ಕೆಲಸಗಳನ್ನು ಮಾಡುವವರ ಜೊತೆಗೆ ಅತ್ತೆ, ಮಾವ, ಗಂಡ, ಮಕ್ಕಳ ಸೇವೆ ಮಾಡುತ್ತ ಮನೆಯಲ್ಲಿರುವುದನ್ನು ಕಾಣಬಹುದು. ಶೇಕಡ ೯.೮೬(೮೯) ಕುಟುಂಬಗಳಲ್ಲ ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿಗಳನ್ನು ಪಡೆದು ಶಿಕ್ಷಣದಲ್ಲಿ ಮುಂದುವರಿಯುವ ಮತ್ತು ತಮ್ಮ ವೃತ್ತಿ ಸಂಪ್ರದಾಯವಾದ ಕಲ್ಲುಹೊಡೆಯುವ, ಕಟ್ಟಡ ಕಟ್ಟುವ ಶಕ್ತಿ ಇಲ್ಲದೆ ಮಾನಸಿಕ ಒತ್ತಡಕ್ಕೆ ಒಳಗಾಗಿ ಗ್ರಾಮಗಳಲ್ಲಿರುವ ಅರಳಿ ಮರದ ಕಟ್ಟೆ ಮೇಲೆ ಕುಳಿತುಕೊಂಡು ಕಾಲ ಕಳೆಯುವ ಚಿತ್ರಣಗಳು ಇವೆ. ಪ್ರಸ್ತುತ ಸಂದರ್ಭಗಳಲ್ಲಿ ಶೇಕಡ ೧೩.೧೯(೧೧೯) ವಿದ್ಯಾರ್ಥಿಗಳು ಶೇಕಡ ೧೦.೪೨(೯೪) ವಿದ್ಯಾರ್ಥಿನಿಯರು, ಶಿಕ್ಷಣ ಪಡೆಯುವ ಶಾಲಾ ಕಾಲೇಜುಗಳಿಗೆ ಹೋಗುತ್ತಾರೆ. ಶೇಕಡ ೧.೧೦(೧೦) ಗಂಡು ಮಕ್ಕಳು, ಶೇಕಡ ೦.೮೮(೮) ಹೆಣ್ಣುಮಕ್ಕಳು ಶಾಲೆಗೆ ಹೋಗದೆ ಶಾಲೆ ಬಿಟ್ಟು ತಮ್ಮ ಮನೆಗಳಲ್ಲಿರುವುದು ತಿಳಿಯುತ್ತದೆ. ಕಾರಣ ಕೇಳಿದರೆ ಆರ್ಥಿಕ ಪರಿಸ್ಥಿತಿ, ಶಾಲೆ ದೂರದಲ್ಲಿರುವುದು ಮತ್ತು ಇತರೆ ಕಾರಣಗಳನ್ನು ಕೊಡುತ್ತಾರೆ.

ಭೋವಿ ಸಮುದಾಯದವರು ತೊಡಗಿರುವ ಕಲ್ಲು ಹೊಡೆಯುವುದು ಮತ್ತು ಕಟ್ಟಡಗಳನ್ನು ಕಟ್ಟುವ ವೃತ್ತಿ ಪ್ರಸ್ತುತ ದಿನಗಳಲ್ಲಿಯೂ ಸಹ, ಅವರಿಗೆ ಶೇಕಡ ೫೩.೫(೧೦೭) ಕುಟುಂಬಗಳಿಗೆ ಅವಶ್ಯಕತೆ ಇದೆ. ಉಳಿದ ಶೇಕಡ ೪೬.೫(೯೩) ಕುಟುಂಬಗಳು ಅವಶ್ಯಕತೆ ಏನು ಇಲ್ಲ. ಬೇರೆ ವೃತ್ತಿಯಲ್ಲಿ ತೊಡಗುವ ಅವಕಾಶಗಳು ಮುಂದೆ ಬರಬಹುದು. ಯಾಕೆಂದರೆ ಹಿಂದೆ ಕಲ್ಲುಮಣ್ಣಿನ ಕೆಲಸ ಮತ್ತು ಕಟ್ಟಡಗಳನ್ನು ಕಟ್ಟುವ ಕೆಲಸ ಭೋವಿ ಸಮುದಾಯದವರು ಮಾತ್ರ ಮಾಡುತ್ತ ಇದ್ದರು. ಹಾಗಾಗಿ ಬೇಡಿಕೆ ಜಾಸ್ತಿ ಇತ್ತು. ಆದರೆ ಇಂದು ತಳದಲ್ಲಿರುವಂತಹ ಇತರೆ ಸಮುದಾಯಗಳು ಸಹ ಕೆಲಸ ಮಾಡುತ್ತ ಇದ್ದರೆ. ಇಂದಿಗೂ ಸಹ ತಮ್ಮ ಕುಲಕಸಬು ಪ್ರಸ್ತುತವಾಗಿದೆ ಎಂದು

ಅನ್ನಿಸುವುದಿಲ್ಲ. ಶೇಕಡ ೫೩.೫ ಕುಟುಂಬಗಳಿಗೆ ತಮ್ಮ ವೃತ್ತಿ ಅವಶ್ಯಕತೆ ಇದೆ ಯಾಕೆಂದು ಕಾರಣಗಳನ್ನು ಕೇಳಿದಾಗ, ಶೇಕಡ ೩೦(೬೦) ಕುಟುಂಬಗಳು ತಮ್ಮ ಕುಲ ಕಸುಬಾದ ಕಲ್ಲು ಹೊಡೆಯುವುದು, ಬಿಟ್ಟು ಬೇರೆ ದುಡಿಮೆ ಮಾಡಲು ಅವರಿಂದ ಸಾಧ್ಯವಿಲ್ಲ. ಶೇಕಡ ೨೩.೫(೪೭) ಕುಟುಂಬಗಳಿಗೆ ಕಟ್ಟಡ, ದೇವಾಲಯಗಳನ್ನು ಕೆರೆ ಕಾಲುವೆಗಳ ನಿರ್ಮಾಣ ಮಾಡುವ ವೃತ್ತಿಗೆ ಒಪ್ಪಿಕೊಂಡು ಬಿಟ್ಟಿದ್ದಾರೆ. ಬೇರೆ ಕೆಲಸ ಮಾಡಲು ಅವರಿಗೆ ಬರುವುದಿಲ್ಲ ಎನ್ನುವ ಉತ್ತರಗಳನ್ನು ಕೊಡುತ್ತಾರೆ. ಶೇಕಡ ೯.೫(೧೯) ಕುಟುಂಬಗಳ ತಮ್ಮ ಕುಲ ಕಸುಬನ್ನು ಬಿಟ್ಟು ಇತರೆ ದುಡಿಮೆ ವ್ಯವಹಾರಗಳನ್ನು ತೊಡಗಿದಾಗ, ಸರ್ಕಾರ ಯೋಜನೆಗಳ ಲಾಭವನ್ನು ಪಡೆದುಕೊಂಡು ಮುಂದುವರಿದರೆ, ಶೇಕಡ ೯೦.೫(೧೮೧) ಕುಟುಂಬಗಳಿಗೆ ಯಾವುದೇ ರೀತಿಯ ನೆರವು ದೊರೆಕಿಲ್ಲ. ಶೇಕಡ ೯.೫ ಕುಟುಂಬಗಳಲ್ಲಿ ಶೇಕಡ ೫(೧೦) ಗಂಗಾ ಕಲ್ಯಾಣ ಬೋರ್‌ವೆಲ್, ಶೇಕಡ ೪.೫(೯) ಕುಟುಂಬಗಳಿಗೆ ಸಬ್ಸಿಡಿ ರೂಪದಲ್ಲಿ ವಾಹನ ತೆಗೆದುಕೊಳ್ಳಲು ಸಾಲ ಪಡೆದಿರುವುದನ್ನು ಗುರುತಿಸಬಹುದು.

ಶೇಕಡ ೯೦.೫ ಕುಟುಂಬಗಳು ಯಾವುದೇ ನೆರವು ಪಡೆದಿಲ್ಲ. ಯಾಕೆಂದು ಕಾರಣಗಳು ಹುಡುಕಿದಾಗ, ಶೇಕಡ ೪೨.೫(೮೫) ಸರಿಯಾದ ಮಾಹಿತಿಯ ಕೊರತೆ. ಶೇಕಡ ೧೬.(೩೨) ಸಾಲ ತೆಗೆದುಕೊಂಡು ವ್ಯವಹಾರ ಮಾಡಲು ಬ್ಯಾಂಕ್‌ಗೆ ಹೋದಾಗ, ನೂರಾರು ದಾಖಲೆಗಳನ್ನು ಕೇಳುತ್ತಾರೆ. ಶೇಕಡ ೧೯(೩೮) ರಾಜಕೀಯ ನಾಯಕರ ಬಳಿ ಹೋದಾಗ ಅಲೆದಾಡಿಸುತ್ತಾರೆ. ಶೇಕಡ ೧೩.(೨೬) ಅಧಿಕಾರಿಗಳ ಬಳಿಹೋದಾಗ ನಿಂದಿಸಿ ಕಳಿಸುತ್ತಾರೆ. ತಳದಲ್ಲಿರುವ ಸಮುದಾಯಗಳನ್ನು ಅಭಿವೃದ್ಧಿ ಪಡಿಸಬೇಕಾದರೆ ಸರ್ಕಾರ ಕಾರ್ಯಕ್ರಮಗಳನ್ನು ಶೇಕಡ ೧೪ (೨೮) ಹೌದು ಎಂದರೆ, ಶೇಕಡ ೮೬ (೧೭೨) ಕುಟುಂಬಗಳು ತಮ್ಮನ್ನು ಅಭಿವೃದ್ಧಿ ಪಡಿಸಲು ಸರಕಾರಗಳು ಯೋಜನೆಗಳನ್ನು ಹಾಕಿಕೊಂಡಿಲ್ಲವೆಂದು ಉತ್ತರಿಸುತ್ತಾರೆ. ಶೇಕಡ ೧೪ ಕುಟುಂಬಗಳು ಸರಕಾರದ ಯೋಜನೆಗಳು ಪಡೆದವರಲ್ಲಿ ಶೇಕಡ ೭ (೧೪) ಭೋವಿ ಅಭಿವೃದ್ಧಿ ನಿಗಮದಿಂದ ಸಬ್ಸಿಡಿ ರೂಪದಲ್ಲಿ ಸಾಲ ಸೌಲಭ್ಯ ಶೇಕಡ ೭ (೧೪) ಕಾರ್ಮಿಕ ಇಲಾಖೆಯಲ್ಲಿ ಕಟ್ಟಡ ಕಾರ್ಮಿಕರಾಗಿ ನೊಂದಾಯಿಸಿ, ಅವರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಕಲ್ಲುಮಣ್ಣಿನ ಕೆಲಸ ಮಾಡುವವರಿಗೆ ಬೇಕಾದ ಸಲಕರಣೆಗಳನ್ನು ಖರೀದಿಸಲು ಆರ್ಥಿಕ ಸಹಾಯ ಮತ್ತು ವೈದ್ಯಕೀಯ ವೆಚ್ಚಗಳನ್ನು ಭರಿಸುತ್ತದೆ. ಹಾಗಾದರೆ ಸಮುದಾಯದ ಜನತೆಯನ್ನು ಸರಕಾರ ಅಭಿವೃದ್ಧಿ ಪಡಿಸುತ್ತದೆಯೇ ಎನ್ನುವ ಪ್ರಶ್ನೆ ಶೇಕಡ ೮.೫ (೧೭) ಕುಟುಂಬಗಳು ಹೌದು ಎಂದರೆ ಶೇಕಡ ೯೧.೫ (೧೮೩) ಯಾವುದೇ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲವೆನ್ನುತ್ತಾರೆ. ಶೇಕಡ ೮.೫ ಕುಟುಂಬಗಳಲ್ಲಿ ಶೇಕಡ ೫ (೧೦) ಬೆಳೆ ಪರಿಹಾರ, ಶೇಕಡ ೩.೫ (೭) ಕೃಷಿಕರಿಗೆ ಸಾಲ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ.

ಕೋಷ್ಟಕ ೬.೧೫ ಭೋವಿ ಸಮುದಾಯದ ಕುಟುಂಬಗಳಲ್ಲಿ ಮಹಿಳೆಯರು ತೊಡಗಿರುವ ದುಡಿಮೆಗಳ ವಿವರಗಳು

ಕ್ರ.ಸಂ	ಭೋವಿ ಸಮುದಾಯದ ಕುಟುಂಬಗಳಲ್ಲಿ ಮಹಿಳೆಯರು ತೊಡಗಿರುವ ದುಡಿಮೆಗಳ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಕೂಲಿ	೭೪	೪೧	೧೧೫	೫೭.೫
೨	ಟೈಲರಿಂಗ್	೧	೫	೬	೩
೩	ಬಿಸಿ ಊಟ ತಾಯರು	೧	೪	೫	೨.೫
	ಒಟ್ಟು	೭೬	೫೦	೧೨೬	೬೩

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೧೫ ರಲ್ಲಿರುವಂತೆ ಸಮುದಾಯದ ಕುಟುಂಬಗಳಲ್ಲಿ ಶೇಕಡ ೬೩ (೧೨೬) ಮಹಿಳೆಯರು ದುಡಿಮೆಯಲ್ಲಿ ತೊಡಗಿದ್ದಾರೆ. ಶೇಕಡ ೩೭ (೭೪) ಕುಟುಂಬಗಳಲ್ಲಿ ಮಹಿಳೆಯರು ಯಾವುದೇ ಕೆಲಸಗಳನ್ನು ಮಾಡಲಿಕ್ಕೆ ಮನೆಬಿಟ್ಟು ಹೋಗುವುದಿಲ್ಲ. ದುಡಿಮೆಯಲ್ಲಿ ತೊಡಗಿರುವ ವಿವರಗಳನ್ನು ನೋಡಬಹುದು. ಭೋವಿ ಸಮುದಾಯದಲ್ಲಿ ಪುರುಷರಿಗಿಂತ ಮಹಿಳೆಯರೆ ಹೆಚ್ಚಿನ ಸಂಖ್ಯೆಯಲ್ಲಿ ದುಡಿಮೆಗೆ ಹೋಗುತ್ತಾರೆ. ಯಾಕೆಂದರೆ ಸಮುದಾಯದ ಪುರುಷರು ಕುಡಿತದ ಚಟಕ್ಕೆ ಬಿದ್ದು, ಹೆಂಡತಿ ಮಕ್ಕಳನ್ನು ಮರೆತಂತೆ ಕಾಣುತ್ತಾರೆ. ಆದ್ದರಿಂದ ಶೇಕಡ ೫೭.೫ (೧೧೫) ಮಹಿಳೆಯರು ಅಕ್ಕಪಕ್ಕದಲ್ಲಿರುವ ಕಂಪನಿ, ಕಾರ್ಖಾನೆ, ಗದ್ದೆ/ಹೊಲಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಶೇಕಡ ೩ (೬) ಟೈಲರಿಂಗ್, ಶೇಕಡ ೨.೫ (೫) ಅಂಗನವಾಡಿ, ಪ್ರಾಥಮಿಕ ಶಾಲೆ, ಮದುವೆ ಸಮಾರಂಭಗಳಲ್ಲಿ ಅಡುಗೆ ಮಾಡುವ ಕೆಲಸಕ್ಕೆ ಹೋಗುತ್ತಾರೆ.

೬.೨.೨ ಆದಾಯ

ಸಮುದಾಯದ ಆದಾಯದ ವಿವರಗಳನ್ನು ನೋಡಲು ಹೋದಾಗ ಕುಟುಂಬಗಳಿಂದ ಬಂದ ಉತ್ತರವೆಂದರೆ ತಮಗೆ ಕೆಲಸ ಸಿಗುವುದೇ ಕಷ್ಟ ನಮ್ಮದು ಹಳೆಯ ಸಂಪ್ರದಾಯ ಕುಲ ಕಸಬು ಪ್ರಸ್ತುದಲ್ಲಿ ಅದು ನಡೆಯುವುದಿಲ್ಲ. ಹಿಂದೆ ನಮಗೆ ಬೇಡಿಕೆ ಜಾಸ್ತಿ ಇತ್ತು. ಇಂದು ಬೇಡಿಕೆ ಕಮ್ಮಿಯಾಗಿದೆ. ಏಕೆಂದರೆ ಇತರೆ ಸಮುದಾಯದವರು ಕಟ್ಟಡ/ಕಲ್ಲುಹೊಡೆಯುವುದು ಕಲಿತ್ತಿದ್ದಾರೆ. ಆದ್ದರಿಂದ ಅವರ ಕೊಟ್ಟಷ್ಟು ಇಸ್ಕೋಂಡು ಕೆಲಸ ಮಾಡಬೇಕಾದ ಪರಿಸ್ಥಿತಿ ಇದೆ ಎನ್ನುತ್ತಾರೆ. ಸಮುದಾಯದ ಕುಟುಂಬಗಳ ವಾರ್ಷಿಕ ಆದಾಯವನ್ನು ಕೆಳಕಂಡ ಕೊಷ್ಟಕದ ಮೂಲಕ ವಿವರಿಸಲಾಗಿದೆ.

ಕೋಷ್ಟಕ ೬.೧೬ ಭೋವಿ ಸಮುದಾಯದ ಕುಟುಂಬಗಳ ಹತ್ತು ವರ್ಷಗಳ ಹಿಂದೆ ಮತ್ತು ಪ್ರಸ್ತುತ ದಿನಗಳ ಆದಾಯದ ವಿವರಗಳು

ಕ್ರಸಂ	ಭೋವಿ ಸಮುದಾಯದ ಕುಟುಂಬಗಳ ಹತ್ತು ವರ್ಷಗಳ ಹಿಂದೆ ಮತ್ತು ಪ್ರಸ್ತುತ ದಿನಗಳ ಆದಾಯದ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
ಭೋವಿ ಸಮುದಾಯದ ಕುಟುಂಬಗಳ ಪ್ರಸ್ತುತ ದಿನಗಳ ಆದಾಯದ ವಿವರಗಳು					
೧	೫,೦೦೦	೧	೧	೨	೧
೨	೮,೦೦೦	೭	೬	೧೩	೬.೫
೩	೧೦,೦೦೦	೪೧	೨೮	೬೯	೩೪.೫
೪	೧೨,೦೦೦	೨೩	೫೧	೭೪	೩೭
೫	೧೪,೦೦೦	೦	೭	೭	೩.೫
೬	೧೫,೦೦೦	೨೬	೪	೩೦	೧೫
೭	೨೦,೦೦೦	೨	೩	೫	೨.೫
	ಒಟ್ಟು	೧೦೦	೧೦೦	೨೦೦	೧೦೦
ಹತ್ತು ವರ್ಷಗಳ ಹಿಂದಿನ ಭೋವಿ ಸಮುದಾಯದ ಕುಟುಂಬಗಳ ಆದಾಯದ ವಿವರಗಳು					
೧	೫೦೦೦	೬೫	೫೩	೧೧೮	೫೯
೨	೮೦೦೦	೨೧	೩೫	೫೬	೨೮
೩	೧೦೦೦೦	೧೪	೧೨	೨೬	೧೩
	ಒಟ್ಟು	೧೦೦	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಮೇಲಿನ ೬.೧೬ ಕೋಷ್ಟಕದಲ್ಲಿರುವಂತೆ ಭೋವಿ ಸಮುದಾಯದ ಆದಾಯದ ವಿವರಗಳು ಪ್ರಸ್ತುತ ದಿನಮಾನಗಳಲ್ಲಿ ವಾರ್ಷಿಕ ಆದಾಯ, ಶೇಕಡ ೧ (೨) ಕುಟುಂಬಗಳಿಗೆ ೫೦೦೦, ಶೇಕಡ ೬.೫ (೧೩) ಕುಟುಂಬಗಳಿಗೆ ೮,೦೦೦, ಶೇಕಡ ೩೪.೫ (೬೯) ಕುಟುಂಬಗಳಿಗೆ ೧೦,೦೦೦, ಶೇಕಡ ೩೭ (೭೪) ಕುಟುಂಬಗಳಿಗೆ ೧೨, ೦೦೦, ಶೇಕಡ ೩.೫ (೭) ಕುಟುಂಬಗಳಿಗೆ ೧೪,೦೦೦, ಶೇಕಡ ೧೫ (೩೦) ಕುಟುಂಬಗಳಿಗೆ ೧೫,೦೦೦, ಆದಾಯವಿದ್ದರೆ, ಉಳಿದ ಶೇಕಡ ೨.೫ (೫) ಕುಟುಂಬಗಳಿಗೆ ೨೦,೦೦೦, ಸಾವಿರ ರೂಪಾಯಿಗಳು ಆದಾಯವಿರುವುದು ತಿಳಿಯುತ್ತದೆ. ಶೇಕಡ ೩೭ ರಷ್ಟು ಕುಟುಂಬಗಳಿಗೆ ೧೨,೦೦೦, ಆದಾಯವಿದ್ದು, ಸಮುದಾಯದಲ್ಲಿ ೧೨ ಸಾವಿರ ಆದಾಯವಿರುವವರೆ ಹೆಚ್ಚಿನ ಸಂಖ್ಯೆಯಲ್ಲಿರುವುದು ತಿಳಿಯುತ್ತದೆ.

ಹತ್ತು ವರ್ಷಗಳ ಹಿಂದೆ ಇವರ ಆದಾಯದ ವಿವರಗಳನ್ನು ಸಂಗ್ರಹಿಸಿದಾಗ, ಶೇಕಡ ೫೯ (೧೮೮) ಕುಟುಂಬಗಳಿಗೆ ೫,೦೦೦, ಶೇಕಡ ೨೮ (೫೬) ಕುಟುಂಬಗಳಿಗೆ ೮,೦೦೦, ಶೇಕಡ ೧೩ (೨೬) ಕುಟುಂಬಗಳಿಗೆ ೧೦,೦೦೦, ಇತ್ತು ಹಾಗೂ ಆಗಿನ ಕಾಲದಲ್ಲಿ ಆದಾಯ ಕಮ್ಮಿ ಇದ್ದರೂ, ಕೆಲಸದ ಬೇಡಿಕೆ ಸಮುದಾಯದವರಿಗೆ ಜಾಸ್ತಿ ಇತ್ತು. ಯಾಕೆಂದರೆ ಕಟ್ಟಡಕಟ್ಟುವುದು ಮತ್ತು ಕಲ್ಲು ಬಂಡೆಗಳನ್ನು ಭೋವಿ ಸಮುದಾಯದವರು ಮಾತ್ರ ಮಾಡುತ್ತ ಇದ್ದರು.

೬.೨.೩ ಭೂ ಹಿಡುವಳಿ

ಸಮುದಾಯದಲ್ಲಿ ಒಣ ಭೂಮಿ, ನೀರಾವರಿ ಭೂಮಿ, ಬಂಜರು ಭೂಮಿ ಇರುವವರು ಎಷ್ಟು ಪ್ರಮಾಣದಲ್ಲಿದ್ದಾರೆ ಮತ್ತು ಭೂಮಿ ಇಲ್ಲದವರು ಎಷ್ಟು ಪ್ರಮಾಣದಲ್ಲಿದ್ದಾರೆ ಮತ್ತು ಅವರು ಮಾಡುವ ಇತರೆ ಭೂ ಒಡೆತನದ ವಿವರಗಳನ್ನು ಕೆಳಕಂಡತೆ ವಿಶ್ಲೇಷಿಸಲಾಗಿದೆ.

ಕೋಷ್ಟಕ ೬.೧೭ ಭೋವಿ ಸಮುದಾಯದವರ ಕುಟುಂಬಗಳ ಭೂ ಹಿಡುವಳಿಗಳನ್ನು ಹೊಂದಿರುವ ವಿವರಗಳು

ಕ್ರಸಂ	ಭೋವಿ ಸಮುದಾಯದವರ ಕುಟುಂಬಗಳ ಭೂ ಹಿಡುವಳಿಗಳನ್ನು ಹೊಂದಿರುವ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
೧	ಒಣ ಭೂಮಿ	೩೨	೬೩	೯೫	೪೭.೫
೨	ನೀರಾವರಿ ಭೂಮಿ	೨೦	೨೦	೪೦	೨೦
೩	ಬಂಜರು ಭೂಮಿ	೩	೫	೮	೪
೪	ಭೂಮಿ ಇಲ್ಲದವರು	೪೫	೧೨	೫೭	೨೮.೫
	ಒಟ್ಟು	೧೦೦	೧೦೦	೨೦೦	೧೦೦

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಭೋವಿ ಸಮುದಾಯದವರಿಗೆ ಇರುವ ಭೂಮಿಯ ವಿವರಗಳು ಮೇಲಿನ ೬.೧೭ ಕೋಷ್ಟಕದಲ್ಲಿರುವಂತೆ, ಶೇಕಡ ೪೭.೫ (೯೫) ಕುಟುಂಬಗಳಿಗೆ ಒಣಭೂಮಿ ಇದೆ. ಇದರಲ್ಲಿ ಸಜ್ಜೆ, ಬಿಳಿಜೋಳ, ಕೆಂಪುಜೋಳ, ಮೆಕ್ಕೆಜೋಳ, ಶೇಂಗಾ, ಅಲಸಂಧಿ, ಹತ್ತಿ, ಬೆಳೆಗಳನ್ನು ಬೆಳೆಯುತ್ತಾರೆ. ಯಾಕೆಂದರೆ ಬಯಲು ಸೀಮೆ ಜಿಲ್ಲೆಯಾಗಿರುವುದರಿಂದ ಮಳೆಬರುವುದು ಬಹಳ ಕಡಿಮೆ. ಶೇಕಡ ೨೦(೪೦) ಕುಟುಂಬಗಳಿಗೆ ನೀರಾವರಿ ಭೂಮಿ ಇದೆ. ಇವರು ಸರ್ಕಾರದ ಗಂಗಾಕಲ್ಯಾಣ ಯೋಜನೆಯನ್ನು ಬಳಸಿಕೊಂಡು ಬೋರ್‌ವೆಲ್ ಕೊರಸಿ ಈ ಭೂಮಿಯಲ್ಲಿ ಈರುಳ್ಳಿ, ಬದನೆಕಾಯಿ, ಬ್ಯಾಡಗಿ ಮೆಣಸಿನಕಾಯಿ, ರಾಗಿ, ಭತ್ತ, ಹೂ ಕೊಸು ಬೆಳೆಗಳನ್ನು ಅಲ್ಪ ಪ್ರಮಾಣದಲ್ಲಿ ಬೆಳೆಗಳನ್ನು ಬೆಳೆಯುತ್ತ ಇದ್ದರು. ಆದರೆ ೧೦ ವರ್ಷಗಳಿಂದ ಬಯಲು ಸೀಮೆಗೆ ಮಳೆಯ ಕೊರತೆಯ ಅಭಾವದಿಂದ ಬೋರ್‌ವೆಲ್ ಬತ್ತಿ ಹೋಗಿ, ಶೇಕಡ ೩ (೬)

ಕುಟುಂಬಗಳು ಮಾತ್ರ ನಿರಾವರಿ ಇಂದ ಕೃಷಿ ಮಾಡುತ್ತ ಇರುವುದು ಕಂಡುಬರುತ್ತದೆ. ಉಳಿದ ಶೇಕಡ ೪ (೮) ಕುಟುಂಬಗಳಿಗೆ ಬಂಜರು ಭೂಮಿ ಇದೆ. ಆದ್ದರಿಂದ ಇವರು ಕೃಷಿ ಚಟುವಟಿಕೆಗಳಿಂದ ದೂರವಿದ್ದು, ಇತರೆ ಕೆಲಸಗಳನ್ನು ಮಾಡುತ್ತ ಇರುವುದು ತಿಳಿಯುತ್ತದೆ. ಶೇಕಡ ೨೮.೫ (೫೭) ಕುಟುಂಬಗಳಿಗೆ ಯಾವುದೇ ರೀತಿಯ ಭೂಮಿ ಇಲ್ಲ. ಅವರು ಸಹ ಕಲ್ಲು ಮಣ್ಣಿನ ಕೆಲಸ ಮಾಡುತ್ತ ಇರುವುದು ತಿಳಿದುಬರುತ್ತದೆ.

೬.೨.೪ ಆದಾಯದ ಮೂಲ

ಶೇಕಡ ೧೨.೫ (೨೫) ಕುಟುಂಬಗಳಿಗೆ ಇತರೆ ಮೂಲಗಳಿಂದ ಆದಾಯ ಬರುತ್ತದೆ. ಅದು ಯಾವುದೆಂದರೆ, ಶೇಕಡ ೬.೫ (೧೩) ಕುಟುಂಬಗಳು ಮನೆಗಳನ್ನು ಬಾಡಿಗೆಗೆ ಕೊಟ್ಟಿರುವುದರಿಂದ ತಿಂಗಳಿಗೆ ೫೦೦ ನೂರು ರೂಪಾಯಿಗಳಿಂದ ೧೦೦೦ ರೂಪಾಯಿಗಳ ವರೆಗೆ ೧೩ ಕುಟುಂಬಗಳಿಗೆ ಆದಾಯ ಬರುತ್ತದೆ. ಶೇಕಡ ೪ (೮) ಹೈನುಗಾರಿಕೆ, ಶೇಕಡ ೨ (೪) ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಗುತ್ತಿಗೆದಾರರಾಗಿ ಕೆಲಸ ಮಾಡುವುದರಿಂದ ೪ ಕುಟುಂಬಗಳಿಗೆ ತಿಂಗಳಿಗೆ ೫೦೦೦ ಸಾವಿರದಿಂದ ೧೦,೦೦೦ ಸಾವಿರ ರೂಪಾಯಿಗಳು ಆದಾಯ ಬರುವುದು ತಿಳಿಯುತ್ತದೆ.

೬.೨.೫ ಚರಾ ಮತ್ತು ಚಿರಾ ಆಸ್ತಿ ವಿವರಗಳು

ಭೋವಿ ಸಮುದಾಯದವರು ಅಭಿವೃದ್ಧಿ ಹೊಂದಬೇಕಾದರೆ ಚರಾ ವಸ್ತುಗಳಾದ ಹಸು, ಎಮ್ಮೆ, ಎತ್ತು, ಕುರಿ, ಆಡು, ಕೋಳಿ, ಪಾರಿವಾಳ ಮತ್ತು ಇತರೆ ಪ್ರಾಣಿಗಳ ಸಾಕಾಣಿಕೆ ಮತ್ತು ಸ್ಥಿರಾ ವಸ್ತುಗಳಾದ ಕುರ್ಚಿ/ಟೇಬಲ್, ರೇಡಿಯೋ/ಟಿವಿ, ಸೈಕಲ್/ಸ್ಕೂಟರ್/ಬೈಕ್, ಕಾರು/ಜೀಪ್, ಎತ್ತಿನಬಂಡಿ, ಟಿಲ್ಲರ್/ಟ್ರಾಕ್ಟರ್, ದೂರವಾಣಿ/ಮೊಬೈಲ್, ಪಂಪ್‌ಸೆಟ್, ಗ್ಯಾಸ್, ಇತರೆ ಬೆಲೆಬಾಳುವ ಸ್ಥಿರಾವಸ್ತುಗಳು ಎಷ್ಟು ಪ್ರಮಾಣದಲ್ಲಿ ಇದ್ದಾವೆ ಎನ್ನುವುದರ ಆಧಾರದ ಮೇಲೆಯೂ ಪ್ರಸ್ತುತ ದಿನಗಳಲ್ಲಿ ಅಭಿವೃದ್ಧಿ ಮಾಪನ ಮಾಡುವುದು ಕಂಡುಬರುವುದು ಒಂದು ಭಾಗವಾಗಿದೆ. ಆದ್ದರಿಂದ ಸಮುದಾಯದಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರಾಣಿಸಾಕಾಣಿಕೆ ಮಾಡಿದ್ದಾರೆ ಎನ್ನುವುದು ಕೆಳಕಂಡ ಕೋಷ್ಟಕದ ಮೂಲಕ ವಿವರಿಸಲಾಗಿದೆ. ಭೋವಿ ಸಮುದಾಯದ ಕುಟುಂಬಗಳ ಪ್ರಾಣಿಗಳ ಸಾಕಾಣಿಕೆಯ ಸಮುದಾಯದಲ್ಲಿ ಶೇಕಡ ೧ (೨) ಹಸುಗಳನ್ನು, ಶೇಕಡ ೨.೫ (೫) ಎಮ್ಮೆ, ಶೇಕಡ ೧. ೧೬ (೧) ಎತ್ತು, ಶೇಕಡ ೬ (೧೨) ಕುಟುಂಬಗಳು ಕುರಿ, ಶೇಕಡ ೩ (೬) ಆಡು, ಶೇಕಡ ೮ (೧೬) ಕೋಳಿ, ಶೇಕಡ ೨ (೪) ಪಾರಿವಾಳಗಳನ್ನು ಭೋವಿ ಸಮುದಾಯದವರು ಸಾಕಣಿಕೆ ಮಾಡಿರುವುದು ಕಂಡುಬರುತ್ತದೆ. ಅದನ್ನು ವಿಶ್ಲೇಷಿಸಿದಾಗ, ಒಟ್ಟು ಶೇಕಡ ೨೩.೫ ಕುಟುಂಬಗಳು ಮೇಲಿನ ಪ್ರಾಣಿಗಳನ್ನು ಸಾಕಾಣಿಕೆ ಮಾಡಿ ಜೀವನ ನಡೆಸಲು ಆದಾಯಗಳಿಸುತ್ತಾರೆ. ಅಧ್ಯಯನ ಕೈಗೊಂಡ ೨೦೦ ಕುಟುಂಬಗಳು ಮೊಳಕಾಲ್ಮೂರು ತಾಲ್ಲೂಕಿನ ಗ್ರಾಮಗಳಲ್ಲಿ ಬಂದರೆ, ಉಳಿದ ೬ ಕುಟುಂಬಗಳು ಹೊಳಲ್ಕೆರೆಯ ಬೋರೆನಹಳ್ಳಿ, ರಾಮೇನಹಳ್ಳಿ, ಕಣವಿಜೋಗಿಹಳ್ಳಿ ಗ್ರಾಮಗಳಲ್ಲಿ ಚರಾ ಆಸ್ತಿಗಳು ಹೊಂದಿರುವುದು ಕಂಡುಬರುತ್ತದೆ. ಭೋವಿ ಸಮುದಾಯದ ಚರಾ/ಸ್ಥಿರಾ ವಸ್ತುಗಳು ವಿವರಗಳು ಕೆಳಕಂಡ ಕೊಷ್ಟಕದ ಮೂಲಕ ವಿವರಿಸಲಾಗಿದೆ.

ಕೋಷ್ಟಕ ೬.೧೮ ಭೋವಿ ಸಮುದಾಯದ ಕುಟುಂಬಗಳ ಚರಾ ಮತ್ತು ಸ್ಥಿರಾ ವಸ್ತುಗಳ ವಿವರಗಳು

ಕ್ರ.ಸಂ.	ಭೋವಿ ಸಮುದಾಯದ ಕುಟುಂಬಗಳ ಚರಾ ಮತ್ತು ಸ್ಥಿರಾ ವಸ್ತುಗಳ ವಿವರಗಳು	ಹೊಳಲ್ಕೆರೆ ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಕುಟುಂಬಗಳು	ಮೊಳಕಾಲ್ಮೂರು ತಾಲ್ಲೂಕಿನ ಭೋವಿ ಸಮುದಾಯದ ಕುಟುಂಬಗಳು				ಕುಟುಂಬಗಳು	ಒಟ್ಟು ಕುಟುಂಬಗಳು	ಶೇಕಡ
		ಬೋರನಹಳ್ಳಿ	ರಾಮೇನಹಳ್ಳಿ	ಕಣಿವೆ ಜೋಗಿಹಳ್ಳಿ	ಮಾರುತಿಹಳ್ಳಿ		ದ್ಯಾವನಹಟ್ಟಿ	ಬಡತಿ ನಗರ	ಚಿಕ್ಕೇರಹಳ್ಳಿ	ನಾಗಸಮುದ್ರ			
೧	ಕುರ್ಚಿ/ ಟೇಬಲ್	೨೨	೧೪	೪	೧	೪೧	೨೧	೨೦	೨೧	೨೪	೮೬	೧೨೭	೬೩.೫
೨	ರೇಡಿಯೋ/ ಟಿವಿ	೨೦	೧೦	೪	೧	೩೫	೨೧	೨೦	೨೦	೨೨	೮೩	೧೧೮	೫೯
೩	ಸೈಕಲ್/ಸ್ಕೂಟರ್/ಬೈಕ್	೧೦	೫	೧	೧	೧೭	೪	೨	೨	೪	೧೨	೨೯	೧೪.೫
೪	ಕಾರು/ಜೀಪ್	೧	೦	೦	೦	೧	೨	೦	೧	೧	೪	೫	೨.೫
೫	ಎತ್ತಿನ ಬಂಡಿ	೦	೧	೦	೦	೧	೦	೦	೧	೧	೨	೩	೧.೫
೬	ಟಿಲ್ಲರ್/ಟ್ರಾಕ್ಟರ್	೨	೧	೦	೦	೩	೩	೧	೨	೧	೭	೧೦	೫
೭	ದೂ.ವಾ./ಮೊಬೈಲ್	೨೪	೨೦	೧೮	೧೫	೭೭	೨೫	೨೪	೨೫	೨೫	೯೯	೧೭೬	೮೮
೮	ಪಂಪ್‌ಸೆಟ್	೧೦	೫	೦	೦	೧೫	೫	೭	೬	೦	೧೮	೩೩	೧೬.೫
೯	ಗ್ಯಾಸ್/	೨೪	೨೨	೨೨	೧೫	೮೩	೨೫	೨೪	೨೫	೨೫	೯೯	೧೮೨	೯೧

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

ಕೋಷ್ಟಕ ೬.೧೮ರಲ್ಲಿರುವಂತೆ ಸ್ಥಿರಾ ಆಸ್ತಿಗಳ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡಿದಾಗ, ಶೇಕಡ ೯೧ (೧೮೨) ಕುಟುಂಬಗಳಲ್ಲಿ ಕುರ್ಚಿ/ಟೇಬಲ್, ರೇಡಿಯೋ/ಟಿವಿ, ಸೈಕಲ್/ಸ್ಕೂಟರ್/ಬೈಕ್, ಕಾರು/ಜೀಪ್, ಎಂತಿನ ಬಂಡಿ, ಟಿಲ್ಲರ್/ಟ್ರಾಕ್ಟರ್, ಮೊಬೈಲ್, ಪಂಪ್‌ಸೆಟ್, ಗ್ಯಾಸ್‌ಗಳು ಇರುವುದು ತಿಳಿಯುತ್ತದೆ. ಉಳಿದ ಶೇಕಡ ೯ (೧೮) ಕುಟುಂಬಗಳಲ್ಲಿ ಮೇಲೆ ಇರುವ

ವಸ್ತುಗಳು ಯಾವುದು ಇಲ್ಲದೆ ಜೀವನ ನಡೆಸುವುದನ್ನು ಗಮನಿಸಬಹುದು. ಮೇಲೆ ಇರುವ ವಸ್ತುಗಳ ಪ್ರಮಾಣವನ್ನು ವಿವರಿಸಿ ನೋಡಿದಾಗ, ಶೇಕಡ ೬೩.೫ (೧೨೭) ಕುಟುಂಬಗಳಲ್ಲಿ ಕುರ್ಚಿ/ಟೇಬಲ್ ಸಾರ್ವೆ ಸಾಮಾನ್ಯವಾಗಿ ಇವೆ. ಶೇಕಡ ೫೯ (೧೧೮) ಮನೆಗಳಲ್ಲಿ ರೇಡಿಯೋ ಟಿವಿ, ಶೇಕಡ ೧೪.೫ (೨೯) ಸೈಕಲ್/ಸ್ಕೂಟರ್/ಬೈಕ್, ಶೇಕಡ ೨.೫ (೫) ಕಾರು/ಜೀಪ್, ಶೇಕಡ೧.೫ (೩) ಎತ್ತಿನಬಂಡಿ, ಶೇಕಡ ೫ (೧೦) ಕುಟುಂಬಗಳಲ್ಲಿ ಟ್ರ್ಯಾಕ್ಟರ್ ಇದೆ. ಆದ್ದರಿಂದ ಅದರ ಜೊತೆಯಲ್ಲಿ ಆಧುನೀಕ ಕೃಷಿ ಪದ್ದತಿಗೆ ಅನುಗುಣವಾಗಿ ಟಿಲ್ಲರ್ ಸಹ ಖರೀದಿಸಿದ್ದಾರೆ. ಶೇಕಡ ೮೮ (೧೭೬) ಕುಟುಂಬಗಳಲ್ಲಿ ದೂರವಾಣಿ/ಮೊಬೈಲ್ ಬಳಕೆ ಮಾಡದಿರುವುದು ಇದೆ. ಮತ್ತು ಶೇಕಡ ೧೬.೫ (೩೩) ಕುಟುಂಬಗಳ ಪ್ರಸ್ತುತದಲ್ಲಿ ನೀರಾವರಿಯಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುವುದರಿಂದ ಪಂಪ್‌ಸೆಟ್‌ಗಳನ್ನು ಹೊಂದಿದ್ದಾರೆ. ಹಾಗೂ (೧೮೨) ಕುಟುಂಬಗಳಿಗೆ ಸರ್ಕಾರ ಸಬ್ಸಿಡಿ ರೂಪದಲ್ಲಿ ಸಿಲೆಂಡರ್ ಒದಗಿಸಿರುವದರಿಂದ ಶೇಕಡ ೯೧.ರಷ್ಟು ಗ್ಯಾಸ್‌ಗಳನ್ನು ಕುಟುಂಬಗಳು ಹೊಂದಿರುವುದು ತಿಳಿಯುತ್ತದೆ.

ಅಧ್ಯಾಯ – ಏಳು

ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯ ಪ್ರತಿನಿಧಿತ್ವ

೭.೧. ಭೋವಿ ಸಮುದಾಯ ಅಭಿವೃದ್ಧಿ ನೀತಿಯ ವಿಶ್ಲೇಷಣೆ

೭.೧.೧. ಭೋವಿ ಸಮುದಾಯದ ಸಾಮಾಜಿಕ ಅಭಿವೃದ್ಧಿ ನೀತಿಯ ವಿಶ್ಲೇಷಣೆ

೭.೧.೨. ಭೋವಿ ಸಮುದಾಯದ ಆರ್ಥಿಕ ಅಭಿವೃದ್ಧಿ ನೀತಿಯ ವಿಶ್ಲೇಷಣೆ

೭.೨. ಭೋವಿ ಸಮುದಾಯದ ರಾಜಕೀಯ ಪ್ರತಿನಿಧಿತ್ವದ ವಿಶ್ಲೇಷಣೆ

೭.೨.೧. ಸಾಮಾಜಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ

೭.೨.೨. ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ

೭.೨.೩. ರಾಜಕೀಯ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ

೭.೨.೪. ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ

೭.೩. ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯದ ಪ್ರತಿನಿಧಿತ್ವದ ವಿಶ್ಲೇಷಣೆ

ಅಧ್ಯಾಯ – ಏಳು

ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯ ಪ್ರತಿನಿಧಿತ್ವ

ಭಾರತ ದೇಶವು ಅನೇಕ ಧರ್ಮ, ಜಾತಿ, ಸಮುದಾಯ, ಬುಡಕಟ್ಟು, ದಲಿತ ಪಂಗಡಗಳನ್ನು ತನ್ನ ತೆಕ್ಕೆಯಲ್ಲಿ ಪೋಷಿಸುತ್ತಾ ಬಂದು, ವಿಭಿನ್ನತೆಯಲ್ಲಿ ಏಕತೆಯನ್ನು ಮೆರೆದ ದೇಶ ನಮ್ಮದು. 'ಸರ್ವಜನಾಂಗದ ಶಾಂತಿಯ ತೋಟ'ವಾಗಿ ಬದುಕಿಗೆ ನೆಮ್ಮದಿಯನ್ನು ನೀಡಿದರೆ, ರಸಿಕರಕಂಗಳನ್ನು ಸೆಳೆದು ಸವಿಯ ಸುಂದರ ನೋಟವನ್ನು ಕೊಟ್ಟು ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. ಅಂತಹ ದಿಸೆಯಲ್ಲಿ ಪ್ರಕೃತಿಯನ್ನು ವರ್ಣನೆ ಮಾಡಿದಾಗ; ಮಾನವ ನಿರ್ಮಾಣಮಾಡಿದ ಅದ್ಭುತ ಕಲಾಪ್ರಪಂಚ ಸುಂದರವಾಗಿ ಕಂಡು, ನಮ್ಮನ್ನು ಕೈಬೀಸಿ ಕರೆಯುತ್ತದೆ. ಅಂತಹ ಪ್ರವಾಸಿ ಸ್ಥಳಗಳನ್ನು, ದೇವಾಲಯಗಳನ್ನು, ದೊಡ್ಡ ಕಟ್ಟಡಗಳನ್ನು, ನದಿ ಸರೋವರ, ಕೆರೆ, ಕಾಲುವೆ, ಬಾವಿ, ಕಟ್ಟೆಗಳನ್ನು ಕಟ್ಟಿ ಕಲಾ ಪ್ರಂಪಂಚವನ್ನು ನಿರ್ಮಾಣಮಾಡಿದ್ದು, ಭೋವಿ ಸಮುದಾಯದ ಕುಲ ಕಸುಬಿನ ವೃತ್ತಿಗಳು ಎಂದು ಅಧ್ಯಯನದಿಂದ ಗುರುತಿಸಬಹುದು.

ಸಾವಿರಾರು ವರ್ಷಗಳ ಪ್ರಾಚೀನ ಪರಂಪರೆಯನ್ನು ಹೊಂದಿರುವ ಭೋವಿ ಸಮುದಾಯದವರು ಕಾಲ ಕ್ರಮೇಣ ತನ್ನ ವೃತ್ತಿಯಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡು, ಬದುಕುವ ವ್ಯವಸ್ಥೆಯನ್ನು ಇಂದಿನ ಜಾಗತೀಕರಣ ಸೃಷ್ಟಿಮಾಡಿದೆ. ಯಾಕೆಂದರೆ ಒಂದು ಕಾಲದಲ್ಲಿ ನಾಗರಿಕ ಸಮಾಜದ ಬೆಳವಣಿಗೆಗೆ ಅತ್ಯಂತ ಅವಶ್ಯವಾದ ಮೂಲಭೂತ ಸೌಕರ್ಯಗಳಾದ ಸೇತುವೆ, ರಸ್ತೆ, ನಿರ್ಮಾಣಕ್ಕೆ ಬೇಕಾಗುವ ವಿವಿಧ ಬಗೆಯ ಕಲ್ಲುಗಳನ್ನು ಒಡೆದು, ಸೇತುವೆಗೆ ಬೇಕಾಗುವ ಬೃಹದಾಕಾರದ ಬಂಡೆಗಳನ್ನು ಕತ್ತರಿಸಿ, ಸಾಗಿಸಿ, ಕಬ್ಬಿಣ ಸಿಮೆಂಟಿನ ಅವಶ್ಯಕತೆಯಿಲ್ಲದೆ ಸಂಪರ್ಕ ಮಾರ್ಗವನ್ನು ಕಲ್ಪಿಸಿ ಕೊಟ್ಟು, ವ್ಯಾಪಾರ ಉದ್ದಿಮೆಗಳನ್ನು ಬೆಳೆಸುತ್ತದೆ. ಆದರೆ ಇಂದು ತಂತ್ರಜ್ಞಾನದ ಪ್ರಭಾವದಿಂದ ಕಲ್ಲಿನ ಬಳಕೆ ಮಾಡದೇ, ಯಂತ್ರಗಳ ಸಹಾಯದಿಂದ ಕಟ್ಟಡಗಳ ನಿರ್ಮಾಣಕ್ಕೆ

ಇಟ್ಟಂಗಿ ಕಬ್ಬಿಣ, ಸಿಮೆಂಟಿನ ಬಳಕೆಯಾಗುತ್ತಿದ್ದು, ಇವರ ಕೆಲಸವನ್ನು ಕಿತ್ತುಕೊಂಡು ಸಮುದಾಯದ ಅಭಿವೃದ್ಧಿಯು ಸ್ಥಿರತೆಯಲ್ಲಿದೆ ಎಂದು ತಿಳಿದುಬಂದಿದೆ.

೭.೧ ಭೋವಿ ಸಮುದಾಯ ಅಭಿವೃದ್ಧಿ ನೀತಿಯ ವಿಶ್ಲೇಷಣೆ

ಈ ಒಂದು ಭಾಗದಲ್ಲಿ ಭೋವಿ ಸಮುದಾಯ ಅಭಿವೃದ್ಧಿ ಹೇಗಿದೆ ಎಂದು ಸಮುದಾಯದ ಆರ್ಥಿಕ ಮತ್ತು ಸಾಮಾಜಿಕವಾಗಿ ಎರಡು ಭಾಗಗಳಲ್ಲಿ ಅಭಿವೃದ್ಧಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಭೋವಿ ಸಮುದಾಯವು ಸಾಮಾಜಿಕವಾಗಿ ಅಭಿವೃದ್ಧಿ ಯಾಗಬೇಕಾದರೆ ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಸಮುದಾಯದ ಅಸ್ಮಿತೆಯ ಸ್ಥಾನಮಾನಗಳಿಂದ ಅಳೆಯಬೇಕಾಗುತ್ತದೆ. ಹಾಗೂ ಸಮುದಾಯ ಆರ್ಥಿಕವಾಗಿ ಅಭಿವೃದ್ಧಿಯಾಗಲೂ ಉದ್ಯೋಗ, ಆದಾಯ, ಭೂಹಿಡುವಳಿ ಚರ ಮತ್ತು ಸ್ಥಿರಾ ಆಸ್ತಿಗಳು ಮತ್ತು ಕುಟುಂಬಗಳ ವರಮಾನವನ್ನು ಮಾಪನ ಮಾಡಿ ನಿರ್ಧರಿಸಬೇಕಾಗುತ್ತದೆ. ಆದ್ದರಿಂದ ಈ ಅಧ್ಯಯನದಲ್ಲಿ ಭೋವಿ ಸಮುದಾಯದ ಅಭಿವೃದ್ಧಿಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಈ ಕೆಳಕಂಡಂತೆ ವಿಶ್ಲೇಷಣೆ ಮಾಡಲಾಗಿದೆ.

೭.೧.೧ ಭೋವಿ ಸಮುದಾಯದ ಸಾಮಾಜಿಕ ಅಭಿವೃದ್ಧಿ ನೀತಿಯ ವಿಶ್ಲೇಷಣೆ

ಸಮುದಾಯವು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಮುಖ್ಯವಾಗಿ ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಸಮುದಾಯದ ಅಸ್ಮಿತೆಯ ಸ್ಥಾನಮಾನ ಅತ್ಯಂತ ಅವಶ್ಯಕತೆ. ಮೊದಲನೆದಾಗಿ ಭೋವಿ ಸಮುದಾಯದಲ್ಲಿ ಶಿಕ್ಷಣ ಪಡೆದವರ ವಿವರಗಳನ್ನು ಮಾಪನ ಮಾಡಿದಾಗ, ಶೇಕಡ ೫.೫ ಕುಟುಂಬಗಳಲ್ಲಿ ಅಂದರೆ ೧೧ ಕುಟುಂಬಗಳು ಶಾಲೆಕಡೆ ಒಬ್ಬರು ಸಹ ಮುಖ ಮಾಡದೇ ಇರುವವರು ಸಿಗುತ್ತಾರೆ. ಶೇಕಡ ೦.೫ ಒಂದು ಕುಟುಂಬದಲ್ಲಿ ಮಾತ್ರ ಎಲ್ಲರು ಶಿಕ್ಷಣವನ್ನು ಕಲಿತವರು ಸಿಕ್ಕರೇ ಉಳಿದ ಕುಟುಂಬಗಳಲ್ಲಿ ಶಿಕ್ಷಣವನ್ನು ಕಲೆತವರು ಸಿಗುತ್ತಾರೆ. ಶೇಕಡ ೨೫ ಅಂದರೆ ೫೦ ಕುಟುಂಬಗಳಲ್ಲಿ ಮೂವರು ಶಿಕ್ಷಣ ಪಡೆದವರು ಅಧ್ಯಯನದಲ್ಲಿ ಗುರುತಿಸಲಾಗಿದೆ.

ಶಿಕ್ಷಣ ಪಡೆದವರು ಶೇಕಡ ೪ ರಷ್ಟು ಮಾತ್ರ. ಎಂಟು ಕುಟುಂಬಗಳಲ್ಲಿ ಚಿಕ್ಕಮಟ್ಟ ಖಾಸಗಿ ಸಂಸ್ಥೆಗಳಲ್ಲಿ ಹಾಗೂ ಡಿ. ಗ್ರೂಫ್ ಹುದ್ದೆಗಳನ್ನು ಪಡೆದಿರುವುದು ತಿಳಿಯುತ್ತದೆ. ಶಿಕ್ಷಣದಿಂದ ಸಮುದಾಯ ಅಭಿವೃದ್ಧಿ ಕಾಣಲು ಸಾಧ್ಯವೆಂದು ಶೇಕಡ ೮೨.೫ ರಷ್ಟು ಜನತೆ ಹೇಳುತ್ತಾರೆ. ಆದರೆ ತಮ್ಮ ಮಕ್ಕಳನ್ನು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸದೇ ಅರ್ಧಕ್ಕೆ ಬಿಡಿಸಿ ತಮ್ಮ ಕುಟುಂಬದವರ ಜೊತೆಯಲ್ಲಿ ಅಥವಾ ಸಮುದಾಯದ ಹಿರಿಯರೊಂದಿಗೆ ಕಟ್ಟಡ ಕಟ್ಟುವುದಕ್ಕೆ ಅಥವಾ ಬಂಡೆಕೆಲಸಕ್ಕೆ ಕಳಿಸುವ ಪ್ರಸಂಗಗಳು ಕಂಡುಬರುತ್ತವೆ. ಕಾರಣ ಶಿಕ್ಷಣ ಕೊಡಿಸುವ ಶಕ್ತಿ ಇಲ್ಲಿ ಒಂದುವೇಳೆ ಇದ್ದರೂ ಸಹ, ಮುಂದಾಲೋಚನೆ ಮಾಡುವರು ಸಮುದಾಯದಲ್ಲಿ ಹೆಚ್ಚಿನ

ಸಂಖ್ಯೆಯಲ್ಲಿದ್ದಾರೆ. ಶಿಕ್ಷಣ ಪಡೆದು ಕೆಲಸಕ್ಕಾಗಿ ಬೇರೆಯವರ ಮುಂದೆ ಯಾಕೆ? ಕೆಲಸಕ್ಕಾಗಿ ಅಲೆಯಬೇಕು ಹೇಗಿದ್ದರೂ ಕುಲ ಕಸುಬು ಇದೆ ಅಲ್ವ, ಅದನ್ನು ಮುಂದುವರಸಿಕೊಂಡು ಹೋದರೆ, ಸರ್ಕಾರಿ ನೌಕರಿಯಲ್ಲಿರುವವರಿಗಿಂತ ಹೆಚ್ಚಿನ ಹಣವನ್ನು ದುಡಿಯಬಹುದು ಎನ್ನುವ ನಂಬಿಕೆಯಲ್ಲಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಉಳಿದ ಶೇಕಡ ೧೭.೫ ಜನತೆ ನಿಖರವಾದ ಉತ್ತರವನ್ನು ಜಿಗುಪ್ಸೆಯಿಂದ ಕೊಡುತ್ತಾರೆ. ಶಿಕ್ಷಣ ಪಡೆದರೇನು ಬಿಟ್ಟರೇನು ತಮ್ಮ ಹಣೆಬರಹವನ್ನು ಯಾರು ಬದಲಿಸಲು ಸಾಧ್ಯವಿಲ್ಲ. ಕೊನೆಗೆ ಕೈಯಲ್ಲಿ ಸುತ್ತಿಗೆ ಪಿಕಾಸಿಗಳನ್ನು ಹಿಡಿದು ಕೆಲಸಕ್ಕೆ ಹೋಗುವುದು ತಪ್ಪಿದಲ್ಲ ಎನ್ನುವ ನಂಬಿಕೆಯಲ್ಲಿದ್ದಾರೆ.

ಶೇಕಡ ೬೪ ರಷ್ಟು ಕುಟುಂಬಗಳು ಶಿಕ್ಷಣದ ಜ್ಞಾನವಿಲ್ಲದೇ ಅನಾಧಿ ಕಾಲದಿಂದಲೂ ಕಲ್ಲು ಮಣ್ಣಿನ ಕೆಲಸ ಮಾಡುತ್ತಲೇ ಬಂದಿದ್ದಾರೆ. ಶೇಕಡ ೧೮.೫ ರಷ್ಟು ಕುಟುಂಬಗಳಲ್ಲಿ ಬಡತನದ ತೊಂದರೆಯಿಂದ ಶಾಲೆಗೆ ಹೋಗದೇ ಚಿಕ್ಕ ವಯಸ್ಸಿನಲ್ಲಿ ವಲಸೆ ಹೋಗಿ ನಾಲ್ಕು ಕಾಸು ಹಣಸಂಪಾದನೆ ಮಾಡಿ, ಆ ಹಣದಲ್ಲಿ ಮೋಜು – ಮಸ್ತಿ ಮಾಡುತ್ತ, ಕುಡಿತದ ಚಟಕ್ಕೆ ಬಿದ್ದವರು ಭೋವಿ ಸಮುದಾಯದಲ್ಲಿದ್ದಾರೆ. ಶೇಕಡ ೯.೫ ಹಿಂದಿನಿಂದಲೂ ಗುಡಿಗುಂಡಾರಗಳನ್ನು ಕಟ್ಟುತ್ತ, ಬಂದವರು ಸಮುದಾಯಕ್ಕೆ ಅಂತಾನೇ ಕುಲ ಕಸುಬುಗಳು ಕೈಯಲ್ಲಿವೆ ಅಷ್ಟು ಸಾಕು. ನಮಗೆ ಯಾವ ಶಿಕ್ಷಣವೂ ಬೇಡ ಎಂದರೆ, ಶೇಕಡ ೮ ಕುಟುಂಬಗಳು ಕೂಲಿ ಕೆಲಸವೇ ಸಾಕು ನಮಗೆ ಬೇರೆ ಯಾರ ಬೆಂಬಲವು ನಮಗೆ ಬೇಡ ಕೆಲಸ ಇದ್ದರೆ ಹೋಗುತ್ತೇವೆ. ಇಲ್ಲಂದರೆ ಉಪವಾಸ ಇರುತ್ತೇವೆ. ಬೇರೆಯವರನ್ನು ಬೇಡಿ ತಿನ್ನುವುದಿಲ್ಲ ಅನ್ನುವವರು ಸಮುದಾಯದಲ್ಲಿ ಇರುವವರು ಸಿಗುತ್ತಾರೆ.

ಭೋವಿ ಸಮುದಾಯದಲ್ಲಿ ಶೇಕಡ ೪ ರಷ್ಟು ಕುಟುಂಬಗಳು ನೌಕರಿಯಲ್ಲಿ ಇದ್ದಾರೆ. ಅವರು ತಮ್ಮ ಕುಟುಂಬಗಳನ್ನು ಸಾಕುವದರಲ್ಲಿಯೇ ಸುಸ್ತಾಗುತ್ತಾರೆ. ಸಮುದಾಯದವರಿಗಾಗಿ ಶೇಕಡ ೧ ರಷ್ಟು ಸಹ ಖರ್ಚು ಮಾಡುವುದಿಲ್ಲ. ಕಾರಣ ಬರುವ ಅಲ್ಪಸ್ವಲ್ಪ ಸಂಬಳ ತಮ್ಮ ಹೆಂಡತಿ ಮಕ್ಕಳಿಗಾಗಿ ಸರಿಹೋಗುತ್ತದೆ. ದೊಡ್ಡ ದೊಡ್ಡ ನೌಕರಿಯಾಲ್ಲಿ ಇರುವವರು ಯಾರು ಸಿಗುವುದಿಲ್ಲ. ಪೋಲಿಸ್ ಕಾನ್‌ಸ್ಟೇಬಲ್ ಅಂಗನವಾಡಿ ಸಹಾಯಕಿ ಮತ್ತು ಇತರೆ ಡಿ ಗ್ರೂಪ್ ನೌಕರಿಯಲ್ಲಿರುವವರು ಇರುವುದರಿಂದ ಬರುವ ಸಂಬಳ ಅವರಿಗೆ ಸರಿಹೋಗುತ್ತದೆ. ಕುಟುಂಬಗಳ ಇತರೇ ಸದಸ್ಯರ ಅಭಿವೃದ್ಧಿ ಮಾಡಲು ಅವರಿಂದ ಸಾಧ್ಯವಾಗುತ್ತಿಲ್ಲ. ಅವಿಭಕ್ತ ಕುಟುಂಬಗಳಿಗಿಂತ ವಿಭಕ್ತ ಕುಟುಂಬಗಳೇ ಹೆಚ್ಚಿನ ಸಂಖ್ಯೆಯಲ್ಲಿ ಭೋವಿ ಸಮುದಾಯದಲ್ಲಿವೆ.

ಭೋವಿ ಸಮುದಾಯ ಅಭಿವೃದ್ಧಿಯನ್ನು ಅಳೆಯಲು ಆರೋಗ್ಯವು ಸಹ ಒಂದು. ಶೇಕಡ ೧೧.೫ ಕುಟುಂಬಗಳಿಗೆ ಚಿಕ್ಕಪುಟ್ಟ ಜ್ವರ, ಕೆಮ್ಮು, ನೆಗಡಿ, ಚರ್ಮಕಾಯಿಲೆಗಳು ಅಂಗವಿಕಲತೆಯ ತೊಂದರೆಗಳಿಂದ ಇದ್ದಾರೆ. ಶೇಕಡ ೩.೫ ಕುಟುಂಬಗಳಿಗೆ ವಿಪರೀತ ಕೈಕಾಲು ನೋವುಗಳಿಂದ

ಬಳಲುವವರು ಸಿಗುತ್ತಾರೆ. ಯಾಕೆಂದರೆ ಇವರು ಕಲ್ಲು ಬಂಡೆ ಬೆಂಕಿಗಳ ಮಧ್ಯ ಕೆಲಸ ಮಾಡುವುದರಿಂದ ಮೂಳೆ ಸವೆತದಂತಹ ರೋಗಗಳಿಗೆ ತುತ್ತಾಗುವುದು ಅಧ್ಯಯನದಿಂದ ಕಂಡುಬರುತ್ತದೆ. ಶೇಕಡ ೦.೫ ಕುರುಳಿನ ಶಸ್ತ್ರ ಚಿಕಿತ್ಸೆಗೆ, ಶೇ. ೦.೫ ಮೂಳೆ ಶಸ್ತ್ರ ಚಿಕಿತ್ಸೆಗೆ ಒಳಗಾದವರು ಇದ್ದಾರೆ. ಶೇಕಡ ೦.೫ ರಷ್ಟು ಮಕ್ಕಳು ಇಂದಿಗೂ ಸಹ ಪೌಷ್ಠಿಕಾಂಶದ ಕೊರತೆಯಿಂದ ಬಳಲುತ್ತಿರುವುದು ಹೊಳಲ್ಕೆರೆ ತಾಲ್ಲೂಕಿನಿಂದ ಕಣವಿಜೋಗಿಹಳ್ಳಿ ಗ್ರಾಮದಲ್ಲಿ ಗುರುತಿಸಬಹುದು.

ಆರೋಗ್ಯಕ್ಕಾಗಿ ಇರುವ ಯೊಜನೆಗಳು ಯಾವ ರೀತಿಯಲ್ಲಿ ಇವರಿಗೆ ದೊರೆಯುತ್ತಿವೆ ಎಂದರೆ, ಶೇಕಡ ೩೩.೫ ರಷ್ಟು ಕುಟುಂಬಗಳಿಗೆ ಯೋಜನೆಗಳು ದೊರೆಯುತ್ತವೆ. ಆದರೆ ಸರಿಯಾದ ಸಮಯಕ್ಕೆ ದೊರೆಯುವುದಿಲ್ಲ. ಯಾಕೆಂದರೆ ಕಾಯ್ದೆಗಳು ನಿಧಾನಗತಿಯಲ್ಲಿದ್ದು, ಅವರು ಮಾಡಿರುವ ವಿಧಾನಗಳು ದಾಖಲಾತಿಗಳು ಇವರಿಗೆ ಕ್ಲಿಷ್ಟಕರವಾಗಿರುವುದು ತಿಳಿಯುತ್ತದೆ. ಶೇಕಡ ೩೮.೫ ರಷ್ಟು ಅಧಿಕಾರಿಗಳು. ಸರಿಯಾದ ಮಾಹಿತಿಯನ್ನು ಕೊಡುವುದಿಲ್ಲ. ಮಾಹಿತಿಯನ್ನು ತಿಳಿದುಕೊಳ್ಳುವುದಕ್ಕೆ ಇವರು ಶಿಕ್ಷಣ ಪಡೆದಿಲ್ಲವೆನ್ನುವ ಉತ್ತರ ಸಿಕ್ಕರೆ, ಶೇಕಡ ೨೮ ಕುಟುಂಬಗಳಿಗೆ ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಾರೆ. ಪದೇ ಪದೇ ತಿರುಗಾಡಿಸಿ ಸುಸ್ತುಪಡಿಸುತ್ತಾರೆ. ಕೊನೆಗೆ ಆ ಯೋಜನೆಗಳ ಸಹವಾಸವೇ ಬೇಡವೆಂದು ಬಿಟ್ಟುಬಿಡುತ್ತಾರೆ. ಭೋವಿ ಸಮುದಾಯದಲ್ಲಿ ಶೇಕಡ ೯೩ ಕುಟುಂಬಗಳು ಆರೋಗ್ಯದ ಸಮಸ್ಯೆ ಎದುರಾದಾಗ ಸ್ವಂತ ಖರ್ಚು ಮತ್ತು ಸಾಲಮಾಡಿ ಆರೋಗ್ಯದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಕಂಡುಬರುತ್ತದೆ. ಸಮುದಾಯದ ವಸತಿ ವ್ಯವಸ್ಥೆಯನ್ನು ನೋಡುವುದಾದರೇ ಶೇಕಡ ೧೩.೫ ಕುಟುಂಬಗಳು ಇಂದಿಗೂ ಸಹ, ಗುಡಿಸಲು ಮನೆಗಳಲ್ಲಿ ವಾಸಮಾಡುತ್ತಿರುವುದು ಕಂಡುಬರುತ್ತದೆ. ಬೋರೆನಹಳ್ಳಿಯಲ್ಲಿ ಒಂದು ಕುಟುಂಬ ಕಣವೆಜೋಗಿಹಳ್ಳಿಯಲ್ಲಿ ಒಂದು ಕುಟುಂಬ ಹಾಗೂ ಉಳಿದ ೨೫ ಕುಟುಂಬಗಳಿಗೆ ವಸತಿ ಸೌಲಭ್ಯವಿಲ್ಲದೆ ೧೫ ವರ್ಷಗಳಿಂದ ಗುಡಿಸಲುಗಳಲ್ಲಿ ವಾಸಮಾಡುತ್ತಿರುವುದು ಮಾರುತಿಹಳ್ಳಿಯಲ್ಲಿ ಕಂಡುಬರುತ್ತದೆ. ಶೇಕಡ ೪೨.೫ ರಷ್ಟು ಅತಿಹೆಚ್ಚು ಮಾಳಿಗೆ ಮನೆಯಲ್ಲಿ ವಾಸಮಾಡುತ್ತಿರುವುದು ಕಂಡುಬರುತ್ತದೆ. ಶೇಕಡ ೨೨ ಕುಟುಂಬಗಳಿಗೆ ಸರ್ಕಾರ ಜನತೆ ಮನೆಗಳನ್ನು ಕಟ್ಟಿಕೊಟ್ಟಿರುವುದನ್ನು ನೋಡಬಹುದು. ಶೇಕಡ ೭.೫ ರಷ್ಟು ಬಾಡಿಗೆ ಮನೆಯಲ್ಲಿರುವುದು ಭೋವಿ ಸಮುದಾಯದಲ್ಲಿ ಕಂಡು ಬರುತ್ತದೆ.

ನೈರ್ಮಲ್ಯದ ಬಗ್ಗೆ ಸಮುದಾಯದಿಂದ ಮಾಹಿತಿಯನ್ನು ಕ್ರೋಢೀಕರಿಸಿ ವಿಶ್ಲೇಷಣೆ ಮಾಡಿದಾಗ, ಶೇಕಡ ೬೩ ಕುಟುಂಬಗಳಿಗೆ ತಮ್ಮ ಮನೆ ಒಳಗೆ, ಮನೆತಾಗಿ, ಹೊರಗೆ ಶೌಚಾಲಯ ಸ್ನಾನದ ಕೋಣೆಗಳನ್ನು ಹೊಂದಿದ್ದಾರೆ. ಶೇಕಡ ೮ ಕುಟುಂಬಗಳಿಗೆ ಸಮುದಾಯದ ಶೌಚಾಲಯಗಳು ಇವೆ. ಉಳಿದ ಶೇಕಡ ೨೯ ಕುಟುಂಬಗಳಿಗೆ ಶೌಚಾಲಯ ಅಥವಾ ಸ್ನಾನದ ಕೋಣೆಗಳನ್ನು

ಕಟ್ಟಿಕೊಳ್ಳುವ ಶಕ್ತಿ ಇವರಿಗೆ ಇಲ್ಲ. ಒಂದು ವೇಳೆ ಕಟ್ಟಿಕೊಳ್ಳುವ ಮನಸ್ಸುಮಾಡಿ, ಸಂಘ ಸಂಸ್ಥೆಗಳು ನೆರವಿಗೆ ಬಂದರೂ ಕಟ್ಟಿಕೊಳ್ಳವ ಪರಿಸ್ಥಿತಿಯಲ್ಲಿ ಇವರು ಇಲ್ಲ. ಯಾಕೆಂದರೆ ಜೀವನ ಮಾಡಲು ಮನೆಗಳು ಇಲ್ಲದೆ ಎರಡು ಅಥವಾ ಒಂದು ಕೋಣೆಯಲ್ಲಿ ಜೀವನ ಮಾಡುವವರು ಇದ್ದಾರೆ. ಅದೇ ಅವರಿಗೆ, ಅಡುಗೆ ಕೋಣೆ, ಹೊರಂಡ, ಮಲಗುವ ಕೋಣೆಗಳು. ಶೌಚಾಲಯ ನಿರ್ಮಿಸಿಕೊಳ್ಳುವಷ್ಟು ದೊಡ್ಡ ಮನೆಗಳು ಇವರಲಿಲ್ಲ. ಆದ್ದರಿಂದ ಶೇಕಡ ೨೯ ರಷ್ಟು ಕುಟುಂಬಗಳು ಊರಿನ ಪಕ್ಕಕ್ಕೆ ಹೊಂದಿಕೊಂಡಿರುವ ಹೊಲಗದ್ದೆಗಳೇ ಇವರ ದಿನನಿತ್ಯ ಕರ್ಮಗಳನ್ನು ಮುಗಿಸಿಕೊಳ್ಳುವ ಸ್ಥಳವಾಗಿದೆ. ಕುಡಿಯುವ ನೀರಿನ ಪ್ರಮಾಣವನ್ನು ಮಾಪನಮಾಡಿದಾಗ, ಶೇಕಡ ೫೫.೫ ರಷ್ಟು ಕುಟುಂಬಗಳಿಗೆ ಉತ್ತಮವಾದ ನೀರಿನ ಸೌಲಭ್ಯವಿರುವುದು ತಿಳಿಯತ್ತದೆ. ಶೇಕಡ ೧೨ ರಷ್ಟು ಕುಟುಂಬಗಳಿಗೆ ನೀರಿನ ಸಮಸ್ಯೆಯಿದೆ. ಹೊಳಲ್ಕೆರೆ ತಾಲ್ಲೂಕಿನ ಮಾರುತಿಹಳ್ಳಿ ಗ್ರಾಮದಲ್ಲಿ ಒಂದೇ ಒಂದು ಬೋರ್‌ವೆಲ್ ಇದೆ. ಅದು ಏನಾದರು ಕೈಯಿಕೊಟ್ಟರೆ, ಅವರ ಕತೆ ಮುಗಿತು ಪಕ್ಕದ ಊರೇ ಅವರಿಗೆ ಆಸರೆ ನಾನು ಮಾಹಿತಿ ಸಂಗ್ರಹಿಸಲು ಮಾರುತಿ ಹಳ್ಳಿಗೆ ಹೋದ ದಿನವೇ ಬೋರ್ವೆಲ್ ಕೆಟ್ಟು, ವಾರ ಕಳೆದು ಹೋಗಿರುತ್ತದೆ. ರೀಪೇರಿ ಮಾಡಿರುವುದಿಲ್ಲ. ನೀರಿಗಾಗಿ ಎರಡರಿಂದ ಮೂರು ಕಿ. ಮೀ. ದೂರದಲ್ಲಿರುವ ಹೊಲಗದ್ದೆಗಳಿಗೆ ಹೋಗಿ, ನೀರು ತರುವುದು ಬೆಳಕಿಗೆ ಬಂತು. ಉಳಿದಂತೆ ೯ ಕುಟುಂಬಗಳಿಗೆ ಮೊಳಕಾಲ್ಲೂರು ತಾಲ್ಲೂಕಿನ ಹಳ್ಳಿಗಳಲ್ಲಿ ನೀರಿನ ತೊಂದರೆ ಇದೆ.

ಭೋವಿ ಸಮುದಾಯದ ಕುಟುಂಬಗಳ ಸ್ವರೂಪವು ಶೇಕಡ ೨.೫ ರಷ್ಟು ಬದಲಾವಣೆಯನ್ನು ಕಂಡು, ತಮ್ಮ ಕುಲ ಕಸುಬುಗಳನ್ನು ಬಿಟ್ಟು ಇತರೆ ವ್ಯಾಪಾರ, ವ್ಯವಹಾರ, ರಾಜಕೀಯ ಕ್ಷೇತ್ರಗಳ ಕಡೆ ಮುಖ ಮಾಡಿದ್ದಾರೆ. ಉಳಿದ ಶೇಕಡ ೯೭.೫ ರಷ್ಟು ಕುಟುಂಬಗಳು ತಮಗೆ ಕಲ್ಲು, ಮಣ್ಣಿನ ಕೆಲಸವೇ ಆಸರೆ. ಅದನ್ನು ನಂಬಿಕೊಂಡು ಕೂಲಿ ಮಾಡುತ್ತೇವೆ. ಅದನ್ನು ಬಿಟ್ಟರೇ ಬೇರೆ ಮಾರ್ಗ ಇಲ್ಲದಿರುವುದು ಅಧ್ಯಯನ ದಿಂದ ಬೆಳಕಿಗೆ ಬರುತ್ತದೆ.

ಭೋವಿ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಹೇಳುವುದಾದರೆ ಶೇಕಡ ೯೦ ರಷ್ಟು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದವರೆಗೆ ಶಿಕ್ಷಣವನ್ನು ಕೊಡಿಸಿರುವುದು ತಿಳಿಯುತ್ತದೆ. ಪುರುಷರಿಗೆ ಹೋಲಿಕೆ ಮಾಡಿದರೆ, ಹತ್ತು ಪಟ್ಟು ಹೆಚ್ಚು ಎಂದು ಹೇಳಬಹುದು. ತಮ್ಮ ಹೆಣ್ಣು ಮಕ್ಕಳು ಕಷ್ಟಪಡದಂತೆ ನೆರಳಲ್ಲಿ ಇರಬೇಕು ಎಂದು ಯೋಚನೆ ಮಾಡುವವರು ಅಧ್ಯಯನದಲ್ಲಿ ಸಿಗುತ್ತಾರೆ. ಉಳಿದ ಶೇಕಡ ೧೦. ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿಗೆ ಶಾಲೆ ಕಡೆ ಮುಖವನ್ನು ತೋರಿಸದೇ ಇರುವುದು ಗಮನಿಸಬಹುದು. ಯಾಕೆಂದು ಕಾರಣ ತಿಳಿದಾಗ, ಶಾಲೆ ದೂರದ ಊರಲ್ಲಿದೆ ನಮ್ಮ ಊರಲ್ಲಿ ಶಾಲೆ ಇಲ್ಲ, ಬೇರೆ ಊರಿಗೆ ಶಾಲೆಗೆ ಹೋಗಿ ನಡೆದುಕೊಂಡುಬರುವಾಗ ಪುಂಡರ ಹಾವಳಿ, ಬಡತನ ಮತ್ತು ತಾಯಿಯಿಲ್ಲದ ತಬ್ಬಲಿ ಮಕ್ಕಳು, ಅರಣ್ಯದಲ್ಲಿ ವಾಸಮಾಡುವುದರಿಂದ ಕಾಡು ಪ್ರಾಣಿಗಳ ಭಯವಿದೆ ಎಂದು ಉತ್ತರಿಸುತ್ತಾರೆ.

೭.೧.೨ ಭೋವಿ ಸಮುದಾಯದ ಆರ್ಥಿಕ ಅಭಿವೃದ್ಧಿ ನೀತಿಯ ವಿಶ್ಲೇಷಣೆ

ಭೋವಿ ಸಮುದಾಯ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಅವರ ಉದ್ಯೋಗ, ಆದಾಯ, ಭೂಹಿಡುವಳಿ, ಆದಾಯದ ಮೂಲ, ಚರ ಮತ್ತು ಸ್ಥಿರಾ ಆಸ್ತಿ ವಿವರಗಳು ಮೂಖ್ಯವಾದ ಪಾತ್ರವನ್ನು ನಿರ್ವಹಿಸುತ್ತ, ಸಮುದಾಯ ಅಭಿವೃದ್ಧಿ ಆಗಿದೆಯೇ ಇಲ್ಲವೆಂದು ನಿರ್ಧರಿಸಬಹುದು. ಸಮುದಾಯದ ಆರ್ಥಿಕತೆಯ ಅಭಿವೃದ್ಧಿಯನ್ನು ಅವರ ಉದ್ಯೋಗದ ಆಧಾರದ ಮೇಲೆ ನಿಂತಿರುತ್ತದೆ. ಮೊದಲನೆದಾಗಿ, ಭೋವಿ ಸಮುದಾಯದಲ್ಲಿ ಯಾವ ಉದ್ಯೋಗವನ್ನು ಮಾಡುತ್ತಾರೆ. ಯಾಕೆ ಆ ಉದ್ಯೋಗ ಮಾಡುತ್ತಾರೆ. ಎಷ್ಟು ಸಂಬಳ ಪಡೆಯುತ್ತಾರೆ. ಎನ್ನುವುದನ್ನು ಕ್ರೋಢಿಕರಿಸಿದಾಗ, ಶೇಕಡ ೧೬.೧೮ ರಷ್ಟು ಪುರುಷರು ಅತಿಹೆಚ್ಚು ಕೂಲಿ ಕೆಲಸವನ್ನು ಅವಲಂಬಿಸಿದ್ದಾರೆ. ಪುರುಷರಿಗೆ ಮಹಿಳೆಯರನ್ನು ಹೋಲಿಕೆ ಮಾಡಿದಾಗ, ಪುರುಷರಿಗಿಂತ ಮಹಿಳೆಯರೇ ಹೆಚ್ಚು ಭೊವಿ ಸಮುದಾಯದಲ್ಲಿ ಶೇಕಡ ೧೮.೯೫ ರಷ್ಟು ಇದ್ದಾರೆ. ಅವರಿಗಿಂತ ಶೇಕಡ ೨.೭೭ ರಷ್ಟು ಹೆಚ್ಚು ಇದ್ದಾರೆ. ಯಾಕೆಂದರೆ ಇವರ ಮನೆಗಳಲ್ಲಿ ಪುರುಷರು ಕೆಲಸಕ್ಕೆ ಹೋಗುವುದು ಕಡಿಮೆ ತಿಂಗಳಿಗೆ ಎರಡರಿಂದ ನಾಲ್ಕು ದಿನ ಮಾತ್ರ, ಕೆಲಸಕ್ಕೆ ಹೋಗುತ್ತಾರೆ. ಉಳಿದ ದಿನಗಳಲ್ಲಿ ಮನೆಗಳಲ್ಲಿಯೇ ಇದ್ದು ತಮ್ಮ ಹೆಂಡತಿಯರ ಕೂಲಿ ಹಣಕ್ಕಾಗಿ ಪೀಡಿಸುವ ಪದ್ಧತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಮೋಜು, ಮಸ್ತಿ ಮಾಡುತ್ತ ಬಂದಿದ್ದಾರೆ. ಗಾರೆ ಕೆಲಸ ಮಾಡುವವರು ಶೇಕಡ ೭.೦೯ ರಷ್ಟು ಕಲ್ಲು ಹೊಡೆಯುವವರು ಶೇಕಡ ೩.೫೪ ರಷ್ಟು ಮಾತ್ರ ಇದ್ದಾರೆ. ಯಾಕೆಂದರೆ ಇವರ ಕೆಲಸಗಳು ಕಲ್ಲು ಮಣ್ಣಿನಿಂದ ಮಾಡುವುದಾಗಿತ್ತು ಇವತ್ತು ಕಲ್ಲು ಮಣ್ಣುಗಳ ಬಳಕೆ ಮಾಡುವುದು ಕಡಿಮೆಯಾಗಿದೆ. ಸೀಮೆಂಟ್, ಕಬ್ಬಿಣ, ಇಟ್ಟಂಗಿಗಳನ್ನು ಬಳಸಿ ಯಂತ್ರಗಳ ಕೈಯಿಂದ ಮಾಡಿಸುವುದನ್ನು ನೋಡುತ್ತೇವೆ. ಒಂದು ಕಾಲದಲ್ಲಿ ದೊಡ್ಡ ದೊಡ್ಡ ಬೆಟ್ಟಗುಡ್ಡಗಳನ್ನು ವಿಜ್ಞಾನಿಗಳಾಗಿ ಸೂಕ್ಷ್ಮವಾಗಿ ಅವುಗಳನ್ನು ಪುಡಿ ಮಾಡಿದವರು ಇವರು. ಆದರೆ ಇವರ ಕೆಲಸವನ್ನು ಇಂದು ಜಾಗತೀಕರಣ ಕಿತ್ತುಕೊಂಡಿದೆ ಎಂದು ಹೇಳಬಹುದು.

ಇವರ ಅಭಿವೃದ್ಧಿಗಾಗಿ ಸರ್ಕಾರಗಳು ಭೋವಿ ಅಭಿವೃದ್ಧಿ ನಿಗಮ ಮತ್ತು ಕಾರ್ಮಿಕ ಇಲಾಖೆ ಮುಖಾಂತರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಯೋಜನೆಗಳ ಬಗ್ಗೆ ಶೇಕಡ ೧೪ ರಷ್ಟು ಕುಟುಂಬಗಳಿಗೆ ಮಾತ್ರ ಮಾಹಿತಿ ಇದೆ. ಉಳಿದ ಶೇಕಡ ೮೬ ಕುಟುಂಬಗಳಿಗೆ ಯಾವುದೇ ಮಾಹಿತಿ ಇಲ್ಲದೇ ಇರುವುದು ತಿಳಿಯುತ್ತದೆ. ಶೇಕಡ ೧೪ ರಷ್ಟು ಕುಟುಂಬಗಳ ಭೋವಿ ಅಭಿವೃದ್ಧಿ ನಿಗಮದಿಂದ ಸಬ್ಸಿಡಿ ರೂಪದಲ್ಲಿ ಸಾಲ ಸೌಲಭ್ಯಗಳು ಹಾಗೂ ಕಾರ್ಮಿಕ ಇಲಾಖೆಯಿಂದ ಕಟ್ಟಡ ಕಾರ್ಮಿಕರಿಗಾಗಿ ಇರುವ ಸೌಲಭ್ಯಗಳು, ಮಕ್ಕಳಿಗೆ ವಿದ್ಯಾರ್ಥಿವೇತನ ಸಲಕರಣೆಗಳ ಖರೀದಿಗೆ ಮತ್ತು ವೈದ್ಯಕೀಯ ವೆಚ್ಚವನ್ನು ಪಡೆದಿದ್ದಾರೆ.

ಆದಾಯದ ವಿವರಗಳನ್ನು ಮಾಪನ ಮಾಡಿದಾಗ, ಭೋವಿ ಸಮುದಾಯದಲ್ಲಿ ೧೨,೦೦೦ ರೂ ಗಳನ್ನು ಆದಾಯ ಹೊಂದಿರುವವರು ಅತೀ ಹೆಚ್ಚು ಇದ್ದಾರೆ. ಅಂದರೆ ಶೇಕಡ ೩೭ ರಷ್ಟು ಇದ್ದಾರೆ. ೧೦,೦೦೦ ಆದಾಯಗಳನ್ನು ಶೇಕಡ ೩೪.೫ ಇದ್ದು, ನಂತರದ ಸ್ಥಾನವನ್ನು ಪಡೆದಿದ್ದಾರೆ. ೫,೦೦೦ ದಿಂದ ೮೦೦೦ ಒಳಗೆ ಇರುವವರು ಶೇಕಡ ೭. ೫ ರಷ್ಟು ಇದ್ದಾರೆ. ೨೦೦೦೦ ಆದಾಯವನ್ನು ಹೊಂದಿರುವವರು ಶೇಕಡ ೨.೫ ರಷ್ಟು ಇದೆ. ಹತ್ತು ವರ್ಷಗಳ ಹಿಂದಕ್ಕೆ ಹೋಗಿ ನೋಡಿದರೆ. ೫೦೦೦ ದಿಂದ ೧೦೦೦೦ ಒಳಗೆ ಇರುವ ಆದಾಯದಲ್ಲಿ ಎಲ್ಲಾ ಕುಟುಂಬಗಳು ಬರುತ್ತವೆ. ಭೂ ವಿವರಗಳನ್ನು ಅಧ್ಯಯನ ಮಾಡಿದಾಗ, ಒಂದು ಎಕರೆಯಿಂದ ಐದು ಎಕರೆ ಒಣ ಭೂಮಿ ಇರುವವರೆ ಶೇ. ೪೭.೫ ರಷ್ಟು ಇದ್ದಾರೆ. ಈ ಒಣ ಭೂಮಿಯಲ್ಲಿ ಶೇಂಗ, ಕಡ್ಲೆ, ಮೆಕ್ಕೆಜೋಳ, ಹತ್ತಿ, ರಾಗಿ ಬೆಳೆಗಳನ್ನು ಬೆಳೆಯುತ್ತಾರೆ. ಶೇಕಡ ೨೦ ರಷ್ಟು ಕುಟುಂಬಗಳಿಗೆ ಒಂದು ಎಕರೆಯಿಂದ ನಾಲ್ಕು ಎಕರೆ ಭೂಮಿ ಇರುವವರು ಇದ್ದಾರೆ. ಇವರು ಇರುಳ್ಳಿ, ಬದನೇಕಾಯಿ, ಕೋಸು, ಬೆಂಡೆಕಾಯಿ, ಮೆಣಸಿನಕಾಯಿ, ಹೂವು, ಇತರೆ ತರಕಾರಿಗಳ ಜೊತೆಯಲ್ಲಿ ರಾಗಿ, ಜೋಳ, ಹತ್ತಿ ಬೆಳೆಗಳನ್ನು ಬೆಳೆಯುತ್ತಾರೆ. ಶೇಕಡ ೪ ರಷ್ಟು ಕುಟುಂಬಗಳಿಗೆ ಬಂಜರು ಭೂಮಿಯಿದೆ. ಇದರಲ್ಲಿ ಯಾವುದೇ ರೀತಿಯ ಬೆಳೆಗಳನ್ನು ಬೆಳೆಯುವುದಕ್ಕೆ ಆಗದೇ ಬೇರೆಯವರ ಕೃಷಿಭೂಮಿಯಲ್ಲಿ ಕೂಲಿಕೆಲಸ ಮಾಡುತ್ತಾರೆ. ಉಳಿದ ಶೇಕಡ ೨೮.೫ ರಷ್ಟು ಕುಟುಂಬಗಳಿಗೆ ಯಾವುದೆ ರೀತಿಯ ಒಣ ಭೂಮಿ ನೀರಾವರಿ ಭೂಮಿ, ಬಂಜರು ಭೂಮಿನೂ ಇಲ್ಲ. ಹಾಗೂ ಇವರು ಗುಡಿಸಲು ಬಾಡಿಗೆ ಮತ್ತು ಹಂಚಿನ ಮನೆಗಳಲ್ಲಿ ವಾಸಮಾಡುವವರು ಇವರಾಗಿದ್ದಾರೆ. ಶೇಕಡ ೧೨.೫ ಕುಟುಂಬಗಳಿಗೆ ಮನೆ ಬಾಡಿಗೆ ಹೈನುಗಾರಿಕೆ ಹಾಗೂ ಇತರೆ ಮೂಲಗಳಿಂದ ಆದಾಯ ಗಳಿಸುವವರು ಇದ್ದಾರೆ.

ಚರ ಮತ್ತು ಸ್ಥಿರ ಆಸ್ತಿಗಳು ಎಷ್ಟರ ಮಟ್ಟಿಗೆ ಇವೆ ಎಂದು ವಿಶ್ಲೇಷಣೆ ಮಾಡಿದಾಗ ಶೇಕಡ ೨೩.೫ ಕುಟುಂಬಗಳು ಹಸು, ಎಮ್ಮೆ, ಎತ್ತು, ಕುರಿ, ಆಡು, ಕೋಳಿ, ಪಾರಿವಾಳ ಮತ್ತು ಇತರೆ ಪ್ರಾಣಿಗಳನ್ನು ಸಾಕಾಣಿಕೆ ಮಾಡಿ, ಚಿಕ್ಕ ಮಟ್ಟದಲ್ಲಿ ಆದಾಯ ಗಳಿಸಿಕೊಂಡು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ, ಸಮುದಾಯದಲ್ಲಿರುವ ಮೂಲಭೂತ ಸಮಸ್ಯೆಗಳಿಂದ ವಂಚಿತರಾಗಿರುವುದು ಮೇಲಿನ ಅಂಶಗಳಿಂದ ತಿಳಿದುಬರುತ್ತದೆ.

೭.೨ ಭೋವಿ ಸಮುದಾಯದ ರಾಜಕೀಯ ಪ್ರತಿನಿಧಿತ್ವದ ವಿಶ್ಲೇಷಣೆ

ಇವತ್ತಿನ ಸನ್ನಿವೇಶಗಳಿಗೆ ಅನುಗುಣವಾಗಿ ಹೊಂದಿಕೊಂಡು ಸಮುದಾಯಗಳನ್ನು ಅಧ್ಯಯನ ಮಾಡಲು ಹೊರಟಾಗ, ತಳದಲ್ಲಿರುವಂತಹ ಅನೇಕ ಸಮುದಾಯಗಳಿಗೆ ನ್ಯಾಯವನ್ನು ದೊರಕಿಸಿಕೊಡಲು ಆಗುವುದಿಲ್ಲ. ಅಂದರೇ ನಾವು ಇಲ್ಲಿ ಅರ್ಥ ಮಾಡಿಕೊಳ್ಳಬೇಕು. ಸಮುದಾಯಗಳಲ್ಲಿ ಇರುವಂತಹ ಜಾತಿನಾಯಕರು ರಾಜಕೀಯ ಪಕ್ಷಗಳಿಗೆ ಮತ್ತು ರಾಜಕೀಯ

ನಾಯಕರಿಗೆ ಶರಣಾಗಿ ಸಮುದಾಯಗಳ ಅವಶ್ಯಕತೆಗಳನ್ನು ಪೂರೈಸಲು ಅವರಿಂದ ಆಗುತ್ತಿಲ್ಲ. ಅಂತಹ ಅಂಚಿನ ಸಮುದಾಯಗಳಲ್ಲಿ ಭೋವಿ ಸಮುದಾಯವು ಸಹ ರಾಜಕೀಯ ನಾಯಕರಿಗೆ ಶರಣಾಗಿ ತಮ್ಮ ವೃತ್ತಿಗಳನ್ನು ನಂಬಿಕೊಂಡು ರಾಜ್ಯದಿಂದ ರಾಜ್ಯಕ್ಕೆ, ಜಿಲ್ಲೆಗಳಿಂದ ಜಿಲ್ಲೆಗಳಿಗೆ ವಲಸೆ ಹೋಗಿರುವುದಲ್ಲದೆ, ಘಜ್ನಿ ಮಹಮ್ಮದ್ ಮತ್ತು ಘೋರಿ ಮಹ್ಮದ್ ಅವರು ಭೋವಿ ಸಮುದಾಯದವರನ್ನು ತಮ್ಮ ದೇಶಗಳಿಗೆ ಕೆಲಸಕ್ಕೆ ಕರೆದುಕೊಂಡಿರುವುದು ಅಧ್ಯಯನಗಳಿಂದ ಈಗಾಗಲೆ ತಿಳಿದುಬಂದಿದೆ. ಭೋವಿ ಸಮುದಾಯದವರು ದಕ್ಷಿಣ ಭಾರತದ ಕೆಲವು ರಾಜ್ಯಗಳಲ್ಲಿ ಪ್ರಮುಖ ಪಟ್ಟಣಗಳಲ್ಲಿ ದೊಡ್ಡಹಳ್ಳಿಗಳಲ್ಲಿ ಇವರು ವಾಸವಾಗಿದ್ದಾರೆ. ಕರ್ನಾಟಕದಲ್ಲಿ ಕೋಲಾರ ಪ್ರಥಮ ಸ್ಥಾನದಲ್ಲಿದ್ದು, ನಂತರ ಚಿತ್ರದುರ್ಗ ಎರಡನೇ ಸ್ಥಾನದಲ್ಲಿ ಸಮುದಾಯದವರು ವಾಸಿಸುತ್ತಾರೆ. ಮತ್ತು ದಾವಣಗೆರೆ, ಕೊಪ್ಪಳ ರಾಯಚೂರು, ಧಾರವಾಡ, ಬೆಳಗಾವಿ, ಸಿಂಧನೂರು ಹಾಗೂ ಗುಲ್ಬರ್ಗ ಜಿಲ್ಲೆಯಾದ್ಯಂತ ೧೬ ಲಕ್ಷದಿಂದ ೨೦ ಲಕ್ಷ ಜನಸಂಖ್ಯೆ ಇರುವುದು ಕಂಡುಬರುತ್ತದೆ. ಅದರಲ್ಲಿ ವಿಶೇಷವಾಗಿ ಶಹಾಬಾದ್ ಪಟ್ಟಣದಲ್ಲಿ ಇವರು ದಟ್ಟವಾಗಿ ಇರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ.

ಈ ಭಾಗದಲ್ಲಿ ಭೋವಿ ಸಮುದಾಯದ ರಾಜಕೀಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ, ಸಾಮಾಜಿಕ ಸಂಘಟನೆಗಳಾದ ಎಸ್.ಡಿ.ಎಂ.ಸಿ, ನೀರಿನ ಸಮಿತಿ, ಆರೋಗ್ಯ, ವಸತಿ, ನೈರ್ಮಲ್ಯ, ಜಾತಿ ಸಂಘಟನೆಗಳಲ್ಲಿ ಭೋವಿ ಸಮುದಾಯದ ಐಡೆಂಟಿಟಿ ಹೇಗಿದೆ.? ಹೇಗೆ ಇವರು ತಮಗೆ ಸಿಗಬೇಕಾದ ಸೌಲಭ್ಯಗಳನ್ನು ಪಡೆದುಕೊಂಡು, ಆರ್ಥಿಕವಾಗಿ ಬರುವ ಸಂಘಟನೆಗಳಾದ, ಹಣಕಾಸು ಸಮಿತಿ, ಜಂಟಿ ಮಾರುಕಟ್ಟೆ ಸಮಿತಿ ಉತ್ಪಾದನೆ ಸಮಿತಿಯಲ್ಲಿ ತಮ್ಮ ಕುಟುಂಬದವರ ಪ್ರಾತಿನಿಧ್ಯ ೧೦ ವರ್ಷಗಳ ಹಿಂದೆ ಮತ್ತು ಪ್ರಸ್ತುತ ದಿನಗಳಲ್ಲಿ, ಸ್ಥಾನಮಾನಗಳು ಎಷ್ಟರಮಟ್ಟಿಗೆ ಲಭಿಸಿದೆ. ಮತ್ತು ಮುಖ್ಯವಾಗಿ ರಾಜಕೀಯ ಸಂಘಟನೆಗಳ ಅಸ್ಮಿತೆಗೆ ಬಂದರೆ ಭೋವಿ ಸಮುದಾಯದ ಕುಟುಂಬಗಳಲ್ಲಿ ೧೯೪೭ ರಿಂದ ೨೦೧೯ ರವರೆಗೆ ನಡೆದ ಲೋಕಸಭೆ, ವಿಧಾನಪರಿಷತ್, ವಿಧಾನಸಭೆ, ಕಾರ್ಪೋರೇಷನ್, ನಗರ ಸಂಸ್ಥೆಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಹಿಂದೆ ಮತ್ತು ಹಾಲಿ, ಸದಸ್ಯರಾಗಿ, ಉಪಾಧ್ಯಕ್ಷ, ಅಧ್ಯಕ್ಷರಾಗಿ ಎಷ್ಟು ಪ್ರಮಾಣದಲ್ಲಿ ಗುರುತಿಸಿಕೊಂಡಿದ್ದಾರೆ. ಎನ್ನುವುದು ಕ್ಷೇತ್ರಕಾರ್ಯದ ಮಾಹಿತಿ ಆಧಾರದ ಮೇಲೆ ಈ ಕೆಳಕಂಡಂತೆ ವಿಶ್ಲೇಷಣೆ ಮಾಡಲಾಗಿದೆ.

೭.೨.೧ ಸಾಮಾಜಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ:

ಸಾಮಾಜಿಕ ಸಂಘಟನೆಗಳಲ್ಲಿ ಬರುವ ಶಾಲಾಭಿವೃದ್ಧಿ ಸಮಿತಿಯ ಕೆಲಸ ಕಾರ್ಯಗಳ ಬಗ್ಗೆ ಶೇಕಡ ೫೦.೫ ರಷ್ಟು ಕುಟುಂಬಗಳಿಗೆ ಮಾತ್ರ ಮಾಹಿತಿ ಇದೆ. ಉಳಿದವರಿಗೆ ಇದರ ಜವಾಬ್ದಾರಿಗಳು ಕಾರ್ಯಯೋಜನೆಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಇದರ ಕೆಲಸಗಳು ಏನೆಂದರೆ ಮೇಲಿನಂತಿರುವ

ಶಾಲಾ ಉಸ್ತುವಾರಿ ಸಮಿತಿ, ಇದು ಶಾಲೆಯ ಅಭಿವೃದ್ಧಿಗಾಗಿ ಹುಟ್ಟಿಕೊಂಡಿದೆ. ಶಾಲೆಯಲ್ಲಿ ದುರಸ್ತಿಗೆ ಬಂದಿರುವ ಕಾಮಗಾರಿಗಳನ್ನು ಹಾಗೂ ಶಿಕ್ಷಕರ ಜವಾಬ್ದಾರಿಗಳನ್ನು ತಿಳಿದುಕೊಂಡು ಸದಸ್ಯರಾಗಿ, ಅಧಿಕಾರ ನಡೆಸಬಹುದು ಎನ್ನುತ್ತಾರೆ. ಹಿಂದೆ ಮತ್ತು ಪ್ರಸ್ತುತ ದಿನಗಳಲ್ಲಿ ಸೇರಿ ಒಟ್ಟು ಶೇಕಡ ೩೦.೫ ರಷ್ಟು ಕುಟುಂಬಗಳು ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಯಾವ ಹುದ್ದೆಗಳೆಂದು ನೋಡಿದರೆ ನಾಮ ನಿರ್ದೇಶಿತ ಸದಸ್ಯರು, ಸ್ಥಳೀಯ ಶಿಕ್ಷಣ ಪಕ್ಷ ಯುವಕ/ ಯುವತಿ/ಸ್ವಸಹಾಯ ಸಂಘ/ ಪ್ರತಿನಿಧಿ ನಾಗರೀಕ ಸೌಕರ್ಯ ಸಮಿತಿಯ ಸದಸ್ಯರಾಗಿ, ತಮ್ಮ ಊರಿನ ಹಳೆ ವಿದ್ಯಾರ್ಥಿಗಳು, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಪೋಷಕ ಪ್ರತಿನಿಧಿಗಳಾಗಿ ಅಧಿಕಾರ ಪಡೆದು ಕಾರ್ಯ ಯೋಜನೆಗಳನ್ನು ನಿರ್ವಹಿಸಿದ್ದಾರೆ.

ಭೋವಿ ಸಮುದಾಯದವರು ನೀರಿನ ಸಮಿತಿ, ಆರೋಗ್ಯ ಸಮಿತಿ, ವಸತಿ ಸಮಿತಿ, ನೈರ್ಮಲ್ಯ ಸಮಿತಿ, ಜಾತಿ ಸಂಘಟನೆಗಳಲ್ಲಿ ಹತ್ತು ವರ್ಷಗಳ ಹಿಂದೆ ಮತ್ತು ಪ್ರಸ್ತುತ ದಿನಗಳಲ್ಲಿ ಸೇರಿ, ಒಟ್ಟು ಶೇಕಡ ೪೧ ರಷ್ಟು ಪ್ರಾತಿನಿಧ್ಯ ಪಡೆದಿರುವುದು ತಿಳಿಯುತ್ತದೆ. ಅದರಲ್ಲಿ ಮುಖ್ಯವಾಗಿ ನೀರಿನ ಸಮಿತಿ ಮತ್ತು ಜಾತಿ ಸಂಘಟನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸ್ಥಾನಮಾನಗಳನ್ನು ಸದಸ್ಯರಾಗಿ ತಮ್ಮ ಅಸ್ಮಿತೆಯನ್ನು ಸ್ವಲ್ಪ ಪ್ರಮಾಣದಲ್ಲಿ ಗುರುತಿಸಿ ಕೊಂಡಿದ್ದಾರೆ. ಉಳಿದ ಕುಟುಂಬಗಳು ಈ ಮೇಲಿನ ಸಂಘಟನೆ ಹೆಸರನ್ನು ಕೇಳಿಲ್ಲವೆಂದು ಶೇಕಡ ೫೯. ರಷ್ಟು ಪ್ರಮಾಣದಲ್ಲಿ ಹೇಳುತ್ತಾರೆ. ಅಂದರೆ ಭೋವಿ ಸಮುದಾಯದವರು ಕಲ್ಲು ಮಣ್ಣಿನ ಕೆಲಸದಲ್ಲಿಯೇ ಸಮಯವನ್ನು ಹೆಚ್ಚಿನ ಪ್ರಮಾಣದಲ್ಲಿ ಕಾಲ ಕಳೆಯುತ್ತಾರೆ. ಸಾಮಾಜಿಕವಾಗಿ ಇರುವ ಸಂಘಟನೆಗಳಲ್ಲಿ ಮೇಲೆ ಅವರಿಗೆ ಯಾವುದೆ ತರಹದ ಆಸಕ್ತಿ ಇರುವುದು ಕಂಡುಬರುವುದಿಲ್ಲ. ತಾನು ಆಯಿತು ತನ್ನ ಕೆಲಸ ಆಯಿತು ಎಂದು ಮಾಲಿಕನು ಕೊಟ್ಟಷ್ಟು ಹಣಕ್ಕೆ ತೃಪ್ತಿ ಪಟ್ಟು, ಬದುಕನ್ನು ಕಟ್ಟಿಕೊಂಡಿರುವುದು ಅಧ್ಯಯನದಿಂದ ತಿಳಿಯುತ್ತದೆ. ಸದಸ್ಯರಾಗಿ ಪದಾಧಿಕಾರಿಗಳಾಗಿ ಪಾಲುಗೊಂಡು ಗುರುತಿಸಿಕೊಂಡು ರಾಜಕೀಯ ಸೌಲಭ್ಯಗಳನ್ನು ಪಡೆದುಕೊಂಡಿರುವುದು ಕಡಿಮೆ ಎಂದು ಹೇಳಬಹುದು.

೭.೨.೨ ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ:

ತಳದಲ್ಲಿರುವ ಯಾವುದೇ ಸಮುದಾಯ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ. ಸರ್ಕಾರ ಮತ್ತು ಸಂಘ ಸಂಸ್ಥೆ ಸಂಸ್ಥೆಗಳು ನೆರವಿಗೆ ಬಂದರೆ, ಅಭಿವೃದ್ಧಿಯ ಪಥದ ಕಡೆ ಸಾಗಬಹುದು. ಇಲ್ಲದೇ ಇದ್ದರೆ ಇವರಿಗೆ ಬೇಕಾದ ಆರೋಗ್ಯ, ಶಿಕ್ಷಣ, ಬಂಡವಾಳ, ಭೂಮಿ, ಹೊಂದಲು ಸಹಾಯವಾಗುವುದಿಲ್ಲ. ಆದ್ದರಿಂದ ತಳದಲ್ಲಿ ಇರುವ ಪರಿಶಿಷ್ಟ ಪಂಗಡದವರರಿಗೆಂದು ಸರ್ಕಾರ ಅಭಿವೃದ್ಧಿ ನಿಗಮಗಳ ಮೂಲಕ ಮತ್ತು ಮುಖ್ಯ ಮಂತ್ರಿಗಳ ಉದ್ಯೋಗ ಸೃಜನ ಕಾರ್ಯಕ್ರಮ, (ಸಿ.ಎಂ.ಇ.ಜಿ.ಪಿ) ಹಾಗೂ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ

ಕಾರ್ಯಕ್ರಮ(ಪಿ.ಎಂ.ಇ.ಜಿ.ಪಿ) ಯೋಜನೆಗಳನ್ನು ಜಾರಿಗೆ ತಂದರು. ಇವುಗಳ ಸೌಲಭ್ಯಗಳನ್ನು ಪಡೆದುಕೊಂಡಿರುವುದು ಅಧ್ಯಯನದಲ್ಲಿ ಕಂಡು ಬಂದಿಲ್ಲ. ಯಾಕೆಂದರೆ ಕಾರಣ ಕೇಳಿದರೆ ಮಾಹಿತಿಯ ಕೊರತೆಯಿದೆ. ಬೆಳಗ್ಗೆ ೬ ಗಂಟೆಗೆ ಕೆಲಸಕ್ಕೆ ಹೋಗುತ್ತವೆ. ಹಾಗಾದರೆ ಆರ್ಥಿಕವಾಗಿ ಸ್ವಲ್ಪ ಪ್ರಮಾಣದಲ್ಲಿ ಆದರೂ ಅಭಿವೃದ್ಧಿ ಆಗಲು ಸ್ಥಳಿಯ ಮಟ್ಟದಲ್ಲಿ ಬರುವ ಜಂಟಿ ಅರಣ್ಯ ಸಮಿತಿ, ಉತ್ಪಾದನಾ ಸಮಿತಿ, ಸ್ವಸಹಾಯ ಸಂಘ, ಮಾರುಕಟ್ಟೆ ಸಮಿತಿ, ಕಟ್ಟಡ ಕಾರ್ಮಿಕರ ಸಂಘ ಹಾಗೂ ಭೋವಿ ಅಭಿವೃದ್ಧಿ ನಿಗಮಗಳಲ್ಲಿ ಹಿಂದೆ ಮತ್ತು ಪ್ರಸ್ತುತದಲ್ಲಿ ಸ್ಥಾನ - ಮಾನಗಳನ್ನು ಪಡೆದು ಆರ್ಥಿಕ ನೆರವನ್ನು ಸಬ್ಸಿಡಿ ರೂಪದಲ್ಲಿ ಎಷ್ಟು ಪ್ರಮಾಣದಲ್ಲಿ ಪಡೆದಿದ್ದಾರೆ ಎಂದು ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಆರ್ಥಿಕವಾಗಿ ಅಭಿವೃದ್ಧಿ ಹೊಂದುವ ಸಂಘಟನೆಗಳ ಬಗ್ಗೆ ಸಮುದಾಯದ ಶೇಕಡ ೨೩ ಕುಟುಂಬಗಳಿಗೆ ಮಾತ್ರ ಮಾಹಿತಿ ಇದೆ. ಉಳಿದ ಕುಟುಂಬಗಳಿಗೆ ಅದರ ಮಾಹಿತಿ ಇಲ್ಲದಿರುವುದು ತಿಳಿಯುತ್ತದೆ. ಸ್ವ ಸಹಾಯ ಸಂಘಗಳಲ್ಲಿ ಸಮುದಾಯದ ಮಹಿಳೆಯರು ಸದಸ್ಯರಾಗಿ, ಅಧ್ಯಕ್ಷರಾಗಿ ಸಾಲ ಸೌಲಭ್ಯಗಳ ಜೊತೆ ಹಣದ ಉಳಿತಾಯವನ್ನು ಶೇಕಡ ೧೪.೫ ರಷ್ಟು ಮಾಡಿ ಸಬ್ಸಿಡಿಗಳನ್ನು ಪಡೆದುಕೊಂಡಿದ್ದಾರೆ. ಪ್ರಸ್ತುತದಲ್ಲಿ ಒಟ್ಟಾರೆಯಾಗಿ ಹಿಂದೆ ಮತ್ತು ಹಾಲಿ ಎಷ್ಟು ಪ್ರಮಾಣದಲ್ಲಿ ಆರ್ಥಿಕ ಸಂಘಟನೆಗಳ ಲಾಭ ಪಡೆದಿದ್ದಾರೆ. ಎಂದರೇ ಸ್ವಸಹಾಯ ಸಂಘಟನೆಗಳಲ್ಲಿ ಶೇಕಡ ೩೭ ಉತ್ಪಾದನೆ ಸಮಿತಿಯಲ್ಲಿ ಶೇಕಡ ೧೨ ಜಂಟಿ ಅರಣ್ಯ ಸಮಿತಿಯಲ್ಲಿ ಶೇಕಡ ೪, ಹಾಗೂ ಮಾರುಕಟ್ಟೆ ಸಮಿತಿಯಲ್ಲಿ ಶೇಕಡ ೬ ರಷ್ಟು ಸ್ಥಾನಮಾನಗಳನ್ನು ಸದಸ್ಯ ಮತ್ತು ಅಧ್ಯಕ್ಷರಾಗಿ ಸಂಘಟನೆಗಳನ್ನು ನಿರ್ವಹಣೆ ಮಾಡತ್ತಾ, ಗುರುತಿಸಿಕೊಂಡಿರುವುದು ನೋಡಬಹುದು.

೭.೨.೩ ರಾಜಕೀಯ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ:

ಭೋವಿ ಸಮುದಾಯದ ರಾಜಕೀಯ ಅಸ್ಮಿತೆಯಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆದುಕೊಂಡು ಮೀಸಲಾತಿಯ ಲಾಭವನ್ನು ಪಡೆದಿದ್ದಾರೆ ಎನ್ನುವುದರ ಆಧಾರದ ಮೇಲೆಯೂ ತಮ್ಮ ಅಭಿವೃದ್ಧಿಯನ್ನು ಮಾಪನ ಮಾಡಿ ರಾಜಕೀಯ ಸ್ಥಾನಮಾನವನ್ನು ಗುರುತಿಸಬಹುದು. ಕ್ಷೇತ್ರಕಾರ್ಯಕೈಗೊಂಡ ಅಧ್ಯಯನ ಗ್ರಾಮಗಳಲ್ಲಿ ವಿಧಾನ ಸಭೆ, ಲೋಕಸಭೆ, ವಿಧಾನ ಪರಿಷತ್ ಸದಸ್ಯರಾಗಿ ಎಷ್ಟು ಪ್ರಮಾಣದಲ್ಲಿದ್ದಾರೆ. ಹಾಗೂ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಸದಸ್ಯ, ಉಪಾಧ್ಯಕ್ಷ ಅಥವಾ ಅಧ್ಯಕ್ಷರಾಗಿದ್ದಾರೆ. ಯಾವ ಸಂಘದಿಂದ ಆಯ್ಕೆಯಾಗಿದ್ದಾರೆ ಯಾಕೆ?. ಆ ಪಕ್ಷವನ್ನು ಬೆಂಬಲಿಸುತ್ತಾರೆ ಎನ್ನುವ ವಿಷಯಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ. ಭೋವಿ ಸಮುದಾಯದ ರಾಜಕೀಯ ಇತಿಹಾಸವನ್ನು ಅಧ್ಯಯನ ಮಾಡಿದಾಗ, ೧೫ ವರ್ಷಗಳ ಹಿಂದೆ ಕಾಂಗ್ರೆಸ್ ಪಕ್ಷವನ್ನು ಶೇಕಡ ೮೬.೫ ಬೆಂಬಲಿಸುತ್ತ ಬಂದರೆ, ಶೇಕಡ ೧೨.೫, ಬಿ.ಜೆ.ಪಿ ಪಕ್ಷವನ್ನು ಬೆಂಬಲಿಸಿದರೆ ಉಳಿದ

ಶೇಕಡ ೧ ರಷ್ಟು ಯಾವುದೇ ಪಕ್ಷಕ್ಕೆ ಬೆಂಬಲ ಕೊಡದೇ ವ್ಯಕ್ತಿಯನ್ನು ನೋಡಿ ಆಯ್ಕೆ ಮಾಡುತ್ತಾರೆ ಎಂದು ಉತ್ತರಿಸುತ್ತಾರೆ. ಆದರೆ ೨೦೧೪ರಿಂದ ಇದು ವಿರುದ್ಧ ದಿಕ್ಕಿನಲ್ಲಿ ಇರುವುದು ಕಂಡು ಬರುತ್ತದೆ.

ಏಕೆ? ಭೋವಿ ಸಮುದಾಯದವರು ನಿರ್ದಿಷ್ಟ ಪಕ್ಷಕ್ಕೆ ಬೆಂಬಲಕೊಡುತ್ತಾರೆ ಎಂದರೆ. ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತದೆ ಎನ್ನುವ ನಂಬಿಕೆ, ಸಾಂಪ್ರದಾಯಿಕವಾಗಿ ಸಮುದಾಯದವರು ಬೆಂಬಲಿಸಿ, ಸಮುದಾಯದವರಿಗೆ ಅವಕಾಶ ಸ್ಥಾನಮಾನಗಳು ಕೊಟ್ಟಿದ್ದಾರೆ. ಎಂದರೆ ಶೇಕಡ ೧೫ ರಷ್ಟು ಜಾತಿ ಹಿನ್ನೆಲೆಯಲ್ಲಿ ಭೋವಿ ಸಮುದಾಯದ ಎಂ.ಎಲ್.ಎ ಗಳು ಈ ಪಕ್ಷದಲ್ಲಿ ಹೆಚ್ಚಿನ ಸಂಖ್ಯೆ ಇರುವುದರಿಂದ ಮಾತ್ರ ಪಕ್ಷದ ಪರವಾಗಿ ಕೆಲಸ ಮಾಡುತ್ತೆ. ಹಣಕ್ಕಾಗಿ ಅಲ್ಲ ಎನ್ನುವ ಉತ್ತರ ಸಿಗುತ್ತದೆ. ಮುಂದಿನ ದಿನಮಾನಗಳಲ್ಲಿ ಶೇಕಡ ೮೫.೫ ರಷ್ಟು ಸಮುದಾಯಗಳು ಹೇಳುತ್ತಾರೆ. ನಿರ್ದಿಷ್ಟ ಪಕ್ಷ ಅಧಿಕಾರಕ್ಕೆ ಬಂದರೆ ಒಳ್ಳೆಯ ದಿನಗಳು ಮುಂದೆ ಬರುತ್ತವೆ. ಸಮುದಾಯದ ಅಭಿವೃದ್ಧಿಗಾಗಿ ಹೊಸ ಯೋಜನೆಗಳು ಜಾರಿಗೆ ತರುತ್ತವೆ ಎನ್ನುತ್ತಾರೆ. ಶೇಕಡ ೪೩.೫ ರಷ್ಟು ಜನ ಸಮುದಾಯಗಳು ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ಪರವಾಗಿ ಮತ್ತು ತಮ್ಮ ಬೆಂಬಲಿತ ವ್ಯಕ್ತಿಗಳ ಪರವಾಗಿ ಎಲ್ಲಾ ಪಕ್ಷಗಳಿಂದ ಸೇರಿ, ಮೇಲಿನ ಪ್ರಮಾಣದಲ್ಲಿ ಚುನಾವಣೆ ಪ್ರಚಾರದಲ್ಲಿ ಭಾಗವಹಿಸಿ ಮತ ಕೇಳುವರು ಭೋವಿ ಸಮುದಾಯದಲ್ಲಿ ಸಿಗುತ್ತಾರೆ. ಅದರಲ್ಲಿ ಶೇಕಡ ಪುರುಷರು ೨೬.೫, ಮಹಿಳೆಯರು ಶೇಕಡ ೧೦, ಪುರುಷ ಮತ್ತು ಮಹಿಳೆಯರು ಶೇಕಡ ೭ ರಷ್ಟು ರಾಜಕೀಯ ಪಕ್ಷಗಳಿಗಾಗಿ ದುಡಿಯುವವರು ಸಿಗುತ್ತಾರೆ.

ಸಮುದಾಯದವರಿಗೆ ರಾಜಕೀಯದಲ್ಲಿ ಯಾವ ವ್ಯಕ್ತಿಗಳು ಗೆದ್ದು, ಸದಸ್ಯರಾಗಿದ್ದಾರೆ ಎನ್ನುವ ಮಾಹಿತಿ ಕಲೆ ಹಾಕಿದಾಗ, ಗ್ರಾಮ ಪಂಚಾಯಿತಿಗೆ ಸ್ಪರ್ಧಿಸಿ ಗೆದ್ದವರು ಯಾರು? ಹಿಂದೆ ಮತ್ತು ಪ್ರಸ್ತುತದಲ್ಲಿ ಯಾರು ಸದಸ್ಯ ಮತ್ತು ಉಪಾಧ್ಯಕ್ಷ ಮತ್ತು ಅಧ್ಯಕ್ಷರಾಗಿದ್ದಾರೆ ಎನ್ನುವ ವಿಚಾರಗಳು ಅವರಿಗೆ ತಿಳಿದಿದೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ವಿಧಾನಸಭೆ, ವಿಧಾನಪರಿಷತ್, ಲೋಕಸಭೆ ಸದಸ್ಯರು ಯಾರು? ಎನ್ನುವುದು ನೋಡಿದರೆ. ಶೇಕಡ ೫೨.೮೫ ತಾಲ್ಲೂಕು ಪಂಚಾಯಿತಿ, ಶೇಕಡ ೩೬.೫ ಜಿಲ್ಲಾ ಪಂಚಾಯಿತಿ, ಶೇಕಡ ೫ ಎಂ.ಎಲ್.ಎ/ಎಂ.ಪಿ ಯಾರೆನ್ನುವುದು ಸಮುದಾಯದವರಿಗೆ ಗೊತ್ತಿಲ್ಲದ ಸಂಗತಿಗಳನ್ನು ಬಿಚ್ಚಿಡುತ್ತಾರೆ. ಇದು ಸ್ಥಳೀಯ ಮಟ್ಟದಲ್ಲಿ ಆಗಿರಬಹುದು. ಹಿಂದೆ ಅಥವಾ ಹಾಲಿ ರಾಜಕೀಯ ನಾಯಕರ ಸಂಪರ್ಕದಲ್ಲಿ ಶೇಕಡ ೮೫.೫ ರಷ್ಟು ಕುಟುಂಬಗಳು ಇದ್ದಾರೆ. ಆದರೆ ಶೇಕಡ ೧೪.೫ ಕುಟುಂಬಗಳು ರಾಜಕೀಯ ನಾಯಕರೆಂದರೆ ದೂರನೇ ಉಳಿದುಕೊಳ್ಳುವರು ಸಿಗುತ್ತಾರೆ. ಹಾಗೂ ಅವರು ರಾಜಕೀಯ ನಾಯಕರಿಂದ ಯಾವುದೇ ಸೌಲಭ್ಯಗಳನ್ನು ನಿರಿಕ್ಷೆಣೆ ಮಾಡಲ್ಲ. ಅಧ್ಯಯನಕ್ಕೆ ಒಳಪಟ್ಟ ಕುಟುಂಬಗಳಲ್ಲಿ ಹಿಂದೆ ಮತ್ತು ಪ್ರಸ್ತುತ ದಿನಗಳ ವರೆಗೆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಶೇಕಡ ೨೬ ರಷ್ಟು ಅಧಿಕಾರ

ಸ್ಥಾನ ಮಾನಗಳನ್ನು ಅನುಭವಿಸಿದವರು ಸಿಗುತ್ತಾರೆ. ತಾಲ್ಲೂಕು ಪಂಚಾಯಿತಿಯಲ್ಲಿ ಹಿಂದೆ ಒಂದು ಕುಟುಂಬ ಮಾತ್ರ ಸಿದ್ದಯ್ಯನಕೋಟೆ ಗ್ರಾಮದಲ್ಲಿ ಅಧ್ಯಕ್ಷರಾಗಿರುವುದು ತಿಳಿಯುತ್ತದೆ. ಉಳಿದಂತೆ ಯಾವುದು ಇಲ್ಲ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ, ಉಪಾಧ್ಯಕ್ಷ, ಅಧ್ಯಕ್ಷರಾಗಿ ಒಬ್ಬರು ಸಹ ಆಯ್ಕೆ ಆಗಿರುವುದು ಅಧ್ಯಯನದಲ್ಲಿ ಕಂಡುಬಂದಿಲ್ಲ. ಮುಂದಿನ ದಿನಗಳಲ್ಲಿ ರಾಜಕೀಯ ಪಕ್ಷಗಳು ಅವಕಾಶ ಮಾಡಿಕೊಟ್ಟರೆ, ಗ್ರಾಮ ಪಂಚಾಯಿತಿಗೆ ಶೇಕಡ ೩೭.೫, ತಾಲ್ಲೂಕು ಪಂಚಾಯಿತಿಗೆ ಶೇಕಡ ೧೦ ಹಾಗೂ ಜಿಲ್ಲಾ ಪಂಚಾಯಿತಿಗೆ ಶೇಕಡ ೫ ರಷ್ಟು ಅಭ್ಯರ್ಥಿಗಳು ಸ್ಪರ್ಧೆ ಮಾಡುತ್ತಾರೆ ಎನ್ನುವ ಅಂಕಾಕ್ಷಿಗಳು ಇದ್ದಾರೆ. ಲೋಕಸಭೆ, ವಿಧಾನಸಭೆಗೆ ಸ್ಪರ್ಧಿಸುತ್ತೇವೆ ಎನ್ನುವ ಅಂಕಾಂಕ್ಷೆಗಳು ಯಾರು ಸಹ ಗುರುತಿಸಿಕೊಂಡಿಲ್ಲ. ಮೇಲಿನ ನಿರ್ದಿಷ್ಠ ವ್ಯಕ್ತಿಗಳು ಅವಕಾಶಕೊಟ್ಟರೆ, ಕಾಂಗ್ರೆಸ್ ಶೇಕಡ ೭ ರಷ್ಟು ಬಿ.ಜೆ.ಪಿ ಶೇಕಡ ೪೪.೫ ಹಾಗೂ ಇತರೆ ಪಕ್ಷಗಳಿಂದ ಶೇಕಡ ೧ ರಷ್ಟು ಅಭ್ಯರ್ಥಿಗಳು ಚುನಾವಣೆಗೆ ನಿಂತುಕೊಳ್ಳುತ್ತಾರೆ ಎಂದು ಉತ್ತರಿಸುತ್ತಾರೆ. ಯಾಕೆ? ನಿರ್ದಿಷ್ಟ ಪಕ್ಷದ ಪರವಾಗಿ ಹೆಚ್ಚಿನವರು ಆಸಕ್ತಿ ತೋರುತ್ತಾರೆ ಎಂದರೆ ಆ ಪಕ್ಷಕ್ಕೆ ಸಮುದಾಯದ ಬೆಂಬಲವಿದ್ದು, ಸಮುದಾಯಕ್ಕೆ ಸೇರಿದ ಎಂ.ಎಲ್.ಎಗಳು ಇರುವ ಕಾರಣದಿಂದ ಸಾಂಪ್ರದಾಯಿಕವಾಗಿ ನಮಗೂ ಸಹ ಸ್ಥಾನಮಾನಗಳು ಕಲ್ಪಸಿಕೊಡುತ್ತಾರೆ ಎನ್ನುವ ಆತ್ಮ ವಿಸ್ವಾಸದಿಂದ ಬೆಂಬಲ ಕೊಡುತ್ತಾ ಬಂದಿದ್ದೇವೆ ಎನ್ನುತ್ತಾರೆ.

೭.೨.೪ ಸಾಂಸ್ಕೃತಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದ ಪ್ರತಿನಿಧಿತ್ವದ ವಿಶ್ಲೇಷಣೆ:

ಭೋವಿ ಸಮುದಾಯದವರು ಮೂಲತಃ ಒರಿಸ್ಸಾದವರಾಗಿದ್ದು ಇವರ ಸಂಸ್ಕೃತಿ, ಆಹಾರ, ಪದ್ಧತಿಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನ ರೀತಿಯಲ್ಲಿರುವುದು ಕಂಡುಬರುತ್ತದೆ. ಸಮುದಾಯದ ಐಡೆಂಟಿಟಿಯನ್ನು ಹೇಗೆ ನೋಡುತ್ತೇವೆ ಎಂದರೆ. ಭೋವಿ ಸಮುದಾಯದವರಿಗೆ ತಮ್ಮ ಅಸ್ಮಿತೆಯನ್ನು ಕಟ್ಟಿಕೊಳ್ಳಬೇಕಾದರೆ, ಹಿಂದುಳಿದವರ್ಗ, ಅಂಚಿನ ಸಮುದಾಯ ಹಿಂದೂ ಸಂಸ್ಕೃತಿಯ ಒಂದು ಭಾಗವೆಂದು ತನ್ನನ್ನು ತಾನು ಗುರುತಿಸಿಕೊಳ್ಳಲು ಅವರು ದೇಶಕ್ಕೆ ಕೊಟ್ಟಕೊಡುಗೆಗಳಿಂದ ದೊಡ್ಡದೊಡ್ಡ ಕಟ್ಟಡಗಳು, ಅಣೆಕಟ್ಟುಗಳು ಮೂಲಕ ಅವರ ಅಸ್ಮಿತೆಯನ್ನು ಗುರುತಿಸುತ್ತಾರೆ. ಆದರೇ ಭೋವಿ ಸಮುದಾಯಕ್ಕೆ ಆರ್ಥಿಕ, ರಾಜಕೀಯ, ಸಾಮಾಜಿಕವಾಗಿ ಸಂಸ್ಕೃತಿಕ ಸಂಘಟನೆಗಳಲ್ಲಿ ಅವರಿಗೆ ಒಂದು ನೆಲೆಗಟ್ಟು ಇಲ್ಲ. ಯಾಕೆಂದರೆ ದೇವಾಲಯಗಳನ್ನು ಕಟ್ಟಿದವರು ಇವರಾದರೆ ಅದೇ ದೇವಾಲಯದ ಗರ್ಭಗುಡಿಯೊಳಗೆ ಇವರಿಗೆ ಪ್ರವೇಶವಿಲ್ಲ. ಏಕೆಂದರೆ ಇವರ ವೃತ್ತಿಗಳು ಆರಂಭಿಸಿಕೊಂಡು ಹೇಗೆ ಗುರುತಿಸಿಕೊಂಡಿದ್ದಾರೆ ಎನ್ನುವುದನ್ನು ವಿಶ್ಲೇಷಿಸಲಾಗಿದೆ.

ಭೋವಿ ಸಮುದಾಯದವರು ತಮ್ಮ ಅಸ್ಮಿತೆಯನ್ನು ಕಟ್ಟಿಕೊಳ್ಳಬೇಕಾದರೆ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರಗಳು ಮುಖ್ಯವಾಗುತ್ತವೆ. ಆದ್ದರಿಂದ ಅವರಿಗೆ ಧಾರ್ಮಿಕ ನಾಯಕ ಯಾರು? ಅವರು ಹೇಗಿರಬೇಕು ಎನ್ನುವುದು ಕಾಲ್ಪನಿಕವಾಗಿ ಉಳಿದಿದೆ. ಭೋವಿ ಸಮುದಾಯದವರು

ಹಿಂದೂಗಳೆಂದು ಗುರುತಿಸಿಕೊಂಡರು ತಮ್ಮನ್ನು ಯಾವ ಆಧಾರದ ಮೇಲೆ ಗುರುತಿಸಬೇಕು. ಹೇಗೆ ಗುರುತಿಸಬೇಕು? ಅವರ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದವರಿಗೆ ತಮ್ಮ ವೃತ್ತಿಗಳಲ್ಲಿ ಮುಂದುವರೆಯುತ್ತ ಪರದೇ ಹಿಂದೆ ಕೆಲಸಮಾಡುವ, ಹೀಗೆ ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದು. ಯಾಕೆಂದರೆ ಸಮುದಾಯದವರನ್ನೆ ೧೯೧೮ ರಲ್ಲಿ ಭೋವಿ ಸಮುದಾಯವೆಂದು ಗುರುತಿಸುತ್ತಾರೆ. ಅದಕ್ಕಿಂತ ಹಿಂದೆ ಹೇಗೆ ೧೮೭೧ ರ ಜನಗಣತಿಯನ್ನು ನೋಡಿದಾಗ, ವಡ್ಡ, ಒಡ್ಡ, ಎಂದು ಗುರುತಿಸಿ ದೇಶದ ರಸ್ತೆಗಳನ್ನು ನಿರ್ಮಿಸಿದವರು. ಇವರು ಕೆರೆ ಹಗೆಯುವವರು, ಬಾವಿತೋಡುವವರು ಗುಂಪಾಗಿ ವಾಸಮಾಡುತ್ತಾರೆ. ಜೇನುಗೂಡಿನ ಹಾಗೆ ಎಂದು ೧೮೭೧ ರ ಜನಗಣತಿ ವರದಿಯಲ್ಲಿ ಗುರುತಿಸುತ್ತಾರೆ. ಭೋವಿ ಸಮುದಾಯದವರು ಸಾಂಸ್ಕೃತಿಕ ಅಸ್ಮಿತೆಯನ್ನು ಎಷ್ಟು ಪ್ರಮಾಣದಲ್ಲಿ ಉಳಿಸಿಕೊಂಡು ಯಾವ ನೆಲೆಯಲ್ಲಿ ತಮ್ಮನ್ನು ತಾವು ಕಟ್ಟಿಕೊಂಡಿದ್ದಾರೆ. ಎಂದು ಹಿಂದೂ ಸಂಸ್ಕೃತಿಯ ಧಾರ್ಮಿಕತೆಯಿಂದ ತಿಳಿಯುತ್ತದೆ. ಇವರ ಸಾಂಸ್ಕೃತಿಕ ರಾಜಕಾರಣವೆನ್ನುವುದು ಭಜನಾ ಮಂಡಳಿ ಸಮಿತಿ, ದೇವಸ್ಥಾನ ಆಡಳಿತ ಸಮಿತಿ, ಯಕ್ಷಗಾನ ಮಂಡಳಿ, ಕಟ್ಟಡ ಕಾರ್ಮಿಕರ ಸಾಂಸ್ಕೃತಿಕ ಕಲಾ ಸಂಘ ಮತ್ತು ಇತರೆ ಸಾಂಸ್ಕೃತಿಕ ಸಂಘಟನೆಗಳಲ್ಲಿ ತಮ್ಮ ಅಸ್ಮಿತೆಯನ್ನು ಎಷ್ಟು ಪ್ರಮಾಣದಲ್ಲಿ ಬಳಸಿಕೊಂಡು ಪದಾಧಿಕಾರಿಗಳಾಗಿ, ಪ್ರಾಬಲ್ಯ ಹೊಂದಿದ್ದಾರೆ ಎನ್ನುವುದು ರಾಜಕೀಯ ಪ್ರಕ್ರಿಯಕ್ಕೆ ಬುನಾಧಿಯಾಗಿ ಪ್ರಾತಿನಿಧ್ಯ ಹೊಂದಲು ನೆರವಾಗುತ್ತದೆ.

ಭೋವಿ ಸಮುದಾಯದವರಿಗೆ ಸಾಂಸ್ಕೃತಿಕವಾಗಿ ಇರುವ ಸಂಘಟನೆಗಳ ಬಗ್ಗೆ ಶೇಕಡ ೩೫.೫ ಕುಟುಂಬಗಳಿಗೆ ಮಾತ್ರ ಅದರ ಪರಿಕಲ್ಪನೆಯಿದೆ. ಉಳಿದವರಿಗೆ ಕಾಲ್ಪನಿಕ ವಿಚಾರಗಳಿಂದ ದೂರಾನೇ ಉಳಿಯಬೇಕು. ಧಾರ್ಮಿಕತೆಯಿಂದ ಸೈದ್ಧಾಂತಿಕವಾಗಿ ಪ್ರಯೋಗಿಕವಾಗಿ ಸಾಮಾಜಿಕ ನ್ಯಾಯ ಪಡೆಯಲು ಸಾಧ್ಯವಿಲ್ಲ ಎನ್ನುವ ಕಲ್ಪನೆಗೆ ಬಂದುಬಿಟ್ಟಿದ್ದಾರೆ. ಶೇಕಡ ೩೫.೫ ರಲ್ಲಿ ಧಾರ್ಮಿಕ ಸಂಘಟನೆಗಳಿಂದ ಭೋವಿ ಅಭಿವೃದ್ಧಿ ಸಾಂಸ್ಕೃತಿಕ ಕಲಾಸಂಘ, ತಿರುಪತಿ ತಿರುಮಲೇಶ್ವರ ಸಂಘ, ಪೆದ್ದಮ್ಮದೇವಿ ಸಂಘ ಎಂಬ ಸಮುದಾಯದ ದೇವರ ಸಂಘಟನೆಗಳಲ್ಲಿ ಮೇಲಿನ ಪ್ರಮಾಣದಲ್ಲಿ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಮತ್ತು ಅಧ್ಯಕ್ಷರಾಗಿ ಸಂಘಟನೆಗಳಲ್ಲಿ ಸಾಂಪ್ರದಾಯಿಕವಾಗಿ ತೊಡಗಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಆದ್ದರಿಂದ ಹಿಂದೆ ಮತ್ತು ಪ್ರಸ್ತುತದಲ್ಲಿ ಈ ನಿರ್ದಿಷ್ಟ ಸಮಿತಿಗಳಲ್ಲಿ ಮಾತ್ರ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಸದಸ್ಯರಾಗಿ, ಶೇಕಡ ೭೦ ಕುಟುಂಬಗಳನ್ನು ತಮ್ಮ ಧಾರ್ಮಿಕತೆಯನ್ನು ಉಳಿಸಿಕೊಂಡಿರುವುದನ್ನು ಸಮುದಾಯದಲ್ಲಿ ನೋಡಬಹುದು. ಮುಖ್ಯವಾಗಿ ಭಜನಾ ಮಂಡಳಿ ಸಮಿತಿಯಲ್ಲಿ ಹಿಂದೇ ಶೇಕಡ ೨ ಅಧ್ಯಕ್ಷರಾಗಿ ಮತ್ತು ಶೇಕಡ ೧೭ ಸದಸ್ಯರಾಗಿದ್ದಾರೆ. ಪ್ರಸ್ತುದಲ್ಲಿ ಮಾತ್ರ ಶೇಕಡ ೨.೫ ರಷ್ಟು ಸದಸ್ಯರಾಗಿವುದು ತಿಳಿಯುತ್ತದೆ. ದೇವಸ್ಥಾನದ ಆಡಳಿತ ಸಮಿತಿಯಲ್ಲಿ ಅಧ್ಯಕ್ಷರಾಗಿ ಹಿಂದೆ ಶೇಕಡ ೨ ರಷ್ಟು ಇದ್ದಾರೆ. ಉಪಾಧ್ಯಕ್ಷರಾಗಿ ಶೇಕಡ ೦.೫ ರಷ್ಟು ಇದೆ. ಪ್ರಸ್ತುತದಲ್ಲಿ ಅಧ್ಯಕ್ಷರಾಗಿ ಶೇಕಡ ೦.೫

ಸದಸ್ಯರಾಗಿ ಶೇಕಡ ೨೪ ರಷ್ಟು ಇದ್ದು, ತಮ್ಮ ಧಾರ್ಮಿಕ ಸಾಂಸ್ಕೃತಿಕ ಸಂಘಟನೆಗಳನ್ನು ಸ್ವಲ್ಪ ಪ್ರಮಾಣದಲ್ಲಿ ಉಳಿಸಿಕೊಂಡಿರುವುದು ವ್ಯಕ್ತವಾಗುತ್ತದೆ.

೭.೩. ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯದ ಪ್ರತಿನಿಧಿತ್ವದ ವಿಶ್ಲೇಷಣೆ

ತಳದಲ್ಲಿರುವಂತಹ ಯಾವುದೇ ಸಮುದಾಯ ಅಭಿವೃದ್ಧಿ ಹೊಂದಿ ರಾಜಕೀಯ ಸ್ಥಾನಮಾನಗಳನ್ನು ಪಡೆಯಬೇಕಾದರೆ ಸಮುದಾಯಕ್ಕೆ ಸಿಗಬೇಕಾದ ಪ್ರಾತಿನಿಧ್ಯ ಮತ್ತು ಮೂಲಭೂತ ಸೌಕರ್ಯಗಳು ಪಡೆದಿರುವ ಪ್ರಮಾಣದಲ್ಲಿ ನಿರ್ಧಾರವಾಗುತ್ತದೆ. ಅವರಿಗೆ ಮುಖ್ಯವಾಗಿ, ಶಿಕ್ಷಣ, ವಸತಿ, ಆರೋಗ್ಯ, ಭೂಮಿ, ಬಂಡವಾಳ. ಅತ್ಯಂತ ಅವಶ್ಯಕವಾಗಿ ಬೇಕಾಗುತ್ತದೆ. ಆದರೆ ತಳ ಸಮುದಾಯಗಳ ಬಳಿ ಒಂದು ಇದ್ದರೆ. ಇನ್ನೊಂದು ಇಲ್ಲ ಇತಂಹವರಿಗೆ ನ್ಯಾಯ ಕೊಡಿಸುವರು ಯಾರು?. ಸಂಘ ಸಂಸ್ಥೆಗಳು ಹಾಗೂ ಸರ್ಕಾರಗಳ ಜವಾಬ್ದಾರಿಯಲ್ಲದೇ ಹಾಗಾದರೆ ಭೋವಿ ಸಮುದಾಯದ ಅಭಿವೃದ್ಧಿ ಮತ್ತು ರಾಜಕೀಯದ ನೀತಿ ಹೇಗಿದೆ ಎಂದು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಭೋವಿ ಸಮುದಾಯದ ಅಭಿವೃದ್ಧಿಯನ್ನು ಎರಡು ಪರಿಭಾಷೆಗಳಾಗಿ ವಿಂಗಡಿಸಿಕೊಳ್ಳಬಹುದು. ಒಂದು ಸಾಮಾಜಿಕ ಅಭಿವೃದ್ಧಿ ಇನ್ನೊಂದು ಆರ್ಥಿಕ ಅಭಿವೃದ್ಧಿ. ಸಾಮಾಜಿಕ ಅಭಿವೃದ್ಧಿಯೊಳಗೆ ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಜಾತಿಸ್ಥಾನಮಾನ, ಲಿಂಗಸಮಾನತೆ, ಆರ್ಥಿಕ ಅಭಿವೃದ್ಧಿ ಒಳಗೆ ಅವರ ಉದ್ಯೋಗ, ಆದಾಯ, ಭೂಹಿಡುವಳಿ, ಆದಾಯದ ಮೂಲ, ಚರಾ ಮತ್ತು ಸ್ಥಿರಾ ಆಸ್ಥಿವಿವರಗಳ ಮೇಲೆ ಅಭಿವೃದ್ಧಿ ನೀತಿಗಳು ಪ್ರಾರಂಭವಾಗುತ್ತದೆ. ಈ ಅಭಿವೃದ್ಧಿ ನೀತಿಗಳನ್ನು ಗಮನದಲ್ಲಿಟ್ಟುಕೊಂಡು ರಾಜಕೀಯ ಪಕ್ಷಗಳು ಸ್ಥಾನಮಾನಗಳನ್ನು ಕಲ್ಪಿಸಿಕೊಡುತ್ತ ಬಂದಿದೆ.

ಭೋವಿ ಸಮುದಾಯದ ರಾಜಕೀಯ ಪ್ರತಿನಿಧಿತ್ವವನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂಘಟನೆಗಳಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿನಿಧಿತ್ವ ಹೊಂದಿ. ತಮ್ಮ ಅಸ್ಮಿತೆಯನ್ನು ಗುರುತಿಸಿಕೊಂಡಿದ್ದಾರೆ. ಎನ್ನುವುದು ಈ ಮೇಲಿನ ಸಂಘಟನೆಗಳಲ್ಲಿ ಬರುವ ಒಳ ಸಂಸ್ಥೆಗಳಾದ ಎಸ್.ಡಿ.ಎಂ.ಸಿ, ನೀರಿನ ಸಮಿತಿ, ಆರೋಗ್ಯ ಸಮಿತಿ, ವಸತಿ ಸಮಿತಿ, ನೈರ್ಮಲ್ಯ ಸಮಿತಿ, ಜಾತಿ ಸಂಘಟನೆಗಳು ಜಂಟಿ ಆರಣ್ಯ ಸಮಿತಿ, ಉತ್ಪಾದನ ಸಮಿತಿ, ಸಮುದಾಯದಲ್ಲಿ ಎಂ.ಎಲ್.ಎ. ಮತ್ತು ಎಂ.ಪಿಗಳಾಗಿ ಎಷ್ಟು ಪ್ರಮಾಣದಲ್ಲಿದ್ದಾರೆ. ಹಾಗೂ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಸಾಂಸ್ಕೃತಿಕ ಸಂಘಟನೆಗಳಾದ ಭಜನಾ ಮಂಡಳಿ, ದೇವಸ್ಥಾನದ ಆಡಳಿತ ಸಮಿತಿಗಳಲ್ಲಿ ಭೋವಿ ಸಮುದಾಯದವರು ಎಷ್ಟು ಪ್ರಮಾಣದಲ್ಲಿ ಪ್ರತಿನಿಧಿತ್ವ ಹೊಂದಿದ್ದಾರೆ. ಎನ್ನುವುದರ ಆದಾರದ ಮೇಲೆ ತಮ್ಮ ಐಡೆಂಟಿಟಿಯನ್ನು ಉಳಿಸಿಕೊಂಡು, ರಾಜಕೀಯ ಸ್ಥಾನಮಾನದಲ್ಲಿ ಮುಂದುವರೆಯಲು ಪ್ರೇರಕವಾಗುತ್ತದೆ. ಆದ್ದರಿಂದ ಈ ಅಧ್ಯಯನದಲ್ಲಿ ಭೋವಿ ಸಮುದಾಯದ ಅಭಿವೃದ್ಧಿ ನೀತಿ ಮತ್ತು ರಾಜಕೀಯ ಪ್ರತಿನಿಧಿತ್ವವನ್ನು ವಿಶ್ಲೇಷಿಸಲಾಗಿದೆ.

ಭೋವಿ ಸಮುದಾಯದಲ್ಲಿ ಪ್ರಾಥಮಿಕ, ಶಿಕ್ಷಣ, ಪ್ರೌಢ ಶಿಕ್ಷಣ ಹಾಗೂ ಪದವಿ ಪೂರ್ವ ಮತ್ತು ಪದವಿ ಶಿಕ್ಷಣವನ್ನು ಪಡೆದುಕೊಂಡವರು ಸಿಗುತ್ತಾರೆ. ಕೆಲವರು ಶಿಕ್ಷಣಪಡೆಯದ ಸಂಘಟನೆಗಳ ಮೂಲಕ ಓದಲು ಬರೆಯಲು ಕಲಿತಿದ್ದಾರೆ. ಆದರೇ ಶೇಕಡ ೫.೫ ರಷ್ಟು ಸಮುದಾಯದ ಕುಟುಂಬಗಳಲ್ಲಿ ಅನಕ್ಷರಸ್ಥರು ಇದ್ದಾರೆ. ಮಾಳಿಗೆ ಮನೆ, ಹೆಂಚಿನ ಮನೆಯನ್ನು ಕಟ್ಟಿಕೊಂಡವರು ಹಾಗೂ ಅಲ್ಪ ಪ್ರಮಾಣದಲ್ಲಿ ಆರ್.ಸಿ.ಸಿ. ಮನೆ ಇರುವವರು ಇದ್ದಾರೆ. ಆದರೆ ಇಂದಿಗೂ ಸಹ ಭೋವಿ ಸಮುದಾಯದ ಕುಟುಂಬಗಳಲ್ಲಿ ಶೇಕಡ ೧೩.೫ ರಷ್ಟು ಕುಟುಂಬಗಳು ಗುಡಿಸಲು ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅಂದರೆ ಇವರ ಅಭಿವೃದ್ಧಿ ಹೇಗಿದೆ ಎಂದು ತಿಳಿಯುತ್ತದೆ. ಮೇಲಿನ ಅಂಶಗಳಿಂದ ಇತರ ಆರೋಗ್ಯವನ್ನು ವಿಶ್ಲೇಸಿದಾಗ ಶೇಕಡ ೧೧.೫ ರಷ್ಟು ಕುಟುಂಬಗಳಿಗೆ ಕೈ ಕಾಲು ನೋವು ಮೂಳೆಶಸ್ತ್ರ ಚಿಕಿತ್ಸೆ, ಕರುಳಿನ ಶಸ್ತ್ರ ಚಿಕಿತ್ಸೆ ಹಾಗೂ ಚರ್ಮದ ತೊಂದರೆಗಳಿಂದ ನರಳುತ್ತಿದ್ದವರು ಸಿಗುತ್ತಾರೆ. ಹಾಗೂ ಶೇಕಡ ೧೨ ಕುಟುಂಬಗಳಿಗೆ ಶೋಚನೀಯ ನೀರು ಸಹ ಸಿಗುತ್ತಿಲ್ಲ. ಊರಿನಿಂದ ೨ ಕಿ. ಮೀ. ದೂರಕ್ಕೆ ಹೋಗಿ ನೀರು ತರುವ ವ್ಯವಸ್ಥೆಯಿದೆ. ಶೇಕಡ ೯೭ ರಷ್ಟು ಕುಟುಂಬಗಳ ಸ್ವರೂಪ ಬದಲಾಗಿಲ್ಲ. ಹಿಂದಿನ ಪೀಳಿಗೆಯಿಂದ ನಡೆದುಕೊಂಡುಬಂದ ಗಾರೆ, ಕಲ್ಲು, ಮಣ್ಣಿನ ಕೂಲಿ ಕೆಲಸಗಳೇ ಇವರಿಗೆ ಆಸರೆ ಹಾಗೂ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಭೋವಿ ಸಮುದಾಯದ ಶೇಕಡ ೬೬.೫ ರಷ್ಟು ಕುಟುಂಬಗಳಲ್ಲಿ ಮಹಿಳೆಯರು ಮನೆಯ ಜವಾಬ್ದಾರಿಗಳನ್ನು ಒತ್ತುಕೊಂಡು ಸಂಸಾರವನ್ನು ನಡೆಸುತ್ತಾ, ಕೂಲಿ ಹಾಗೂ ಇತರೇ ಚಿಕ್ಕಪುಟ್ಟ ವ್ಯಾಪಾರಗಳನ್ನು ಮಾಡುತ್ತ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಯಾಕೆಂದರೆ ಪುರುಷ ದುಷ್ಟ ಚಟಗಳಿಗೆ ಬಲಿಯಾಗಿ ತಾವು ದುಡಿದ ಹಣವನ್ನೆಲ್ಲ ಖರ್ಚುಮಾಡಿ ಖಾಲಿ ಕೈಯಲ್ಲಿ ಮನೆಗೆ ಬರುವವರು ಸಾಕಷ್ಟು ಕುಟುಂಬಗಳಲ್ಲಿ ಇದ್ದಾರೆ. ಶೇಕಡ ೧೬.೧೮ ಕೂಲಿ, ಶೇಕಡ ೭.೦೯ ಗಾರೆಕೆಲಸ, ಶೇಕಡ ೩.೫ ರಷ್ಟು ಕಲ್ಲು ಹೊಡೆಯುವವರು ಅಧ್ಯಯನಕ್ಕೆ ಒಳಪಟ್ಟಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಶೇಕಡ ೭೧.೫ ರಷ್ಟು ಕುಟುಂಬಗಳಿಗೆ ೧೦,೦೦೦ ದಿಂದ ೧೨,೦೦೦ ಒಳಗೆ ಆದಾಯ ಇರುವವರು ಇದ್ದಾರೆ. ಮತ್ತು ಭೋವಿ ಸಮುದಾಯದವರ ಶೇಕಡ ೨೮.೫ ರಷ್ಟು ಕುಟುಂಬಗಳಿಗೆ ಭೂಮಿ ಇಲ್ಲದಿರುವುದು ಅಧ್ಯಯನದಿಂದ ದೃಢಪಟ್ಟಿದೆ. ಹಾಗಾದರೆ ಇವರ ಅಭಿವೃದ್ಧಿ ಕುಂಠಿತದಲ್ಲಿದೆ ಎಂದು ತೀರ್ಮಾನಕ್ಕೆ ಬರಬಹುದು.

ಭೋವಿ ಸಮುದಾಯದ ರಾಜಕೀಯ ಸಂಘಟನೆಗಳಲ್ಲಿ ಪ್ರತಿನಿಧಿತ್ವವನ್ನು ವಿಶ್ಲೇಷಿಸಿದಾಗ, (ಎಸ್.ಡಿ.ಎಂ.ಸಿ) ಶಾಲಾ ಉಸ್ತುವರಿ ಅಭಿವೃದ್ಧಿ ಸಮಿತಿ ಬಗ್ಗೆ ಶೇಕಡ ೪೭.೫ ಕುಟುಂಬಗಳಿಗೆ ಇದರ ಮಾಹಿತಿ ಇಲ್ಲದಿರುವುದು ಕಂಡುಬರುತ್ತದೆ. ನೀರಿನ ನೀತಿಯಲ್ಲಿ ಹಿಂದೆ ಮತ್ತು ಪ್ರಸ್ತುತದಲ್ಲಿ ಶೇಕಡ ೧೩.೫ ರಷ್ಟು ಆರೋಗ್ಯ ಸಮಿತಿಯಲ್ಲಿ ಪ್ರಸ್ತುತ ದಿನಗಳಲ್ಲಿ ಮಾತ್ರ ಶೇಕಡ ೧ ರಷ್ಟು ಇದರ ಅಡಿಯಲ್ಲಿ ಸದಸ್ಯರಾಗಿ, ಸಮುದಾಯದ ಆರೋಗ್ಯದ ಮಾಹಿತಿಗಳ ಬಗ್ಗೆ ಜಾಗೃತಿ

ಮೂಡಿಸುತ್ತಿದ್ದಾರೆ. ವಸತಿ ಸಮಿತಿಯಲ್ಲಿ ಹಿಂದೆ ಮತ್ತು ಹಾಲಿ ಶೇಕಡ ೪ ರಷ್ಟು ಮಾತ್ರ ಅದರ ಸಂಘಟನೆಯಲ್ಲಿ ಸದಸ್ಯರಾಗಿ ಪ್ರತಿನಿಧಿತ್ವ ಪಡೆದಿದ್ದಾರೆ. ನೈರ್ಮಲ್ಯ ಸಮಿತಿಯಲ್ಲಿ ಹಿಂದೆ ಮತ್ತು ಹಾಲಿ ಶೇಕಡ ೨.೫ ರಷ್ಟು ಮಾತ್ರ ಸಮಸ್ಯೆಗಳನ್ನು ಪಡೆದವರು ಸಿಗುತ್ತಾರೆ. ಸಮುದಾಯಕ್ಕಾಗಿ ಹಿಂದೆ ಶೇಕಡ ೧೫ ರಷ್ಟು ಕುಟುಂಬಗಳು ಸಂಘಟನೆಗಳನ್ನು ಕಟ್ಟಿಕೊಂಡು ಸಮಸ್ಯೆಗಳು ಬಂದಾಗ, ಚರ್ಚಿಸಿ ಪರಿಹಾರವನ್ನು ಕಂಡುಕೊಳ್ಳುತ್ತಿದ್ದರು. ಆದರೇ ಪ್ರಸ್ತುತ ದಿನಗಳಲ್ಲಿ ಭೋವಿ ಸಮುದಾಯದವರು ಶೇಕಡ ೪.೫ ರಷ್ಟು ಮಾತ್ರ, ಭೋವಿ ಸಂಘ ಪೆದಮ್ಮ ಸಂಘ, ಸಿದ್ದಾರಾಮೇಶ್ವರ ಭೋವಿ ಸಂಘ ಎಂದು ಸಂಘಟನೆಗಳನ್ನು ಕಟ್ಟಿಕೊಂಡಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ. ಆರ್ಥಿಕ ಸಂಘಟನೆಗಳಲ್ಲಿ ಭೋವಿ ಸಮುದಾಯದವರು ಪ್ರತಿನಿಧಿತ್ವ ನೋಡಿದಾಗ, ಶೇಕಡ ೧೬ ರಷ್ಟು ಮಾತ್ರ ೧೦ ವರ್ಷಗಳ ಹಿಂದಿನಿಂದಲೂ ಪ್ರಸ್ತುತದವರೆಗೆ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಾಗಿದ್ದಾರೆ.

ಉತ್ಪಾದನಾ ಸಮಿತಿಯಲ್ಲಿ ಶೇಕಡ ೨೫.೫ ರಷ್ಟು ಹಾಗೂ ಸ್ವಸಹಾಯ ಸಂಘಟನೆಗಳಲ್ಲಿ ಸದಸ್ಯರಾಗಿ ಮಾತ್ರ ಹಿಂದೆ ಶೇಕಡ ೧೫.೫ ರಷ್ಟು ಇದ್ದರು. ಪ್ರಸ್ತುತದಲ್ಲಿ ಶೇಕಡ ೨೧.೫ ರಷ್ಟು ಇದ್ದಾರೆ. ಮಾರುಕಟ್ಟೆ ನೀತಿಯಲ್ಲಿ ಹಿಂದೆಮಾತ್ರ ಶೇಕಡ ೬ ಸದಸ್ಯರು ಪ್ರತಿನಿಧಿತ್ವವನ್ನು ಹೊಂದಿದ್ದರು. ರಾಜಕೀಯ ಸಂಘಟನೆಗಳಲ್ಲಿ ಅದರಲ್ಲಿ ಮುಖ್ಯವಾಗಿ ವಿಧಾನಸಭೆ, ಲೋಕಸಭೆ ಮತ್ತು ಸ್ಥಳಿಯ ಸಂಸ್ಥೆಗಳಿಗೆ ಭೋವಿ ಸಮುದಾಯದ ಪ್ರತಿನಿಧಿಗಳು ಎಷ್ಟು ಪ್ರಮಾಣದಲ್ಲಿ ಗುರುತಿಸಿಕೊಂಡಿದ್ದಾರೆ ಎಂದು ವಿಶ್ಲೇಷಿಸಿದ್ದಾರೆ. ಲೋಕಸಭೆ ಚುನಾವಣೆಗೆ ರಾಜ್ಯದಿಂದ ಮೂವರು ಕೋಲಾರ ಮತ್ತು ಚಿತ್ರದುರ್ಗ ಕ್ಷೇತ್ರಗಳಿಂದ ಆಯ್ಕೆಯಾಗಿ ಮೂರುಬಾರಿ ಅವಕಾಶ ಸಿಕ್ಕಿದೆ. ಸ್ವಾತಂತ್ರ ಬಂದಾಗಿನಿಂದಲು ಜಿ. ವೈ. ಕೃಷ್ಣ, ಡಾ.ವಿ. ವೆಂಕಟೇಶ, ಕೋಲಾರದಿಂದ ಆಯ್ಕೆಯಾದರೆ, ಚಿತ್ರದುರ್ಗದಿಂದ ೨೦೦೯ ರಲ್ಲಿ ಬಿ.ಜೆ.ಪಿ ಪಕ್ಷದಿಂದ ಜನಾರ್ಧನಸ್ವಾಮಿಯವರು ಆಯ್ಕೆಯಾಗುತ್ತಾರೆ. ಹಾಗೂ ವಿಧಾನ ಪರಿಸಷತ್‌ಗೆ ಮುನಿಸ್ವಾಮಿ, ವಿ.ವಿ.ನಾರಾಯಣ ಮತ್ತು ಅರವಿಂದ ಲಿಂಬಾವಳಿ ಅವರು ಭೋವಿ ಸಮುದಾಯದಿಂದ ಆಯ್ಕೆ. ವಿಧಾನಸಭೆ, ಚುನಾವಣೆಯನ್ನು ಅವಲೋಕನ ಮಾಡಿದಾಗ, ಸ್ವಾತಂತ್ರ ಬಂದಾಗಿನಿಂದ ೨೦೧೯ ರ ವರೆಗೆ ರಾಜ್ಯದಲ್ಲಿ ೩೪. ಎಂ.ಎಲ್.ಎ ಗಳಾಗಿ ಇದ್ದಾರೆ. ಇದರಲ್ಲಿ ೨೭ ಸದಸ್ಯರು ಹಿಂದೆ ಪ್ರತಿನಿಧಿಗಳಾಗಿದ್ದರು. ಪ್ರಸ್ತುತದಲ್ಲಿ ೭ ಜನ ಎಂ.ಎಲ್.ಎ ಗಳಲ್ಲಿ ೩ ಜನ ಕಾಂಗ್ರೆಸ್ ಪಕ್ಷದಿಂದ ೪ ಜನ ಬಿ.ಜೆ.ಪಿ ಪಕ್ಷದಿಂದ ಆಯ್ಕೆ ಆಗಿದ್ದಾರೆ.

ಆದರೆ ಅಧ್ಯಯನ ಕೈಗೊಂಡ ಗ್ರಾಮಗಳಿಂದ ವಿಧಾನಸಭೆ, ಲೋಕಸಭೆಗೆ ಆಯ್ಕೆಯಾದವರು ಯಾರು ಇಲ್ಲ. ಮತ್ತು ಸ್ಥಳಿಯ ಸಂಸ್ಥೆಗಳಲ್ಲಿ ನೋಡಿದಾಗ, ಜಿಲ್ಲಾ ಪಂಚಾಯಿತ್ತಿಗೆ ಸಮುದಾಯದಿಂದ ಹಿಂದೆ ಮತ್ತು ಪ್ರಸ್ತುತದಲ್ಲಿ ಸದಸ್ಯ, ಉಪಾಧ್ಯಕ್ಷ, ಅಧ್ಯಕ್ಷರಾಗಿ, ಅಧಿಕಾರ ಪಡೆದವರು ಇಲ್ಲ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿ ಹಿಂದೆ ಶೇಕಡ ೧ ರಷ್ಟು ಹಾಗೂ ಸದಸ್ಯರಾಗಿ ಹಿಂದೆ ಶೇಕಡ ೨, ಪ್ರಸ್ತುತದಲ್ಲಿ ಶೇಕಡ ೦.೫ ಇದ್ದಾರೆ.

ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಹಿಂದೆ ಶೇಕಡ ೪ ಹಾಲಿ. ಶೇಕಡ ೧ ಉಪಾಧ್ಯಕ್ಷರಾಗಿ ಹಿಂದೆ ಶೇಕಡ ೨, ಪ್ರಸ್ತುತದಲ್ಲಿ ಶೇಕಡ ೨ ರಷ್ಟು ಇದ್ದರೆ. ಸದಸ್ಯರಾಗಿ, ಹಿಂದೆ ಶೇಕಡ ೧೦.೫ ರಷ್ಟು ಇದ್ದರು. ಪ್ರಸ್ತುತದಲ್ಲಿ ಶೇಕಡ ೩ ರಷ್ಟು ಗ್ರಾಮ ಪಂಚಾಯಿತಿಯಲ್ಲಿ ಪ್ರತಿನಿಧಿತ್ವವನ್ನು ಪಡೆದುಕೊಂಡಿದ್ದಾರೆ. ಹಾಗೂ ಕೊನೆದಾಗಿ ಸಾಂಸ್ಕೃತಿಕ ಸಂಘಟನೆಗಳಲ್ಲಿ ಇವರ ಪ್ರತಿನಿಧಿತ್ವ ಹೇಗಿದೆ ಎಂದರೆ. ಭಜನಾ ಮಂಡಳಿಯಲ್ಲಿ ಹಿಂದೆ ಅಧ್ಯಕ್ಷರಾಗಿ ಶೇಕಡ ೨ ಸದಸ್ಯರಾಗಿ ಶೇಕಡ ೭ ಪ್ರಸ್ತುತದಲ್ಲಿ ಶೇಕಡ ೨.೫ ಇದ್ದಾರೆ. ಹಾಗೂ ದೇವಸ್ಥಾನ ಅಡಳಿತ ಸಮಿತಿಯಲ್ಲಿ ಅಧ್ಯಕ್ಷರಾಗಿ ಹಿಂದೆ ಶೇಕಡ ೨ ಹಾಲಿ ಶೇಕಡ ೦.೫ ಉಪಾಧ್ಯಕ್ಷರಾಗಿ ಹಿಂದೆ ಶೇಕಡ ೦.೫ ರಷ್ಟು ಇದ್ದರು. ಪ್ರಸ್ತುತದಲ್ಲಿ ಯಾರು ಇಲ್ಲ. ಸದಸ್ಯರಾಗಿ ಹಿಂದೆ ಶೇಕಡ ೨೧.೫ ರಷ್ಟು ಇದ್ದರು. ಪ್ರಸ್ತುತ ಶೇಕಡ ೨೪ ಸದಸ್ಯರು ಇದ್ದು. ಸಮುದಾಯದ ಧಾರ್ಮಿಕತೆಯನ್ನೇ ಸ್ವಲ್ಪ ಪ್ರಮಾಣದಲ್ಲಿ ಬಳಸಿಕೊಂಡಿದ್ದಾರೆ. ಆದರೇ ಸ್ಥಳಿಯ ಸಂಸ್ಥೆಗಳಲ್ಲಿ ರಾಜಕೀಯ ಪ್ರಕ್ರಿಯೆ ಕಡಿಮೆಯಿದೆ ಎಂದು ಕ್ಷೇತ್ರ ಕಾರ್ಯದಿಂದ ಕಲೆಹಾಕಿದ ಮಾಹಿತಿಯನ್ನು ವಿಶ್ಲೇಷಿಸಿದಾಗ ತಿಳಿಯುತ್ತದೆ.

ಅಧ್ಯಾಯ – ಎಂಟು

ಸಮಾರೋಪ

೮.೧ ಅಧ್ಯಯನದ ಫಲಿತಗಳು

ಅಧ್ಯಾಯ – ಎಂಟು

ಸಮಾರೋಪ

ಭೋವಿ ಸಮುದಾಯದ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯದ ಅಧ್ಯಯನ ಕೈಗೊಂಡು ಭೋವಿ ಸಮುದಾಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಆಗಿರುವ ಅಧ್ಯಯನಗಳನ್ನು ಅಧ್ಯಯನ ಮಾಡಿದಾಗ, ಭೋವಿ ಸಮುದಾಯದ ಸಂಸ್ಕೃತಿ, ವೃತ್ತಿಗಳು, ಆಚಾರ ವಿಚಾರ, ಸಮಾಜಕ್ಕೆ ನೀಡಿರುವ ಕೊಡುಗೆಗಳು, ಸಾಮಾಜಿಕತೆ, ಪರಂಪರೆ, ಆಹಾರ ಪದ್ದತಿ, ಭೋವಿ ಸಮುದಾಯದ ಐತಿಹ್ಯ ಕಥೆಗಳು, ಭೋವಿ ಪದದ ಅರ್ಥ, ಭೋವಿ ಸಮುದಾಯದ ಒಳಪಂಗಡಗಳು, ಸಮುದಾಯದಲ್ಲಿರುವ ವಿಧಾನಸಭೆ ಸದಸ್ಯರು, ಸ್ವಾತಂತ್ರ್ಯ ಪೂರ್ವ ಅಥವಾ ಪ್ರಾಚೀನ ಕಾಲದ ಕೊಡುಗೆಗಳು, ಕೋಟೆಗಳು, ಅಣೆಕಟ್ಟುಗಳು, ಕೆರೆಕಟ್ಟೆ ಇತರೆ ಕಟ್ಟಡಗಳನ್ನು ಕಟ್ಟಿ, ನೀಡಿದ ಕೊಡುಗೆಗಳು, ಸಾಮಾಜಿಕ, ಸಮಸ್ಯೆಗಳು, ಭೋವಿ ಸಮುದಾಯ ಗುರು ಶ್ರೀಸಿದ್ದೇಶ್ವರ ಚರಿತ್ರೆ, ಧಾರ್ಮಿಕ ಪದ್ಧತಿ ಹಾಗೂ ಭೋವಿಗಳೆಂದರೆ ಯಾರು? ಎನ್ನುವ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ಆಗಿವೆ. ಭೋವಿ ಸಮುದಾಯದ ಅಸ್ಮಿತೆಯನ್ನು ಹೇಗೆ ನೋಡುತ್ತಾರೆ. ಮತ್ತು ಸಮುದಾಯದ ಅಭಿವೃದ್ಧಿ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿಲ್ಲ.

ಆದ್ದರಿಂದ ಈ ಅಧ್ಯಯನದಲ್ಲಿ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ ಎಂಬ ಮಹಾಪ್ರಬಂಧದಲ್ಲಿ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು. ಭೋವಿ ಸಮುದಾಯದ ಅಭಿವೃದ್ಧಿಯನ್ನು ಮಾಪನ ಮಾಡುವುದು. ಭೋವಿ ಸಮುದಾಯದ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು. ಎನ್ನುವ ನಾಲ್ಕು ಉದ್ದೇಶಗಳನ್ನು ಇಟ್ಟುಕೊಂಡು, ಭೋವಿ ಸಮುದಾಯದವರು ಚಿತ್ರದುರ್ಗ ಜಿಲ್ಲೆಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

ಮತ್ತು ಹಿಂದುಳಿದ ತಾಲ್ಲೂಕಾಗಿ ಮೊಳಕಾಲ್ಮೂರು ಮುಂದುವರೆದ ತಾಲ್ಲೂಕ್ಕಾಗಿ ಹೊಳಲ್ಕೇರೆ ತಾಲ್ಲೂಕು ತಲಾ ನಾಲ್ಕು ಗ್ರಾಮಗಳಿಂದ ೨೦೦ ಕುಟುಂಬಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸಿ ಕ್ಷೇತ್ರಕಾರ್ಯ ಕೈಗೊಂಡು ಪ್ರಶ್ನಾವಳಿ, ಸಂದರ್ಶನ ಹಾಗೂ ಅವಲೋಕನ ವಿಧಾನದ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಿ, ಅವಶ್ಯವಿದಲ್ಲಿ ಮಾಧ್ಯಮಿಕ ಮಾಹಿತಿಯನ್ನು ಬಳಸಿ ಗ್ರಂಥಗಳು, ನಿಯತಕಾಲಿಕೆ, ಮಹಾಪ್ರಬಂಧಗಳು, ಜನಗಣತಿ ವರದಿಗಳು, ಸರ್ಕಾರದ ವರದಿಗಳು, ಚುನಾವಣೆ ಆಯುಕ್ತರ ಇಲಾಖೆ, ಪತ್ರಿಕೆ ಬಿಡಿ ಲೇಖನಗಳ ದತ್ತಾಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ಸೂಕ್ತ ಕಾರಣಗಳಿಂದ ಕ್ರೋಢಿಕರಿಸಲಾಗಿದೆ. ಪ್ರಸ್ತುತ ಅಧ್ಯಯನವನ್ನು ವ್ಯವಸ್ಥಿತವಾಗಿ ಮಾಹಿತಿಗೆ ಪೂರಕವಾಗಿ ೮ ಅಧ್ಯಾಯಗಳನ್ನು ವಿಂಗಡಿಸಿ, ಉದ್ದೇಶಗಳಿಗೆ ಅನುಗುಣವಾಗಿ ರಚಿಸಲಾಗಿದೆ.

ಮೊದಲನೇ ಅಧ್ಯಾಯನದಲ್ಲಿ ಪ್ರಸ್ತಾವನೆ, ಅಧ್ಯಯನ ವಿಷಯದ, ಸಮಸ್ಯೀಕರಣ ಮತ್ತು ಪ್ರಶ್ನೇಗಳು, ಉದ್ದೇಶಗಳು, ವಿಧಾನ, ವ್ಯಾಪ್ತಿ, ಮಿತಿಗಳು ಮತ್ತು ಮಹತ್ವ, ಅಧ್ಯಯನಗಳ ವಿನ್ಯಾಸ. ಈ ಭಾಗದಲ್ಲಿ ಅಧ್ಯಯನ ವಿಷಯವನ್ನು ಏಕೆ ಆಯ್ಕೆ ಮಾಡಿಕೊಂಡಿದ್ದೇನೆ? ಅಧ್ಯಯನವನ್ನು ಹೇಗೆ ಮಾಡಿದ್ದೇನೆ? ಮತ್ತು ಮುಂದಿನ ವರದಿಯ ಭಾಗದಲ್ಲಿ ಏನಿದೆ? ಎನ್ನುವ ವಿಷಯಗಳನ್ನು ಚರ್ಚಿಸುತ್ತಾ, ಈಗಾಗಲೇ ಆಗಿರುವ ಅಧ್ಯಯನಗಳನ್ನು ವಿಮರ್ಶೆಮಾಡಿ, ಪ್ರಶ್ನೆ ಹಾಕಿಕೊಂಡು ವಿಶ್ಲೇಷಿಸಲಾಗಿದೆ.

ಎರಡನೇ ಅಧ್ಯಾಯನದಲ್ಲಿ ಈಗಾಗಲೇ ನೆಡೆದಿರುವ ಅಧ್ಯಯನಗಳನ್ನು ಅಭಿವೃದ್ಧಿ, ರಾಜಕೀಯ, ಸಮುದಾಯಕ್ಕೆ ಸಂಬಂಧಿಸಿದ ಅಧ್ಯಯನಗಳನ್ನು ಸಮೀಕ್ಷೆ ಮಾಡಿ, ಮೂರು ಭಾಗಗಳನ್ನಾಗಿ ವಿಂಗಡಿಸಿ ವಿಶ್ಲೇಷಣೆ ಮಾಡಲಾಗಿದೆ. ಮೂರನೇ ಭಾಗದಲ್ಲಿ ಅಧ್ಯಯನ ಕೈಗೊಂಡ ಕ್ಷೇತ್ರ ಪರಿಚಯ, ಭೌಗೋಳಿಕ ಹಿನ್ನೆಲೆ, ಜಿಲೆಯಲ್ಲಿ ಬರುವ ಧರ್ಮ ಮತ್ತು ಜಾತಿ ಜನಸಂಖ್ಯೆ ಶೇಕಡವಾರು, ಸ್ವತಂತ್ರ ಬಂದು, ಚುನಾವಣೆಗಳು ನಡೆದು ಪ್ರಸ್ತುತವರೆಗೆ ಜಿಲ್ಲೆಯಲ್ಲಿ ಸಮುದಾಯದವರಿಗೆ ಪ್ರಾತಿನಿಧ್ಯೆ ದೊರಕಿದ ವಿವರಗಳು ಮತ್ತು ಅಧ್ಯಯನ ಕೈಗೊಂಡ ತಾಲ್ಲೂಕು ಮತ್ತು ಗ್ರಾಮಗಳ ಪರಿಚಯವನ್ನು ಮಾಡಿಕೊಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಒಂದನೇ ಉದ್ದೇಶಕ್ಕೆ ಪೂರಕವಾಗಿ, ಆನುಷ್ಠಾಂಗಿಕ ಮಾಹಿತಿಯನ್ನು ಬಳಸಿಕೊಂಡು ಅಭಿವೃದ್ಧಿಗೆ ಹಲವು ಆಯಾಮಗಳಿದ್ದು ವಿಷಯಕ್ಕೆ ಅನುಗುಣವಾಗಿ ಬಳಸುತ್ತೇವೆ. ಅಭಿವೃದ್ಧಿ ಮತ್ತು ರಾಜಕೀಯಕ್ಕೆ ನೇರ ಸಂಬಂಧವಿದೆ. ಒಂದು ಇಲ್ಲದಿದ್ದರು ಇನ್ನೊಂದು ಇಲ್ಲ. ಗುರುತಿನ ರಾಜಕೀಯ ಸೈದ್ಧಾಂತಿಕವಾಗಿ ೧೯೮೦ ರಿಂದೀಚೆಗೆ ಬೆಳೆದುಬಂದು, ಹೆಚ್ಚಿನ ಮಹತ್ವ ಪಡೆದಿದೆ. ಗುರುತಿನ ರಾಜಕೀಯವನ್ನು ಬಳಿಸಿಕೊಂಡು ಸಾಮಾಜಿಕ, ಆರ್ಥಿಕ, ರಾಜಕೀಯ ಸಂಘಟನೆಗಳ ಪ್ರಭುತ್ವ, ಭೋವಿ ಸಮುದಾಯಕ್ಕೆ ಎಷ್ಟು ಪ್ರಮಾಣದಲ್ಲಿ ಸಿಕ್ಕಿದೆ, ಕರ್ನಾಟಕ

ರಾಜ್ಯದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದಲೂ ಲೋಕಸಭೆಗೆ ಮೂರುಬಾರಿ, ವಿಧಾನಪರಿಷತ್ತಿಗೆ ಮೂರು ಬಾರಿ, ವಿಧಾನ ಸಭೆಗೆ ೩೪ ಸಾರಿ ಭೋವಿ ಸಮುದಾಯಕ್ಕೆ ಅವಕಾಶದೊರಕಿ, ಪ್ರತಿನಿಧಿತ್ವ ಪಡೆದಿದ್ದ, ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಸ್ತುತ ಹೊಸದುರ್ಗ ಸಾಮಾನ್ಯ ಕ್ಷೇತ್ರದಿಂಥ ಗೂಳಿಹಟ್ಟಿ ಡಿ. ಶೇಖರ್ ಹೊಳಲ್ಕೆರೆ ಪರಿಶಿಷ್ಟಜಾತಿ ಕ್ಷೇತ್ರದಿಂದ ಎಂ. ಚಂದ್ರಪ್ಪ ಅವರು ಆಯ್ಕೆಯಾಗಿದ್ದಾರೆ. ೧೯೧೮-೧೯ ರ ಮಿಲ್ಲರ ಭೋವಿ ಸಮುದಾಯ ೧೯೧೧ ರ ಜನಗಣತಿಯಲ್ಲಿ ಸಾಕ್ಷರತೆ ಪ್ರಮಾಣ ಕಡಿಮೆಹೊಂದಿದೆ ಎಂದು ವಿಶ್ಲೇಷಿಸುತ್ತದೆ. ೧೯೮೮ ಚಿನ್ನಪ್ಪರೆಡ್ಡಿ ವರದಿಯಲ್ಲಿ ಭೋವಿ ಸಮುದಾಯದ ಜನಸಂಖ್ಯೆ ಅಂದಾಜು. ೩,೫೯,೮೦೦ ಇದ್ದು, ಶೇಕಡ ೧.೭ ರಷ್ಟು ಇದರಲ್ಲಿ ಗೆಜೆಟೆಡ್ ನೌಕರರು ಶೇಕಡ ೬ ರಷ್ಟು, ನಾನ್ ಗೆಜೆಟೆಡ್ ನೌಕರರು ೪೯೭, ೪ ನೇ ದರ್ಜೆ ನೌಕರರು ೪೦೦ ಜನ ಇದ್ದಾರೆ. ಒಟ್ಟು ೯೦೩ ಜನ ಭೋವಿ ಸಮುದಾಯದವರು ಸರ್ಕಾರಿ ನೌಕರಿಯಲ್ಲಿದ್ದು, ಜನಸಂಖ್ಯೆಗೆ ಅನುಗುಣವಾಗಿ ೧.೦೯ ರಷ್ಟು ನೌಕರಿ ಪಡೆಯಬೇಕಾಗಿತ್ತು. ವರದಿ ಪ್ರಕಾರ ೦.೬೧ ನೌಕರರು ಇರುವ ವಿಚಾರಗಳನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದರಲ್ಲಿ ಎರಡನೇ ಉದ್ದೇಶಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಆಧಾರಿತವಾಗಿ ಭೋವಿ ಸಮುದಾಯದ ಗುರುತಿನ ರಾಜಕೀಯದ ಸಂಘಟನೆಗಳಿಂದ ಸಾಮಾಜಿಕವಾಗಿ ಶಾಲಾ ಉಸ್ತುವಾರಿ ಅಭಿವೃದ್ಧಿ ಸಮಿತಿ, ನೀರಿನ ಸಮಿತಿ, ಆರೋಗ್ಯ ಸಮಿತಿ, ವಸತಿ ಸಮಿತಿ, ನೈರ್ಮಲ್ಯ ಸಮಿತಿ, ಜಾತಿ ಸಂಘಟನೆ, ಆರ್ಥಿಕವಾಗಿ, ಹಣಕಾಸು ಸಮಿತಿ, ಜಂಟಿ ಮಾರುಕಟ್ಟೆ ಸಮಿತಿ, ಉತ್ಪಾದನ ಸಮಿತಿ, ರಾಜಕೀಯವಾಗಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಸಾಂಸ್ಕೃತಿಕವಾಗಿ ಭಜನಾ ಮಂಡಳಿ, ದೇವಸ್ಥಾನ ಆಡಳಿತ ಮಂಡಳಿ, ಯಕ್ಷಗಾನ ಮಂಡಳಿಯ ಸಂಘಟನೆಗಳಲ್ಲಿ ಭೋವಿ ಸಮುದಾಯದವರು ೧೦ ವರ್ಷಗಳ ಹಿಂದೆ ಮತ್ತು ಪ್ರಸ್ತುತದಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿನಿಧಿತ್ವವನ್ನು ಪಡೆದಿದ್ದಾರೆ ಎನ್ನುವುದು ಗುರುತಿಸಲಾಗಿದೆ.

ಅಧ್ಯಾಯ ಆರರಲ್ಲಿ ಮೂರನೇ ಉದ್ದೇಶಕ್ಕೆ ಪೂರಕವಾಗಿ, ಭೋವಿ ಸಮುದಾಯದ ಅಭಿವೃದ್ಧಿಯನ್ನು ಸಾಮಾಜಿಕವಾಗಿ ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಜಾತಿ ಸ್ಥಾನಮಾನ, ಲಿಂಗ ಸಮಾನತೆ, ಆರ್ಥಿಕವಾಗಿ ಭೋವಿ ಸಮುದಾಯದ ಉದ್ಯೋಗ, ಆದಾಯ, ಭೂ ಹಿಡುವಳಿ, ಆದಾಯದ ಮೂಲ ಚರಾ ಮತ್ತು ಸ್ಥಿರಾ ಆಸ್ಥಿ ವಿವರಗಳನ್ನು ಕ್ಷೇತ್ರ ಕಾರ್ಯ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ, ಭೋವಿ ಸಮುದಾಯದ ಅಭಿವೃದ್ಧಿಯನ್ನು ಮಾಪನ ಮಾಡಲಾಗಿದೆ. ಎಷ್ಟು ಪ್ರಮಾಣದಲ್ಲಿ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದಾರೆ ಎಂದು.

ಅಧ್ಯಾಯ ಏಳರಲ್ಲಿ ಉದ್ದೇಶ ನಾಲ್ಕಕ್ಕೆ ಅನುಗುಣವಾಗಿ, ಅಧ್ಯಾಯ ನಾಲ್ಕು ಮತ್ತು ಐದು ಈ ಎರಡು ಅಧ್ಯಯನಗಳಿಗೆ ಪೂರಕವಾಗಿದೆ. ಆದ್ದರಿಂದ ಕ್ಷೇತ್ರಕಾರ್ಯದ ಮಾಹಿತಿಯನ್ನು

ಬಳಸಿಕೊಂಡು ಭೋವಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಹಾಗೂ ಭೋವಿ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸಂಘಟನೆಗಳಲ್ಲಿ ಸದಸ್ಯ, ಉಪಾಧ್ಯಕ್ಷ, ಅಧ್ಯಕ್ಷರಾಗಿ ಅಭಿವೃದ್ಧಿನೀತಿ ಮತ್ತು ರಾಜಕೀಯ ಪ್ರತಿನಿಧಿತ್ವವನ್ನು ವಿಶ್ಲೇಷಿಸಿ ಕೆಳಕಂಡಂತೆ ಫಲಿತಗಳನ್ನು ಏಂಟನೆ ಅಧ್ಯಾಯದಲ್ಲಿ ವಿಶ್ಲೇಷಿಸಿ ಗುರುತಿಸಲಾಗಿದೆ.

ಅಧ್ಯಯನದ ಫಲಿತಗಳು:

ಅಧ್ಯಯನವನ್ನು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯಂತೆ ಹೊಳಲ್ಕೆರೆ ತಾಲ್ಲೂಕಿನ ಬೋರೆನಹಳ್ಳಿ, ರಾಮೇನಹಳ್ಳಿ, ಕಣಿವಿಜೋಗಿಹಳ್ಳಿ, ಮಾರುತಿಹಳ್ಳಿ ಮೊಳಕಾಲ್ಮೂರು ತಾಲ್ಲೂಕಿನ ಸಿದ್ಧಯ್ಯನಕೋಟೆ, ಜಯಂತಿನಗರ, ಚಿಕ್ಕೇರಹಳ್ಳಿ ಮತ್ತು ನಾಗಸಮುದ್ರ ಗ್ರಾಮಗಳಿಂದ ಭೋವಿ ಸಮುದಾಯದ ತಲಾ ೨೫ ಕುಟುಂಬಗಳಂತೆ ಒಟ್ಟು ೨೦೦ ಕುಟುಂಬಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ಅಧ್ಯಯನದಿಂದ ಬಂದಂತಹ ಫಲಿತಗಳನ್ನು ಕೆಳಕಂಡಂತೆ ಕ್ರೋಢೀಕರಿಸಿದೆ. ಹೊಳಲ್ಕೆರೆ ತಾಲ್ಲೂಕಿನ ೫೭ ಕುಟುಂಬಗಳಲ್ಲಿ ಪುರುಷರು ಮತ್ತು ೩೩ ಮಹಿಳೆಯರು ಹಾಗೂ ಮೊಳಕಾಲ್ಮೂರು ತಾಲ್ಲೂಕಿನ ೮೧ ಕುಟುಂಬಗಳಲ್ಲಿ ಪುರುಷರು ೧೯, ಮಹಿಳೆಯರು ಕ್ಷೇತ್ರಕಾರ್ಯಕ್ಕೆ ಹೋದಾಗ ಮಾಹಿತಿಯನ್ನು ಭೋವಿ ಸಮುದಾಯದವರು ನೀಡಿದ್ದಾರೆ.

ಒಟ್ಟು ಹೊಳಲ್ಕೆರೆ ತಾಲ್ಲೂಕಿನ ೪೪೮, ಮೊಳಕಾಲ್ಮೂರು ತಾಲ್ಲೂಕಿನ ೪೫೪ ಜನ ಈ ಅಧ್ಯಯನಕ್ಕೆ ಒಳಪಟ್ಟಿದ್ದಾರೆ. ೧ ರಿಂದ ೬ ವಯಸ್ಸಿನವರು ಶೇಕಡ ೫.೦೯, ೭ ರಿಂದ ೧೪ ವರ್ಷದವರು ಶೇಕಡ ೧೨.೫೨, ೧೫ ರಿಂದ ೨೧ ವರ್ಷದವರು ಶೇಕಡ ೧೫.೬೩, ೨೨ ರಿಂದ ೪೫ ವರ್ಷದವರು ಶೇಕಡ ೪೯.೧೧, ೪೫ ರಿಂದ ೬೦ ವರ್ಷದವರು ಶೇಕಡ ೧೪.೫೨ ಇದ್ದರೇ, ೬೦ ವರ್ಷದ ಮೇಲ್ಪಟ್ಟವರು ಶೇಕಡ ೩.೧೦ ರಷ್ಟು ಇದ್ದು ಸಮುದಾಯದಲ್ಲಿ ಯುವಕರೆ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಸಮುದಾಯದ ಕುಟುಂಬಗಳಲ್ಲಿ ವಿವಾಹಿತ ಶೇಕಡ ೨೪.೭೨, ವಿವಾಹಿತೆ ಶೇಕಡ ೨೬.೮೨, ಅವಿವಾಹಿತ ಶೇಕಡ ೨೭.೦೫, ಅವಿವಾಹಿತೆಯರು ಶೇಕಡ ೧೬.೨೪ ಇದ್ದು, ಗಂಡನ ಕಳಕೊಂಡ ವಿಧವೆಯರು ಶೇಕಡ ೪.೧೦ ರಷ್ಟು ಇದ್ದಾರೆ.

ಸಾಮಾಜಿಕ ಅಭಿವೃದ್ಧಿ:

* ಭೋವಿ ಸಮುದಾಯದ ಕುಟುಂಬಗಳ ಶಿಕ್ಷಣವನ್ನು ನೋಡಿದಾಗ, ಶೇಕಡಾ ೯೪ ರಷ್ಟು ಕುಟುಂಬಗಳು ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಪಡೆದವರು ಹಾಗೂ ಶಿಕ್ಷಣ ಪಡೆಯದೇ ಓದಲು ಬರೆಯಲು ಬರುವವರೂ ಇದ್ದಾರೆ. ಶೇಕಡ ೫.೫ ರಷ್ಟು ಅನಕ್ಷರಸ್ಥರು ಸಮುದಾಯದಲ್ಲಿ ಇದ್ದಾರೆ.
* ಶೇಕಡ ೧೩.೫ ರಷ್ಟು ಕುಟುಂಬಗಳು ಇಂದಿಗೂ ಸಹ ಭೋವಿ ಸಮುದಾಯದವರು ಗುಡಿಸಲು ಮನೆಗಳಲ್ಲಿ ವಾಸಮಾಡುತ್ತಿರುವುದು ಅಧ್ಯಯನದಲ್ಲಿ ಕಂಡುಬಂದಿದೆ.

* ಶೇಕಡ ೮೮.೫ ರಷ್ಟು ಭೋವಿ ಸಮುದಾಯದ ಕುಟುಂಬಗಳು ಚಿಕ್ಕ ಪುಟ್ಟ ಖಾಯಿಲೆಗಳು ಸರ್ವಸಾಮಾನ್ಯವಾಗಿವೆ ಇವುಗಳಿಗೇನು ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಆದರೆ ಶೇಕಡ ೧೧.೫ ರಷ್ಟು ಕುಟುಂಬಗಳು ಚರ್ಮ ಖಾಯಿಲೆ ಹಾಗೂ ಕರುಳಿನ ಶಸ್ತ್ರ ಚಿಕಿತ್ಸೆ ಮತ್ತು ಮೂಳೆ ಶಸ್ತ್ರ ಚಿಕಿತ್ಸೆಯಿಂದ ಬಳಲುವವರೂ ಇದ್ದಾರೆ.
* ಶೇಕಡ ೬೩ ಕುಟುಂಬಗಳಿಗೆ ಸಂಘ ಸಂಸ್ಥೆಗಳು ಹಾಗೂ ವೈಯಕ್ತಿಕವಾಗಿ ಶೌಚಾಲಯಗಳನ್ನು ಕಟ್ಟಿಕೊಂಡಿದ್ದಾರೆ. ಉಳಿದ ಶೇಕಡ ೩೭ ಕುಟುಂಬಗಳಿಗೆ ಬಯಲೇ ಗತಿ.
* ಶೇಕಡ ೮೮. ಕುಟುಂಬಗಳಿಗೆ ಅತ್ಯಂತ ಗುಣಮಟ್ಟ, ತೃಪ್ತಿಕರವಾದ ನೀರು ಲಭ್ಯವಿದೆ. ಶೇಕಡ ೧೨ ಕುಟುಂಬಗಳಿಗೆ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಶೇಕಡ ೯೭ ಕುಟುಂಬಗಳು ಕೃಷಿಕೂಲಿ, ಕಲ್ಲು ಹೊಡೆಯುವುದು, ಕಟ್ಟಡ ಕಟ್ಟುವ ಇತರೇ ಕೂಲಿ ಕೆಲಸಗಳಿಗೆ ಹೋಗುತ್ತಾರೆ.

ಆರ್ಥಿಕ ಅಭಿವೃದ್ಧಿ:

* ಭೋವಿ ಸಮುದಾಯದಲ್ಲಿ ಶೇಕಡ ೬.೫ ರಷ್ಟು ಕಟುಂಬಗಳಲ್ಲಿ ಮಹಿಳೆಯರೇ ಯಜಮಾನಿಕೆಯನ್ನು ವಹಿಸಿಕೊಂಡಿದ್ದಾರೆ. ಹಾಗೂ ಪುರುಷ ಕೂಲಿಕಾರರು, ಶೇಕಡ ೧೬.೧೮, ಮಹಿಳೆ ಕೂಲಿಕಾರರು ಶೇಕಡ ೧೮.೯೫ ರಷ್ಟು ಇದ್ದು, ಪುರುಷರಿಗಿಂತ ಶೇ. ೨.೭೭ ರಷ್ಟು ಮಹಿಳೆಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಹಾಗೂ ಶೇಕಡ ೭.೦೯ ಗಾರೆ ಕೆಲಸ, ಶೇಕಡ ೩.೫ ರಷ್ಟು ಕಲ್ಲು ಹೊಡೆಯುವವರು ಇದ್ದಾರೆ. ಸಮುದಾಯದಲ್ಲಿ ೯.೮೬ ರಷ್ಟು ನಿರುದ್ಯೋಗ ಯುವಕರು ಸಿಗುತ್ತಾರೆ.
* ೧೦,೦೦೦ ದಿಂದ ೧೨,೦೦೦ ಒಳಗೆ ಆದಾಯ ಇರುವವರು ಶೇ. ೭೧.೫ ರಷ್ಟು ಇದ್ದಾರೆ. ಹಾಗೂ ಉಳಿದ ಶೇಕಡ ೩೮.೫ ರಷ್ಟು ಕುಟುಂಬಗಳು ೧೩,೦೦೦ ದಿಂದ ೨೫,೦೦೦ ಒಳಗೆ ಆದಾಯ ಇರುವವರು ಇದ್ದಾರೆ.
* ಭೋವಿ ಸಮುದಾಯದ ಭೂವಿವರಗಳನ್ನು ಕ್ರೋಢಿಕರಿಸಿದಾಗ, ಶೇಕಡ ೨೮.೫ ರಷ್ಟು ಕುಟುಂಬಗಳಿಗೆ ಭೂಮಿನೇ ಇಲ್ಲ. ಶೇಕಡ ೨೩.೫ ರಷ್ಟು ಕುಟುಂಬಗಳು, ಕುರಿ, ಕೋಳಿ, ಹಸು, ಎಮ್ಮೆ ಹಾಗೂ ಇತರೇ ಸಾಕು ಪ್ರಾಣಿಗಳಿಂದ ಅಲ್ಪ ಸ್ವಲ್ಪ ಆದಾಯವನ್ನು ಗಳಿಸುತ್ತಾರೆ.

ಸಾಮಾಜಿಕ ಸಂಘಟನೆಗಳು: ಭೋವಿ ಸಮುದಾಯದ ಸಾಮಾಜಿಕ ಸಂಘಟನೆಗಳಾದ ಎಸ್.ಡಿ.ಎಂ.ಸಿ ಬಗ್ಗೆ ಶೇಕಡ ೪೭.೫ ಕುಟುಂಬಗಳಿಗೆ ಮಾಹಿತಿಯ ಕೊರತೆಯಿದೆ. ಹಾಗೂ ಶೇಕಡ ೧೩.೫ ರಷ್ಟು ಕುಟುಂಬಗಳು ೧೦ ವರ್ಷಗಳ ಹಿಂದೆ ಮತ್ತು ಪ್ರಸ್ತುತದಲ್ಲಿ ಸದಸ್ಯರಾಗಿ, ನೀರಿನ ಸಮಿತಿಯಲ್ಲಿ ಸ್ಥಾನಮಾನ ಪಡೆದಿದ್ದಾರೆ. ಆರೋಗ್ಯ ಸಮಿತಿಯಲ್ಲಿ ಪ್ರಸ್ತತದಲ್ಲಿ ಶೇಕಡ ೧, ವಸತಿ ಸಮಿತಿಯಲ್ಲಿ ೧೦ ವರ್ಷಗಳ ಹಿಂದೆ/ಹಾಲಿ ಶೇಕಡ ೪, ನೈರ್ಮಲ್ಯ ಸಮಿತಿಯಲ್ಲಿ ಹಿಂದೆ/ಹಾಲಿ ಶೇಕಡ ೨೫ ರಷ್ಟು, ಜಾತಿ ಸಂಘಟನೆಗಳಲ್ಲಿ ಹಿಂದೆ ಶೇಕಡ ೧೫, ಪ್ರಸ್ತುತ ಶೇಕಡ ೪.೫ ಸದಸ್ಯರಾಗಿ ಸ್ಥಾನಮಾನ ಪಡೆದಿರುವುದನ್ನು ಗುರುತಿಸಲಾಗಿದೆ

ಆರ್ಥಿಕ ಸಂಘಟನೆಗಳು: ಭೋವಿ ಸಮುದಾಯದ ಕುಟುಂಬಗಳು ಜಂಟಿ ಅರಣ್ಯ ಸಮಿತಿಯಲ್ಲಿ ಹಿಂದೆ/ಹಾಲಿ ಶೇಕಡ ೧೬, ಉತ್ಪಾದನ ಸಮಿತಿಯಲ್ಲಿ ಹಿಂದೆ/ಹಾಲಿ ಶೇಕಡ ೨೫.೫, ಮಾರುಕಟ್ಟೆ ಸಮಿತಿಯಲ್ಲಿ ಹಿಂದೆ ಶೇಕಡ ೬, ಸ್ವಸಹಾಯ ಸಂಘ ಸಂಸ್ಥೆಗಳಲ್ಲಿ ಹಿಂದೆ ಶೇಕಡ ೧೫.೫, ಪ್ರಸ್ತುತದಲ್ಲಿ ಶೇಕಡ ೨೧.೫ ರಷ್ಟು ಸದಸ್ಯ ಪದಾಧಿಕಾರಿಗಳಾಗಿದ್ದಾರೆ.

ಎಂ.ಎಲ್.ಎ/ಎಂ.ಪಿ: ಸಮುದಾಯದಲ್ಲಿ ಎಂ.ಎಲ್.ಎ ಮತ್ತು ಎಂ.ಪಿಗಳಾಗಿ ಇದ್ದವರು ಕ್ಷೇತ್ರಕಾರ್ಯಕ್ಕೆ ತೊಡಗಿದ ಗ್ರಾಮಗಳಲ್ಲಿ ಯಾರು ಕಂಡುಬಂದಿಲ್ಲ. ಇದುವರೆಗೂ ನಡೆದ ಅಧ್ಯಯನಗಳನ್ನು ಅನುಷ್ಠಾಂಗಿಕ ಮಾಹಿತಿಗಳಿಂದ ನೋಡಿದಾಗ, ಭೋವಿ ಸಮುದಾಯದವರು ಕರ್ನಾಟಕದಾದ್ಯಂತ ಇಲ್ಲಿಯವರೆಗೂ ಮೂರು ಬಾರಿ ವಿಧಾನ ಪರಿಷತ್ತಿಗೆ ಹಾಗೂ ೩೪ ಬಾರಿ ವಿಧಾನ ಸಭೆಗೆ ಆಯ್ಕೆಯಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಒಟ್ಟು ೪೦ ಪ್ರತಿನಿಧಿಗಳು ಹಿಂದೆ/ಹಾಲಿ ಇದ್ದಾರೆ. ಪ್ರಸ್ತುತದಲ್ಲಿ ೭ ಜನ ಸಮುದಾಯದಲ್ಲಿ ಸ್ಥಾನಮಾನ ಹೊಂದಿರುವವರು ಇದ್ದಾರೆ. ಹಾಗೂ ಅಧ್ಯಯನ ಕೈಗೊಂಡ ಜಿಲ್ಲೆಯಲ್ಲಿ ೨ ಜನ ಆಯ್ಕೆಯಾದ ಜನ ಪ್ರತಿನಿಧಿಗಳು ಇದ್ದಾರೆ.

ಸ್ಥಳಿಯ ಸಂಸ್ಥೆಗಳು: ಭೋವಿ ಸಮುದಾಯದಲ್ಲಿ ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾದ ಸದಸ್ಯರು, ಉಪಾಧ್ಯಕ್ಷರು ಹಾಗೂ ಅಧ್ಯಕ್ಷರಾಗಿ ಒಬ್ಬರು ಸಹ ಪ್ರತಿನಿಧಿತ್ವ ಪಡೆದವರು ಪ್ರಾಥಮಿಕ ಮಾಹಿತಿಯಿಂದ ತಿಳಿದುಬಂದಿಲ್ಲ. ತಾಲ್ಲೂಕು ಪಂಚಾಯಿತಿಗೆ ಹಿಂದೆ ಅಧ್ಯಕ್ಷರಾಗಿ, ಶೇಕಡ ೧, ಸದಸ್ಯರಾಗಿ ಶೇಕಡ ೨, ಮತ್ತು ಪ್ರಸ್ತುತದಲ್ಲಿ ಶೇಕಡ ೦.೫, ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ, ಹಿಂದೆ ಶೇಕಡ ೪, ಹಾಲಿ ಶೇಕಡ ೧, ಉಪಾಧ್ಯಕ್ಷರಾಗಿ, ಹಿಂದೆ ಶೇಕಡ ೨, ಹಾಲಿ ಶೇಕಡ ೨, ಸದಸ್ಯರಾಗಿ, ಹಿಂದೆ ೧೦.೫ ರಷ್ಟು, ಹಾಲಿ ಶೇಕಡ ೩ ರಷ್ಟು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ.

ಭೋವಿ ಸಮುದಾಯದವರು ಪ್ರಸ್ತುತ ದಿನಗಳಲ್ಲಿ ಶೇಕಡ ೮೫.೫ ರಷ್ಟು ಕುಟುಂಬಗಳು ಭಾ.ಜ.ಪ ಪಕ್ಷವನ್ನು ಶೇಕಡ ೧೩.೫ ರಷ್ಟು, ಕಾಂಗ್ರೇಸ್ ಪಕ್ಷವನ್ನು ಬೆಂಬಲಿಸುತ್ತಾರೆ. ೧೦–೧೫ ವರ್ಷಗಳ ಹಿಂದೆ ಈ ಫಲಿತಾಂಶ ವಿರುದ್ಧ ದಿಕ್ಕಿನಲ್ಲಿ ಇರುತ್ತದೆ. ಹಾಗೂ ಶೇಕಡ ೪೩.೫ ರಷ್ಟು ಮಹಿಳೆ ಮತ್ತು ಪುರುಷರು ಇಬ್ಬರು ಸಹ ಸ್ಥಳೀಯ ಸಂಸ್ಥೆಗಳಿಂದ ಹಿಡಿದು ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ತಮ್ಮ ಅಭ್ಯರ್ಥಿಗಳ ಪರವಾಗಿ ಪ್ರಚಾರದಲ್ಲಿ ಭಾಗವಹಿಸುತ್ತಾರೆ.

ಮುಂದೆ ಬರಲಿರುವ ಸ್ಥಳಿಯ ಸಂಸ್ಥೆಗಳ ಚುನಾವಣೆಗಳಲ್ಲಿ ಅವಕಾಶ ಸಿಕ್ಕರೆ ಗ್ರಾಮ ಪಂಚಾಯಿತಿಗೆ ಶೇಕಡ ೩೭.೫ ರಷ್ಟು, ತಾಲ್ಲೂಕು ಪಂಚಾಯಿತಿಗೆ ಶೇಕಡ ೧೦ ರಷ್ಟು, ಜಿಲ್ಲಾ ಪಂಚಾಯಿತಿಗೆ ಶೇಕಡ ೫ ರಷ್ಟು ಕುಟುಂಬಗಳು ಸ್ಪರ್ಧೆಮಾಡುವ ಇಂಗಿತವನ್ನು ವ್ಯಕ್ತಪಡಿಸುತ್ತಾರೆ. ಭಾ.ಜ.ಪ ಪಕ್ಷದಿಂದ ಶೇಕಡ ೪೪.೫ ರಷ್ಟು, ಕಾಂಗ್ರೇಸ್ ಪಕ್ಷದಿಂದ ಶೇಕಡ ೭ ರಷ್ಟು ಹಾಗೂ

ಇತರೆ ಪಕ್ಷಗಳಿಂದ ಶೇಕಡ ೧ ರಷ್ಟು ಸೇರಿ, ಒಟ್ಟು ಶೇಕಡ ೫೨.೫ ರಷ್ಟು ಕುಟುಂಬಗಳ ಮಾಹಿತಿಯನ್ನು ಕ್ರೋಢಿಕರಿಸಿ ವಿಶ್ಲೇಷಿಸಿದಾಗ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಾಂಸ್ಕೃತಿಕ ಸಂಘಟನೆಗಳು: ಭೋವಿ ಸಮುದಾಯದ ಗುರುತನ್ನು ಪಡೆದುಕೊಳ್ಳಲು ಸಾಂಸ್ಕೃತಿಕ ಸಂಘಟನೆಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಭಜನಾ ಮಂಡಳಿಯಲ್ಲಿ ಅಧ್ಯಕ್ಷರಾಗಿ ಹಿಂದೆ ಶೇಕಡ ೨ ರಷ್ಟು, ಸದಸ್ಯರಾಗಿ ಶೇಕಡ ೧೭, ಪ್ರಸ್ತುತದಲ್ಲಿ ಶೇಕಡ ೨.೫ ರಷ್ಟು ಇದ್ದಾರೆ. ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಕಂಡು ಬಂದಿಲ್ಲ. ದೇವಸ್ಥಾನ ಆಡಳಿತ ಸಮಿತಿಯಲ್ಲಿ ಅಧ್ಯಕ್ಷರಾಗಿ ಹಿಂದೆ ಶೇಕಡ ೨, ಹಾಲಿ ಶೇಕಡ ೦.೫ ರಷ್ಟು ಉಪಾಧ್ಯಕ್ಷರಾಗಿ ಹಿಂದೆ ಶೇಕಡ ೦.೫ ರಷ್ಟು, ಸದಸ್ಯರಾಗಿ ಹಿಂದೆ ಶೇಕಡ ೨೧.೫, ಹಾಲಿ ಶೇಕಡ ೨೪ ರಷ್ಟು, ಸಾಂಸ್ಕೃತಿಕ ಸಂಘಟನೆಗಳಲ್ಲಿ ಗುರುತಿಸಿಕೊಂಡು ಧಾರ್ಮಿಕ ಕ್ಷೇತ್ರಗಳಲ್ಲಿ ಸ್ವಲ್ಪ ಪ್ರಮಣದಲ್ಲಿ ಪ್ರಾತಿನಿಧ್ಯ ಹೊಂದಿದ್ದಾರೆ.

ಭೋವಿ ಸಮುದಾಯದ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯದ ಅಧ್ಯಯನವನ್ನು ನಡೆಸಿದಾಗ ಕೆಲವು ಸಮಸ್ಯೆಗಳನ್ನು ಸಮುದಾಯದವರು ಎದುರಿಸುತ್ತಿರುವುದನ್ನು ಗುರುತಿಸಲಾಗಿದೆ. ಅಂತಹ ಸಮಸ್ಯೆಗಳ ಪರಿಹಾರಕ್ಕೆ ಕೆಳಗಿನ ಸೂಕ್ತವಾದ ಕೆಲವು ತೀರ್ಮಾನಗಳನ್ನು ಅಧ್ಯಯನದಿಂದ ನೀಡಲಾಗಿದೆ. ಸಂಘಸಂಸ್ಥೆಗಳು ಹಾಗೂ ಸರಕಾರಗಳು ಈ ಕುರಿತು ಗಂಭೀರವಾಗಿ ಚಿಂತಿಸಿ ಅವಶ್ಯಕತೆಗಳನ್ನು ಪೂರೈಸಲು ಶ್ರಮಿಸಬೇಕು.

* ಭೋವಿ ಸಮುದಾಯದವರು ತಮ್ಮ ವೃತ್ತಿಗಳನ್ನು ಮುಂದುವರಿಸಿಕೊಂಡು ಬಂದು ತಮ್ಮ ಮಕ್ಕಳನ್ನು ಸಹ ತಮ್ಮಂತೆಯೆ, ಗಾರೆ ಕೆಲಸ, ಕಲ್ಲು ಹೊಡೆಯುವುದು ಮತ್ತು ಇತರೆ ಕೂಲಿ ಕೆಲಸಗಳಿಗೆ ಕರೆದುಕೊಂಡು ವಲಸೆ ಹೋಗುತ್ತಾರೆ. ಇವರನ್ನು ಗುರುತಿಸಿ ಶಿಕ್ಷಣ ಕೊಡಿಸಬೇಕಾಗಿದೆ.
* ಭೋವಿ ಸಮುದಾಯದಲ್ಲಿ ಇಂದಿಗೂ ಸಹ ಶೇಕಡ ೧೩.೫ ರಷ್ಟು ಕುಟುಂಬಗಳು ಗುಡಿಸಲು ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಸಂಘ ಸಂಸ್ಥೆಗಳು ಸರಕಾರದ ನಿವೇಶನ, ಆಶ್ರಯ ಮನೆಗಳು ಮತ್ತು ಭೋವಿ ಅಭಿವೃದ್ಧಿ ನಿಗಮದಿಂದ ಅವರಿಗೆ ಮೂಲಭೂತವಾಗಿ ದೊರೆಯಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗಿದೆ.
* ಶೇಕಡ ೯.೮೬ ರಷ್ಟು ಕುಟುಂಬಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಶಿಕ್ಷಣ ಪಡೆದು ನಿರುದ್ಯೋಗಿಗಳಾಗಿದ್ದಾರೆ. ಮುಖ್ಯ ಮಂತ್ರಿಗಳ ಉದ್ಯೋಗ ಸೃಜನ ಕಾರ್ಯಕ್ರಮ(ಸಿ.ಎಂ.ಇ.ಜಿ.ಪಿ) ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಕಾರ್ಯಕ್ರಮ, ಡಿಐಸಿ, ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮದಿಂದ ಸಬ್ಸಿಡಿ ರೂಪದಲ್ಲಿ ಸಾಲ ಸೌಲಭ್ಯಗಳು ತಲುಪುವಂತೆ ಸಂಘ ಸಂಸ್ಥೆಗಳು ಮತ್ತು ಸರಕಾರ ನೋಡಿಕೊಳ್ಳಬೇಕಿದೆ.

* ಭೋವಿ ಸಮುದಾಯದ ಮಕ್ಕಳು ಹೊಳಲ್ಕೆರೆ ತಾಲ್ಲೂಕಿನ ಕಣವಿಜೋಗಿಹಳ್ಳಿಯಲ್ಲಿ ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಿದ್ದಾರೆ. ಇವರಿಗೆ ಆರೋಗ್ಯದ ಕಡೆ ಗಮನ ಹರಿಸಬೇಕಿದೆ.
* ಗ್ರಾಮ ಪಂಚಾಯಿತಿಗಳಿಗೆ ಸ್ವಲ್ಪ ಪ್ರಮಾಣದಲ್ಲಿ ರಾಜಕೀಯ ಪ್ರತಿನಿಧ್ಯ ದೊರಕಿದೆ. ಆದರೆ ಜಿಲ್ಲಾ ಪಂಚಾಯಿತಿಗೆ ಜಿಲ್ಲೆಯಲ್ಲಿ ಹೆಚ್ಚಿನ ರಾಜಕೀಯ ಪ್ರತಿನಿಧ್ಯ ನೀಡುವುದು.
* ಭೋವಿ ಸಮುದಾಯದಲ್ಲಿ ಒಣ ಭೂಮಿಯನ್ನು ಒಂದರಿಂದ ನಾಲ್ಕು ಎಕರೆ ಇರುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಶೇಕಡ ೨೮.೫ ಕುಟುಂಬಗಳಿಗೆ ಭೂಮಿನೆ ಇಲ್ಲ ಇವರಿಗೆ ಭೂಮಿಯನ್ನು ಹಂಚಿಕೆ ಮಾಡಬೇಕಿದೆ.
* ಭೋವಿ ಅಭಿವೃದ್ಧಿ ನಿಗಮ ಮತ್ತು ಕಟ್ಟಡ ಕಾರ್ಮಿಕರ ಇಲಾಖೆಯಿಂದ ತಮ್ಮ ವೃತ್ತಿಗಳಿಗೆ ಬೇಕಾದ ಆಧುನಿಕ ಸಲಕರಣೆಗಳು ಯಂತ್ರೋಪಕರಣಗಳನ್ನು ಖರೀದಿಸಲು, ಇಲಾಖೆ ಧನ ಸಹಾಯ ಕೊಡುವ ವ್ಯವಸ್ಥೆ ಸಮುದಾಯದವರಿಗೆ ಮಾಹಿತಿ ಇಲ್ಲ. ಇವರಿಗೆ ಉಚಿತವಾದ ಮಾಹಿತಿಯನ್ನು ಕೊಟ್ಟು ಮೇಲಿನ ಇಲಾಖೆಗಳ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ.

ಭೋವಿ ಸಮುದಾಯದ ಬೆಡಗುಗಳು, ಸಂಸ್ಕೃತಿ, ಪರಂಪರೆ, ಕುಲಕಸುಬುಗಳು, ಸಾಮಾಜಿಕತೆಗೆ ಸಂಬಂಧಿಸಿದ ಅಧ್ಯಯನಗಳು ನಡೆದಿವೆ. ಮುಂದಿನ ದಿನಗಳಲ್ಲಿ ಸಂಘ ಸಂಸ್ಥೆಗಳು ಸಮುದಾಯದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಂಘಟನೆಗಳಲ್ಲಿ ಮತ್ತು ಭೋವಿ ಅಭಿವೃದ್ಧಿ ನಿಗಮದ ಕಾರ್ಯ ಯೋಜನೆಗಳು ಶೈಕ್ಷಣಿಕ ಸಮಸ್ಯೆಗಳ ದೃಷ್ಟಿಕೋನದಲ್ಲಿ ಭೋವಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಕೋಲಾರ ಮತ್ತು ಶಹಬಾದ್‌ನಲ್ಲಿ ಅಧ್ಯಯನ ಮಾಡಬಹುದಾಗಿದೆ. ಈ ರೀತಿಯಲ್ಲಿ ಅಧ್ಯಯನ ತೊಡಗುವವರಿಗೆ ಪ್ರಸ್ತುತ ಮಹಾಪ್ರಬಂಧ, ಮಾರ್ಗಸೂಚಿಯಾಗಬಹುದು. ಒಟ್ಟಿನಲ್ಲಿ ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ ಭೋವಿ ಸಮುದಾಯದ ಗುರುತಿನ ರಾಜಕೀಯದ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧ ಭೋವಿ ಸಮುದಾಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ, ರಾಜಕೀಯಕ್ಕೆ ಸಂಬಂಧಿಸಿದಂತೆ, ಸಾಮಾಜಿಕ ಮತ್ತು ಆರ್ಥಿಕ ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಎಂ.ಎಲ್.ಎ. ಮತ್ತು ಎಂ.ಪಿ ಹಾಗೂ ಸ್ಥಳಿಯ ಸಂಸ್ಥೆಗಳಲ್ಲಿ ಭೋವಿ ಸಮುದಾಯದವರ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ವಿವಿಧ ಅಂಶಗಳನ್ನು ಕುರಿತು, ಮಾಹಿತಿ ಒದಗಿಸಿಕೊಡಬಲ್ಲ ಒಂದು ಪ್ರಯತ್ನವಾಗಿದೆ. ಮುಂದಿನ ದಿನಗಳಲ್ಲಿ ಅಧ್ಯಯನ ಮಾಡುವ ಅಧ್ಯಯನಕಾರರು ಮೇಲಿನ ಪರಿಭಾಷೆಗಳನ್ನು ಇಟ್ಟುಕೊಂಡು ನನ್ನ ಗಮನಕ್ಕೆ ಬರದೇ ಇರುವ ಮಾಹಿತಿಯನ್ನೆ ಸಂಗ್ರಹಿಸಿ ಕ್ರೋಢೀಕರಿಸಿ ವಿಶ್ಲೇಷಣೆ ಮಾಡಬಹುದು.

ಅಭಿವೃದ್ಧಿ ಮತ್ತು ಗುರುತಿನ ರಾಜಕೀಯ – ಭೋವಿ ಸಮುದಾಯದ ಗುರುತಿನ

ರಾಜಕೀಯದ ಅಧ್ಯಯನ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಿಎಚ್,ಡಿ ಸಂಶೋಧನಾ ಕ್ಷೇತ್ರ ಕಾರ್ಯಕ್ಕಾಗಿ ಸಿದ್ಧಪಡಿಸಿದ ಪ್ರಶ್ನಾವಳಿ

ಎ. ಸಾಮಾನ್ಯ ಮಾಹಿತಿ

೧. ಮಾಹಿತಿದಾರರ ಹೆಸರು ....

೨. ಗ್ರಾಮ/ಪಟ್ಟಣ .... .ಪಂಚಾಯತ್......... ತಾಲ್ಲೂಕು .... ಜಿಲ್ಲೆ.................

೩. ಜಾತಿ.................... ಮಾತೃಭಾಷೆ..................... ಮಾತನಾಡುವ ಇತರೆ ಭಾಷೆಗಳು..............

ಕ್ರ ಸಂ	ಸದಸ್ಯರ ಹೆಸರು	ಮುಖ್ಯಸ್ಥ ನೊಂದಿಗೆ ಸಂಬಂಧ	ಲಿಂಗ ಗಂಡು–೧ ಹೆಣ್ಣು–೨	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಉದ್ಯೋಗ	ವಾರ್ಷಿಕ ಆದಾಯ
೧								
೨								

ಬಿ. ವೈಯಕ್ತಿಕ ಮಾಹಿತಿ

ಭಾಗ–೧

ಅ. ಸಾಮಾಜಿಕ ಸಂಘಟನೆಗಳಲ್ಲಿ (ಸದಸ್ಯರು, ಪದಾಧಿಕಾರಿಗಳು, ಪಾಲುಗೊಳ್ಳುವಿಕೆ, ಅರಿವು, ಬಳಕೆ, ರಾಜಕೀಯ ಪ್ರಕ್ರಿಯೆ.)

1. ಎಸ್.ಡಿ.ಎಮ್ ಸಿ ಯ ಬಗ್ಗೆ ನಿಮಗೆ ಮಾಹಿತಿ ಇದೆಯೇ? ಹೌದು/ಇಲ್ಲ
2. ಹೌದಾದರೆ ಅದರ ಜವಾಬ್ದಾರಿ ಏನು?
3. ಎಸ್ ಡಿ.ಎಂ.ಸಿ ಯಲ್ಲಿ ನಿಮ್ಮ ಸಮುದಾಯದವರು ಯಾರದಾರು ಕಾರ್ಯನಿರ್ವಹಿಸುತ್ತಿದ್ದಾರೆಯೇ? ಹೌದು/ಇಲ್ಲ
4. ನಿಮ್ಮ ಕುಟುಂಬದ ಸದಸ್ಯರು ಹಿಂದೆ ಅಥವಾ ಈಗ ಈ ಕೆಳಗಿನವುಗಳಲ್ಲಿ (ಅಆಇಈ) ಯಾವುದಾದರು ಹುದ್ದೆ ಹೊಂದಿದ್ದಾರಾ?

ಕ್ರಸಂ	ಪದಾಧಿಕಾರಿ	ಇಲ್ಲ	ಹಿಂದೆ	ಹಾಲಿ
ಅ.	ನಾಮ ನಿರ್ದೇಶಿತ ಸದಸ್ಯರು			
ಆ.	ಸ್ಥಳೀಯ ಶಿಕ್ಷಣಾಸಕ್ತ ಯುವಕ/ಯುವತಿ/ ಸ್ವಸಹಾಯ ಸಂಘದ ಪ್ರತಿನಿಧಿ			
ಇ.	ನಾಗರಿಕ ಸೌಕರ್ಯ ಸಮಿತಿಯ ಸದಸ್ಯರು			
ಈ.	ಇತರೆ			

5. ನಿಮ್ಮ ಕುಟುಂಬದ ಸದಸ್ಯರು ಹಿಂದೆ ಅಥವಾ ಈಗ ಈ ಕೆಳಕಂಡ ಸಂಸ್ಥೆಗಳಲ್ಲಿ ಪ್ರಾತಿನಿಧ್ಯವನ್ನು ಹೊಂದಿದ್ದಾರಾ?

ಕ್ರಸಂ	ಸಂಸ್ಥೆ	ಸದಸ್ಯರು		ಅಧ್ಯಕ್ಷರು		ಉಪಾಧ್ಯಕ್ಷರು	
		ಹಿಂದೆ	ಹಾಲಿ	ಹಿಂದೆ	ಹಾಲಿ	ಹಿಂದೆ	ಹಾಲಿ
ಅ.	ನೀರಿನ ಸಮಿತಿ						
ಆ.	ಆರೋಗ್ಯ ಸಮಿತಿ						
ಇ.	ವಸತಿ ಸಮಿತಿ						
ಈ.	ನೈರ್ಮಲ್ಯ ಸಮಿತಿ						
ಉ.	ಜಾತಿ ಸಂಘಟನೆ						
ಊ.	ಇತರೆ						

ಆ. ಆರ್ಥಿಕ ಸಂಘಟನೆಗಳಲ್ಲಿ (ಸದಸ್ಯರು, ಪದಾಧಿಕಾರಿಗಳು, ಪಾಲುಗೊಳ್ಳುವಿಕೆ, ಅರಿವು, ಬಳಕೆ, ರಾಜಕೀಯ ಪ್ರಕ್ರಿಯೆ)

6. ನಿಮ್ಮ ಸಮುದಾಯದ ಆರ್ಥಿಕತೆಯನ್ನು ವೃದ್ಧಿಸುವಂತಹ ಸಂಘಟನೆಗಳು ಯಾವುದಾದರು ಇದ್ದಾವೆಯೇ? ಹೌದು/ಇಲ್ಲ

7. ಹೌದಾದರೆ ಯಾವುವು?

8. ಈ ಕೆಳಕಂಡ ಸಂಘಟನೆಗಳ ಬಗ್ಗೆ ನಿಮಗೆ ಮಾಹಿತಿ ಇದೆಯೇ? ಹೌದು/ಇಲ್ಲ

ಅ. ಜಂಟಿ ಅರಣ್ಯ ಸಮಿತಿ ಆ. ಉತ್ಪಾದನಾ ಸಮಿತಿ ಇ. ಸ್ವ ಸಹಾಯ ಸಂಘ

ಈ. ಮಾರುಕಟ್ಟೆ ಸಮಿತಿ ಉ. ಇತರೆ

9. ಹೌದಾದರೆ ಅದರಲ್ಲಿ ನಿಮ್ಮ ಕುಟುಂಬದ ಸ್ಥಾನಮಾನ ಏನು?

ಕ್ರ ಸಂ	ಸಂಸ್ಥೆ	ಸದಸ್ಯರು		ಅಧ್ಯಕ್ಷರು		ಉಪಾಧ್ಯಕ್ಷರು		ಕಾರ್ಯದರ್ಶಿ	
		ಹಿಂದೆ	ಹಾಲಿ	ಹಿಂದೆ	ಹಾಲಿ	ಹಿಂದೆ	ಹಾಲಿ	ಹಿಂದೆ	ಹಾಲಿ
ಅ.	ಜಂಟಿ ಅರಣ್ಯ ಸಮಿತಿ								
ಆ.	ಉತ್ಪಾದನಾ ಸಮಿತಿ								
ಇ.	ಸ್ವ ಸಹಾಯ ಸಂಘ								
ಈ.	ಮಾರುಕಟ್ಟೆ ಸಮಿತಿ								
ಉ.	ಇತರೆ								

10. ಮೇಲಿನ ಯಾವ ಸಂಘಟನೆ ಮೇಲೆ ನಿಮಗೆ ಹೆಚ್ಚಿನ ಆಸಕ್ತಿ ಇದೆ?

11. ಏಕೆ ಆ ಸಂಘಟನೆ ಮೇಲೆ ಆಸಕ್ತಿ?

12. ಸಂಘಟನೆಗಳ ಬಗ್ಗೆ ಎಲ್ಲಿಂದ ಮಾಹಿತಿಯನ್ನು ಪಡೆಯುತ್ತೀರಿ?

13. ಆ ಸಂಘಟನೆಗಳಿಂದ ನಿಮಗೇನು ಲಾಭ?

14. ಆ ಸಂಘಟನೆಯ ಮಾಹಿತಿಯನ್ನು ಯಾವ ರೀತಿ ಬಳಕೆ ಮಾಡಿಕೊಳ್ಳುತ್ತಿರಾ?

15. ನಿಮ್ಮ ಸಂಘಟನೆಗೆ ರಾಜಕೀಯ ನಾಯಕರೊಂದಿಗೆ ಸಂಪರ್ಕ ಹೇಗಿದೆ?

16. ಅವರಿಂದ ನಿಮ್ಮ ಸಮುದಾಯಕ್ಕೆ ಯಾವುದಾದರು ಸೌಲಭ್ಯ ಸಿಕ್ಕಿದೆಯೇ? ಹೌದು/ಇಲ್ಲ

17. ಹೌದಾದರೆ ಯಾವ ಸೌಲಭ್ಯ?

ಇ. ರಾಜಕೀಯ ಸಂಘಟನೆಗಳಲ್ಲಿ (ಸದಸ್ಯರು, ಪದಾಧಿಕಾರಿಗಳು, ಪಾಲುಗೊಳ್ಳುವಿಕೆ, ಅರಿವು, ಬಳಕೆ, ರಾಜಕೀಯ ಪ್ರಕ್ರಿಯೆ)

18. ಸಾಮಾನ್ಯವಾಗಿ ನಿಮ್ಮ ಕುಟುಂಬದ ಸದಸ್ಯರು ಯಾವ ಪಕ್ಷವನ್ನು ಬೆಂಬಲಿಸುತ್ತಾರೆ?

19. ಏಕೆ ಆ ಪಕ್ಷವನ್ನು ಬೆಂಬಲಿಸುತ್ತೀರಿ? ಅದು ಕೆಲಸ ಮಾಡುತ್ತದೆ/ ಸಾಂಪ್ರದಾಯಿಕವಾಗಿ/ ಜಾತಿಹಿನ್ನೆಲೆ/ ಹಣದ ಪ್ರಭಾವ

20. ಯಾವ ಪಕ್ಷ ಅಧಿಕಾರಕ್ಕೆ ಬಂದರೆ ಒಳಿತಾಗಬಹುದು? ಕಾಂಗ್ರೆಸ್/ ಬಿ.ಜೆ.ಪಿ/ ಜೆಡಿಎಸ್/ ಇತರೆ/ ಯಾರು ಮಾಡಲ್ಲ?

21. ಕುಟುಂಬದ ಸದಸ್ಯರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತೀರಾ? ಹೌದು/ಇಲ್ಲ

22. ಹೌದಾದರೆ ಯಾರು (ಚುನಾವಣಾ ಪ್ರಚಾರದಲ್ಲಿ) ಭಾಗವಹಿಸುತ್ತಾರೆ? ಗಂಡು/ ಹೆಣ್ಣು/ ಇಬ್ಬರು

23. ಕುಟುಂಬದ ಮತದಾರರು ಎಲ್ಲಾ ಚುನಾವಣೆಗಳಲ್ಲಿ ಮತದಾನ ಮಾಡುತ್ತೀರಿ? ವಿಧಾನಸಭೆ/ ಲೋಕಸಭೆ/ಗ್ರಾಮೀಣ ಸ್ಥಳೀಯಸಂಸ್ಥೆಗಳು/ಎಲ್ಲವೂ

24. ಈಗ ಯಾರು ಚುನಾಯಿತರಾಗಿದ್ದಾರೆ? ಗೊತ್ತಿದೆ/ಗೊತ್ತಿಲ್ಲ
ಅಧ್ಯಕ್ಷರ ಹೆಸರು ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಯ ಸದಸ್ಯರ ಹೆಸರು ..

25. ನಿಮ್ಮ ರಾಜಕೀಯ ನಾಯಕನ ಸಂಪರ್ಕ ಇದೆಯಾ? ಇದೆ/ಇಲ್ಲ

26. ನಿಮ್ಮ ರಾಜಕೀಯ ಪ್ರತಿನಿಧಿ ವಾರ್ಡ್ / ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆಯೇ? ಹೌದು/ ಇಲ್ಲ

27. ಹೌದಾದರೆ ಯಾವ ಸಮಯದಲ್ಲಿ ಭೇಟಿ ನೀಡುತ್ತಾರೆ? ದಿನ/ ವಾರ/ ತಿಂಗಳ/ ವರ್ಷಕ್ಕೆ ೨ಬಾರಿ

28. ಈ ಪ್ರತಿನಿಧಿ ಗೆದ್ದ ನಂತರ ನಿಮ್ಮ ವಾರ್ಡ್‌ನಲ್ಲಿ ಮಾಡಿದ ಮುಖ್ಯ ಕೆಲಸಗಳಾವುವು?

29. ನಿಮ್ಮ ಕುಟುಂಬದ ಸದಸ್ಯರು ಹಿಂದೆ ಅಥವಾ ಈಗ ಈ ಕೆಳಗಿನವುಗಳಲ್ಲಿ ಯಾವುದಾದರು ಹುದ್ದೆ ಹೊಂದಿದ್ದಾರಾ? ಹೌದು/ಇಲ್ಲ

ಕ್ರ ಸಂ	ಸಂಸ್ಥೆ	ಸದಸ್ಯರು		ಅಧ್ಯಕ್ಷರು		ಉಪಾಧ್ಯಕ್ಷರು		ಇತರೆ	
		ಹಿಂದೆ	ಹಾಲಿ	ಹಿಂದೆ	ಹಾಲಿ	ಹಿಂದೆ	ಹಾಲಿ	ಹಿಂದೆ	ಹಾಲಿ
ಅ.	ಗ್ರಾಮ ಪಂಚಾಯಿತಿ								
ಆ.	ತಾಲ್ಲೂಕು ಪಂಚಾಯಿತಿ								
ಇ.	ಜಿಲ್ಲಾ ಪಂಚಾಯಿತಿ								
ಈ.	ಇತರೆ								

30. ನಿಮ್ಮ ಮನೆಯಲ್ಲಿರುವ ಒಟ್ಟು ಮತದಾರರು..

31. ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸದವರು ನಿಮ್ಮ ಮನೆಯಲ್ಲಿದ್ದಾರೆಯೇ? ಹೌದು/ಇಲ್ಲ

32. ಹೌದಾದರೆ, ಎಷ್ಟು ಜನ....................................

33. ಎಷ್ಟು ವರ್ಷಗಳಿಂದ ಈ ಹಳ್ಳಿಯಲ್ಲಿ ವಾಸವಾಗಿದ್ದೀರಿ? ಅ. ೫ ವರ್ಷ ಆ. ೧೦ ವರ್ಷ ಇ. ೨೦ ವರ್ಷ ಈ. ಹುಟ್ಟಿನಿಂದ

34. ನಿಮ್ಮ ಪಂಚಾಯಿತಿಯಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳೇನು?

ಅ. ಶಿಕ್ಷಣ ಆ. ವಸತಿ ಇ. ರಸ್ತೆ ಈ. ನೀರು ಉ. ನೈರ್ಮಲ್ಯ

ಊ. ಆರೋಗ್ಯ ಋ. ಎಲ್ಲಾವು

35. ನೀವು ಮುಂದೆ ಯಾವುದಾದರು ಚುನಾವಣೆಯಲ್ಲಿ ಸ್ಪರ್ಧೇ ಮಾಡುತ್ತಿರಾ?ಹೌದು/ಇಲ್ಲ

36. ಹೌದಾದರೆ ಯಾವ ಚುನಾವಣೆಯಲ್ಲಿ? ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಯ / ವಿಧಾನಸಭೆ/ ಲೋಕಸಭೆ/ಇತರೆ

37. ಯಾವ ಪಕ್ಷದ ಪರವಾಗಿ ಸ್ಪರ್ಧೆ ಮಾಡುತ್ತಿರಾ? ಕಾಂಗ್ರೆಸ್/ ಬಿ.ಜೆ.ಪಿ/ ಜೆಡಿಎಸ್/ ಇತರೆ

38. ಯಾಕೆ ಆ ಪಕ್ಷದ ಪರವಾಗಿ ಸ್ಪರ್ಧೆ ಮಾಡುತ್ತಿರಾ?

39. ಚುನಾವಣೆಯಲ್ಲಿ ಗೆಲ್ಲ ಬೇಕಾದರೆ ಅನುಭವ ಬೇಕೇ? ಹೌದು/ಇಲ್ಲ ಕಾರಣಗಳೇನು?

40. ರಾಜಕೀಯಕ್ಕೆ ತರಬೇತಿ ಬೇಕೇ? ಹೌದು/ಇಲ್ಲ ಕಾರಣಗಳೇನು?

41. ರಾಜಕೀಯಕ್ಕೆ ಶಿಕ್ಷಣ ಬೇಕೇ? ಹೌದು/ಇಲ್ಲ ಕಾರಣಗಳೇನು?

ಈ. ಸಾಂಸ್ಕೃತಿಕ ಸಂಘಟನೆಗಳಲ್ಲಿ (ಸದಸ್ಯರು, ಪದಾಧಿಕಾರಿಗಳು, ಪಾಲುಗೊಳ್ಳುವಿಕೆ, ಅರಿವು, ಬಳಕೆ, ರಾಜಕೀಯ ಪ್ರಕ್ರಿಯೆ)

42. ಸಾಂಸ್ಕೃತಿಕವಾಗಿ ಇರುವ ಯಾವುದಾದರು ಸಂಘಟನೆಗಳ ಬಗ್ಗೆ ಅರಿವು ಇದೆಯೇ ? ಹೌದು/ಇಲ್ಲ

43. ಹೌದಾದರೆ ಅವು ಯಾವವು ?

44. ಈ ಕೆಳಕಂಡವುಗಳಲ್ಲಿ ನಿಮ್ಮ ಸ್ಥಾನಮಾನ ಇದೆಯೇ?

ಕ್ರ ಸಂ	ಸಂಸ್ಥೆ	ಸದಸ್ಯರು		ಅಧ್ಯಕ್ಷರು		ಉಪಾಧ್ಯಕ್ಷರು		ಇತರೆ	
		ಹಿಂದೆ	ಹಾಲಿ	ಹಿಂದೆ	ಹಾಲಿ	ಹಿಂದೆ	ಹಾಲಿ	ಹಿಂದೆ	ಹಾಲಿ
ಅ.	ಭಜನಾ ಮಂಡಳಿ ಸಮಿತಿ								
ಆ.	ದೇವಸ್ಥಾನ ಅಡಳಿತ ಸಮಿತಿ								
ಇ.	ಇತರೆ								

45. ಮೇಲಿನ ಸಮಿತಿಗಳಿಂದ ನಿಮ್ಮ ಸಮುದಾಯಕ್ಕೆ ಏನಾದರು ಉಪಯೋಗವಿದೆಯೇ? ಹೌದು/ಇಲ್ಲ

46. ಹೌದಾದರೆ ಯಾವ ರೀತಿ?

47. ಸಮುದಾಯದ ಭಜನಾ ಅಥಾವ ದೇವಸ್ಥಾನ ಆಡಳಿತ ಸಮಿತಿಗೆ ಸರ್ಕಾರದಿಂದ ಆರ್ಥಿಕ ನೆರವು ಸಿಕ್ಕಿದೆಯೇ? ಹೌದು/ಇಲ್ಲ

48. ಹೌದಾದರೆ ಯಾವ ನೆರವು?

49. ಯಾವ ರಾಜಕೀಯ ವ್ಯಕ್ತಿಯಿಂದ?

ಭಾಗ–೨

ಅ. ಸಾಮಾಜೀಕ ಅಭಿವೃದ್ಧಿ (ಶಿಕ್ಷಣ, ಅರೋಗ್ಯ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಜಾತಿ ಸ್ಥಾನಮಾನ, ಲಿಂಗ ಸಮಾನತೆ)

1. ನಿಮ್ಮ ಮನೆಯಲ್ಲಿ ಎಷ್ಟು ಜನ ಓದು ಬರಹ ಕಲಿತಿದ್ದಾರೆ?
2. ಸರಕಾರಿ ನೌಕರಿಯಲ್ಲಿರುವವರು ಎಷ್ಟು ಮತ್ತು ಯಾವ ನೌಕರಿ ಮಾಡುತ್ತಿದ್ದಾರೆ?
3. ಶಿಕ್ಷಣ ಪಡೆದರೆ ನಿಮ್ಮ ಸಮುದಾಯ ಬದಲಾಗುತ್ತದೆ ಎಂದು ಭಾವಿಸುವೀರಾ? ಹೌದು/ಇಲ್ಲ ಕಾರಣಗಳೇನು?
4. ನೌಕರಿ ಪಡೆದು ಪಟ್ಟಣದಲ್ಲಿರುವ ನಿಮ್ಮವರು ನಿಮ್ಮ ಹಳ್ಳಿಗೆ ನಿಮ್ಮ ಸಮುದಾಯಕ್ಕೆ ಯಾವ ಬಗೆಯಲ್ಲಾದರು ನೆರವಿಗೆ ಬಂದಿದ್ದಾರೆ? ಹೌದು/ಇಲ್ಲ ಕಾರಣಗಳೇನು?
5. ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಯಾವುದಾದರು ಖಾಯಿಲೆಗಳು ಕಾಡುತ್ತವೆಯೇ? ಹೌದು/ಇಲ್ಲ
6. ಹೌದಾದರೆ ಯಾವ ಖಾಯಿಲೆಗಳು?
7. ಇವುಗಳ ಪರಿಹಾರಕ್ಕೆ ಎಲ್ಲಿಗೆ ಹೋಗುತ್ತೀರಿ? ಸರಕಾರಿ ಅಸ್ಪತ್ರೆ/ಖಾಸಗಿ ಅಸ್ಪತ್ರೆ
8. ಅಸ್ಪತ್ರೆಗೆ ವಾರ್ಷಿಕ ಔಷಧಿ ವೆಚ್ಚ ಎಷ್ಟು?
9. ಕುಟುಂಬದ ಆರೋಗ್ಯಕ್ಕಾಗಿ ಸರಕಾರದ ಯೋಜನೆಗಳು ನಿಮಗೆ ತಿಳಿದಿದೆಯೇ? ಹೌದು/ಇಲ್ಲ
10. ಹೌದಾದರೆ ಯಾವುವು?
11. ಈ ಮೇಲಿನ ಯಾವ ಯೋಜನೆಗಳ ಲಾಭ ಪಡೆದಿದ್ದೀರಿ?
12. ಈ ಯೋಜನೆ ಲಾಭ ಪಡೆಯುವಲ್ಲಿ ನೀವು ಎದುರಿಸುವ ಸಮಸ್ಯೆಗಳೇನು?
13. ಸರಕಾರದ ಸವಲತ್ತು ನಿಮ್ಮ ಆರೋಗ್ಯ ಖರ್ಚುಗಳನ್ನು ಭರಿಸುತ್ತಿದೆಯೇ? ಹೌದು/ಇಲ್ಲ
14. ಇಲ್ಲವಾದರೆ, ಪರಿಹಾರವೇನು?

15. ವಾಸಿಸುವ ಮನೆಯ ಸ್ವರೂಪ ತಿಳಿಸಿರಿ.

ಕ್ರ.ಸಂ	ವಾಸಿಸುವ ಮನೆ	ಸ್ವರೂಪ
ಅ.	ಸ್ವಂತ	ಸ್ವಂತ/ಸರ್ಕಾರಿ/ಅರೆ ಸರ್ಕಾರಿ
ಆ.	ಬಾಡಿಗೆ	

16. ಶೌಚಾಲಯ ಇದೆಯೇ? ಹೌದು/ಇಲ್ಲ
17. ಹೌದಾದರೆ ಎಲ್ಲಿದೆ? ಮನೆಯ ಒಳಗೆ/ಮನೆತಾಗಿ/ ಹೊರಗಡೆ
18. ಇಲ್ಲವಾದರೆ, ಶೌಚಾಲಯಕ್ಕೆ ಹೋಗುವ ಸ್ಥಳ? ಸಮುದಾಯ ಶೌಚಾಲಯ/ಹೊಲಕ್ಕೆ/ ಇತರೆ/
19. ಸ್ನಾನಗೃಹ ಇದೆಯೇ? ಹೌದು/ಇಲ್ಲ
20. ಹೌದಾದರೆ ಎಲ್ಲಿದೆ? ಮನೆಯೊಳಗೆ/ಮನೆತಾಗಿ/ಹೊರಗೆ/ಇತರೆ
21. ಕುಡಿಯುವ ನೀರಿನ ಗುಣಮಟ್ಟ ಹೇಗಿದೆ? ಅತ್ಯುತ್ತಮ/ ಉತ್ತಮ/ ತೃಪ್ತಿಕರ/ ಶೋಚನೀಯ
22. ನಿಮ್ಮ ಮನೆಯಿಂದ ನೀರಿನ ಜಾಗಕ್ಕೆ ಎಷ್ಟು ದೂರ ಇದೆ?..........................
23. ನಿಮ್ಮ ಬಳಕೆಗೆ ಸಾಕಷ್ಟು ನೀರು ಪೂರೈಕೆ ಆಗುತ್ತಿದೆಯೇ? ಹೌದು/ಇಲ್ಲ
24. ಕೊರತೆಯಿದ್ದರೆ, ವರ್ಷದ ಯಾವ ಕಾಲದಲ್ಲಿ ಅತಿ ಹೆಚ್ಚು ಕೊರತೆಯಿದೆ?.
25. ಆ ಸಂದರ್ಭದಲ್ಲಿ ನಿಮ್ಮ ನೀರಿನ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳುತ್ತೀರಿ?
26. ನಿಮ್ಮ ಸಮುದಾಯದ ಕುಟುಂಬಗಳ ಸ್ವರೂಪ ಬದಲಾಗುತ್ತಿದೆಯೇ? ಹೌದು/ಇಲ್ಲ
27. ಹೌದಾದರೆ, ಹೇಗೆ? ಇಲ್ಲವಾದರೆ, ಏಕಿಲ್ಲ ?
28. ನಿಮ್ಮ ಸುತ್ತ ಬದುಕುತ್ತಿರುವ ಇತರೆ ಜಾತಿಗಳಿಗಿಂತ ನಿಮ್ಮ ಜಾತಿಯು ಹಿಂದುಳಿದಿದೆ ಎಂದು ತಾವು ಭಾವಿಸುವಿರಾ? ಹೌದು/ಇಲ್ಲ
29. ಹೌದಾದರೆ, ಹೇಗೆ?
30. ಮೊದಲಿಗಿಂತ ಈಗ ನಿಮ್ಮ ಸಮುದಾಯದವರು ಒಗಟ್ಟಾಗಿರಬೇಕು/ದೌರ್ಜನ್ಯಗಳನ್ನು ಎದುರಿಸಬೇಕು ಎನ್ನಿಸುತ್ತಿದೆಯೇ? ಹೌದು/ಇಲ್ಲ
31. ನಿಮ್ಮ ಸಮುದಾಯ ಹಿಂದುಳಿದಿರುವುದಕ್ಕೆ ನಿಮ್ಮ ಸಮಾಜದ ಒಳಗೆ ಇರುವ ಮೂಢನಂಬಿಕೆಗಳು/ ಸಣ್ಣತನ/ ಆಂತರಿಕ ವಿಘಟನೆ ಕಾರಣ ಎನ್ನಿಸುವುದೇ? ಹೌದು/ಇಲ್ಲ
32. ನಿಮ್ಮ ಕುಟುಂಬದಲ್ಲಿ ಹೆಣ್ಣು ಪ್ರಮುಖ ತೀರ್ಮಾನಗಳನ್ನು ತೆಗೆದು ಕೊಳ್ಳುವಳೇ? ಹೌದು/ಇಲ್ಲ
33. ಹೌದಾದರೆ, ಹೇಗೆ? ಇಲ್ಲವಾದರೆ, ಏಕಿಲ್ಲ ?
34. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರುವಿರಾ? ಹೌದು/ಇಲ್ಲ ಕಾರಣಗಳೇನು?

ಆ. ಆರ್ಥಿಕ ಅಭಿವೃದ್ಧಿ (ಉದ್ಯೋಗ, ಆದಾಯ, ಭೂ ಹಿಡುವಳಿ, ಆದಾಯದ ಮೂಲ, ಚರಾ ಮತ್ತು ಸ್ಥಿರಾ ಆಸ್ತಿ)

35. ನಿಮ್ಮ ಮನೆಯಲ್ಲಿನ ಸದಸ್ಯರು ಈಗ ಯಾವ ಯಾವ ದುಡಿಮೆಗಳಲ್ಲಿ ತೊಡಗಿಕೊಂಡಿದ್ದಾರೆ?
36. ಇಂದಿಗೂ ನಿಮ್ಮ ಕುಲ ಕಸುಬು ಪ್ರಸ್ತುತ ಅನ್ನಿಸುತ್ತಿದೆಯೇ? ಹೌದು/ ಇಲ್ಲ
37. ಹೌದಾದರೆ ಕಾರಣಗಳಾವುವು?
38. ನಿಮ್ಮ ಕುಲ ಕಸಬನ್ನು ಬಿಟ್ಟು ಬೇರೆ ದುಡಿಮೆಯಲ್ಲಿ ತೊಡಗಿಕೊಳ್ಳಬೇಕೆಂದು ಅನ್ನಿಸಿದಾಗ ನಿರೀಕ್ಷಿಸಿದ ನೆರವು ಸಿಕ್ಕಿತೇ? ಹೌದು/ಇಲ್ಲ,
39. ಹೌದಾದರೆ ಹೇಗೆ? ಯಾವ ನೆರವು ಸಿಕ್ಕಿತು ?
40. ಇಲ್ಲವಾದರೆ ಯಾಕೆ ಸಿಗಲಿಲ್ಲ?
41. ಸರಕಾರ ತಮ್ಮನ್ನು ಅಭಿವೃದ್ಧಿ ಪಡಿಸಲು ಯಾವುದಾದರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆಯೇ? ಹೌದು/ಇಲ್ಲ
42. ಹೌದಾದರೆ ಯಾವುವು?
43. ಸರಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿ ಪಡಿಸುತ್ತವೆ ಎಂದು ನಿಮಗನ್ನಿಸುತ್ತಿದೆಯೇ ಹೌದು/ಇಲ್ಲ
44. ಹೌದಾದರೆ, ಯಾವ ರೀತಿ?
45. ನಿಮ್ಮ ಮನೆಯಲ್ಲಿ ಹೆಣ್ಣು ಮಕ್ಕಳು ಸಹ ದುಡಿಮೆಯಲ್ಲಿ ತೊಡಗಿರುವರೇ? ಹೌದು/ಇಲ್ಲ
46. ಹೌದಾದರೆ, ಯಾವ ದುಡಿಮೆಯಲ್ಲಿ ತೊಡಗಿದ್ದಾರೆ?
47. ನಿಮ್ಮ ಆದಾಯದ ಮೂಲ ಯಾವುದು?
48. ಹತ್ತು ವರ್ಷಗಳ ಹಿಂದೆ ನಿಮ್ಮ ಕುಟುಂಬದ ವಾರ್ಷಿಕ ಆದಾಯ ಎಷ್ಟು?
49. **ಕುಟುಂಬ ಹೊಂದಿರುವ ಭೂಮಿ ವಿವರಗಳು (ಎಕರೆಗಳಲ್ಲಿ)**

ಕ್ರ ಸಂ	ಭೂಮಿ ಸ್ವರೂಪ	ಇಲ್ಲ	೦-೧	೨-೪	೫-೧೦	೧೧-೧೫	೧೬-೨೦	೨೧-೨೫
ಅ.	ಒಣ ಭೂಮಿ							
ಬ.	ನೀರಾವರಿ ಭೂಮಿ							
ಕ.	ಬಂಜರು ಭೂಮಿ							

50. **ನಿಮ್ಮ ಕುಟುಂಬದ ಇತರೆ ಆದಾಯದ ವಿವರಣೆ.**

ಕ್ರ.ಸಂ	ವಿವರಗಳು	ಆದಾಯ
ಯ.	ಮನೆ ಬಾಡಿಗೆ	
ರ.	ಹೈನುಗಾರಿಕೆ	
ಲ.	ಸಂಬಳ	
ವ.	ಬಡ್ಡಿ	

51. ಕುಟುಂಬದ ಪ್ರಾಣಿ, ಚರಾ ಮತ್ತು ಸ್ಥಿರಾ ವಸ್ತುಗಳ ವಿವರಗಳು

ಪ್ರಾಣಿಗಳು	ಸಂಖ್ಯೆ	ಇವುಗಳ ಖರೀದಿಗೆ ಪಡೆದ ಸರಕಾರಿ ಸಹಾಯಧನ ಪ್ರಮಾಣ	ಚರಾ/ಸ್ಥಿರಾ ವಸ್ತುಗಳು	ಸಂಖ್ಯೆ	ಇವುಗಳ ಖರೀದಿಗೆ ಪಡೆದ ಸರಕಾರಿ ಸಹಾಯಧನ ಪ್ರಮಾಣ
ಹಸು			ಕುರ್ಚಿ/ ಟೇಬಲ್		
ಎಮ್ಮೆ			ರೇಡಿಯೋ/ ಟಿವಿ		
ಎತ್ತು			ಸೈಕಲ್/ಸ್ಕೂಟರ್/ಬೈಕ್		
ಕುರಿ			ಕಾರು/ಜೀಪ್		
ಆಡು			ಎತ್ತಿನ ಬಂಡಿ		
ಕೋಳಿ			ಟಿಲ್ಲರ್/ಟ್ರ್ಯಾಕ್ಟರ್		
ಮೊಲ			ದೂ.ವಾ./ಮೊಬೈಲ್		
ಪಾರಿವಾಳ			ಪಂಪ್‌ಸೆಟ್		
ಇತರೆ			ಕಂಪ್ಯೂಟರ್		
			ಗ್ಯಾಸ್/ ಇತರೆ		

ಮಾಹಿತಿ ಕೊಟ್ಟವರ ಸಹಿ ಮತ್ತು ಹೆಸರು ಮಾಹಿತಿ ಪಡೆದ ಸಂಶೋಧನಾರ್ಥಿ

ಅಧ್ಯಯನಕ್ಕೆ ಒಳಪಟ್ಟ ಭೋವಿ ಸಮುದಾಯಗಳ ಕುಟುಂಬಗಳ ಸಂದರ್ಶಕರ ಸಾಮಾನ್ಯ ಮತ್ತು ವೈಯಕ್ತಿಕ ಮಾಹಿತಿಯ ವಿವರಗಳು

ಕ್ರ ಸಂ	ಮಾಹಿತಿದಾರರು ಮತ್ತು ಕುಟುಂಬದ ಸದಸ್ಯರ ಹೆಸರು	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಉದ್ಯೋಗ	ಕುಟುಂಬದ ವಾರ್ಷಿಕ ಆದಾಯ
1. ಗ್ರಾಮ ....ಬೋರೇನಹಳ್ಳಿ ......ಪಂಚಾಯತ್.....ಹೆಚ್.ಡಿ.ಪುರ....ತಾಲ್ಲೂಕು....ಹೊಳಲ್ಕೆರೆ						
1	ರಂಗಸ್ವಾಮಿ	40	5ನೇ	ವಿವಾಹಿತ	ವ್ಯವಸಾಯ	10,000
2	ಶ್ರೀನಿವಾಸ	35	ಪಿ ಯುಸಿ	ವಿವಾಹಿತ	ವ್ಯವಸಾಯ	15,000
3	ಶ್ವೇತ	25	ಪಿ ಯುಸಿ	ವಿವಾಹಿತೆ	ವ್ಯವಸಾಯ	10,000
4	ಭಾಗ್ಯಮ್ಮ	45	ಅನಕ್ಷರಸ್ತೆ	ವಿಧವೆ	ಕೂಲಿ	15,000
5	ರುದ್ರಪ್ಪ	40	ಎಸ್ಎಸ್ಎಲ್ಸಿ	ವಿವಾಹಿತ	ಡ್ರೈವರ್	20,000
6	ಶಿವರಾಜಕುಮಾರ್.ಟಿ	25	ಬಿ.ಎ	ವಿವಾಹಿತ	ವ್ಯವಸಾಯ	12,000
7	ತಿಮ್ಮಪ್ಪಯ್ಯ	45	ಅನಕ್ಷರಸ್ಥ	ವಿವಾಹಿತ	ಕೂಲಿ	10,000
8	ಯಲ್ಲಮ್ಮ	40	ಅನಕ್ಷರಸ್ಥೆ	ವಿವಾಹಿತೆ	ಕೂಲಿ	15,000
9	ಹುಲಿಗಮ್ಮ	40	ಪಿ ಯುಸಿ	ವಿವಾಹಿತೆ	ಕೂಲಿ	15,000
10	ರತ್ನಮ್ಮ	50	ಅನಕ್ಷರಸ್ಥೆ	ವಿವಾಹಿತೆ	ಕೂಲಿ	15,000
11	ಸಾಕಮ್ಮ	58	ಅನಕ್ಷರಸ್ಥೆ	ವಿವಾಹಿತೆ	ಕೂಲಿ	10,000
12	ರುದ್ರಮ್ಮ	55	ಅನಕ್ಷರಸ್ಥೆ	ವಿವಾಹಿತೆ	ಕೂಲಿ	10,000
13	ಈರಪ್ಪ. ಬಿ	34	ಎಸ್ಎಸ್ಎಲ್ಸಿ	ವಿವಾಹಿತ	ಕೂಲಿ	12,000
14	ಪ್ರಭು .ಟಿ	33	ಪಿಯುಸಿ	ವಿವಾಹಿತ	ಕೃಷಿ	15,000
15	ರುದ್ರಪ್ಪ ಎಚ್	30	ಬಿ. ಎ	ವಿವಾಹಿತ	ಕೃಷಿ	15,000
16	ಸೌಭಾಗ್ಯಮ್ಮ	45	ಅನಕ್ಷರಸ್ಥೆ	ವಿವಾಹಿತೆ	ಕೂಲಿ	15,000
17	ರಾಜಪ್ಪ	50	ಅನಕ್ಷರಸ್ಥ	ವಿವಾಹಿತ	ಕೃಷಿ	12,000
18	ರುದ್ರಪ್ಪ	48	ಅನಕ್ಷರಸ್ಥ	ವಿವಾಹಿತ	ಕೃಷಿ	12,000
19	ದೊಡ್ಡಮನೆ ಯಲ್ಲಮ್ಮ	55	ಅನಕ್ಷರಸ್ಥೆ	ವಿವಾಹಿತೆ	ಕೂಲಿ	15,000
20	ಚಂದ್ರಕಲಾ	40	5ನೇ ತರಗತಿ	ವಿವಾಹಿತೆ	ಗೃಹಿಣಿ	12,000
21	ಶಶಿಕುಮಾರ್	25	ಪಿಯುಸಿ	ಅವಿವಾಹಿತ	ನಿರುದ್ಯೋಗಿ	10,000
22	ಯಲ್ಲಭೋವಿ	60	2ನೇ ತರಗತಿ	ವಿವಾಹಿತ	ಕೂಲಿ	10,000
23	ತಿಪ್ಪಯ್ಯ	40	ಅನಕ್ಷರಸ್ಥ	ವಿವಾಹಿತ	ಕೂಲಿ	10,000
24	ರೇವಣ್ಣ	41	ಬಿಎ	ವಿವಾಹಿತ	ಕೃಷಿ	15,000
25	ತಿಪ್ಪಯ್ಯ	45	ಅನಕ್ಷರಸ್ಥ	ವಿವಾಹಿತ	ಕೂಲಿ	8,000

ಮಾಹಿತಿಯ ಮೂಲ : ಕ್ಷೇತ್ರಕಾರ್ಯ ಆಧಾರಿತ, ೨೦೧೯.

2. ಗ್ರಾಮ...ರಾಮೇನಹಳ್ಳಿ ..ಪಂಚಾಯತ್.....ಹೆಚ್.ಡಿ.ಪುರ....ತಾಲ್ಲೂಕು....ಹೊಳಲ್ಕೆರೆ						
26	ಸುನಂದ	55	ಅನಕ್ಷರಸ್ಥೆ	ವಿವಾಹಿತೆ	ವ್ಯವಸಾಯ	12,000
27	ಶಶಿಕಲ	30	ಎಸ್ಎಸ್ಎಲ್‌ಸಿ	ವಿವಾಹಿತೆ	ಕೂಲಿ	15,000
28	ರಾಧಮ್ಮ	35	7ನೇ ತರಗತಿ	ವಿವಾಹಿತೆ	ಪೇಟಿಂಗ್	15,000
29	ಸುರೇಶ	21	ಬಿಇ	ಅವಿವಾಹಿತ	ವಿದ್ಯಾರ್ಥಿ	15,000
30	ಸೀತ	32	4ನೇ ತರಗತಿ	ವಿವಾಹಿತೆ	ಕೂಲಿ	10,000
31	ಶ್ರೀನಿವಾಸ	37	ಎಸ್ಎಸ್ಎಲ್‌ಸಿ	ವಿವಾಹಿತ	ವಾಟರ್ ಮ್ಯಾನ್	15,000
32	ನಂದಮ್ಮ	36	7ನೇ ತರಗತಿ	ವಿವಾಹಿತೆ	ಕೂಲಿ	15,000
33	ಚನ್ನಪ್ಪ	41	7ನೇ ತರಗತಿ	ವಿವಾಹಿತ	ಕೂಲಿ	10,000
34	ತಿಮ್ಮರಾಜ	41	ಪಿಯುಸಿ	ವಿವಾಹಿತ	ಕೂಲಿ	15,000
35	ಅಂಬುಜ	28	7ನೇ ತರಗತಿ	ವಿವಾಹಿತೆ	ಕೂಲಿ	12,000
36	ಕರಿಯಮ್ಮ	55	ಅನಕ್ಷರಸ್ಥೆ	ವಿವಾಹಿತೆ	ಕೂಲಿ	10,000
37	ರುದ್ರೇಶ	22	ಐಟಿಐ	ಅವಿವಾಹಿತ	ಕಾರ್ಖಾನೆ	10,000
38	ಸುಲೋಚನಮ್ಮ	47	ಅನಕ್ಷರಸ್ಥೆ	ವಿಧವೆ	ಕೂಲಿ	5000
39	ಜ್ಯೋತಿ	25	8ನೇ ತರಗತಿ	ವಿವಾಹಿತೆ	ಕೂಲಿ	15,000
40	ಲಕ್ಷ್ಮೀ	40	ಅನಕ್ಷರಸ್ಥೆ	ವಿವಾಹಿತೆ	ಕೂಲಿ	15,000
41	ಸುಧಾ	30	8ನೇ ತರಗತಿ	ವಿವಾಹಿತೆ	ಕೂಲಿ	15,000
42	ದೀಪಾ	27	ಎಸ್ಎಸ್ಎಲ್‌ಸಿ	ವಿವಾಹಿತೆ	ಪೇಂಟಿಂಗ್	14,000
43	ಯಶೋಧಮ್ಮ	48	ಅನಕ್ಷರಸ್ಥೆ	ವಿಧವೆ	ಕೂಲಿ	10,000
44	ಭಾರತಮ್ಮ	50	ಅನಕ್ಷರಸ್ಥೆ	ವಿವಾಹಿತೆ	ಕೂಲಿ	15,000
44	ರಾಧಮ್ಮ	42	ಪಿಯುಸಿ	ವಿವಾಹಿತೆ	ಅಂಗನವಾಡಿ ಶಿಕ್ಷಕಿ	12,000
46	ಸಂತೋಷ	40	ಎಸ್ಎಸ್ಎಲ್‌ಸಿ	ವಿವಾಹಿತ	ಡ್ರೈವರ್	20,000
47	ಸರೋಜ	50	ಅನಕ್ಷರಸ್ಥೆ	ವಿವಾಹಿತೆ	ಸೋಪಿನಪುಡಿ ವ್ಯಾಪಾರ	10,000
48	ಜಯ್ಯಮ್ಮ	55	ಅನಕ್ಷರಸ್ಥೆ	ವಿಧವೆ	ಕೂಲಿ	10,000
49	ವೀಣಾ	42	ಎಸ್ಎಸ್ಎಲ್‌ಸಿ	ವಿವಾಹಿತೆ	ಕೂಲಿ	15,000
50	ಕಮಲಮ್ಮ	65	ಅನಕ್ಷರಸ್ಥೆ	ವಿಧವೆ	ಕೂಲಿ	12,000

3. ಗ್ರಾಮ ...ಕಣವಿಜೋಗಿಹಳ್ಳಿ ......ಪಂಚಾಯತ್.....ತೇಕಲವಟ್ಟಿ....ತಾಲ್ಲೂಕು....ಹೊಳಲ್ಕೆರೆ						
51	ಹನುಮಂತಪ್ಪ	53	ಅನಕ್ಷರಸ್ಥ	ವಿವಾಹಿತ	ಕೂಲಿ	10,000
52	ತಿಪ್ಪೇಸ್ವಾಮಿ	30	ಪಿಯುಸಿ	ವಿವಾಹಿತ	ವ್ಯವಸಾಯ	12,000
53	ಯಲ್ಲಮ್ಮ	50	ಅನಕ್ಷರಸ್ಥೆ	ವಿಧವೆ	ಕೂಲಿ	12,000
54	ಗೌರಕ್ಕ	45	ಅನಕ್ಷರಸ್ಥೆ	ಅವಿವಾಹಿತ	ಕೂಲಿ	12,000
55	ತಿಮ್ಮಕ್ಕ	68	ಅನಕ್ಷರಸ್ಥೆ	ವಿಧವೆ	ಕೂಲಿ	10,000
56	ಯಲ್ಲಮ್ಮ	55	ಅನಕ್ಷರಸ್ಥೆ	ವಿವಾಹಿತೆ	ಗೃಹೀಣೆ	10,000
57	ಕಣುಮಕ್ಕ	60	ಅನಕ್ಷರಸ್ಥೆ	ವಿಧವೆ	ಕೂಲಿ	10,000
58	ಮಾರಪ್ಪ	48	ಅನಕ್ಷರಸ್ಥ	ವಿವಾಹಿತ	ಕೂಲಿ	10,000
59	ತಿಪ್ಪಕ್ಕ	53	ಅನಕ್ಷರಸ್ಥೆ	ವಿವಾಹಿತೆ	ಕೂಲಿ	15,000
60	ಹನುಮಕ್ಕ	56	ಅನಕ್ಷರಸ್ಥೆ	ವಿವಾಹಿತೆ	ಕೂಲಿ	14,000
61	ತಿಮ್ಮಭೋವಿ	70	ಅನಕ್ಷರಸ್ಥ	ವಿವಾಹಿತ	ಕೂಲಿ	12,000
62	ಕರಿಯಪ್ಪ	55	ಅನಕ್ಷರಸ್ಥ	ವಿವಾಹಿತ	ಕೂಲಿ	8,000
63	ಗುತ್ತೆಪ್ಪ	60	ಅನಕ್ಷರಸ್ಥ	ವಿವಾಹಿತ	ಕೂಲಿ	15,000
64	ತಿಮ್ಮಯ್ಯ	36	4ನೇ ತರಗತಿ	ವಿವಾಹಿತೆ	ಕೂಲಿ	10,000
65	ತಿಪ್ಪಣ್ಣ	55	ಅನಕ್ಷರಸ್ಥ	ವಿವಾಹಿತ	ಕೂಲಿ	12,000
66	ತಿಮ್ಮಪ್ಪಯ್ಯ	50	ಅನಕ್ಷರಸ್ಥ	ವಿವಾಹಿತ	ಕೂಲಿ	12,000
67	ಮುತ್ತಣ್ಣ	40	ಎಸ್ಎಸ್ಎಲ್ಸಿ	ವಿವಾಹಿತೆ	ಕೃಷಿ	12,000
68	ರಾಜಪ್ಪ	60	ಅನಕ್ಷರಸ್ಥ	ವಿವಾಹಿತ	ಕೂಲಿ	10,000
69	ನಾಗರಾಜ	35	ಬಿಎ	ವಿವಾಹಿತ	ಕೂಲಿ	12,000
70	ರಂಗನಾಥ	30	ಬಿಎ	ವಿವಾಹಿತ	ಕೃಷಿ	12,000
71	ಗುಂಡಪ್ಪ	54	ಅನಕ್ಷರಸ್ಥ	ವಿವಾಹಿತ	ಕೂಲಿ	12,000
72	ಮಂಜಪ್ಪ	45	ಅನಕ್ಷರಸ್ಥ	ವಿಧುರ	ಕೂಲಿ	8,000
73	ರಾಮಪ್ಪ	45	4ನೇ ತರಗತಿ	ವಿವಾಹಿತ	ಕೂಲಿ	15,000
74	ಸುಜಾತ	40	ಅನಕ್ಷರಸ್ಥೆ	ವಿಧವೆ	ಕೂಲಿ	10,000
75	ರವಿ	30	ಅನಕ್ಷರಸ್ಥ	ವಿವಾಹಿತ	ಕೂಲಿ	12,000

4. ಗ್ರಾಮ ..ಮಾರುತಿಹಳ್ಳಿ ......ಪಂಚಾಯತ್.....ತೇಕಲವಟ್ಟ...ತಾಲ್ಲೂಕು....ಹೊಳಲ್ಕೆರೆ						
76	ಭಾಗ್ಯಮ್ಮ	40	4ನೇ ತರಗತಿ	ವಿಧವೆ	ಕೂಲಿ	8,000
77	ಬಸವರಾಜಪ್ಪ	60	4ನೇ ತರಗತಿ	ವಿವಾಹಿತ	ಕೂಲಿ	8,000
78	ಚಂದ್ರಶೇಖರ	34	ಅನಕ್ಷರಸ್ಥ	ವಿವಾಹಿತ	ಕೂಲಿ	10,000
79	ಜಯಪ್ಪ	50	ಎಸ್ಎಸ್ಎಲ್‌ಸಿ	ವಿವಾಹಿತ	ಕೂಲಿ	10,000
80	ಮೂರ್ತಪ್ಪ	45	4ನೆ ತರಗತಿ	ವಿವಾಹಿತ	ಕೂಲಿ	10,000
81	ರಾಜಣ್ಣ	52	ಅನಕ್ಷರಸ್ಥ	ವಿವಾಹಿತ	ಕೂಲಿ	10,000
82	ರಾಜಪ್ಪ	45	ಅನಕ್ಷರಸ್ಥ	ವಿವಾಹಿತ	ಕೂಲಿ	10,000
83	ಕರಿಯಪ್ಪ	50	ಅನಕ್ಷರಸ್ಥ	ವಿವಾಹಿತ	ಕೂಲಿ	12,000
84	ತಿಮ್ಮಯ್ಯ	48	ಅನಕ್ಷರಸ್ಥ	ವಿವಾಹಿತ	ಕೂಲಿ	10,000
85	ಹನುಮಕ್ಕ	67	ಅನಕ್ಷರಸ್ಥೆ	ವಿಧವೆ	ಕೂಲಿ	10,000
86	ನಾಗರಾಜ	45	9ನೇ ತರಗತಿ	ವಿವಾಹಿತ	ಕೂಲಿ	10,000
87	ಗೋವಿಂದಪ್ಪ	45	3ನೇ ತರಗತಿ	ವಿವಾಹಿತ	ಕೂಲಿ	10,000
88	ತಿಮ್ಮಕ್ಕ	50	ಅನಕ್ಷರಸ್ಥೆ	ವಿಧವೆ	ಕೂಲಿ	12,000
89	ಮಂಜನಾಥ	40	5ನೇ ತರಗತಿ	ವಿವಾಹಿತ	ಕೂಲಿ	10,000
90	ತಿಮ್ಮಣ್ಣ	55	ಅನಕ್ಷರಸ್ಥ	ವಿವಾಹಿತ	ಕೂಲಿ	10,000
91	ಜಯ್ಯಪ್ಪ	33	ಅನಕ್ಷರಸ್ಥ	ವಿವಾಹಿತೆ	ಕೂಲಿ	8,000
92	ಜಯಪ್ಪ	30	ಅನಕ್ಷರಸ್ಥ	ವಿವಾಹಿತ	ಕೂಲಿ	10,000
93	ಮಂಜಪ್ಪ	40	ಅನಕ್ಷರಸ್ಥ	ವಿವಾಹಿತ	ಕೂಲಿ	10,000
94	ಕಮಲಮ್ಮ	60	ಅನಕ್ಷರಸ್ಥೆ	ವಿವಾಹಿತೆ	ಕೂಲಿ	10,000
95	ಶರಣ ಕುಮಾರ್	38	ಎಸ್ಎಸ್ಎಲ್‌ಸಿ	ವಿವಾಹಿತ	ಕೂಲಿ	10,000
96	ತಿಪ್ಪೇಸ್ವಾಮಿ	40	ಎಸ್ಎಸ್ಎಲ್‌ಸಿ	ವಿವಾಹಿತ	ಕೂಲಿ	10,000
97	ಶ್ರೀಧರ್	40	ಅನಕ್ಷರಸ್ಥ	ವಿವಾಹಿತ	ಕೂಲಿ	10,000
98	ಶೇಖರಪ್ಪ	40	ಅನಕ್ಷರಸ್ಥ	ವಿವಾಹಿತ	ಕೂಲಿ	10,000
99	ರಂಗಸ್ವಾಮಿ	50	ಅನಕ್ಷರಸ್ಥ	ವಿವಾಹಿತ	ಕೂಲಿ	10,000
100	ಹನುಮಂತಪ್ಪ	60	5ನೇ ತರಗತಿ	ವಿವಾಹಿತ	ಕೂಲಿ	12,000

5. ಗ್ರಾಮ/ಪಟ್ಟಣ .ಸಿದ್ದಯ್ಯನಕೋಟೆ .....ಪಂಚಾಯತ್....ರಾಯಪುರ....ತಾಲ್ಲೂಕು...ಮೊಳಕಾಲ್ಮೂರು						
101	ಗುರುಸ್ವಾಮಿ ಎಂ	38	ಎಸ್ಎಸ್ಎಲ್‌ಸಿ	ವಿವಾಹಿತ	ನ್ಯಾಯಬೆಲೆ ಅಂಗಡಿ	15,000
102	ರುದ್ರಣ್ಣ	55	1ನೇ ತರಗತಿ	ವಿವಾಹಿತ	ಕಲ್ಲು ಹೊಡೆಯುವುದು	12,000
103	ಜಯಣ್ಣ	55	ಅನಕ್ಷರಸ್ಥ	ವಿವಾಹಿತ	ಗಾರೆ ಕೆಲಸ	12,000
104	ಬಸಣ್ಣ	50	ಬಿಎ	ವಿವಾಹಿತ	ಕಂಟ್ರಾಕ್ಟರ್	12,000
105	ಜಾನಕಮ್ಮ	60	ಅನಕ್ಷರಸ್ಥ	ವಿಧವೆ	ಕೂಲಿ	12,000
106	ಪ್ರಭಮ್ಮ	45	ಅನಕ್ಷರಸ್ಥೆ	ವಿಧವೆ	ಅಂಗಡಿ	10,000
107	ಮರಿಸ್ವಾಮಿ	45	ಅನಕ್ಷರಸ್ಥ	ವಿವಾಹಿತ	ಕಲ್ಲು ಹೊಡೆಯುವುದು	12,000
108	ರಾಮಾಂಜೀನಿ	36	ಎಸ್ಎಸ್ಎಲ್‌ಸಿ	ವಿವಾಹಿತ	ಕಲ್ಲು ಹೊಡೆಯುವುದು	10,000
109	ರಾಮಾಣ್ಣ ಪಿ	45	5ನೇ ತರಗತಿ	ವಿವಾಹಿತ	ಲಾರಿ ಡ್ರೈವರ್	12,000
110	ರುದ್ರಣ್ಣ	50	ಅನಕ್ಷರಸ್ಥ	ವಿವಾಹಿತ	ಕಲ್ಲು ಹೊಡೆಯುವುದು	12,000
111	ಪಕೀರಪ್ಪ	50	ಅನಕ್ಷರಸ್ಥ	ವಿವಾಹಿತ	ಗಾರೆ ಕೆಲಸ	10,000
112	ನಾಗಣ್ಣ	50	6ನೇ ತರಗತಿ	ವಿವಾಹಿತ	ಗಾರೆ ಕೆಲಸ	10,000
113	ಹನುಮಂತಪ್ಪ	55	ಅನಕ್ಷರಸ್ಥ	ವಿವಾಹಿತ	ಅಂಗವಿಕಲ	10,000
114	ಬಸವರಾಜ	52	ಅನಕ್ಷರಸ್ಥ	ವಿವಾಹಿತ	ಕಲ್ಲು ಹೊಡೆಯುವುದು	12,000
115	ರಾಮಣ್ಣ	56	ಅನಕ್ಷರಸ್ಥ	ವಿವಾಹಿತ	ಕೃಷಿ	13,000
116	ಮರಿಸ್ವಾಮಿ	50	ಅನಕ್ಷರಸ್ಥ	ವಿವಾಹಿತ	ಕಲ್ಲು ಹೊಡೆಯುವುದು	13,000
117	ಮರಿಸ್ವಾಮಿ	50	ಅನಕ್ಷರಸ್ಥ	ವಿವಾಹಿತ	ಗಾರೆ ಕೆಲಸ	10,000
118	ಮರಿಸ್ವಾಮಿ ಪಿ	50	ಅನಕ್ಷರಸ್ಥ	ವಿವಾಹಿತ	ವ್ಯವಹಾರ	15,000
119	ತಿಮ್ಮರೆಡ್ಡಿ	45	ಅನಕ್ಷರಸ್ಥ	ವಿವಾಹಿತ	ವ್ಯವಹಾರ	15,000
120	ರುದ್ರಣ್ಣ	45	ಅನಕ್ಷರಸ್ಥ	ವಿವಾಹಿತ	ಕಲ್ಲು ಹೊಡೆಯುವುದು	12,000
121	ಕೊಲ್ಲಾರಪ್ಪ	45	5ನೇ ತರಗತಿ	ವಿವಾಹಿತ	ಗಾರೆಕೆಲಸ	12,000
122	ಶಿವಣ್ಣ	40	9ನೇ ತರಗತಿ	ವಿವಾಹಿತ	ವ್ಯವಹಾರ	10,000
123	ಚಂದ್ರಣ್ಣ	35	9ನೇ ತರಗತಿ	ವಿವಾಹಿತ	ಕೂಲಿ	10,000
124	ವೆಂಕಟೇಶ	42	5ನೇ ತರಗತಿ	ವಿವಾಹಿತ	ಕೃಷಿ	12,000
125	ತಿಮ್ಮಣ್ಣ	43	5ನೇ ತರಗತಿ	ವಿವಾಹಿತ	ವ್ಯವಹಾರ	12,000

6. ಗ್ರಾಮ..ಜಯಂತಿನಗರ .....ಪಂಚಾಯತ್....ಹಿರೇಕೆರಹಳ್ಳಿ....ತಾಲ್ಲೂಕು..ಮೊಳಕಾಲ್ಮೂರು						
126	ತಿಪ್ಪೇಸ್ವಾಮಿ	35	7ನೇ ತರಗತಿ	ವಿವಾಹಿತ	ಕೂಲಿ	10,000
127	ಮಲ್ಲಿಕಾರ್ಜುನ	30	7ನೇ ತರಗತಿ	ವಿವಾಹಿತ	ಕೂಲಿ	10,000
128	ಗೋವಿಂದಪ್ಪ	32	9ನೇ ತರಗತಿ	ವಿವಾಹಿತ	ಲಾರಿ ಡ್ರೈವರ್	12,000
129	ಅಂಜಿನಮ್ಮ	50	ಅನಕ್ಷರಸ್ಥೆ	ವಿವಾಹಿತೆ	ವ್ಯವಸಾಯ	12,000
130	ಕುಮಾರ್	45	ಅನಕ್ಷರಸ್ಥ	ವಿವಾಹಿತ	ಗಾರೆ ಕೆಲಸ	12,000
131	ಓ ಆನಂದ ಮೂರ್ತಿ	46	ಐಟಿಐ	ವಿವಾಹಿತ	ಕೂಲಿ	15,000
132	ಜಗದೀಶ	36	ಎಸ್‌ಎಸ್‌ಎಲ್‌ಸಿ	ವಿವಾಹಿತ	ಗಾರೆ ಕೆಲಸ ಮೇಸ್ತ್ರೀ	12,000
133	ಪೆದ್ದಕ್ಕ	58	ಅನಕ್ಷರಸ್ಥೆ	ವಿಧವೆ	ಕೂಲಿ	12,000
134	ಲಕ್ಷ್ಮಣ	45	4ನೇ ತರಗತಿ	ವಿವಾಹಿತ	ಗಾರೆ ಕೆಲಸ	12,000
135	ಪೆದ್ದನ್ನ	45	1ನೇ ತರಗತಿ	ವಿವಾಹಿತ	ಕಲ್ಲು ಹೊಡೆಯುವುದು	12,000
136	ಸೀತಮ್ಮ	70	ಅನಕ್ಷರಸ್ಥೆ	ವಿವಾಹಿತೆ	ಕೂಲಿ	5,000
137	ರಾಜಣ್ಣ	50	5ನೇ ತರಗತಿ	ವಿವಾಹಿತ	ಕೂಲಿ	12,000
138	ಅಂಜಿನಪ್ಪ	54	ಅನಕ್ಷರಸ್ಥ	ವಿವಾಹಿತ	ಕೂಲಿ	10,000
139	ರಾಮಪ್ಪ	75	ಅನಕ್ಷರಸ್ಥ	ವಿವಾಹಿತ	ಕೂಲಿ	12,000
140	ಪೆದ್ದಕ್ಕ	44	ಅನಕ್ಷರಸ್ಥೆ	ವಿಧವೆ	ಕೂಲಿ	10,000
141	ತಿಮ್ಮಯ್ಯ	84	ಅನಕ್ಷರಸ್ಥ	ವಿಧುರ	ಕೂಲಿ	12,000
142	ಗುರುಮೂರ್ತಿ	45	ಎಸ್‌ಎಸ್‌ಎಲ್‌ಸಿ	ವಿವಾಹಿತ	ಕೂಲಿ	10,000
143	ಪ್ರಕಾಶ	37	9ನೇ ತರಗತಿ	ವಿವಾಹಿತ	ಕೂಲಿ	12,000
144	ಅಶ್ವತ್	33	6ನೇ ತರಗತಿ	ವಿವಾಹಿತ	ಕೂಲಿ	12,000
145	ರಾಜೇಶ್ವರಿ	30	3ನೇ ತರಗತಿ	ವಿವಾಹಿತೆ	ಕೂಲಿ	8,000
146	ವಿರುಪಾಕ್ಷಿ	40	ಪಿಯುಸಿ	ವಿವಾಹಿತ	ಕೂಲಿ	12,000
147	ತಿಮ್ಮಪ್ಪ	65	2ನೇ ತರಗತಿ	ವಿವಾಹಿತ	ಕೂಲಿ	10,000
148	ಸಾವಿತ್ರಮ್ಮ	43	2ನೇ ತರಗತಿ	ವಿವಾಹಿತ	ಕೂಲಿ	10,000
149	ತಿಪ್ಪೇಸ್ವಾಮಿ	65	ಅನಕ್ಷರಸ್ಥ	ವಿವಾಹಿತ	ಕೂಲಿ	8,000
150	ಅಂಜಿನಪ್ಪ	55	ಅನಕ್ಷರಸ್ಥ	ವಿವಾಹಿತ	ಕೂಲಿ	12,000

7. ಗ್ರಾಮ/ಪಟ್ಟಣ .ಚಿಕ್ಕೇರಹಳ್ಳಿ .....ಪಂಚಾಯತ್...ಚಿಕ್ಕೇರಹಳ್ಳಿ....ತಾಲ್ಲೂಕು...ಮೊಳಕಾಲ್ಮೂರು						
151	ತಿಮ್ಮರೆಡ್ಡಿ	40	5ನೇ ತರಗತಿ	ವಿವಾಹಿತ	ಕಡ್ಡಿಪುಡಿ ವ್ಯಾಪಾರಿ	8,000
152	ತಿಮ್ಮಪ್ಪ	40	ಎಸ್‌ಎಸ್‌ಎಲ್‌ಸಿ	ವಿವಾಹಿತ	ಕೂಲಿ	10,000
153	ನಾಗರಾಜ	40	2ನೇ ತರಗತಿ	ವಿವಾಹಿತ	ಕಲ್ಲು ಹೊಡೆಯುವುದು	12,000
154	ಸಣ್ಣ ಪರಮೇಶಿ	35	ಅನಕ್ಷರಸ್ಥ	ವಿವಾಹಿತ	ಕಲ್ಲು ಹೊಡೆಯುವುದು	12,000
155	ಸಿದ್ದಕ್ಕ	35	ಅನಕ್ಷರಸ್ಥೆ	ವಿವಾಹಿತೆ	ಕೂಲಿ	6,000
156	ಅಂಜಿನಯ್ಯ	45	ಪಿಯುಸಿ	ವಿವಾಹಿತ	ಕೂಲಿ	10,000
157	ರಾಮದಾಸ	50	ಅನಕ್ಷರಸ್ಥ	ವಿವಾಹಿತ	ಕೂಲಿ	12,000
158	ಹನುಮಂತಪ್ಪ	65	5ನೇ ತರಗತಿ	ವಿವಾಹಿತ	ಕೂಲಿ	12,000
159	ತಿಮ್ಮಣ್ಣ	38	ಅನಕ್ಷರಸ್ಥ	ವಿವಾಹಿತ	ಕಲ್ಲು ಹೊಡೆಯುವುದು	12,000
160	ವೆಂಕಟೇಶ	44	ಎಸ್‌ಎಸ್‌ಎಲ್‌ಸಿ	ವಿವಾಹಿತ	ವ್ಯವಸಯ	12,000
